ಮನೆಮಂದಿಗೆಲ್ಲ ಮುದ ನೀಡುವ ಮಾಸಿಕ

ಕಸ್ತೂರಿ

ಐವತ್ತರ ನೆನಪು

ಆಗಸ್ಟ್ 1992 ಬೆಲೆ ರೂ. 5/-



ಕ್ರಿಸ್‌ಮಸ್ ಐಲೆಂಡಿನ ಕೆಂಪು ಕನಸು......



ಸೌಖ್ಯ-ಸೌಂದರ್ಯ

ನಿಮ್ಮ ಅಂದಚೆಂದಕ್ಕೊಂದು ಅಂಗೈ ಕನ್ನಡಿ



ಚಿಂತನೆ

ಭಾರತದ ಸ್ವಾತಂತ್ರ್ಯೋದಯಕ್ಕೆ ಮಹಾತ್ಮಾಜಿ ಕೊನೆಯ ಅಸ್ತ್ರವಾಗಿ ಬಳಸಿದ್ದು 'ಚಲೇಜಾವ್ ಚಳವಳಿ.' ವರ್ಧಾದ ಸಂಕಲ್ಪಕ್ಕೊಂದು ಸಾಕಾರ ರೂಪ ಬಂದದ್ದು ಮುಂಬಯಿಯಲ್ಲಿ. 1942ರ ಅ.ಭಾ. ಕಾಂಗ್ರೆಸ್ ಮಹಾಧಿವೇಶನದಲ್ಲಿ. ಅಗಸ್ಟ್ 9ರ ಆ ದಿನ ಭಾರತೀಯರ ಪಾಲಿಗೆ ಸ್ವಾತಂತ್ರ್ಯ ಸೂರ್ಯವನ್ನು ಸ್ವಾಗತಿಸುವ ಸಂತಸದ ಕ್ಷಣವಾದರೆ ಬ್ರಿಟಿಶರ ಪಾಲಿಗೆ ಸಂಕಟದ ಸಮಯ. ಅವರು ಗಂಟುಮೂಟೆ ಕಟ್ಟಿ ಸೂರ್ಯ ಮುಳುಗುವ ನಾಡಿನೆಡೆ ಹೊರಡಬೇಕಾದ್ದು ಅನಿವಾರ್ಯವಿತ್ತು. ಆಯಿತು, ಮುಂದೆ ಆರು ವರ್ಷಗಳಲ್ಲಿ ಯೂನಿಯನ್ ಜಾಕ್ ಜಾರಿ, ತ್ರಿವರ್ಣಧ್ವಜ ಏರಿತು.

ಆದಾಗಲೇ ಐವತ್ತು ವರ್ಷಗಳಾದುವಲ್ಲ ಚಲೇಜಾವ್ ಚಳವಳಿ ನಡೆದು! ದಿನಗಳು ವರ್ಷಗಳಾಗಿ ಉರುಳುವುದೇನು ತಡ?

ಇದೀಗ ಮತ್ತೆ ನಾವೆಲ್ಲ ಭಾರತೀಯರು 'ಚಲೇಜಾವ್' ಎನ್ನಬೇಕಿದೆ: ನಮ್ಮೊಳಗಿನ ಶತ್ರುಗಳಿಗೆ. ಸ್ವಾರ್ಥಿ, ದುರಾಚಾರಿ, ಪಟ್ಟಭದ್ರ ಹಿತಾಸಕ್ತಿಗಳಿಗೆ; ಕೋಮುಭಾವನೆಗಳಿಗೆ, ಈ ಹರ್ಷದ್ ಮೆಹ್ತಾಗಳಿಗೆ, ಹರ್ಷದ್ ಮೆಹ್ತಾಗಳನ್ನು ಪೋಷಿಸುವವರಿಗೆ - ಪೂಜಿಸುವವರಿಗೆ: ಈ ನಥೂರಾಂ, ಶಿವರಾಸನ್‌ಗಳಿಗೆ... ಒಟ್ಟಿನಲ್ಲಿ ನಮ್ಮನ್ನು ಒಂದಾಗಿ ನೆಮ್ಮದಿಯಿಂದ ಬದುಕಗೊಡದ ಒಡೆದಾಳುವ ನೀತಿಯವರಿಗೆ.

ಸಬ್‌ಕೋ ಸನ್ಮತಿ ದೇ ಭಗವಾನ್...

● ವ್ಯವಸ್ಥಾಪಕ ಸಂಪಾದಕರು

ಸಹ ಚಿಂತನ

'ಕೇಳಬೇಡಿ' ಶೀರ್ಷಿಕೆಯಡಿ (ಮೇ 92) ಪ್ರಕಟಗೊಂಡ ಮೂರು ಪ್ರಶ್ನೆಗಳ ಕುರಿತು ಈ ಪ್ರತಿಕ್ರಿಯೆ:

ಬೆಳಗ್ಗೆ ಎದ್ದ ತಕ್ಷಣ 'ಎದ್ದಿರಾ?' 'ಆರಾಮ ಅದೀರಾ?' 'ಶರಣರೀ' ಎಂದು ಎದುರಾದವರನ್ನು ಮಾತನಾಡಿಸುವುದು ಭಾರತೀಯರ ಸಂಪ್ರದಾಯ. ಇತ್ತೀಚೆಗೆ ನಗರಗಳಲ್ಲಿ ಪಾಶ್ಚಾತ್ಯರ ಪ್ರಭಾವ ಕಾಲೂರಿದ ಮೇಲೆ ಮೇಲ್ನೋಟದ ತುಟಿಯಂಚಿನ ನಗುವನ್ನು ನಾವು ರೂಢಿಸಿಕೊಂಡಿದ್ದೇವೆ.

ಈ ಮೊದಲು ನನಗೆ 'ಎದ್ದಿರಾ?' ಪ್ರಶ್ನೆಯ ಹಿಂದಿನ ಆತ್ಮೀಯತೆಯ ಅರಿವಿರಲಿಲ್ಲ. ನಮ್ಮ ಹಳ್ಳಿಯಲ್ಲಿದ್ದಾಗ ಒಮ್ಮೆ ನಾನು ನನ್ನ ಸ್ನೇಹಿತ ಬೆಳಗಿನ ಜಾವ ಹೊರಗೆ ಹೊರಟಿದ್ದೆವು. ಪರಿಚಯದ ಅಜ್ಜಿಯೊಬ್ಬರು 'ಎದ್ದಿರಾ?' ಎಂದು ಕೇಳಿದರು. ನಾನು ಅಭ್ಯಾಸದಿಂದ 'ಹ್ಞೂ...ನೀ ಎದ್ದೇನಬೆ?' ಎಂದು ಕೇಳಿದೆ. ಅವಳು ಹೋಗುವವಳಿದ್ದಳು. ನನ್ನ ಸ್ನೇಹಿತ ನಿಲ್ಲಿಸಿ ಕೇಳಿಯೇ ಬಿಟ್ಟ - 'ನೀ 'ದಿನಾ ಎದ್ದೇನಪಾ' ಅಂತ ಕೇಳ್ತಿಯಲ್ಲಾ... ಏಳದಿದ್ದರ ನಾವಿಲ್ಲಿತನಕ ನಡಕೊಂಡು ಬರ್‍ತಿದ್ದೆವೇನಬೇ?' ಆ ಹಿರಿಯ ಜೀವ ಹೀಗೆ ಉತ್ತರಿಸಿತು:

''ಅಲ್ಲ ತಮ್ಮಾ, ಎದ್ದಿರೇನು? ಅಂದ್ರ, ಒಂದಿನ ಗೆದ್ರಿ ಏನು ಅಂತ. ಈ ಜೀವ ಇವತ್ತು ಇರತೈತಿ ನಾಳೆ ಹೊಕ್ಕೈತಿ. ಜೀವನದಾಗ ಜಂಜಾಟ ಭಾಳ. ಅದಕ್ಕ ಒಂದಿನ ಗೆದ್ರೆನಪ ಅಂದಂಗ. ಹಿಂದಕ ಜೀವನ ಈಗಿನಷ್ಟು ಸಲೀಸು ಇರಲಿಲ್ಲ. ನನ್ನ ನೋಡು, ಕಾಲರಾದಾಗ ಏನೆಲ್ಲಾ ಕಳಕೊಂಡು ಇನ್ನೂ ಬದುಕೀನಿ. ತಮ್ಮಾ, ನಾನು ಎದ್ದು ಸೆಜ್ಜೆ ಬರ ನೋಡೇನಿ. ಆಗ ಇವತ್ತಿದ್ದಂವ ನಾಳೆ ಇರತಾನ ಅನ್ನಂಗಿರಲಿಲ್ಲ...''

'ಎದ್ದಿರಾ?' ಅನ್ನೋದರಾಗ ಇಷ್ಟೊಂದು ಅರ್ಥ ತುಂಬೇತಿ ಎನ್ನುವುದು ನನಗೆ ಇಲ್ಲಿಯವರೆಗೂ ಗೊತ್ತಿರಲಿಲ್ಲ. ನನ್ನ ಸ್ನೇಹಿತ ಮಾತ್ರ ಏಕೋ ತೃಪ್ತನಾದಂತೆ ಕಾಣಲಿಲ್ಲ. (ನಾಗರಿಕತೆಯ ಪ್ರಭಾವ?)

ಹೊಸಪೇಟೆ — ಶ್ರೀನಿವಾಸ ಹುದ್ದಾರ

○

'ಶಬ್ದ ಭಾಂಡಾರ...' ಅಂಕಣದಲ್ಲಿ (ಜೂನ್ 92) 'ಬಾಹತ್ತರ' ಎಂಬ ಮರಾಠಿ ಶಬ್ದವನ್ನು ಕೊಟ್ಟಿರುವಿರಿ. ಓದುಗರು ಕನ್ನಡ ಶಬ್ದ ಭಾಂಡಾರ ಬೆಳೆಸಿಕೊಳ್ಳಬೇಕೋ? ಅಥವಾ ಅನ್ಯ ಭಾಷಾ ಶಬ್ದಭಾಂಡಾರ ಬೆಳೆಸಿಕೊಳ್ಳಬೇಕೋ? ಹೀಗಂದಾಕ್ಷಣ ನಾನು ಮರಾಠಿ ಅಥವಾ ಇನ್ನಾವುದೇ ಭಾಷೆಯ ದ್ವೇಷಿಯಲ್ಲ. ಈ ಅಂಕಣದ ವ್ಯಾಪ್ತಿಗೆ ಸಂಬಂಧಿಸಿದಂತೆ ಮಾತ್ರ ನನ್ನ ಸಂದೇಹ.

ಬಾಗಲಕೋಟೆ — ರಾ.ಬಿ. ಮಿರ್ಜಿ

ಅನ್ಯ ಭಾಷೆಯ ಶಬ್ದಗಳಿಗೆ ಗಡಿನಿರ್ಬಂಧದ ಬಗ್ಗೆ ನಿರ್ಲಕ್ಷ್ಯ ಜಾಸ್ತಿ! ಅಂತೆಯೇ ಅವು ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಓಡಾಡುವುದು ಸಹಜ. ಗಡಿಭಾಗಗಳಲ್ಲಿ ಇಂಥ ಕೊಡುಕೊಳ್ಳುವಿಕೆ ಅಧಿಕ. 'ಬಾಹತ್ತರ' ಶಬ್ದ ಕೂಡ ಮೂಲತಃ ಮರಾಠಿಯದಾದರೂ ಕನ್ನಡದ ಮನೆ ಪ್ರವೇಶಿಸಿಯಾಗಿದೆ. ಹೀಗಿರುವಾಗ ಕನ್ನಡಿಗರ 'ಶಬ್ದ ಭಾಂಡಾರ'ಕ್ಕೆ 'ಬಾಹತ್ತರ'ವೇಕೆ ಹೊರತಾಗಬೇಕು?

ಸಂಪಾದಕ

○

'ವೈಸ್‌ರಾಯರ ವಿಚಿತ್ರ ಹವ್ಯಾಸಗಳು' (ಜುಲೈ 1992) ಲೇಖನದಲ್ಲಿ ''ಲಾರ್ಡ್ ಮೇಯೋ ಕೊಲೆಯಾದ ಏಕೈಕ ಗವರ್ನರ್ ಜನರಲ್'' ಎಂದು ಹೇಳಿರುವ ಮಾಹಿತಿ ತಪ್ಪು.

ಲಾರ್ಡ್ ಕರ್ಜನ್ ವ್ಯಾಲಿಯನ್ನು ಲಂಡನ್ನಿನ ಜಹಂಗೀರ್ ಭವನದಲ್ಲಿ ದಿ.1.7.1909 ರಂದು ಕ್ರಾಂತಿಕಾರಿ ಮದನ್‌ಲಾಲ್ ಧಿಂಗ್ರಾ ಗುಂಡಿಟ್ಟು ಕೊಂದ. ಮುಂದೆ ದಿ.17.8.1909 ರಂದು ಧಿಂಗ್ರಾನನ್ನು ಗಲ್ಲಿಗೇರಿಸಲಾಯಿತು.

ಹಾಸನ — ಜಿ. ಜಿ. ಹರೀಶ

○

'ವೈಸ್‌ರಾಯರ ವಿಚಿತ್ರ ಹವ್ಯಾಸಗಳು' (ಲೇಖಕ ಮುರಲೀಧರ ಕುಲಕರ್ಣಿ) ಲೇಖನ ಗವರ್ನರ್ ಜನರಲ್‌ಗಳು ಮತ್ತು ವೈಸ್‌ರಾಯ್‌ಗಳ ಬಗ್ಗೆ ಅಪರೂಪದ ವಿಷಯಗಳನ್ನು ತಿಳಿಸುವಲ್ಲಿ ಯಶಸ್ವಿಯಾದರೂ ನನ್ನ ಗಮನಕ್ಕೆ ಬಂದಂತೆ ಅದರಲ್ಲಿ ಒಂದೆರಡು ತಪ್ಪು ಮಾಹಿತಿಗಳು ನುಸುಳಿವೆ.

ಲೇಖಕರು ಹೇಳಿದಂತೆ, ತಾನಾಗಿಯೇ ರಾಜೀ

ನಾಮೆ ಕೊಟ್ಟ ಗವರ್ನರ್ ಜನರಲ್ ಲಾರ್ಡ್ ಆಕ್ಲೆಂಡ್ ಒಬ್ಬನೇ ಅಲ್ಲ. ಲಾರ್ಡ್ ಹೇಸ್ಟಿಂಗ್ಸ್ ಕೂಡ ತಾನಾಗಿಯೇ ರಾಜೀನಾಮೆ ಇತ್ತ. 1823ರಲ್ಲಿ ಪಾಮರ್ ಆ್ಯಂಡ್ ಕಂಪನಿ ಎಂಬ ಬ್ಯಾಂಕಿಂಗ್ ವ್ಯವಸ್ಥೆಗೆ ತೋರಿದ ಪಕ್ಷಪಾತ ಮತ್ತು ಅದರ ಭ್ರಷ್ಟ ವ್ಯವಹಾರಗಳಿಗೆ ಬೆಂಬಲವನ್ನು ನೀಡಿದ್ದನೆಂದು ಆಪಾದಿಸಿ ಬ್ರಿಟಿಶ್ ಸರಕಾರ ಹೇಸ್ಟಿಂಗ್ಸ್‌ನ ನೀತಿಯನ್ನು ಖಂಡಿಸಿತು. ಇದರಿಂದ ಮನನೊಂದು ಹೇಸ್ಟಿಂಗ್ಸ್ ತನ್ನ ಹುದ್ದೆಗೆ ರಾಜೀನಾಮೆ ಸಲ್ಲಿಸಿದನು.

ಎರಡನೆಯದಾಗಿ ಲೇಖಕರು ಹೇಳಿದಂತೆ ಅತಿ ಕಡಿಮೆ ಕಾಲ ಅಧಿಕಾರದಲ್ಲಿದ್ದ ಗವರ್ನರ್ ಜನರಲ್ ಲಾರ್ಡ್ ಎಲಿನ್‌ಬರೋ ಅಲ್ಲ, ಲಾರ್ಡ್ ಮೌಂಟ್ ಬ್ಯಾಟನ್. ಸುಮಾರು ಒಂದೂಕಾಲು ವರ್ಷ (ದಿ.22.3.1947ರಿಂದ ದಿ.10.6.1948ರವರೆಗೆ) ಅವರು ಭಾರತದ ಗವರ್ನರ್ ಜನರಲ್ ಆಗಿದ್ದರು. ಅವರ ನಂತರ ಈ ಪದವಿಯನ್ನು ರಾಜಾಜಿ ವಹಿಸಿಕೊಂಡರು.

ವೆಂಕಟಬೇನೂರು ಡಾ.ಎಸ್. ಅಶ್ವತ್ಥಮ್ಮ

O

''ವಿ.ಸೀ. ಕಂಡ ಹೃದಯವಂತಿಕೆ'' (ಜೂನ್92) ಓದಿ ನನ್ನ ಕಾಲೇಜು ದಿನಗಳಲ್ಲಿ ಗೌರಿಶಂಕರ ಔನ್ನತ್ಯ ಹೊಂದಿದ್ದ ಪೂಜ್ಯ ಟಿ.ಎಸ್.ವೆಂಕಣ್ಣಯ್ಯನವರನ್ನು ಕಂಡಾಗಲೆಲ್ಲ ದೂರದಿಂದಲೇ ನಮಿಸಿ (ಕೈಲಾಸಂನವರು ಗಾಂಧೀಜಿಯನ್ನು ದೂರದಿಂದಲೇ ನೋಡಿದದಲ್ಲೇ ನಮಸ್ಕರಿಸಿದಂತೆ) ತೃಪ್ತಿಪಡುತ್ತಿದ್ದ ನನಗೆ ಅವರ ಅಸಾಮಾನ್ಯ ವ್ಯಕ್ತಿತ್ವ ಕಣ್ಣಿಗೆ ಕಟ್ಟಿದಂತಾಗಿ ಕಣ್ಣೀರು ಹರಿಯಿತೆಂದರೆ, ವೆಂಕಣ್ಣಯ್ಯನವರ ಸಹವಾಸ, ಸಂಪರ್ಕ, ಹೃದಯ ಶ್ರೀಮಂತಿಕೆ, ಔದಾರ್ಯ, ವಿದ್ವತ್ತು, ಪ್ರೀತಿ ವಾತ್ಸಲ್ಯಗಳನ್ನು ವರ್ಷಾನುಗಟ್ಟಲೆ ಅನುಭವಿಸಿದ ವಿ.ಸೀ.ಯವರಿಗೆ ಕಣ್ಣೀರು ಬಂದದ್ದೆ, ಮತ್ತೆ ಮತ್ತೆ ಅವರ ಅನಂತ ಗುಣಗಳನ್ನು ಜ್ಞಾಪಿಸಿಕೊಂಡು ಅತ್ತದ್ದು ಏನಾಶ್ಚರ್ಯ?

ದಾವಣಗೆರೆ ಜಿ.ಕೆ.ಶೇಷಾಚಲರಾವ್

O

ಡಾ.ಅನಿಲ ಕಮತಿಯವರು ''ಸೀಮಾ ಭಾಗದಲ್ಲಿ ನರಳುತ್ತಿರುವ ಕನ್ನಡ'' ಕುರಿತು ಚಿಂತಿಸಿರುವ ರೀತಿ ಅಭಿನಂದನೀಯ. (ಜುಲೈ 92) ಅಜ್ಜಿಯಿಂದ ಕನ್ನಡ ಪದವೊಂದನ್ನು ಹೊರಡಿಸಲು ಅಸಮರ್ಥನಾದುದು, ಮರಾಠಿ ಹೆಂಡತಿಯಿಂದ ನಿರರ್ಗಳವಾಗಿ ಕನ್ನಡ ಮಾತನಾಡಿಸಲಾಗದ ಕನ್ನಡ ದೀಕ್ಷೆಯ ತರುಣನ

ಮುಖಪುಟದ ಕಥಕ್ ನರ್ತಕಿಯ ವರ್ಣ ಚಿತ್ರವನ್ನು ಒದಗಿಸಿದವರು
ಡಾ. ಕರವೀರಪ್ರಭು ಕ್ಯಾಲಕೊಂಡ
ಕೊನೆಯ ರಕ್ಷಾಪುಟದ ವರ್ಣಚಿತ್ರ
ಡಿ. ಮಾಧವಮೂರ್ತಿ ಸೆರೆಹಿಡಿದದ್ದು.

ಸೋಲು, ಭಾಷೆಯಾವುದಾದರೇನು ಶಿಕ್ಷಣ ತಾನೆ ಮುಖ್ಯ ಎಂಬ ಉದಾರತೆ, ಕನ್ನಡದ ಬಗೆಗೆ ನಾಲ್ಕಾರು ಮಾತುಗಳನ್ನಾಡಿದರೇ ನಾಯಕ ಪಟ್ಟದಿಂದ ವಿಲನ್ ಪಟ್ಟಕ್ಕೆ ಉದುರಿಬೀಳುವ ಪರಿಸ್ಥಿತಿಗಳು ಕೇವಲ ಗಡಿ ಭಾಗದಲ್ಲೇ ಅಲ್ಲ ಕರ್ನಾಟಕದ ಒಳಭಾಗಗಳಲ್ಲೂ ಸಾಕಷ್ಟಿವೆ; ಹೆಚ್ಚುತ್ತಲೂ ಇವೆ. ಕನ್ನಡೇತರರು ಕರ್ನಾಟಕದಲ್ಲಿ ಕಾಲೂರಿ ತಮ್ಮ ಭಾಷೆ ಸಂಸ್ಕೃತಿಗಳನ್ನು ಬೆಳೆಸಬಹುದಾದರೆ, ಇಲ್ಲಿಯೇ ಹುಟ್ಟಿ ಬೆಳೆದ ನಮಗೆ ಏಕೆ ಸಾಧ್ಯವಾಗುತ್ತಿಲ್ಲ ಎಂಬುದಕ್ಕೆ ನಮ್ಮ ಉದಾರತೆ - ನಿರಭಿಮಾನಗಳು ಎಷ್ಟು ಕಾರಣವೋ, ಸರ್ಕಾರದ ಉದಾಸೀನತೆಯೂ ಅಷ್ಟೇ ಕಾರಣ.

ಈ ಲೇಖನವನ್ನು ಕಸ್ತೂರಿಯ ಓದುಗರೆಲ್ಲರೂ ಗಮನಿಸಿರಲಾರರೆಂದರೆ ಆಶ್ಚರ್ಯವೇನಿಲ್ಲ!

ಊಡಿಗೆರೆ ವಿ.ಎಸ್.ಸೂರ್ಯನಾರಾಯಣಾಚಾರಿ

O

ಮೆಕ್ಸಿಕೋದಲ್ಲಿ ಎಣ್ಣೆ ಬಾವಿ ಕೊರೆಯುತ್ತಿದ್ದಾಗ ಬೆಂಕಿಬಿದ್ದದ್ದು 1904ರಲ್ಲಿ. ಜೂನ್ ಸಂಚಿಕೆಯ 61ನೇ ಪುಟದಲ್ಲಿ ತಿಳಿಸಿದಂತೆ 1908ರಲ್ಲಿ ಅಲ್ಲ.

ಶಿರಸಿ ಹರಿಹರ ಕಬ್ಬಿಸರ

ಜೂನ್ 92ರ 'ಕಸ್ತೂರಿ'ಯಲ್ಲಿ ಪ್ರಕಟವಾದ ಪುಸ್ತಕ ವಿಭಾಗ 'ಕರ್ಣ-ವೃಷಾಲಿ'ಯ ಮೂಲ ಗ್ರಂಥ 'ಮೃತ್ಯುಂಜಯ' ಎಂಬ ಕಾದಂಬರಿ. ಓದುಗರನೇಕರ ಅಪೇಕ್ಷೆಯ ಮೇರೆಗೆ ಆ ಕಾದಂಬರಿಯ ಪ್ರಕಾಶಕರ ವಿಳಾಸವನ್ನಿಲ್ಲಿ ನೀಡುತ್ತಿದ್ದೇವೆ:

ಅಮಿತ ಪ್ರಕಾಶನ ಬೆಳಗಾಂವಿ
C/o ಪ್ರೊ. ಅಶೋಕ ನೀಲಗಾರ,
ಶ್ರೀ ದಾಮೋದರ ಕಾಲೇಜ್ ಆಫ್
ಕಾಮರ್ಸ್ & ಇಕನಾಮಿಕ್ಸ್,
ಮಡಗಾಂವ್ (ಗೋವಾ)

ಸಂಪುಟ : 36 ಸಂಚಿಕೆ : 12

ಆಗಸ್ಟ್ 1992

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ :

ಕೆ.ಶಾಮರಾವ್

○

ಸಂಪಾದಕ :

ಎನ್.ವಿ. ಜೋಶಿ

○

ನಿರ್ವಹಣೆ :

ರವಿ ಬೆಳಗೆರೆ

ಅಂತರಂಗ

ಕಥಕ್: ಪ್ರಾಚೀನ ನೃತ್ಯ ಪರಂಪರೆ. 6
○ ವೃಜಭೂಷಣ

ಬಾಂಗ್ಲಾದೇಶದ ಮ್ರು ಜನಾಂಗ. 11
○ ಜಾವ್ಸ್ ಡಯ್ಪರ್ ಬ್ರೌನ್ಸ್

ಇತಿಹಾಸಕ್ಕೆ ದಿಕ್ಕು ತೋರಿದ
ಮಹಾತ್ಮರ ಮಾತುಗಳು. 19

ಬ್ರಿಟಿಶರ ದೃಷ್ಟಿಯಲ್ಲಿ ಚಲೇಜಾವ್ ಚಳವಳಿ 25
○ ಗೋವಿಂದಮೂರ್ತಿ ದೇಸಾಯಿ

ಆಕೆ (ಕಥಾನುವಾದ) 29
○ ಪ್ರಪಂಚನ್

ಜಾಹೀರಾತಿನ ಭ್ರಾಮಕ ಲೋಕ 37
○ ಹರೀಶ ಪುತ್ತೂರಾಯ

ಭೂಶೃಂಗ ಸಮ್ಮೇಳನ ಸಾಧಿಸಿದ್ದೇನು? 41
○ ಅರುಣ

ಜಗದೀಶಚಂದ್ರರ ಆತ್ಮವಿಶ್ವಾಸ. 47
○ ಮುರಲೀಧರ ಕುಲಕರ್ಣಿ

ನಿಮ್ಮ ಶಬ್ದಭಾಂಡಾರ ಬೆಳೆಯಲಿ 49

ಸ್ತ್ರೀವಾದ ಮತ್ತು ಮಾನವಶಾಸ್ತ್ರ! 51
○ ನೇಮಿಚಂದ್ರ

ಆಂಗ್ಲ ಜೀವನ : ಯಾತ್ರಿಕನು ಕಂಡಂತೆ 54
○ ಐ. ಶ್ರೀರಾಮ್

ಕೆಟ್ಟ ಯೋಚನೆಗೆ ಕೊಟ್ಟ ಬೆಲೆ (ನೀತಿ ಕಥೆ) . 59
○ ಜಿ. ಪ್ರೇಮಾನಂದ

'ನಾನು ದೇವರನ್ನು ಕಂಡಿದ್ದೇನೆ'-ಸರ್ಕಾರ್ . . 60
○ ಶಿವಾನಂದ ಕಣವಿ

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕ ದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

○○○○○

ಹೊಸ ಚಂದಾ ದರಗಳು

ಬಿಡಿ ಸಂಚಿಕೆ	....	ರೂ. 5-00
1 ವರ್ಷಕ್ಕೆ	ಅಂಚೆ ಸೇರಿ	ರೂ.60-00
2 ವರ್ಷಕ್ಕೆ	ಅಂಚೆ ಸೇರಿ	ರೂ.110-00
3 ವರ್ಷಕ್ಕೆ	ಅಂಚೆ ಸೇರಿ	ರೂ.150-00

ಕಸ್ತೂರಿ ಕಾರ್ಯಾಲಯ,
ಕೊಪ್ಪೀಕರ ರಸ್ತೆ,
ಹುಬ್ಬಳ್ಳಿ - 580020

ನನ್ನ ಗ್ರಂಥ ಸಂಪಾದನೆ 63
○ ನೀರಗುಂದ ಕೇಶವಮೂರ್ತಿರಾವ್

ಪ್ರತಿಭಾ ಕಿಣಿಯ ಅಪೂರ್ವ ನಿಶ್ಶಬ್ದ ಲೋಕ. . 66
○ ಕೆ.ಎಚ್. ಸಾವಿತ್ರಿ

ಕಥೆ ಹೇಳುವೆ (ಕವನ) 70
○ ವಿದ್ಯಾಧರ ಮುತಾಲಿಕ ದೇಸಾಯಿ

ಪ್ರೀತಿಸಲರಿಯದ ನಾವು 72
○ ಮಹಾಬಲೇಶ್ವರ ಕಾಟ್ರಹಳ್ಳಿ

ನೀನಾಸಮ್ :
ಒಂದು ಸಾಂಸ್ಕೃತಿಕ ಪರ್ಯಾಯ 75
○ ಡಾ. ರುಸ್ತುಂ ಭರೂಚ

ಕ್ರಿಸ್ಮಸ್ ಐಲೆಂಡಿನ ಕೆಂಪು ಕನಸು........ 82
○ ವೃಷಭೇಂದ್ರಯ್ಯ

ಸಾಧು ವಾಸ್ವಾನಿಯವರ ಕಿರುಗತೆಗಳು 88
○ ಸಂಪಟೂರ ವಿಶ್ವನಾಥ್

ಜನಸಂಖ್ಯಾಸ್ಫೋಟಕ್ಕೆ ಕಡಿಗೀಲು 90
○ ಟಿ.ಆರ್. ಚಂದ್ರಶೇಖರ

ಕವಿಗೋಷ್ಠಿ (ವಿಡಂಬನೆ)............ 93
○ ಎಂ.ಡಿ. ಗೋಗೇರಿ

ಶಾಹ ಮುರೀದ ಮತ್ತು
ಹಾನೀ (ಜಾನಪದ ಕಥೆ).......... 97
○ ಎಂ. ದಸ್ತಗೀರ

ಜಿಪುಣ ಜಾನ್ ಎಲ್ವ್ಸ್.............. 102
○ ವಿ. ಶ್ರೀನಿವಾಸ್

ಪೈ - ಗಣಿತದ ವಿಸ್ಮಯ 106
○ ಬಿ.ಪಿ. ಚಳಗೇರಿ

ನಿಮ್ಮ ಅಂದಚೆಂದಕ್ಕೊಂದು ಕೈಗನ್ನಡಿ. . . 108
○ ತಿಂಗಳೇಶ

ನೆನಪು ನೆರಳಿನಲ್ಲಿ 112

ಭಾಲಜಿ ಪೆಂಢಾರಕರ್ (ನಾಸ್ಟಾಲ್ಜಿಯಾ) 114
○ ಗೋವಾ

★ ಸಹಾಯ ಸೌಲಭ್ಯಗಳು ಮನುಷ್ಯನನ್ನು ನಿರ್ಮಿಸಲಾರವು; ಸಂಕಷ್ಟ, ಅಡೆತಡೆಗಳು ಈ ಕೆಲಸ ಮಾಡುತ್ತವೆ.

- ವಿಲಿಯಂ ಮ್ಯಾಥ್ಯೂಸ್

★ ದ್ವೇಷದಿಂದ ಶಮನ ಹೊಂದಲಾರದ ದ್ವೇಷವನ್ನೂ ಪ್ರೀತಿಯಿಂದ ಗೆಲ್ಲಲು ಸಾಧ್ಯ; ಇದೇ ಶಾಶ್ವತ ನಿಯಮ.

- ಬುದ್ಧ

★ ಹಲವಾರು ತಿರುವು ಮತ್ತು ನಷ್ಟಗಳ ತರುವಾಯ ಮನುಷ್ಯ ಸಭ್ಯನೂ, ತಿಳುವಳಿಕಸ್ಥನೂ ಆಗುತ್ತಾನೆ.

- ಬೆಂಜಾಮಿನ್ ಫ್ರಾಂಕ್‌ಲಿನ್

★ ಉಲ್ಲಾಸಕರ ಭ್ರಮೆಯು ಕಠಿಣತಮ ವಾಸ್ತವಕ್ಕಿಂತ ಮೇಲು.

- ಸಿ. ಎನ್. ಬೊವೀ.

ಪುಸ್ತಕ ವಿಭಾಗ

ತಪ್ಪೊಪ್ಪಿಗೆ 119

ಮೂಲ : ಖುರಾತುಲೇನ್ ಹೈದರ್
ಕನ್ನಡಕ್ಕೆ : ಬೊ...ಮು ಮಹಮ್ಮದ ಕುಂಞ

ಆರೋಗ್ಯದಂಗಳ

ಅರ್ಥ್‌ರೈಟಿಸ್ ?
ಆತಂಕ ಬೇಡ............145

○ ಡಾ. ವಿನೋದ ಎಂ. ಕಲ್ಯಾಣಪುರಕರ್

● ಪ್ರಿ ಜನಾರಾಯಣ.

ಕಥಕ್: ಪ್ರಾಚೀನ ನೃತ್ಯ ಪರಂಪರೆ

ಎರಡು ಮುಖ್ಯ ಘರಾಣೆಗಳಲ್ಲಿ ವಿಕಾಸಗೊಂಡದ್ದು ಕಥ'ಕ್ ನೃತ್ಯ ಶೈಲಿ. ಜಯಪುರ ಘರಾಣೆಯಲ್ಲಿ ಪದಗತಿಗೆ ಪ್ರಾಧಾನ್ಯ. ಎರಡನೆಯದಾದ ಲಖನೌ ಘರಾಣೆಯಲ್ಲಿ ಅಭಿನಯಕ್ಕೆ ಆದ್ಯತೆ.

ನಲಿಯುವ ಹೆಜ್ಜೆಗೆ, ಉಲಿಯುವ ಗೆಜ್ಜೆಗೆ ನಮ್ಮ ದೇಶದಲ್ಲಿ ಎಷ್ಟೊಂದು ಶೈಲಿಗಳು, ಎನಿತೊಂದು ಹೆಸರುಗಳು! ಅಷ್ಟ ದಿಕ್ಕುಗಳನ್ನೂ ವ್ಯಾಪಿಸಿರುವ ಹಲವು ಹರಹಿನ ನಮ್ಮ ನೃತ್ಯ ಕಲೆಯ ಒಂದೊಂದು ಪ್ರಕಾರಕ್ಕೂ ಅದರದೇ ಆದ ಇತಿಹಾಸವಿದೆ, ವೈಶಿಷ್ಟ್ಯವಿದೆ, ಪ್ರಾಚೀನ ಪರಂಪರೆಯಿದೆ. ಅಂತೆಯೇ ''ಭಾರತ ಶಾಸ್ತ್ರೀಯ ನೃತ್ಯಕಲೆಯ ತವರು'' ಎಂಬ ಸಾರ್ಥಕ ಪ್ರಶಂಸೆ.

ಕಥಕ್ ನೃತ್ಯಶೈಲಿ ಉತ್ತರಭಾರತದ ಕಲಾ ಸೃಷ್ಟಿ. ಋಗ್ವೇದ, ರಾಮಾಯಣ, ಮಹಾಭಾರತಗಳಲ್ಲದೇ 'ನಾಟ್ಯಶಾಸ್ತ್ರ'ದಲ್ಲೂ 'ಕಥಕ್'ನ ವಿವರಣೆ ಮುಖ್ಯವಾಗಿ ಉಲ್ಲೇಖಿಸಲ್ಪಟ್ಟಿದೆ. ನಮ್ಮ ಪ್ರಾಚೀನ ಪದಕೋಶಗಳಲ್ಲಿ ಅಲ್ಲದೆ ನೆರೆಯ ನೇಪಾಳಿ ಶಬ್ದಕೋಶದಲ್ಲೂ ಕಥಕ್ ಕಾಣಿಸಿಕೊಂಡಿದೆ. ಪಾಲಿ ಮತ್ತು ನೇಪಾಳಿ ಶಬ್ದಕೋಶಗಳಲ್ಲಿ 'ಕಥಿಕೊ' (ಅಂದರೆ ವರ್ಣನೆ ಎಂದರ್ಥ), ಜೈನ ಗ್ರಂಥಗಳಲ್ಲಿ 'ಕುಟುಂಬ' ಎಂಬ ಸಮಾನ ಪದಗಳು ಸಿಕ್ಕುತ್ತವೆ. ಮೊಹೆಂಜೊದಾರೋ ಮತ್ತು ಹರಪ್ಪಾ ಪ್ರದೇಶಗಳಲ್ಲಿನ ಉತ್ಖನನದಲ್ಲಿ ದೊರೆತ ನೃತ್ಯನಿರತ ಭಂಗಿಯ ಮೂರ್ತಿಗಳು ಕಥಕ್ ನೃತ್ಯಗೈಯುತ್ತಿರುವಂತೆಯೇ ಭಾಸವಾಗುತ್ತದೆ.

ಸಮ್ರಾಟ ಅಕಬರನ ಕಾಲಕ್ಕೆ ಜೀವಿಸಿದ್ದ ಸ್ವಾಮಿ ಹರಿದಾಸ ಎಂಬ ಕಲಾದ್ರಷ್ಟಾರನನ್ನು ಕಥಕ್ ನೃತ್ಯ ಪರಂಪರೆಯ ಅಧ್ವರ್ಯು ಎನ್ನಲಾಗುತ್ತದೆ. ಆತನ ಶಿಷ್ಯರನೇಕರು ದಿಲ್ಲಿ-ಪಂಜಾಬ್ ಮುಂತಾಗಿ ಸುತ್ತಲಿನ ಹತ್ತಾರು ಪ್ರದೇಶಗಳಲ್ಲಿ ಕಲೆಯ ಪ್ರಚಾರ ನಡೆಸಿದರು. ಆ ಕಾಲಕ್ಕೆ ನರ್ತಕಿಯರನೇಕರಿಗೆ ಕಥಕ್ ಶಿಕ್ಷಣ ದೊರೆತದ್ದೇ ಸ್ವಾಮಿ ಹರಿದಾಸನ ಶಿಷ್ಯರಿಂದ ಎಂದು ಆಧಾರಗಳು ಸಾರುತ್ತವೆ.

ಹರಿದಾಸನ ಶಿಷ್ಯರಲ್ಲಿ ಪ್ರಮುಖರೆಂದರೆ ತಾನಸೇನ್, ಬೈಜೂ ಬಾವರಾ ಮತ್ತು ಅಮೀರ ಖುಸ್ರೋ. ತಮ್ಮ ಈ ಗುರುವಿನಿಂದ ಸಂಗೀತ ಕಲಿತವರು ಶ್ರೇಷ್ಠ ಗಾಯಕರಾದರು, ವಾದ್ಯವಾದನ ಕಲಿತವರು ಅಸಮಾನ ವಾದಕರಾದರು

ಮತ್ತು ನೃತ್ಯ ಶಿಕ್ಷಣ ಪಡೆದವರು 'ಕಿನ್ನರ' 'ಕತ್ಥಕ್' ಎನಿಸಿಕೊಂಡರು. ಔರಂಗಜೇಬನ ಆಡಳಿತ ಬಂದಾಗ ಈ ಗಾಯಕ, ಕಿನ್ನರ - ಕತ್ಥಕರೆಲ್ಲ ರಾಜಾಶ್ರಯದಿಂದ ವಂಚಿತರಾಗಿ ವಿಭಿನ್ನ ಪ್ರಾಂತಗಳಿಗೆ ಹೋಗಿ ನೆಲೆಸಿದರು.

ಮಹಮ್ಮದ್ ಬಿನ್ ಕಾಸೀಮ್ ಮತ್ತು ಮಹಮ್ಮದ್ ಗಜನವೀಯರ ಕಾಲದಲ್ಲಿ ಕಥಕ್ ನರ್ತಕ - ನರ್ತಕಿಯರು ತುಂಬ ಗೌರವದ ಸ್ಥಾನ ಪಡೆದರು. ಅಲ್ಲಾವುದ್ದೀನ್ ಖಿಲ್ಜಿ ಮತ್ತು ಮಾನಸಿಂಗ್ ತೋಮರ್‌ನ ಆಸ್ಥಾನದಲ್ಲಿ ಕಥಕ್ ಕುರಿತ ಚರ್ಚೆಗಳು, ಸ್ಪರ್ಧೆಗಳು ನಡೆಯುತ್ತಿದ್ದವು. ತನ್ನ ಕಡೆಯ ದಿನಗಳಲ್ಲಿ ಔರಂಗಜೇಬನೂ ಈ ಶೈಲಿಯ ನರ್ತಕರಿಗೆ ರಾಜಾಶ್ರಯವಿತ್ತನೆಂದು ಹೇಳುತ್ತಾರೆ.

ಅಲಹಾಬಾದದ ಹಂಡಿಯಾ ನಿವಾಸಿ ಪಂ. ಈಶ್ವರಪ್ರಸಾದ್ ಎಂಬವ ಕಥಕ್ ನೃತ್ಯಕಲೆಯ ಪುನರುದ್ಧಾರವನ್ನು ಗೈದ. ತನ್ನ ಬದುಕಿನ ಬಹುಕಾಲವನ್ನಾತ ಕಥಕ್ ಶೈಲಿಯ ಅಧ್ಯಯನ ಹಾಗೂ ಸುಧಾರಣೆಗಾಗಿ ಮೀಸಲಿಟ್ಟ. ಹೊಸ ಹೊಸ ಪ್ರಯೋಗಗಳನ್ನು ಕೈಗೊಂಡು ಕಥಕ್ ನರ್ತಕ-ನರ್ತಕಿಯರ ಹೊಸ ಪೀಳಿಗೆಯೊಂದನ್ನು ತಯಾರು ಮಾಡಿದ.

ಕ್ರಮೇಣ ಜನಪ್ರಿಯತೆ ಪಡೆದುಕೊಂಡು ಬೆಳೆದ ಕಥಕ್ ನೃತ್ಯಶೈಲಿ ಅನೇಕ ಘರಾಣೆಗಳಲ್ಲಿ ವಿಕಾಸಗೊಂಡಿತು. ಇವುಗಳಲ್ಲಿ ಮುಖ್ಯವಾದುವೆಂದರೆ ಜಯಪುರ್ ಘರಾಣೆ ಮತ್ತು ಲಖನೌ ಘರಾಣೆ. ಮೊದಲನೆಯದರ ಪ್ರವರ್ತಕ ಪಂ. ಈಶ್ವರೀಪ್ರಸಾದ, ಎರಡನೆಯದರ ಪ್ರಮುಖ ಭಾನುಜಿ. ಜಯಪೂರ ಘರಾಣೆಯಲ್ಲಿ ಪದಗತಿಗೆ ಪ್ರಾಧಾನ್ಯ. ಲಖನೌ ಘರಾಣೆಯಲ್ಲಿ ಅಭಿನಯಕ್ಕೆ ಆದ್ಯತೆ.

ನೃತ್ಯಾಚಾರ್ಯ ಶಂಭು ಮಹಾರಾಜ್ ಹೇಳುತ್ತಿದ್ದರು: 'ನಾನು ಕಥಕ್ ನೃತ್ಯವನ್ನು ಲಯಪ್ರಧಾನವೆಂಬುದಕ್ಕಿಂತ ಹೆಚ್ಚಾಗಿ ಭಾವಪ್ರಧಾನವೆಂದು ಭಾವಿಸಿದ್ದೇನೆ. ಲಯಪ್ರಧಾನವನ್ನಾಗಿಸಿಬಿಡುವಲ್ಲಿ ಒಂದು ತೊಡಕೆಂದರೆ ತಬಲಾ



ಕಥಕ್‌ನ ಒಂದು ಆಕರ್ಷಕ ಮುದ್ರೆಯಲ್ಲಿ
ಪಂ. ಬಿರಜೂ ಮಹಾರಾಜ್

ಇಲ್ಲವೆ ಪಖಾವಜ್ ಅನ್ನೇ ನರ್ತಕ ಅವಲಂಬಿಸಬೇಕು. ಕಲಾವಿದನಿಗೆ ಭಾವಪ್ರದರ್ಶನಕ್ಕೆ ಸ್ವಾತಂತ್ರ್ಯವೇ ಸಿಕ್ಕುವುದಿಲ್ಲ. ಭಾವಪ್ರದರ್ಶನವಿಲ್ಲದುದನ್ನು ನಾನು ನೃತ್ಯವೆಂದು ಕರೆಯಲು ಇಷ್ಟಪಡುವುದಿಲ್ಲ.'

ಮುಗಲರ ಕಾಲದಲ್ಲಿ ಕಥಕ್ ನೃತ್ಯಶೈಲಿ ಬದಲಾವಣೆ ಹೊಂದಿತೆಂದೆನ್ನುವ ಪಂ. ಬಿರಜೂ ಮಹಾರಾಜ್ ''ಮುಗಲ್ ಬಾದಶಾಹಾ ದರಬಾರುಗಳಲ್ಲಿ ನಡೆಯುತ್ತಿದ್ದ ನಟನಾಗರರ ನಟವರಿ ನೃತ್ಯ ಅನ್ತಃಪುರದವರಿಗೆ ಆತ್ಮೀಯವಾಗುತ್ತ ಬೇಗಮರ ಲಕ್ಷ್ಯ ಸೆಳೆಯಿತು. ಪ್ರಾಚೀನವಾದ ಅದರ ಪೋಷಾಕುಗಳ ಬದಲಿ ಚೂಡಿದಾರ್ ಪೈಜಾಮಾ, ನಿಲುವಂಗಿ, ಮಖಮಲ್ ಶಾಲು, ಕಸೂತಿ ಹಾಕಿದ ಮುತ್ತುಕಟ್ಟಿದ ಟೋಪಿಗಳು ನರ್ತಕ-ನರ್ತಕಿಯರನ್ನು ಅಲಂಕರಿಸಿದವು. 'ನಮಸ್ಕಾರ'ವನ್ನು 'ಸಲಾಂ' ಎಂದೂ 'ಪ್ರವೇಶ'ವನ್ನು 'ಆಮದ್' ಎಂದೂ ಕರೆಯಲಾಯಿತು. ನವಾಬಿ ಖಯಾಲಿಗೆ ತಕ್ಕಂಥ ಎತ್ತರವನ್ನು ಈ ನೃತ್ಯಶೈಲಿ ತಲುಪಿತು. ಆದರೂ ಅವುಗಳ ಮೂಲವೆಲ್ಲ 'ಕೃಷ್ಣಕಥೆ'ಯೇ. ರಾಧೆಯೊಂದಿ



ಕಥಕ್ ಪರಂಪರೆಯ ಭರವಸೆ ಎಲ್.ಆರ್. ನಿರುಪಮಾ

ಗಿನ ಕೃಷ್ಣನ ಚೇಷ್ಟೆಗಳು, ಮನಮೋಹನ. ಅವರ ತಲೆಯ ಮೇಲಿನ ಮಡಕೆಯೊಡೆಯುವುದು, ಬೆಣ್ಣೆಕದಿವ ನಂದಲಾಲ, ಮುರಲೀನಾದಕ್ಕೆ ಮೈಮರೆಯುವ ಗೋಪಿಯರು.. ಎಲ್ಲವೂ ಅದೇ ರೀತಿ ಉಳಿದವು.''

ನೃತ್ಯಕಲೆಯ ಉಗಮಸ್ಥಾನ ಮತ್ತು ಚೇತನ ಧಾಮಗಳು ನಮ್ಮ ದೇವಮಂದಿರಗಳಷ್ಟೆ. ಆರಾಧ್ಯದೈವದ ಪ್ರೀತ್ಯರ್ಥ ಸಲ್ಲಿಸುವ ಹಲವು ಸೇವೆಗಳಲ್ಲಿ ನರ್ತನ ಸೇವೆಯೂ ಒಂದು. ದಕ್ಷಿಣದಲ್ಲದು ದೇವದಾಸಿಯರ ಮೂಲಕ ನಡೆದರೆ, ಉತ್ತರಭಾರತದಲ್ಲಿ ವೈದಿಕ-ಪೌರಾಣಿಕ ಆಖ್ಯಾನಗಳನ್ನು ಸ್ವರಬದ್ಧವಾಗಿ ಅಭಿನಯಪೂರ್ಣವಾಗಿ ಸಮಸ್ತ ಭಕ್ತರ ಸಮಕ್ಷಮದಲ್ಲಿ ದೇವತೆಗೆ ಸೇವೆ ಸಲ್ಲಿಸುವವರನ್ನು 'ಕಥಕ್' ಎಂದು ಕರೆಯಲಾಯಿತು. ಅಂತೆಯೇ 'ಕಥನ'ಕ್ಕೂ 'ಕಥಕ್'ಗೂ ತೀರ ಹತ್ತಿರದ ಸಂಬಂಧ. ಕಥಾನಕದ ಪ್ರಸ್ತುತೀಕರಣಕ್ಕೆ ಮನೋರಂಜನೆಯ ಪುಟವಿಕ್ಕಲು ನೃತ್ಯಾಭಿನಯ ಅಥವಾ ಭಾವಭಂಗಿಗಳ ಪ್ರಯೋಗ ನಡೆಯತೊಡಗಿತು.


ಕಾಲಾಂತರದಲ್ಲಿ ಇದು 'ಕಥಾನಕ'ದಿಂದ ದೂರವಾಗಿ ಒಂದು ನೃತ್ಯಶೈಲಿಯಾಗಿಯೇ ಬೆಳೆಯಿತು. ಭರತನಾಟ್ಯಮ್, ಒಡಿಸ್ಸಿ ಮತ್ತು ಕಥಕ್‌ಗಳನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಇವೆಲ್ಲವುಗಳ ಉದ್ಭವಕೇಂದ್ರ ಒಂದೇ ರೀತಿಯವು. ಆದರೆ ಆಯಾ ಪ್ರಾದೇಶಿಕ ಭಾಷೆ, ವೇಷಭೂಷ, ಬದುಕಿನ ರೀತಿಗಳಿಂದಾಗಿ ಈ ನೃತ್ಯಶೈಲಿಗಳಲ್ಲಿ ಭಿನ್ನತೆ ಬಂತು. ತತ್ಫಲವಾಗಿ ಈ ಎಲ್ಲ ನೃತ್ಯಗಳಲ್ಲಿ ವಾದ್ಯವೃಂದ, ಹಾಡುಗಾರಿಕೆ ಮತ್ತು ಭಾವಾಭಿ ವ್ಯಕ್ತಿಗಳಲ್ಲಿ ನಮಗೆ ವೈವಿಧ್ಯ ಪ್ರಾಪ್ತವಾಯಿತು.

ಭಾರತದ ಯಾವುದೇ ಪರಂಪರಾನುಗತ ಶಾಸ್ತ್ರೀಯ ನೃತ್ಯಶೈಲಿಗಳನ್ನು ಮೂರು ಮುಖ್ಯ ಭಾಗಗಳಲ್ಲಿ ವಿಂಗಡಿಸಬಹುದು: ನೃತ್ಯಭಾಗ, ನೃತ್ಯ ಮತ್ತು ನಾಟ್ಯಂ (ಅಭಿನಯ) ಎಂದು. ಸೂಕ್ಷ್ಮವಾಗಿ ಅವಲೋಕಿಸಿದರೆ ನಮಗೆ ಕಥನ ತಂತ್ರದ ನೃತ್ಯಭಾಗದಲ್ಲಿ ತಾಳ ಮತ್ತು ಲಯ ಗಳಿಗೆ ಪ್ರಾಮುಖ್ಯವಿರುವುದು ಕಂಡುಬರುತ್ತದೆ; ಭರತನಾಟ್ಯದಲ್ಲಿ ಜತಿಸ್ವರಂ ನರ್ತಕ ಭಿನ್ನಭಿನ್ನ ಜತಿಗಳ ಮೂಲಕ ತಾಳ ಮತ್ತು ಲಯಗಳನ್ನು ಒಡೆದೊಡೆದು ತೋರಿಸುತ್ತಾನೆ. ಅದೇ ರೀತಿ ಒಡಿಸ್ಸಿ ನೃತ್ಯದಲ್ಲಿ ಬಂಟೆ ಬಂದಿಶ್‌ಗಳ ಮೂಲಕ ತಾಳ ಮತ್ತು ಲಯಗಳಿಗೆ ಪ್ರಾಮುಖ್ಯವಿರುವುದು ವಿದಿತವಾಗುತ್ತದೆ.

ಎರಡನೆಯ ಭಾಗ ನೃತ್ಯ. ಯಾವುದೇ ಶೈಲಿಯ ಈ ಭಾಗದಲ್ಲಿ ಲಯ ಮತ್ತು ಅಭಿನಯಗಳ ಮಿಶ್ರಿತರೂಪವನ್ನು ಪ್ರಸ್ತುತಗೊಳಿಸಲಾಗುತ್ತದೆ. ಇವುಗಳ ಉದಾಹರಣೆಗಳೆಂದರೆ 'ಕಥಕ್'ನ ತರಾನಾ, 'ಭರತನಾಟ್ಯಮ್' ತಿಲ್ಲಾಣ ಮತ್ತು 'ಒಡಿಸ್ಸಿ'ಯ ಪಲ್ಲವಿ. ಈ ಮೂರು ಶೈಲಿಗಳ ವಿಭಿನ್ನ ಬಂದಿಶ್‌ಗಳು ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಗಾಯನ ಪದ್ಧತಿಗಳ ಮೇಲೆ ಆಧಾರಿತವಾದವುಗಳು.

ಮೂರನೆಯ ಭಾಗ 'ನಾಟ್ಯಂ' ಅಥವಾ 'ಅಭಿನಯ' ಎಂದು ಕರೆಯಲ್ಪಡುತ್ತದೆ. ಇದರಲ್ಲಿ ಮೂಲರೂಪದಲ್ಲಿ ಅವೇ ಪೌರಾಣಿಕ ಕಥಾವಸ್ತುಗಳಿದ್ದು ಕಲಾವಿದ ಅವನ್ನು ನವರಸ, ಸಂಚಾರಿ ಭಾವ, ನಾಯಿಕಾಭೇದ ಮುಂತಾದ ನಾಟ್ಯತತ್ವಗಳನ್ನು ತನ್ನ ಪ್ರದೇಶದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಥಾನಕಗಳಿಂದ ಉದ್ಧರಿಸಿ ಅಭಿನೀತಗೊಳಿಸುತ್ತಾನೆ. ಅದರ ಮೂಲ ಆಧಾರ ತತ್ವ ತುಲಸಿದಾಸ ವಿರಚಿತ 'ರಾಮಚರಿತ ಮಾನಸ', ಸೂರದಾಸನ 'ಪದ' ಇಲ್ಲವೆ ಜಯದೇವನ 'ಗೀತಗೋವಿಂದ' ಅಥವಾ ತ್ಯಾಗರಾಜರ ಕೃತಿಗಳೇ ಆಗಿರಬಹುದು. ಈ ಎಲ್ಲ ನೃತ್ಯಶೈಲಿಗಳು ಮೇಲುನೋಟಕ್ಕೆ ಭಿನ್ನವೆನಿಸಿದರೂ ಮೂಲರೂಪದಲ್ಲಿ ಒಂದಕ್ಕೊಂದು ಬೆಸೆದುಕೊಂಡಂಥವು.

'ಕಥಕ್'ನ ತಂತ್ರಪಕ್ಷ ಮತ್ತು ಸಂಗೀತ ಪ್ರಧಾನ ಬಂದಿಶ್‌ಗಳ ರೂಪ 'ಒಡಿಸ್ಸಿ' ಮತ್ತು 'ಭರತನಾಟ್ಯಮ್'ಗಳಿಗಿಂತ ತುಂಬ ಭಿನ್ನವಾಗಿವೆ. ಇದಕ್ಕೆ ಮುಖ್ಯ ಕಾರಣ ಹಿಂದೂಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಶೈಲಿಗಳಲ್ಲಿ ಪ್ರಚಲಿತವಿರುವ ತಾಳ ಮತ್ತು ಗಾಯನ ಪದ್ಧತಿಗಳ ಭಿನ್ನತೆ. ನಮ್ಮ ಈ ಶೈಲಿಗಳು ಈ ತಾಳಪದ್ಧತಿಗಳ ಮೇಲೆ ವಿಭಿನ್ನರೂಪದಲ್ಲಿ ಆಧಾರಿತವಾಗಿವೆ. ನಾಟ್ಯಶಾಸ್ತ್ರದಲ್ಲಿ ಇವುಗಳಿಗೆ ಎರಡು ಪರಿಭಾಷಿಕೀಯ ಶಬ್ದಗಳು ಉಲ್ಲೇಖಿಸಲ್ಪಟ್ಟಿವೆ: 'ನಾಟ್ಯಧರ್ಮಿ' ಮತ್ತು 'ಲೋಕಧರ್ಮಿ' ಎಂದು. 'ಭರತನಾಟ್ಯಂ' ಮತ್ತು 'ಒಡಿಸ್ಸಿ'ಗಳು ನಾಟ್ಯಧರ್ಮಿ. ಯಾಕೆಂದರೆ ಈ ಶೈಲಿಗಳ ಬಂದಿಶ್‌ಗಳಿಗೆ ನಾಟ್ಯಶಾಸ್ತ್ರ ಒಂದು ನಿಶ್ಚಿತ ರೂಪ ನೀಡಿದೆ. ಈ ಶೈಲಿಯ ಅಭಿನಯ



ಪಾತ್ರವನ್ನು ನಾಟಕೀಯತೆಯಲ್ಲಿ ಮುಳುಗಿಸಲಾಗುತ್ತದೆ. ಯಾವುದೇ ವಿಷಯಕ ಪಾತ್ರಗಳು ಆಯಾ ರಸದ ಅಭಿನಯದಲ್ಲಿ ನಾಟಕೀಯತೆಯನ್ನು ತೋರ್ಪಡಿಸಬೇಕು ಎಂದು ಅರಿಸಲಾಗುತ್ತದೆ. ಆದರೆ 'ಲೋಕಧರ್ಮಿ' ಹಾಗಲ್ಲ. ಈ ಶೈಲಿಯ ಅಭಿನಯ ಮತ್ತು ಅಂಗಸಂಚಾಲನಗಳಲ್ಲಿ ಸಹಜತೆ ಮುಖ್ಯವಾಗುತ್ತದೆ. ರಸಗಳ ನಿಷ್ಪತ್ತಿ ಸಹಜ ಮುಖವಿಲಾಸ ಮತ್ತು ನಯನಗಳ ಸೂಕ್ಷ್ಮ ಭಾವಗಳಿಂದ ಮಾತ್ರ ಸಂಭವಿಸಲು ಸಾಧ್ಯ.

ಲಯದ ನವೀನ ಪ್ರಯೋಗಗಳಿಗಾಗಿ 'ಕಥಕ್' ಹಿಂದೂಸ್ತಾನಿ ತಾಳ-ಪದ್ಧತಿಯ ವ್ಯಾಪಕ ರೂಪವನ್ನಬೇಕು. ಇದರಲ್ಲಿ ಕಲಾವಿದ 'ಸಮ್'ಅನ್ನು ತನ್ನದೇ ಲಯದ ಲಕ್ಷಣಕ್ಕನುಸಾರವಾಗಿ ತೋರಿಸಬಲ್ಲ. ಆದರೆ ದಕ್ಷಿಣ ಭಾರತದ ಪದ್ಧತಿಯಲ್ಲಿ ನಿಶ್ಚಿತ ಆವರ್ತನಗಳದೊಂದು ಸೀಮಿತ ಪರಿಧಿ ಇರುತ್ತದೆ. ಕಥಕ್ ನೃತ್ಯದಲ್ಲಿ ಚಮತ್ಕಾರಿಕ ಲಯಗಾರಿಕೆ ಮತ್ತು ರೋಚಕ ಜುಗಲ್‌ಬಂದಿಯ ರೂಪ ನೋಡಸಿಗುತ್ತದೆ. ನರ್ತಕರ ಗೆಜ್ಜೆ ಮತ್ತು ತಬಲಾ-ಪಖಾವಜ್ ವಾದಕರ ವಾದನಗಳ ನಡುವೆ ಒಂದು ಬಾಣಾಕ್ಷ ಸ್ಪರ್ಧೆಯೇ ಏರ್ಪಡುತ್ತದೆ. ಪ್ರೇಕ್ಷಕರಿಗೆ ಈ ಕ್ಷಣಗಳು ತುಂಬ ಆಕರ್ಷಣೀಯವು. ಆದರೆ ಒಡಿಸ್ಸಿ ಅಥವಾ ಭರತನಾಟ್ಯಮ್‌ಗಳಲ್ಲಿ ಇಂಥ ಪ್ರಸಂಗಗಳು ಇಲ್ಲ. ಕಥಕ್ ನೃತ್ಯಕಲೆ ಸಮ್ಮ ಮಿನಿಯೇಚರ್ ಚಿತ್ರಕಲೆಯಿಂದ ಪ್ರಭಾವಿತವಾದರೆ ಒಡಿಸ್ಸಿ ಮತ್ತು ಭರತನಾಟ್ಯಮ್‌ಗಳು ಒಡಿಸ್ಸಾ ಮತ್ತು ದಕ್ಷಿಣ ಭಾರತದ ಪ್ರಾಚೀನ ದೇವಾಲಯಗಳಲ್ಲಿನ ಶಿಲ್ಪಕಲೆಯಿಂದ ಪ್ರಭಾವ ಗೊಂಡಿವೆ. ತ್ರಿಭಂಗಿ, ಚೌಕ ಮುಂತಾದವುಗಳ ಮೇಲೆಯೇ ಈ ಎರಡು ನೃತ್ಯಶೈಲಿಗಳು ಮುಖ್ಯವಾಗಿ ಆಧಾರಿತ. ಆದರೆ ಕಥಕ್‌ನಲ್ಲಿ ಇವುಗಳ ಪ್ರಯೋಗ ತೀರ ಸಾಮಾನ್ಯವೆಂಬಂತಿರುತ್ತದೆ.

ಕಥಕ್ ಕಲಾವಿದರ ಜಾಣ್ಮೆ ಮತ್ತು ಸಾಮರ್ಥ್ಯಗಳನ್ನು ಅವರು ಲಯಗಳ ಏರಿಳಿತದೊಂದಿಗೆ ತಬಲಾ ಮತ್ತು ಪಖಾವಜ್‌ಗಳ ಬೋಲ್‌ಗಳನ್ನು ಧಾರಾಪ್ರವಾಹದಂತೆ ವೇದಿಕೆಯ ಮೇಲೆ ಪುನರ್‌ಸೃಷ್ಟಿಸಿದಾಗ ಹಾಗೂ ಅಂಗಸಂಚಾಲನ ಮತ್ತು ವಿಭಿನ್ನ ಭಂಗಿಗಳ ಮೂಲಕ ಪ್ರಸ್ತುತಗೊಳಿಸಿದಾಗ ಮಾತ್ರ ಗುರುತಿಸಲು ಸಾಧ್ಯ. ಇದು ಕಲಾವಿದನೊಬ್ಬ ಲಯದ ಮೇಲೆ ಪ್ರಭುತ್ವ ಸಾಧಿಸಿದಾಗ ಮಾತ್ರ ಸಾಧ್ಯವಾಗಬಲ್ಲುದು. ಉಳಿದ ಶೈಲಿಗಳಲ್ಲಿ ಕಾಣಬರದ 'ಸಾಧ್ಯತೆ' ಇದು. ●

'ಆಕ್ಟೋಪಸ್'ಗೂ ತಾಯಿ ಹೃದಯ!

ನಾವು ಅನೇಕ ಬಾರಿ 'ಆಕ್ಟೋಪಸ್ ಹಿಡಿತ' ಎಂದು ಹಗುರವಾಗಿ ಬಳಸಿ ಈ ಪ್ರಾಣಿಯನ್ನು ಕ್ರೂರವಾಗಿ ಬಿಂಬಿಸಿಬಿಟ್ಟಿದ್ದೇವೆ. ಆದರೆ ಅದಕ್ಕೂ ತಾಯ್ತನದ ತುಯ್ತ, ತ್ಯಾಗ, ಶ್ರದ್ಧೆಗಳಿರುವ ಸತ್ಯವನ್ನು ಬಲ್ಲವರೆಷ್ಟು ಜನ?

ಹೆಣ್ಣು ಆಕ್ಟೋಪಸ್ ದ್ರಾಕ್ಷಿಯಾಕಾರದ ಪಾರದರ್ಶಕ ಮೊಟ್ಟೆಗಳನ್ನಿಡುತ್ತದೆ. ಇವುಗಳ ಸಂಖ್ಯೆ ಒಂದು ಲಕ್ಷದ ಎಂಬತ್ತಾರು ಸಾವಿರ ಮೀರುತ್ತದೆ! ಮೊಟ್ಟೆ ಮರಿಯಾಗಿ ಅವಸ್ಥಾಂತರ ಹೊಂದುವ ತನಕ ಅಂದರೆ ಏಳುವಾರಗಳ ಕಾಲ ತಾಯಿ ಅಲ್ಲಿಂದ ಕದಲುವುದೇ ಇಲ್ಲ; ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುತ್ತದೆ. ಈ ಅವಧಿಯುದ್ದಕ್ಕೂ ತಾಯಿ ಒಂದೇ ಒಂದು ತುತ್ತು ಆಹಾರವನ್ನೂ ಸೇವಿಸದು! ಥೇಟ್ ತಂದೆ-ತಾಯಿಗಳ ತದ್ರೂಪದಂತಹ ಮರಿಗಳು ಮೊಟ್ಟೆ ಒಡೆದು ಹೊರಬಂದಾಗಲೇ ತಾಯಿ ಆಕ್ಟೋಪಸ್‌ಗಳ ತಪಸ್ಸು ಮುಗಿಯುವುದು.

● ಚಂದು

ಹಲವು ವೈಶಿಷ್ಟ್ಯಗಳೊಂದಿಗೆ ಬದುಕುತ್ತಿರುವ ಅಪರೂಪದ ಬುಡಕಟ್ಟು ಇದು

ಬಾಂಗ್ಲಾ ದೇಶದ ಮ್ರು ಜನಾಂಗ

ಚಿತ್ರ-ಲೇಖನ:

● *ಕಾವ್ಸ್ ಡಯ್ಸರ್ ಬ್ರೌನ್ಸ್*

ಇಪ್ಪತ್ತು - ಇಪ್ಪತ್ತೆರಡರ ತರುಣ ನಾಂಗ್ಲಾ ಆ ದಿನ ಹುಡುಗಿಯಂತೆ ತನ್ನನ್ನು ಸಿಂಗರಿಸಿಕೊಂಡದ್ದನ್ನು ಕಂಡು ಅಚ್ಚರಿಗೊಂಡೆ. ''ಯಾಕೆ, ಯಾಕೆ ನೀನು ಕಿವಿಗೆ ಓಲೆಗಳನ್ನೂ ಕೂದಲಿಗೆ ಹೂಗೊಂಚಲನ್ನೂ ತೊಡುತ್ತಿ? ಯಾಕೆ ನಿನ್ನ ಹಲ್ಲುಗಳಿಗೆಲ್ಲ ಕಪ್ಪು ಬಳಿದುಕೊಳ್ಳುತ್ತಿ? ಹಣೆಗೆಲ್ಲ ಯಾಕೆ ಕೆಂಪು ಹಚ್ಚಿಕೊಳ್ಳುತ್ತಿ?'' ನಾನವನನ್ನು ಒಂದೇ ಸಲಕ್ಕೆ ಮೂರು ಪ್ರಶ್ನೆಗಳನ್ನು ಕೇಳಿದೆ. ಆತ ಒಂದೇ ಮಾತಿನ ಉತ್ತರವಿತ್ತ: ''ಯಾಕೆಂದರೆ ಏನು ಹೇಳಲಿ? ನಮ್ಮ ಹುಡುಗಿಯರಿಗಿದು ತುಂಬ ಇಷ್ಟ.'' ಹೀಗೆನ್ನುತ್ತ ಆತ ಒಳಗೊಳಗೇ ಉಬ್ಬಿ ಹೋಗಿದ್ದನ್ನು ಗಮನಿಸಿದೆ.

ಮ್ರು ಜನಾಂಗದ ತರುಣರ ದಿನಚರಿಯೇ ಹೀಗೆ. ದಿನದ ಬಹು ಹೊತ್ತನ್ನವರು ತಮ್ಮನ್ನು ಸಿಂಗರಿಸಿಕೊಂಡು ಪ್ರಣಯದಾಟಕ್ಕೆ ಸಿದ್ಧರಾಗುವುದರಲ್ಲೇ ಕಳೆಯುತ್ತಾರೆ. ಬಿಡುವಿನ ವೇಳೆಯಲ್ಲಿ ಅವರೆಲ್ಲರ ಮನಸ್ಸುಗಳು 'ನರ್ತಿಸುವ ಮಯೂರಗಳು.'

ಬಾಂಗ್ಲಾ ದೇಶದ ಚಿತ್‌ಗಾಂಗ್ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಮ್ರು ಜನಾಂಗ ದಕ್ಷಿಣ ಏಶಿಯದ ಇನ್ನಿತರ ಬುಡಕಟ್ಟುಗಳಿಗಿಂತ ಭಿನ್ನವಾದ ರೂಢಿ-ಸಂಪ್ರದಾಯಗಳನ್ನುಳ್ಳ ಪಂಗಡ. ಅರೆಅಲೆಮಾರಿಗಳಾದ ಈ ಜನ ತಮ್ಮದೇ ಆದ ಬೇಸಾಯದ ರೀತಿಯನ್ನಳವಡಿಸಿಕೊಂಡವರು. ವಿಶಿಷ್ಟವಾದ ಬಾಳುವೆಯನ್ನು ನಡೆಸುವ ಮ್ರು ಜನಾಂಗವನ್ನು ಬಹುತೇಕರು ನೆರೆಹೊರೆಯ ಮುರುಂಗ್ ಪಂಗಡಕ್ಕೆ ಸೇರಿದವರೆಂದು ತಪ್ಪಾಗಿ ಭಾವಿಸುವುದುಂಟು. ಬಾಹ್ಯ ಜಗತ್ತಿಗೆ ಮ್ರು ಜನರ ಬಗ್ಗೆ ಗೊತ್ತಿರುವುದು ತೀರ ಅಲ್ಪ ಮಾಹಿತಿ. ಇತರ ಪ್ರಭಾವಗಳಿಗೆ ಅನಿವಾರ್ಯವಾಗಿಯೋ ಆಕಸ್ಮಿಕವಾಗಿಯೋ ಒಳಗಾಗಿ ತಮ್ಮ ಮೂಲ ಸ್ವರೂಪವನ್ನು ಈ ಜನ ಕಳೆದುಕೊಳ್ಳುವ ಮುನ್ನವೇ ನಾನವರನ್ನು ಕಂಡು ಅವರ ಜೀವನ ವಿಧಾನವನ್ನು ಅರಿತುಕೊಳ್ಳಬೇಕೆಂಬ ಉದ್ದೇಶದಿಂದ ಮೂರು ಬಾರಿ ನನ್ನ ನಾಡಿನಿಂದ (ಪಶ್ಚಿಮ ಜರ್ಮನಿ) ಬಾಂಗ್ಲಾ ದೇಶಕ್ಕೆ ಹೋಗಿ ಬಂದೆ. ನನ್ನಂಥ ತರುಣನನ್ನು ಸಹಜವಾಗಿಯೇ ಕುತೂಹಲಕ್ಕೀಡುಮಾಡಿತು ಮ್ರು ತರುಣ-ತರುಣಿಯರ ತಂಡ.

ಚಳಿಗಾಲದ ರಾತ್ರಿಗಳಲ್ಲಿ ಚದ್ದರು ಹೊದ್ದು ಮೈಯನ್ನು ಬೆಚ್ಚಗಾಗಿಸಿಕೊಳ್ಳುವ ಯತ್ನದಲ್ಲಿ ನಾನಿದ್ದಾಗ (ಕೊಳಲಿನಂಥ) ಬಿದಿರು ವಾದ್ಯದ ಮಂಜುಳದನಿ ಕೇಳಿಬರುತ್ತಿತ್ತು. ಅದಕ್ಕೆ ಪ್ರತಿಯಾಗಿ ಇನ್ನೊಂದೆಡೆಯಿಂದ ಮತ್ತೊಂದು ಸುಶೀರ ವಾದ್ಯದ ದನಿ. ಒಮ್ಮೆ ಬಾರಿಸುತ್ತಿರುವವರು ಅದಾರೆಂಬ ಕುತೂಹಲದಿಂದ ಎದ್ದು ನೋಡಿದರೆ ದೂರದಲ್ಲೊಬ್ಬ ತರುಣ ಕೊಳಲೂದುತ್ತಿದ್ದ, ರಾಗಬದ್ಧವಾಗಿ. ಅದಕ್ಕೆ ಪ್ರತ್ಯುತ್ತರವಾಗಿ ಮತ್ತೊಂದು ಸ್ವರ ಕೇಳಿಬಂತು. ಚಳಿಯನ್ನು ಲೆಕ್ಕಿಸದೇ ಹೊರಟೆ.

ಅವರಿಬ್ಬರೂ ಪ್ರಣಯಿಗಳು. ಕೊಳಲಿನಲ್ಲಿ ಯುಗಳಗೀತೆ ಹಾಡುತ್ತಿದ್ದರು. ಅನಂತರ

[ಕೃಪೆ: National Geographic]

ಇಬ್ಬರೂ ಜೊತೆಗೂಡಿ ಅಕ್ಕಿಯಿಂದ ತಯಾರಿಸಿದ ಮದ್ಯವನ್ನು ಸೇವಿಸಿದರು. ಈಗವರು ಇನ್ನಷ್ಟು ಮೈಚಳಿಬಿಟ್ಟರು. ಇಡೀ ಜಗತ್ತಿನಲ್ಲಿ ಇರುವವರು ತಾವಿಬ್ಬರೇ ಎಂದು ಭಾವಿಸಿರಬೇಕು. ಪ್ರಣಯಕೇಳಿಗೆ ತೊಡಗಿದ ಅವರನ್ನು ಅವರ ಪಾಡಿಗೆ ಬಿಟ್ಟು ನಾನು ಮರಳಿ ಮತ್ತೆ ಚದ್ದರು ಹೊದ್ದೆ. ಇಂಥ ಅದೆಷ್ಟು ಜೋಡಿಗಳು ಆ ಹೊತ್ತಿನಲ್ಲಿ ಇಡೀ ಜಗತ್ತಿನಲ್ಲಿ ತಾವಿಬ್ಬರೇ ಇದ್ದೇವೆಂಬ ಭಾವದಲ್ಲಿ ಬೆಸೆದುಕೊಂಡಿದ್ದವೋ!

ಸಾಮಾನ್ಯವಾಗಿ ಈ ಪ್ರಣಯಿಗಳಲ್ಲಿ ಹುಡುಗನಿಗಿಂತ ಹುಡುಗಿ ಒಂದೆರಡು ವರ್ಷ ಹಿರಿಯಳು. ಅವಳ ಅನುಮತಿ - ಇಚ್ಛೆಗಳಿಗನುಸಾರ ವರ್ತಿಸಬೇಕು ಆ ಹುಡುಗ. ''ಚೆಲುವೆ - ನೀನು ಹೂವಿಗಿಂತ ಚೆಂದ ಇರುವೆ. ನಾನು ಬಡವ. ನಿನ್ನ ಸೌಂದರ್ಯಸಿರಿ ನನಗೊಲಿದರೆ ನನ್ನಂಥ ಸಿರಿವಂತ ಬೇರಾರು ಜಗದಲ್ಲಿ? !'' ಎಂಬರ್ಥದ ಹಾಡನ್ನಾತ ಕೊಳಲಿನ ಮೂಲಕವೂ ನಂತರ (ಆಕೆ ಒಪ್ಪಿ ಪ್ರತ್ಯುತ್ತರವಿತ್ತರೆ) ಅಕ್ಕಿ ಮದ್ಯ ಸೇವಿಸಿದ ಮೇಲೆ ಶಬ್ದಗಳ ಮೂಲಕವೂ ಹಾಡುತ್ತಾನೆ. ಹಾಂ, ಕೊಳಲಿನ ಮೂಲಕ ಆತ ಆ ಹಾಡನ್ನು ನುಡಿಸಿದಾಗ ಆಕೆ ಸುಮ್ಮನಿದ್ದುಬಿಟ್ಟರೆ 'ಹುಡುಗಿಗೀಗ ಮನಸ್ಸಿಲ್ಲ' ಎಂದರ್ಥ. ಒಂದು ವೇಳೆ ಪಕ್ಕದಲ್ಲಿ ಉರಿಯುತ್ತಿರುವ ಬೆಂಕಿಗೆ ನೀರು ಸುರಿದರೆ ಆಕೆ ಬಹಿಷ್ಠೆಯಾಗಿದ್ದಾಳೆಂದು ಹುಡುಗ ಅರಿತುಕೊಳ್ಳುತ್ತಾನೆ. ಬಿದಿರುಕಡ್ಡಿಗಳಿಂದ ಆಕೆ ನೆಲಗುಡಿಸಿದರೆ ತಾನಾಕೆಗೆ ಒಪ್ಪಿಗೆಯಿಲ್ಲ ಎಂದು ಹುಡುಗ ತಿಳಿದುಕೊಳ್ಳಬೇಕು.

ಮೂನಾಮುಹಾರಿ ನದಿಯ ದಡದಲ್ಲಿ, ಡಿಸೆಂಬರಿನ ಇಬ್ಬನಿಯ ತೆರೆಯಲ್ಲಿ ಮುಚ್ಚಿಕೊಂಡಿರುವ ಈ ಹಳ್ಳಿಗಳ ದೂರದ ನೋಟ ನಮಗೆ ಪೇಂಟಿಂಗ್ ಅನ್ನು ನೆನಪಿಗೆ ತರುತ್ತದೆ. ಇಂಥ ಸುಮಾರು ಇನ್ನೂರು ಹಳ್ಳಿಗಳು ಇಲ್ಲಿದ್ದು ಒಟ್ಟು ಮೂವತ್ತು ಸಾವಿರದಷ್ಟು ಮ್ರು ಜನರಿಗೆ ಅವು ಆಶ್ರಯ ನೀಡಿವೆ. ನಾನು ಮೊದಲು ಭೇಟಿಯಿತ್ತದ್ದು ಮೆಂಚೊಂಗ್‌ಪಾರಾ ಎಂಬ ಹಳ್ಳಿಗೆ.



ಪ್ರಿಯಕರನಿಗೆ ಉತ್ತರ

ಬಿದಿರಿನಿಂದ ತಯಾರಿಸಿದ ಇಪ್ಪತ್ತೊಂದು ಮನೆಗಳಿವೆ ಇಲ್ಲಿ. ಮ್ರು ಜನರ ಈ ಜೋಪಡಿಗಳದೊಂದು ವೈಶಿಷ್ಟ್ಯವುಂಟು. ನಮ್ಮ ಆಧುನಿಕ ಬಹು ಅಂತಸ್ತಿನ ಕಟ್ಟಡಗಳ ಕೆಳ ಅಂತಸ್ತನ್ನು ಕಾರು ಪಾರ್ಕಿಂಗ್ ಇತ್ಯಾದಿಗಳಿಗೆ ಬಿಟ್ಟ ಹಾಗೆ ಕಾಣುತ್ತದೆ ಈ ಮನೆಗಳ ಕೆಳಭಾಗ. ಬಿದಿರು ಮತ್ತು ಇತರ ಕಾಡು ಗಿಡಗಳ ನೇರ ಬೊಡ್ಡೆಗಳನ್ನು ನೆಲದಲ್ಲಿ ಹೂಳಿ ಅಟ್ಟ ಕಟ್ಟಿಕೊಳ್ಳುವ

ಇವರು ಸೂರಿಗೆ ಎಲೆಗಳನ್ನು ಒತ್ತೊತ್ತಾಗಿ ಪೇರಿಸುತ್ತಾರೆ. ಬಿದಿರು ಮ್ರು ಜನರ ಪಾಲಿಗೆ ಕಲ್ಪವೃಕ್ಷದಂತೆ. ಇವರ ಮೈಗೆ ನೆರಳನ್ನೂ, ಹೊಟ್ಟೆಗೆ ಅನ್ನವನ್ನೂ, ರಕ್ಷಣೆಗೆ ಆಯುಧಗಳನ್ನೂ ನೀಡುತ್ತದದು. ಬಿದಿರಿನಿಂದ ಇವರು ತಯಾರಿಸುವ ಬುಟ್ಟಿಗಳು ತುಂಬ ಗಟ್ಟಿ.

ಕೆಳ ಅಂತಸ್ತು ಉರುವಲು ವಸ್ತುಗಳ ಉಗ್ರಾಣ, ಸಾಕುಪ್ರಾಣಿಗಳ ಕೊಟ್ಟಿಗೆ ಇತ್ಯಾದಿ ಇತ್ಯಾದಿ. ನಾನು ದೂರದಿಂದಲೇ ಆ ಹಳ್ಳಿಯ ಮ್ರು ಜನರತ್ತ ನೋಡಿದೆ. ಒಂದು ರೀತಿಯ ಗಾಬರಿಯಿಂದ ನನ್ನನ್ನು ಕಂಡ ಹೆಂಗಸರು ಮರೆಯಲ್ಲಿ ಅಡಗಿಕೊಂಡರು, ಹುಡುಗರು ಕುತೂಹಲದಿಂದ ನನ್ನ ವೇಷಭೂಷ - ಕ್ಯಾಮರಾ ಇತ್ಯಾದಿಗಳನ್ನು ಗಮನಿಸಿದರು. ವೃದ್ಧರು - ಮಧ್ಯ ವಯಸ್ಕರು ಮಾತ್ರ ಸಂಶಯದೃಷ್ಟಿ ಬೀರಿದರು. ನಾನು ಮತಾಂತರಕ್ಕೆ ತಮ್ಮನ್ನು ಒಲಿಸಲು ಬಂದಿರಬೇಕೆಂದು ಅವರು ಭಾವಿಸಿದ್ದಾರೆ ಎಂದ ನನ್ನ ದುಭಾಷಿ ಮಾರ್ಗದರ್ಶಿ. ನಂತರ ''ಇವರ ಬಳಿ ಇರುವ ಆಯುಧ ಅದ್ಭುತವಾದದ್ದು. ಕಳ್ಳ-ಕಾಕರಿಂದ ಅದು ನಮ್ಮನ್ನೆಲ್ಲ ರಕ್ಷಿಸುತ್ತದೆ. ಇವರು ಮತಾಂತರದ ಉದ್ದೇಶದಿಂದ ಬಂದಿಲ್ಲ, ನಿಮ್ಮೊಂದಿಗೆ ಸ್ನೇಹದಿಂದ ಕೆಲದಿನ ಇದ್ದು ಹೋಗಲು ದೂರದಿಂದ ಬಂದಿದ್ದಾರೆ,'' ಎಂದು ಅವರಿಗೆ ಬಂಗಾಲಿಯಲ್ಲಿ ಹೇಳಿದ ದುಭಾಷಿ ನನ್ನತ್ತ ತಿರುಗಿ ನಗುತ್ತ ''ನಿಮ್ಮ ಕ್ಯಾಮರಾವನ್ನವರು ಆಯುಧವೆಂದುಕೊಂಡಿದ್ದಾರೆ'' ಎಂದ.

ಕ್ರಮೇಣ ನನ್ನನ್ನು ತಮ್ಮವರಲ್ಲೊಬ್ಬನೆಂದು ಭಾವಿಸಿದರು ಆ ಸ್ನೇಹಮಯಿ, ಶಾಂತ ಸ್ವಭಾವದ ಜನ. ಅವರದೇ ಆದ ವಿಶಿಷ್ಟ 'ಅತಿಥಿ ಗೃಹ'ದಲ್ಲಿ ನನ್ನ ವಸತಿಯ ಏರ್ಪಾಡು ಮಾಡಿದರು. ಹಿರಿಯ ರುವ್ವೆ ನನಗೆ ಬಿದಿರನ್ನು ಸೀಳುವ, ನುಣುಪುಗೊಳಿಸುವ, ಬುಟ್ಟಿಹೆಣೆಯುವ ಕಲೆಯನ್ನು ತಿಳಿಸಿಕೊಟ್ಟ. ಮ್ರು ಸಂಸ್ಕೃತಿಯಲ್ಲಿ ಈ ಬಿದಿರಿನ ವಸ್ತುಗಳಿಗೆ ತುಂಬ ಪ್ರಾಧಾನ್ಯ. ತರುಣರು ನನ್ನೊಂದಿಗೆ ಚೇಷ್ಟೆ - ಆಟಗಳಲ್ಲಿ ತೊಡಗಲಾರಂಭಿಸಿದರು. ಮಕ್ಕಳು ನನ್ನನ್ನು ಚಿತ್ರವಿಚಿತ್ರ ಪ್ರಶ್ನೆಗಳಿಂದ ಕಾಡತೊಡಗಿದರು.

ಈ ಜನ ಧೂಮಪಾನ ಪ್ರಿಯರು. ವಯಸ್ಸಿನ ನಿರ್ಬಂಧವಿಲ್ಲ ಧೂಮಪಾನಕ್ಕೆ. ಆರು ವರ್ಷದ ಕೈಜುಂಗ್ ಬರ್ಮೀ ಸಿಗಾರೊಂದನ್ನು ಜುರು ಜುರು ಸೇದಿ ಧೂಮಾನಂದ ಪಡೆದ. ಆತ ಉಗುಳಿದ ಹೊಗೆಯಿಂದ ನಾನು ಅರ್ಧ ಗಂಟೆ ಕೆಮ್ಮಿ-ಕ್ಯಾಕರಿಸಿದೆ. ಆ ಸಿಗಾರ್‌ನಲ್ಲಿ ಬಳಸಿದುದ



ಮರುದಿನದ ಅನ್ನಕ್ಕೆ...

ಕ್ಕಿಂತಲೂ ಘಾಟಾದ ತೀಕ್ಷ್ಣ ತಂಬಾಕು ಬಳಸುತ್ತಾರೆ ಹಿರಿಯರು. ತಮ್ಮವೇ ಹೊಲದಲ್ಲಿ ಇವರು ತಂಬಾಕು ಬೆಳೆಯುವುದು ಮಾರಾಟದ ಉದ್ದೇಶದಿಂದ ಅಲ್ಲ, ಸ್ವಂತ ಬಳಕೆಗೆ.

ಒಂದೊಂದು ಹಳ್ಳಿಯಲ್ಲೂ ಒಂದೆರಡು ದಿನದ 'ಅತಿಥಿ' ನಾನು. ನನ್ನ ಕೊನೆಯ ಭೇಟಿಯ ಸಂದರ್ಭದಲ್ಲಿ ಅವರ ದೃಷ್ಟಿಯಲ್ಲಿ ಅತಿಥಿಯಲ್ಲ, ''ಆತ್ಮೀಯ ಬಂಧು''ವಾಗಿಬಿಟ್ಟೆ. ಮೆಂಗ್ಲಾಂಗ್ ಹಳ್ಳಿಯ ಮುಖ್ಯಸ್ಥನ ತಮ್ಮ ನನ್ನನ್ನು ''ಇನ್ನು ನೀವು ನಮ್ಮ ಮನೆಯಲ್ಲೇ ವಾಸಿಸಿ,'' ಎಂದು ಒತ್ತಾಯಿಸಿದ.

ಮೆಂಜೊಂಗ್‌ಪಾರಾದಲ್ಲಿ ನಾನಿದ್ದಾಗಲೇ ಬಂತು ಮ್ರು ಜನರ ವಾರ್ಷಿಕ ಹಬ್ಬ. ಎರಡು ದಿನಗಳ ಆ ಉತ್ಸವವೆಂದರೆ ಹಾಡು, ಕುಣಿತ, ವಿಶೇಷ ಭೋಜನಗಳ ಉತ್ಸಾಹದ ಸಂದರ್ಭ. ಈ ವಾರ್ಷಿಕ ಹಬ್ಬದ ಮುಖ್ಯ ಅಂಶ 'ಹಸುವಿನ ಬಲಿ.'

ಆ ಸಲ ಸುಗ್ಗಿ ಕೈ ಕೊಟ್ಟಿತ್ತು. ಬಲಿಗಾಗಿ ಹಸುವನ್ನು ಕೊಳ್ಳುವಷ್ಟೂ ಶಕ್ತಿಯಿರಲಿಲ್ಲ ಮೆಂಜೊಂಗ್‌ಪಾರಾದವರಿಗೆ. ಆದರೆ ''ಬಲಿ ಪೂಜೆಗೆ ಬನ್ನಿ'' ಎಂಬ ಬೊಲ್ಲೈಪಾರಾದ ಬಂಧುಗಳ ಆಹ್ವಾನವನ್ನು ಮನ್ನಿಸಿ, ನನ್ನನ್ನೂ ಅಲ್ಲಿಗೆ ಕರೆದೊಯ್ದರು.

ಬೊಂಬುಗಳಿಂದ ತಯಾರಿಸಿದ ಬೋನೊಂದರಲ್ಲಿರಿಸಿದ್ದರು ಬಲಿಯ ಹಸುವನ್ನು. ಅದರ ಮುಂದೆ ಅರ್ಧಚಂದ್ರಾಕೃತಿಯಲ್ಲಿ ಅದಾವುದೋ ವಿಚಿತ್ರ ಆವೇಶದಿಂದ ಕುಣಿಯುತ್ತಿದ್ದ ಹೆಂಗಸರು - ಗಂಡಸರು. ಅಪರೂಪಕ್ಕೆಂಬಂತೆ ಹೆಂಗಸರು ಮೈತುಂಬ ಬಟ್ಟೆ ಧರಿಸಿದ್ದರು. (ಉತ್ಸವದಂಥ ವಿಶೇಷ ಸಂದರ್ಭವೊಂದನ್ನುಳಿದು ಮಿಕ್ಕೆಲ್ಲ ದಿನಗಳಲ್ಲಿ ಅವರು ಧರಿಸುವುದು ತಾವೇ ಹೆಣೆದ ಮೊಳ ಉದ್ದದ ಸೊಂಟಪಟ್ಟಿಯನ್ನು ಮಾತ್ರ.) ಬಣ್ಣಬಣ್ಣದ ಕಪಿನಿಗಳಂಥ ಬಟ್ಟೆಗಳವು. ತಲೆಗೆ ಬ್ರಿಟಿಶ್ ಕಾಲದ ನಾಣ್ಯಗಳ ಸರ ಮತ್ತು ಹೂವುಗಳ ಅಲಂಕಾರ. ಕಿವಿಯಲ್ಲಿ ಕೆಂಪು ಹೂವು. ಕೊರಳಲ್ಲಿ ಮಣಿಮಾಲೆಗಳು. ಅಂಗಿ - ಲಂಗೋಟಿಯಲ್ಲಿದ್ದ ಗಂಡಸರು ಬಿದಿರಿನಿಂದ ತಯಾರಿಸಿದ ವಿಶಿಷ್ಟ ವಾದ್ಯಗಳನ್ನು ಲಯಬದ್ಧವಾಗಿ ನುಡಿಸುತ್ತಿದ್ದರು. ಅಬ್ಬಾ! ಆ ವಾದ್ಯಸ್ವರ - ಹುಲಿಯ ಗುಡುಗಿನಂತೆ, ಸಿಂಹದ ಗರ್ಜನೆಯಂತೆ. ಇನ್ನೊಂದೆಡೆ ತರುಣ-ತರುಣಿಯರು. ಅವರಿಗೆ ಎದುರುಬದುರು ನಿಂತು ಕುಣಿಯುತ್ತ ಮೈಮರೆಯುವ ಅವಕಾಶ ಏದು. ಹುಡುಗಿಯರಿಗೊ ನಾಚಿಕೆ. ಆದರೂ ಆಗಾಗ ಕಣ್ಣೆತ್ತಿ ತನ್ನಿನಿಯನತ್ತ ನೋಡಿ ನಕ್ಕು ಮತ್ತೆ ತಲೆತಗ್ಗಿಸಿ ಅದಾವುದೋ ನೆನಪಿನಲ್ಲಿ ತುಯ್ಯುವರು.

ಹೊತ್ತೇರಿದಂತೆಲ್ಲ ಸಂಭ್ರಮದ ರೆಕ್ಕೆಗೆ ವೇಗ ಬಂತು. ಮರ್ಯಾದೆ ಮುಚ್ಚುವಷ್ಟು ಮಾತ್ರ ಬಟ್ಟೆಯುಳಿಸಿಕೊಂಡು ಉಳಿದವನ್ನೆಲ್ಲ ಕಿತ್ತೆಸೆದರು ಹೆಂಗಸು-ಗಂಡಸರೆಲ್ಲ. ಹಾಗೆಯೇ ಹೆಜ್ಜೆ ಹಾಕುತ್ತ ಅವರೆಲ್ಲ ಸಾಗಿದ್ದು ಅಕ್ಕಿಯಿಂದ ಮಾಡಿದ ಮದ್ಯದ ಮಡಕೆಗಳತ್ತ. ಕೊಳವೆಯೊಂದನ್ನು ಬಾಯಲ್ಲಿಟ್ಟು ಒಂದು ಉಸುರಿಗೆ ಎಷ್ಟು ಸಾಧ್ಯವೋ ಅಷ್ಟು ಮದ್ಯ ಹೀರಬೇಕು. ಈ 'ಹೀರುವ ಆಟ' ಮಜಕೊಡುವಂಥದ್ದು.

ಸೂರ್ಯ ಕಂತುವ ಹೊತ್ತಿಗೆ ನಾನು ಹಿರಿಯನೊಬ್ಬನನ್ನು ಕೇಳಿದೆ: ''ಬಲಿ ರಾತ್ರಿಯೆ?'' ಆತ ತಲೆಯಲ್ಲಾಡಿಸಿ ನಕ್ಕ. ''ರಾತ್ರಿ ತರುಣ ಜನಾಂಗಕ್ಕೆ ಮೀಸಲು. ಬಲಿ ನಾಳೆ ನಡೆಯುತ್ತದೆ'' ಎಂದ. ನನಗೆ ಹಸುವಿನ ಬಲಿಯ ಕುತೂಹಲ ಹೆಚ್ಚಿತು. ಅದೇ ಹಿರಿಯನನ್ನು ಕೇಳಿದೆ. ಆತ ಸಿಗಾರ್ ಸೇದಿ ಕಥೆ ಹೇಳುವ ತಯಾರಿ ತೆಗೆದುಕೊಂಡ. ಆತನ ಮುಖದಲ್ಲಿ ವಿಲಕ್ಷಣ ಕಳೆಯಿತ್ತು.

''ಬಹಳಾ ಹಿಂದೆ, ನಮ್ಮ ದೇವರು ತೂರೈ, ಮನುಷ್ಯರಿಗೆಲ್ಲ ಭಾಷೆಗಳನ್ನು ಕೊಟ್ಟ. ಬರೆದು ಓದಬಲ್ಲ ಭಾಷೆಗಳನ್ನು. ಜತೆಗೆ ಸುಖವಾಗಿ ಬದುಕುವ ಸೂತ್ರಗಳನ್ನೂ. ಆದರೆ ನಾವು ಮ್ರು ಜನ ಮಾತ್ರ, ಅದೇಕೋ ಅದರಿಂದ ವಂಚಿತರಾದೆವು. ನಮ್ಮ ಹಿರಿಯರು - ಅಂದರೆ ನಮ್ಮ ಮುತ್ತಾತಂದಿರ ಮುತ್ತಾತಂದಿರ ಮುತ್ತಾತರು -

ತುಂಬ ನೊಂದುಕೊಂಡರು. ದೇವರನ್ನು ಬೇಡಿಕೊಂಡರು. 'ಹಸುವೊಂದನ್ನು ಕಳಿಸಿರಿ, ಭಾಷೆಯನ್ನು ಅದರೊಂದಿಗೆ ಕಳಿಸುತ್ತೇನೆ,' ಎಂದ ದೇವರು. ಹಸುವೊಂದನ್ನು ಪೂಜಿಸಿ ಕಳಿಸಿದರು ನಮ್ಮ ಹಿರಿಯರು. ಬಾಳೆ ಎಲೆಯ ಮೇಲೆ ಲಿಪಿಸಹಿತ ಭಾಷೆಯೊಂದನ್ನೂ, ಸುಖವಾಗಿ ಬದುಕುವ ಸೂತ್ರಗಳನ್ನೂ ಬರೆದು ಹಸುವಿನೊಂದಿಗೆ ಕಳುಹಿಸಿದ ತೂರೈ. ಆದರೆ ಹಸಿರು ಕಂಡ ಹಸುವಿಗೆ ಹಸಿವು ಹೆಚ್ಚಾಯಿತೋ ಏನೋ, ಆ ದುಷ್ಟ ಪ್ರಾಣಿ ಬಾಳೆಲೆಯನ್ನು ನುಂಗಿ ನೊಣೆಯಿತು. ನಮಗೆ ಭಾಷೆ ಸಿಕ್ಕಲೇ ಇಲ್ಲ. ಹೀಗಾಗಿ ಹಸುವಿನ ಬಲಿಯನ್ನು ನಾವು ನೀಡುವುದು...''

ಈ ದಂತಕಥೆ ಮ್ರು ಜನ ಇತಿಹಾಸದಲ್ಲಿ ಪಡೆದಿರುವ ನಿಕೃಷ್ಟ ಸ್ಥಾನವನ್ನು ಸೂಚಿಸುತ್ತದೆಂದೆನಿಸಿತು ನನಗೆ.

ಮರುದಿನ ಮತ್ತೆ ಉತ್ಸಾಹದ ಉತ್ಸವ ಮುಂದುವರಿಯಿತು. ತರುಣಿಯರು ಹಿಂದಿನ ದಿನದಂತೆ ಮೈತುಂಬ ಬಟ್ಟೆ ತೊಟ್ಟಿರಲಿಲ್ಲ. ಆದರೆ ತಲೆಗೊಂದು ವಿಶಿಷ್ಟ ಬಟ್ಟೆಯ ಶಿರಸ್ತ್ರಾಣವನ್ನೂ, ಕೊರಳಿಗೆ ದಪ್ಪವಾದ, ಬಣ್ಣಬಣ್ಣದ ಮಣಿಸರಗಳನ್ನೂ, ಬ್ರಿಟಿಶ್ ಕಾಲದ ನಾಣ್ಯದ ಸರಗಳನ್ನೂ ಧರಿಸಿದ್ದರು. ಸೊಂಟಕ್ಕೂ ಮಣಿಸರ, ಕಪ್ಪು ಬಣ್ಣದ ಕೆಂಪುಗೋಟಿನ ಲಂಗೋಟಿ. ಗಂಡಸರು ನುಡಿಸುತ್ತಿದ್ದ ವಾದ್ಯಕ್ಕೆ ತಕ್ಕಂತೆ ಅವರ ಬುಡಕಟ್ಟು ನೃತ್ಯ ನಡೆದಿತ್ತು. ಅವರ ಹಿಂದೆ ಮೂರರಿಂದ ಎಂಟರವರೆಗಿನ ಬಾಲೆಯರು ಕುಣಿಯುತ್ತಿದ್ದರು.

ಹಾಂ, ಬ್ರಿಟಿಶ್ ಕಾಲದ ನಾಣ್ಯಗಳ ಕುರಿತು ಒಂದಷ್ಟು ಹೇಳಬೇಕು. ಅವು ಹೆಂಗಸರಿಗೆ ಮದುವೆಯ ಕಾಲಕ್ಕೆ ವರನ ಅಪ್ಪಂದಿರು ಕೊಟ್ಟ ಬಳುವಳಿ (ವಧುದಕ್ಷಿಣೆ).

ನಾನೂ ಕುಣಿಯತೊಡಗಿದೆ. ಯಾರೋ ಬೊಂಬು ವಾದ್ಯವನ್ನಿತ್ತರು. ಅವರಂತೆ ಅದನ್ನು ಊದಲು ಯತ್ನಿಸಿ ಸೋತೆ. ಆದರೂ ಮರಳಿ ಯತ್ನಿಸಿದಾಗ ಬೊಂಬುವಾದ್ಯದಿಂದ ಹೊರಟದ್ದು ನನ್ನದೇ ಆದ ಬೇರೆ ತೆರನಾದ ಸದ್ದು. ಅವರೆಲ್ಲ ನನ್ನನ್ನು ''ಹೊಸ ಮ್ರು'' ಎಂದು ಕರೆದರು.

ಬಲಿಯ ಕಾರ್ಯಕ್ರಮವನ್ನು ನೆರವೇರಿಸಿದಾತ ಹಿರಿಯ ಕಟುಕ. ಹಸುವನ್ನು ಬಲಿಗೆಂದು ದಾನವಿತ್ತವನ ಮನೆಯಿಂದ ತರುಣಿಯರು ಕುಣಿಯುತ್ತ ಸಾಗಿದಂತೆಯೇ ಹಸುವನ್ನು ದರದರ ಎಳೆಯುತ್ತ ದೇವಾಲಯದೆಡೆ ಸಾಗಿಸಲಾಯಿತು. ಅಲ್ಲಿ ಅದನ್ನು ತುಂಡುತುಂಡಾಗಿ ಕತ್ತರಿಸಿ, ಮಾಂಸವನ್ನು ತೆಗೆದು ಉಪ್ಪು ಖಾರಪುಡಿ ಲೇಪಿಸಿ, ಬೆಂಕಿಯ ಮೇಲಿರಿಸಿದ್ದ ದೊಡ್ಡ ಪಾತ್ರೆಗೆ ಹಾಕತೊಡಗಿದರು.

ಉತ್ಸವದ ಮತ್ತೊಂದು ಮುಖ್ಯಭಾಗ ಮಹಾಭೋಜನ. ಬಲಿಯ ಹಸುವನ್ನು ದಾನವಾಗಿತ್ತಾತ ಹೆಮ್ಮೆಯಿಂದ ಹೆಜ್ಜೆ ಹಾಕುತ್ತ ಎಲ್ಲ ಹಿರಿಯರಿಗೂ ಮಾಂಸವನ್ನು ಬಡಿಸುತ್ತಿದ್ದ. ತನ್ನನ್ನು ಅವರೆಲ್ಲ ಪ್ರಶಂಸಿಸಿದಾಗ ಇನ್ನಷ್ಟು ಉಬ್ಬುತ್ತಿದ್ದ. ನನ್ನ ಗೆಳೆಯ ಮೆಂಗ್ಲಾಂಗ್ ''ತೂರೈ ದೇವತೆ ನಮಗಿತ್ತಿದ್ದನಲ್ಲ ಭಾಷೆ ಮತ್ತು ಬದುಕುವ ಸೂತ್ರಗಳನ್ನು - ನಿಮಗವನ್ನು ತೋರಿಸುತ್ತೇನೆ ಬನ್ನಿ'' ಎಂದು ಒಂದಷ್ಟು ದೂರ ಕರೆದೊಯ್ದು ಬಚ್ಚಿಟ್ಟುಕೊಂಡಿದ್ದ ಹಸುವಿನ ಕರುಳಿನ ತುಂಡೊಂದನ್ನು ಬಿಚ್ಚಿಟ್ಟು ಅದರ ಸುಕ್ಕುಗಳನ್ನು ಪುಟಗಳಂತೆ ಬಿಡಿಬಿಡಿಸಿ ತೋರಿಸಿದ.

ಮೆಂಗ್ಲಾಂಗ್.. ಮದುವೆಗೆ ಸಿದ್ಧವಾಗಿರುವ ತರುಣ. ಭಾರತದ ಹೆಂಗಸರಿಗಿಂತ ಉದ್ದದ ಕೇಶರಾಶಿಯ ಈ ತರುಣರು ಅದನ್ನು ಅಲಂಕರಿಸುವಲ್ಲಿ ತೋರುವ ಆಸಕ್ತಿಯ ಕುರಿತು ನಾನು ತೆಗೆದ ಚಿತ್ರಗಳನ್ನು ನೋಡಿ. ಟಾಯ್ನ್‌ಲಾಗ್, ಲೆಂಗ್‌ಪಂಗ್, ಕೈನ್‌ಪ್ಯೊ ಮತ್ತು ಅಂಗ್ಸಾರು ತಮ್ಮ ಪ್ರೇಯಸಿಯರಿಗೆ ಇಷ್ಟವಾಗುತ್ತವೆಂದು ರೂಪಿಸಿಕೊಂಡ ಕೇಶವಿನ್ಯಾಸಗಳವು.

ವಾರಕ್ಕೊಮ್ಮೆ ಲಮಾ ಮತ್ತು ಅಲಿಕಾದಾಮ್‌ನಲ್ಲಿ ನಡೆಯುವ ಸಂತೆಗೆ ಹೋಗುತ್ತಾರೆ ಮ್ರು ಜನ. ಅಲ್ಲಿ ಬಾಂಗ್ಲಾದೇಶದ ಇತರರೊಂದಿಗೆ



ಬಿದಿರು ಜಬೊಂಗಿ ದಬ್ಬೆ

ಪುಷ್ಪಾಲಂಕೃತ ತರುಣರು



ನವರದು ವಿನಿಮಯವ್ಯಾಪಾರ. ತಾವು ಬೆಳೆದ ಹತ್ತಿ, ತಂಬಾಕುಗಳನ್ನು ಕೊಟ್ಟು ಕೃತಕ ಮಣಿಯ ಆಭರಣಗಳು, ಬಟ್ಟೆ, ಉಪ್ಪು, ಬುಡ್ಡಿ ದೀಪ, ಚಾಕು, ಮಡಕೆ ಮತ್ತು ಒಣಗಿಸಿದ ಮೀನುಗಳನ್ನು ಪಡೆಯುತ್ತಾರೆ. ಈ ಸಂತೆಗಳಂದರೆ ತರುಣರಿಗೆ ಇತರ ಹಳ್ಳಿಗಳ ತರುಣಿಯರನ್ನು ಕಾಣುವ ಅವಕಾಶಗಳೂ ಹೌದು. ಮೊಂಪೊಂಗ್‌ಪಾರಾದ ಮ್ರು ಜನರಲ್ಲಿ ಬಹುತೇಕರು ಹತ್ತಿರದ ಸಂಬಂಧಿಗಳು. ಅವರಲ್ಲಿ ಸಂಬಂಧದಲ್ಲೇ ವಿವಾಹ ನಿಷಿದ್ಧ.

ಎಂಥ ಗಾಳಿಗೂ, ಬಿರುಮಳೆಗೂ ಜಗ್ಗದೆ ಗಟ್ಟಿ ನಿಲ್ಲುವ ಅವರ ಮನೆಗಳಂತೆಯೇ ಮ್ರು ಜನರ ಮನಸ್ಥೈರ್ಯ ಕೂಡ. ಹೆಂಗಸರು ಮನೆಗೆಲಸದೊಂದಿಗೆ ಹೊಲ-ಗದ್ದೆಗಳಲ್ಲೂ ದುಡಿಯುತ್ತಾರೆ. ಬೆಟ್ಟದ ತಪ್ಪಲಿನಲ್ಲಿ ಬೆಳೆದ ಬತ್ತ ಕಟಾವು ಮಾಡಿ ಬೆನ್ನಿಗೆ ಕಟ್ಟಿಕೊಂಡ ದೊಡ್ಡ ಬುಟ್ಟಿಗಳಲ್ಲಿ ತುಂಬುವಾಗಿನ ಅವರ ತನ್ಮಯತೆ ಅನನ್ಯವಾದುದು. ಗಂಡಸರು ಮನೆಕಟ್ಟುವುದು, ಬೇಟೆಯಾಡುವುದು, ಬೊಂಬು ಸೀಳಿ ಬುಟ್ಟಿ ಹೆಣೆಯುವುದರಲ್ಲಿ ನಿಷ್ಣಾತರು. ಬೊಂಬು ಕಡಿ

ಯಲು ಬಿದಿರು ಸೀಳಲು, ಸಸಿ ನೆಡುವುದಕ್ಕಾಗಿ ತಗ್ಗು ತೋಡಲು, ಪ್ರಾಣಿಗಳನ್ನು ಕೊಲ್ಲಲು ಅಷ್ಟೇ ಏಕೆ ತಮ್ಮ ಉಗುರುಗಳನ್ನು ಟ್ರಿಮ್ ಮಾಡಿಕೊಳ್ಳಲು ಕೂಡ ಇವರು ಬಳಸುವುದು ಒಂದೇ ಆಯುಧವನ್ನು. ಸಂತೆಯಲ್ಲಿ ಹಿಂದೂ ಕಮ್ಮಾರನಿಂದ ಕೊಂಡುಕೊಂಡ ಮಚ್ಚು ಅದು. ಹಸಿ ಬೊಂಬಿನ ತೆಳುಪದರವನ್ನು ಹೆರೆದು ಒಟ್ಟು ಗೂಡಿಸಿಟ್ಟರೆ ಅದು ನಸುಹಸಿರು ಬಣ್ಣ ಹಾಕಿದ ರೇಶಿಮೆಯಂತೆ ಕಾಣುತ್ತದೆ.

ಪ್ರತಿ ಸಂಜೆ ಹೆಂಗಸರು ತಮ್ಮ ಮರುದಿನದ ಊಟಕ್ಕೆ ಬೇಕಾಗುವ ಅಕ್ಕಿಯನ್ನು ಹಸನುಗೊಳಿಸುತ್ತ ಹಾಡುವುದನ್ನು ನೋಡಬೇಕು. ಅತ್ತೆ ಭತ್ತಕುಟ್ಟಿಕೊಡುತ್ತಾಳೆ. ಸೊಸೆ ಅದನ್ನು ಕೇರುತ್ತಾಳೆ. ತಂಗಿಯರು ನೀರು ತುಂಬುವುದು, ಸಮೀಪದ ಕಾಡಿನಿಂದ ಕಟ್ಟಿಗೆ ಆಯ್ದು ತರುವುದರಲ್ಲಿ ತಲ್ಲೀನರು. ಅಜ್ಜಿಯರು ಕುಳಿತಲ್ಲೇ ಹತ್ತಿಯನ್ನು ಸ್ವಚ್ಛಗೊಳಿಸಿ ನೆಲಕ್ಕೆ ಹಾಕಿ ಬಡಿಬಡಿದು ಬುಟ್ಟಿಗೆ ತುಂಬುತ್ತ ಅನೇನನ್ನೊ ಮೆಲುಕಾಡಿಸುತ್ತಿದ್ದರೆ ಸಾಕು ಪ್ರಾಣಿಗಳಾದ ಹಂದಿ, ಕೋಳಿ, ನಾಯಿಗಳು ಕೂಡ ಸ್ನೇಹದಿಂದ ತಂತಮ್ಮ ಚಟುವಟಿಕೆಗಳಲ್ಲಿ ತೊಡಗಿರುತ್ತವೆ.

ಚಳಿಗಾಲದ ಸಂಜೆಗಳ ಅವರ ಆತಿಥ್ಯವನ್ನೆಂತು ಮರೆಯಲಿ? ಒಬ್ಬ ಚಹ ತಂದುಕೊಟ್ಟರೆ ಮತ್ತೊಬ್ಬ ಸಿಗಾರು ಕೊಡುತ್ತಿದ್ದ. ಸಂಕೋಚವಿಲ್ಲದೆ ಚಿಕ್ಕ ಹುಡುಗಿಯರೂ ನನ್ನ ಬಳಿ ಬಂದು ಕುತೂಹಲದ ಪ್ರಶ್ನೆ ಕೇಳುತ್ತಿದ್ದರು. ''ಯಾಕೆ, ಯಾಕೆ ನೀವು ನಮ್ಮ ಗಂಡಸರಂತೆ ಲಂಗೋಟಿ ಹಾಕುವುದರ ಬದಲು ಇಷ್ಟುದ್ದ ಪ್ಯಾಂಟು ಹಾಕುತ್ತೀರಿ?'' ಎಂದು ಒಬ್ಬಾಕೆ ಕೇಳಿದರೆ, ''ನೀವು ನಿಮ್ಮೂರಿಂದ ಬೆಳ್ಳಿಹಕ್ಕಿಯ ಬೆನ್ನೇರಿ ಬಂದಿರಂತೆ ಹೌದೆ?'' ಎಂದು ಮತ್ತೊಬ್ಬಾಕೆ. ''ನಾನು ನೋಡಿಯೇ ನೋಡಿದೆ. ಆದರೆ ಬೆಳ್ಳಿಹಕ್ಕಿಯ ಬೆನ್ನಮೇಲೆ ಯಾರೂ ಕಾಣಲಿಲ್ಲ'' (ಆಕೆ ಚಿತ್‌ಗಾಂಗ್ ಮೇಲೆ ಹಾರುವ ವಿಮಾನವನ್ನು ಅನೇಕ ಸಲ ನೋಡಿ ಜನರೇ ಕಾಣುತ್ತಿಲ್ಲವಲ್ಲ ಎಂದು ತಲೆ ಕೆಡಿಸಿಕೊಂಡಿದ್ದಳು.) ಎಂದು ಕೇಳಿದ ಇನ್ನೊಬ್ಬಾಕೆಗೆ ನಾನು ವಿಮಾನದ ಕೆಲವು ಫೋಟೋ ತೋರಿಸಿ ವಿವರಿಸಿದೆ. ನಾನು ತೆಗೆಯುವ ಛಾಯಾಚಿತ್ರಗಳನ್ನೇನು ಮಾಡುತ್ತೇನೆಂಬುದೇ ಅವರಿಗೊಂದು ದೊಡ್ಡ ಸಮಸ್ಯೆ. ''ನಿಮ್ಮ ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳಲು ಇವು ನೆರವಾಗುತ್ತವೆ'' ಎಂದು ನಾನು ಹೇಳಿದರೆ ಅವರಿಗೆ ಅರ್ಥವಾಗಲಿಲ್ಲ. ಒಣ ಬೊಂಬಿನ ತುಂಡುಗಳಿಂದ ಬೆಂಕಿ ಹೊತ್ತಿಸುವುದು, ಬಿದಿರು ಕಡ್ಡಿಗಳಿಂದ ಗೊಂಬಿ ತಯಾರಿಸುವುದೇ ಮೊದಲಾದವನ್ನು ನನಗೆ ತಿಳಿಸಿಕೊಟ್ಟ ಆ ತರುಣರ ತಂಡ ತಮ್ಮ ಟಿಬೆಟೊ-ಬರ್ಮನ್ ಮಿಶ್ರಿತ ಭಾಷೆಯನ್ನೂ ಅಷ್ಟಿಷ್ಟು ಕಲಿಸಿಕೊಟ್ಟರು.

ಹದಿವಯದ ಹುಡುಗರು ಬೇಟೆಯಲ್ಲಿ ಎತ್ತಿದ ಕೈ. ಅವರ ಬೇಟೆಯ ವಿಧಾನವೂ ವಿಶಿಷ್ಟವೆ. ತೆಂಗಿನ ಕರಟವೊಂದರಲ್ಲಿ ರಬ್ಬರ ಹಾಲಿನಂಥ ಅಂಟು ದ್ರವವನ್ನು ತುಂಬಿಕೊಂಡು ಕಾಡಿಗೆ ಹೊರಟ ಅನಾಂಗ್. ನನ್ನನ್ನೂ ಕರೆದೊಯ್ದ. ಬಿದಿರು ಮೆಳೆಯಲ್ಲಿ ತೆಳುವಾದುದೊಂದನ್ನು ಆಯ್ದುಕೊಂಡು ಅದಕ್ಕೆಲ್ಲ ಅಂಟು ದ್ರವ ಲೇಪಿಸಿದ. ಕೆಲವು ನೊಣಗಳನ್ನೂ ಇತರ ಕೀಟಗಳನ್ನೂ ಹಿಡಿದು ಆ ಅಂಟುದ್ರವದ ಬೊಂಬಿನ ಮೇಲಿಟ್ಟು ಹಿಂದೆ ಸರಿದು ಮರೆಯಲ್ಲಿ ಕಾದುಕುಳಿತ. ಅಂಟುದ್ರವದಿಂದ ಬಿಡಿಸಿಕೊಳ್ಳಲು ಒದ್ದಾಡುವ ನೊಣ - ಕೀಟಗಳನ್ನು ಕಂಡ ಬುಲ್‌ಬುಲ್ ಮತ್ತು ಅದೇ ಆಕಾರದ ಇನ್ನಿತರ ಹಕ್ಕಿಗಳು ಬೇಟೆ ಸಿಕ್ಕ ಸಂತಸದಿಂದ ಹಾರಿಬಂದು ಕುಳಿತವು. ಪಾಪ, ಅವಕ್ಕೇನು ಗೊತ್ತು ಬೇಟೆ ಬಯಸಿ ಬಂದ ತಾವೇ ಬೇಟೆಯಾದೇವೆಂಬುದು? ಅವೆಲ್ಲ ಸೇರಿದ್ದು ಅಡಿಗೆಯೊಲೆಯ ಮೇಲಿನ ಕುದಿವ ಗಡಿಗೆಯನ್ನು.

ಇನ್ನೊಮ್ಮೆ ಅನಾಂಗ್ ಒಂದು ಉಡವನ್ನು ಹಿಡಿದು ತಂದ. ಉಡದ ಮಾಂಸವೆಂದರೆ ಮ್ರು ಜನ ಬಾಯಿ ಚಪ್ಪರಿಸುತ್ತಾರೆ. ತಮ್ಮ ಫಾಸಲೆಯಲ್ಲಿ ಇತರರು ಬಂದು ಸಿಕ್ಕಾಪಟ್ಟೆ ಬೇಟೆಯಾಡಿ ಧುಮಿಲೆಬ್ಬಿಸಿ ಪ್ರಾಣಿಗಳನ್ನೆಲ್ಲ ಅಲ್ಲಿಂದ ಓಡಿಸಿದ್ದಾರೆ ಎಂಬುದು ಅವರ ತಕರಾರು. ಆದರೂ

ಅಳಿಲು, ಬಾವಲಿ, ಹಾವು ಮತ್ತು ಆಮೆಗಳನ್ನು ಮ್ರು ಜನ ಆಗೀಗ ಬಲೆ ಹಾಕಿ ಹಿಡಿದು ತರುತ್ತಾರೆ. ಅನಾಂಗ್‌ನೊಂದಿಗೆ ಬೇಟೆಗೆ ಹೋಗಿ ಬಂದ ಮೇಲೆ ನಾನಲ್ಲಿ ಇರುವವರೆಗೂ ಒಬ್ಬಂಟಿಯಾಗಿ ಕಾಡಿನಲ್ಲಿ ತಿರುಗಾಡುವಾಗ ತುಂಬ ಜಾಗ್ರತನಾಗಿರತೊಡಗಿದೆ. ಎಲ್ಲಿ ಯಾವ ಬಲೆಯೊ?

ತನ್ನ ಮೂರು-ನಾಲ್ಕರ ಎಳೆಯ ಮಗನನ್ನು ಕಾಡಿಗೆ ಕರೆದೊಯ್ದು ಬೇಟೆಯ ಪಾಠಗಳನ್ನು ಹೇಳಿಕೊಡುವ ಅವಕಾಶವನ್ನೆಂದೂ ತಂದೆ ತಪ್ಪಿಸಿಕೊಳ್ಳುವುದಿಲ್ಲ.

ಮ್ರು ಜನರ ಸ್ಥಿತಿಗತಿ ಸುಧಾರಣೆಗಾಗಿ ಬಾಂಗ್ಲಾ ದೇಶದ ಸರಕಾರ ಕೆಲವು ಕಾನೂನುಗಳ ಮೂಲಕ ಯತ್ನಿಸುತ್ತಿದೆ. ಅವರಿರುವ ಪ್ರದೇಶಗಳಲ್ಲಿ ಬಂಗಾಲಿಗಳೂ ಸೇರಿದಂತೆ ಅನ್ಯರಾರೂ ಪ್ರವೇಶಿಸದಂಥ ಕಟ್ಟುನಿಟ್ಟಿನ ಕ್ರಮ ಜಾರಿಯಲ್ಲಿದೆ. ಆದರೆ ಈ ಬೆಟ್ಟ ಪ್ರದೇಶ ಕಾಡು ಉತ್ಪನ್ನಗಳಿಗೆ ಹೆಸರಾದದ್ದು. ಅಲ್ಲದೆ ಜಲವಿದ್ಯುತ್ ಉತ್ಪಾದನೆಗೂ ಸೂಕ್ತ ಸ್ಥಳ. ಹಾಗೇನಾದರೂ ಅಲ್ಲಿ ಜಲವಿದ್ಯುತ್ ಯೋಜನೆಯ ಕೆಲಸ ಇಂದಿಲ್ಲ ನಾಳೆ ಪ್ರಾರಂಭವಾದರೆ ಮ್ರು ಜನರ ಪಾಡೇನು?

ಬಾಲಕನೆ ಇವನು!

ಆಸ್ಟ್ರಿಯದ ವೇಲ್ಸ್ ನಿವಾಸಿ ಟ್ರಿಸ್ಟನ್ ಹೈಟ್‌ಜಂಗರ್ ಜಗತ್ತಿನ ಅತಿಕಿರಿಯ ಅಂತರಿಕ್ಷ ಈಜುಗಾರ. ಚಲಿಸುವ ವಿಮಾನದಿಂದ ನೆಗೆದು ನೀಲಾಕಾಶದ ಕೆಳಗಿನ ವಿಶಾಲವಾಯುಸಾಗರದಲ್ಲಿ ತೇಲುವುದೆಂದರೆ ಎಂಟು ವರ್ಷದ ಈ ಎಳೆಯನಿಗೆ ಎಲ್ಲಿಲ್ಲದ ಹಿಗ್ಗು. ತನ್ನ ಬಹುತೇಕ ಸಹಪಾಠಿಗಳು ಸ್ಕೂಲು ಮೈದಾನದಲ್ಲೋ ಮನೆಯಂಗಳದಲ್ಲೋ ಆಟವಾಡಿಕೊಂಡಿರುವ ಹೊತ್ತಿನಲ್ಲಿ ಈತ ಸ್ಕೈಡೈವಿಂಗ್‌ನ ಖುಷಿ ಅನುಭವಿಸುತ್ತಿರುತ್ತಾನೆ.

ಟ್ರಿಸ್ಟನ್‌ನ ಮನೆಯ ಸಮೀಪವೇ 'ಕರ್ಟ್‌ಷ್ಟೋನ್‌ಹೀಂ ಸ್ಕೈಡೈವಿಂಗ್ ಸ್ಕೂಲ್' ಇದೆ. ''ಟ್ರಿಸ್ಟನ್ ಇನ್ನೂ ನಾಲ್ಕರ ಹುಡುಗನಾಗಿದ್ದಾಗಿನಿಂದಲೇ ತನ್ನನ್ನು ವಿಮಾನದಲ್ಲಿ ಕರೆದೊಯ್ದು ಗಾಳಿಯಲ್ಲಿ ಈಜಾಡಿಸಿ ಎಂದು ನನಗೆ ದುಂಬಾಲು ಬೀಳುತ್ತಿದ್ದ'' ಎನ್ನುತ್ತಾನೆ ಸ್ಕೈಡೈವಿಂಗ್ ಸ್ಕೂಲಿನ ಮುಖ್ಯಸ್ಥ ಕರ್ಟ್‌ಷ್ಟೋನ್‌ಹೀಂ. ''ಇದೇನು ಮೋಜಿನ ಆಟವಲ್ಲ, ಧೈರ್ಯ-ಸಾಹಸದ ವಿಷಯ ಎಂಬುದು ಆತನಿಗೆ ಚೆನ್ನಾಗಿ ಗೊತ್ತು. ನನ್ನ ಎಲ್ಲ ಸೂಚನೆಗಳನ್ನೂ ಆತ ಲಕ್ಷ್ಯವಿಟ್ಟು ಕೇಳಿಕೊಳ್ಳುತ್ತಾನೆ. ಆದರೆ ನಮ್ಮ ದೇಶದ ಕಾನೂನು ಹದಿನಾರು ವರ್ಷದೊಳಗಿನವರು ಸ್ಕೈಡೈವಿಂಗ್ ಮಾಡುವುದನ್ನು ನಿಷೇಧಿಸಿದೆ. ಅಂತೆಯೇ ಟ್ರಿಸ್ಟನ್ ನನ್ನ ಹೊಟ್ಟೆಗಂಟಿಕೊಂಡು ಗಾಳಿಯಲ್ಲಿ ತೇಲಾಡುತ್ತಾನೆ.'' ಎಂದೆನ್ನುವ ಕರ್ಟ್ ತನ್ನ ಪ್ರಿಯ ಶಿಷ್ಯನನ್ನು ಒಮ್ಮೆ ಪರೀಕ್ಷೆಗೊಳಪಡಿಸಿಯೂಬಿಟ್ಟ! ಟ್ರಿಸ್ಟನ್ ಹದಿಮೂರು ಸಾವಿರ ಅಡಿ ಎತ್ತರದಲ್ಲಿ ವಿಮಾನದಿಂದ ಹೊರಗೆ ಧುಮುಕಿ ಗಂಟೆಗೆ ನೂರಿಪ್ಪತ್ತೈದು ಮೈಲಿ ವೇಗದಲ್ಲಿ ಅಂತರಿಕ್ಷದಲ್ಲಿ ಲೀಲಾಜಾಲವಾಗಿ ತೇಲುತ್ತ ಭೂಮಿಗೆ ಬಂದಿಳಿದ. ಅಲ್ಲಿಂದ ಮುಂದೆಂದೂ ಆತ ಇಂಥ ಅವಕಾಶಗಳನ್ನು ತಪ್ಪಿಸಿಕೊಂಡಿಲ್ಲ.

ತಮ್ಮ 'ವಾಯುಪುತ್ರ'ನ ಸಾಹಸಗಳನ್ನು ಅತ್ಯಭಿಮಾನದಿಂದ ವೀಕ್ಷಿಸುತ್ತಾರೆ ಟ್ರಿಸ್ಟನ್‌ನ ತಾಯಿ ಮರಿಯಾ ಹಾಗೂ ತಂದೆ ಹ್ಯಾನ್ಸ್. ''ಆದರೆ ಇದೆಲ್ಲ ರಜೆಯ ದಿನಗಳಲ್ಲಿ ಮಾತ್ರ. ಶಾಲೆಯ ದಿನಗಳಲ್ಲಿ ಆತ ಏನಿದ್ದರೂ ಅಭ್ಯಾಸದಲ್ಲಿ ಮಗ್ನನಾಗಿರುವಂತೆ ನೋಡಿಕೊಳ್ಳುತ್ತೇವೆ'' ಎನ್ನುತ್ತಾಳೆ ಮರಿಯಾ.

ಚಲೇಜಾವ್
ಐವತ್ತರ ನೆನಪು

ಇತಿಹಾಸಕ್ಕೆ ದಿಕ್ಕು ತೋರಿದ ಮಹಾತ್ಮರ ಮಾತುಗಳು

ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಂತಿಮ ಹೋರಾಟವಾದ ಚಲೇಜಾವ್ ಚಳವಳಿ ನಡೆದು ಅರ್ಧ ಶತಮಾನ ಸಂದಿತು. ಅಂದಿನ ಐತಿಹಾಸಿಕ ನಿರ್ಧಾರ ಅಂಕುರಿಸಿದ್ದು ವರ್ಧಾದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿಯಾದರೂ ಅದು ಅಂತಿಮ ಸ್ವರೂಪ ಪಡೆದು ಕಾರ್ಯ ರೂಪಕ್ಕಿಳಿದದ್ದು 1942ರ ಆಗಸ್ಟ್ ಏಳರ ಮುಂಬಯಿ ಅಧಿವೇಶನದಲ್ಲಿ. ಅಂದು ಜವಾಹರಲಾಲರು ಮಂಡಿಸಿದ ಗೊತ್ತುವಳಿಯನ್ನು ಸರ್ದಾರ್ ವಲ್ಲಭಭಾಯಿ ಪಟೇಲರು ಅನುಮೋದಿಸಿದರು. ಆ ಸಂದರ್ಭದಲ್ಲಿ ಗಾಂಧೀಜಿ ಆಡಿದ ಮಾತುಗಳು ಸ್ವಾತಂತ್ರ್ಯ ಹೋರಾಟದ ಒಟ್ಟು ಸ್ವರೂಪ, ತತ್ವ, ಸ್ವಪ್ನ ವನ್ನು ಯಥಾವತ್ತಾಗಿ ಪ್ರತಿನಿಧಿಸುವಂಥವು.

ಗೊತ್ತುವಳಿಯ ಚರ್ಚೆ ಮಾಡುವ ಮೊದಲು ಒಂದೆರಡು ಸಂಗತಿಗಳನ್ನು ನಿಮಗೆ ನಿವೇದಿಸ ಬಯಸುತ್ತೇನೆ - ಎರಡು ಸಂಗತಿಗಳನ್ನು ನೀವು ಸ್ಪಷ್ಟವಾಗಿ ತಿಳಿದುಕೊಂಡು ಯಾವ ದೃಷ್ಟಿ ಯಿಂದ ನಾಸದನ್ನು ನಿಮ್ಮ ಮುಂದೆ ಇಡುವೆನೊ ಅದೇ ದೃಷ್ಟಿಯಿಂದ ನೀವು ಆ ಬಗ್ಗೆ ವಿಚಾರ ಮಾಡಬೇಕೆಂದು ನಾನು ಕೇಳಿಕೊಳ್ಳುವೆ. ನನ್ನ ದೃಷ್ಟಿಯಿಂದಲೇ ನೀವು ಆ ವಿಷಯಗಳ ವಿಚಾರ ಮಾಡಿದರೆ ನಾನು ಹೇಳಿದಂತೆ ಕಾರ್ಯ ಮಾಡಲು ನಿಮಗೆ ಹಗುರವಾಗುವುದು ಮತ್ತು ಅದರಲ್ಲಿ ಒಂದು ಬಗೆಯ ಸಂತೋಷ ನಿಮಗುಂಟಾಗುವುದು. ಅದರ ಹೊಣೆಯೂ ನಿಮಗೆ ಗೊತ್ತಾಗುವುದು. 1920ರಲ್ಲಿ ಇದ್ದ ಗಾಂಧಿಯೇ ನಾನು ಅಹುದೊ ಅಲ್ಲವೊ, ಇಲ್ಲವೆ ನನ್ನಲ್ಲಿ ಏನಾದರೂ ಬದಲಾವಣೆಯಾಗಿರುವುದೋ ಹೇಗೆಂಬುದಾಗಿ ಹಲವರು ನನ್ನನ್ನು ಕೇಳುತ್ತಿರುವರು. ಆ ಬಗೆಯ ಪ್ರಶ್ನೆ ನೀವು ಕೇಳುತ್ತಿರುವುದು ಯೋಗ್ಯವಾಗಿರುವದು. ಆದರೆ 1920 ರಲ್ಲಿದ್ದಂತೆಯೇ ನಾನು ಈಗಲೂ ಇರುವೆನೆಂದು ನಾನು ನಿಮಗೆ ಹೇಳಬಯಸುತ್ತೇನೆ. ಆದ ಬದಲಾವಣೆಯೆಂದರೆ 1920ರಲ್ಲಿದ್ದುದಕ್ಕಿಂತ ಕೆಲ ವಿಷಯಗಳಲ್ಲಿ ನಾನು ಹೆಚ್ಚು ಬಲಿಷ್ಠನಾಗಿರುವೆನು. ಚಳಿಗಾಲದಲ್ಲಿ ಮನುಷ್ಯನು ಹೆಚ್ಚು ಬಟ್ಟೆಗಳನ್ನು ಹಾಕಿಕೊಳ್ಳುವನು. ಅದೇ ಮನುಷ್ಯನು ಬೇಸಿಗೆ ಬಂದ ಕೂಡಲೆ ಅಂಥ ಬಟ್ಟೆಗಳನ್ನೆಲ್ಲ ಬೀಸಾಡಿಬಿಡುವನೆಂಬ ಉದಾಹರಣೆಯನ್ನು ಕೊಟ್ಟು ನಾನು ಈ ಬದಲಾವಣೆಯನ್ನು ತಿಳಿಸಬಯಸುವೆನು. ಈ ರೀತಿ ಮನುಷ್ಯನ ಬಾಹ್ಯಾಂಗದಲ್ಲಿ ಬದಲಾವಣೆಯಾಗುವುದರಿಂದ ಅವನಲ್ಲಿ ವಿಶೇಷ ಅಭ್ಯಂತರವೇನೂ ಆಗುವುದಿಲ್ಲ. ನಾನು ಈ ಹೊತ್ತು ಒಂದು ಬಗೆ ಹೇಳುವೆನು, ಮರುದಿನ ಮತ್ತೊಂದು ಬಗೆಯಾಗಿ ಹೇಳುವೆನೆಂದು

('ಸಂಯುಕ್ತ ಕರ್ನಾಟಕ'ದ 1942 ಆಗಸ್ಟ್ 9ರ ಸಂಚಿಕೆಯಿಂದ)

ಹೇಳುವ ಜನರೂ ಹಲವರಿರಬಹುದು. ಆದರೆ ನನ್ನಲ್ಲಿ ಯಾವ ಬಗೆಯ ಬದಲಾವಣೆಯೂ ಆಗಿಲ್ಲೆಂದು ನಾನು ಹೇಳಬಯಸುವೆ.

ಪೂರ್ಣ ತಿಳಿದುಕೊಳ್ಳಿರಿ:

ಮೊದಲಿನಂತೆಯೇ ನಾನು ಅಹಿಂಸಾ ತತ್ತ್ವವನ್ನೇ ಅಚಲವಾಗಿ ಆಚರಿಸುತ್ತಲಿದ್ದೇನೆ. ಆ ಬಗ್ಗೆ ನಿಮಗೆ ಆಸಕ್ತಿಯಿಲ್ಲದಿದ್ದರೆ ನೀವು ನನ್ನನ್ನು ಹಿಂಬಾಲಿಸಬೇಡಿರಿ. ನಿಮಗೆ ಬೇಡವಾಗಿದ್ದರೆ ಈ ಗೊತ್ತುವಳಿಯನ್ನು ಪಾಸು ಮಾಡುವ ಅವಶ್ಯಕತೆಯೇನೂ ಇಲ್ಲ, ಅದನ್ನು ನೀವು ಪಾಸು ಮಾಡಲೇಬೇಕೆಂಬ ನಿರ್ಬಂಧವಿಲ್ಲ. ನಿಮಗೆ ಸ್ವರಾಜ್ಯ ಮತ್ತು ಸ್ವಾತಂತ್ರ್ಯ ಬೇಕಾಗಿದ್ದರೆ ಮತ್ತು ನಾನು ನಿಮ್ಮ ಮುಂದೆ ಇಡುವ ವಿಷಯವು ಸರಿಯಾದುದು ಮತ್ತು ಯೋಗ್ಯವಾದುದಾದರೆ ಮಾತ್ರ ನೀವದನ್ನು ಸ್ವೀಕರಿಸಿರಿ. ಹಾಗೆ ಮಾಡಿದರೇನೇ ನೀವು ನನಗೆ ಸಂಪೂರ್ಣ ಬೆಂಬಲ ಕೊಡುವಿರಿ. ನೀವು ಹಾಗೆ ಮಾಡದಿದ್ದರೆ ನೀವು ಮಾಡಬೇಕಾದುದನ್ನೇ ಹಾಳುಮಾಡಿಬಿಡಬಹುದೆಂಬ ಭೀತಿ ನನಗಿದೆ. ಮನುಷ್ಯನು ಏನಾದರೂ ತಪ್ಪು ಕೆಲಸ ಮಾಡಿ ಹಿಂದುಗಡೆ ಪಶ್ಚಾತ್ತಾಪಪಟ್ಟರೆ ಅದರಿಂದೇನು ಕೆಡಕಾಗದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ದೇಶವನ್ನೇ ನೀವು ಗಂಡಾಂತರದಲ್ಲಿ ನೂಕುವಿರಿ. ನಾನು ಹೇಳುವದರಲ್ಲಿ ನಿಮಗೆ ಸಂಪೂರ್ಣ ವಿಶ್ವಾಸವಿಲ್ಲದಿದ್ದರೆ, ನೀವು ಅದಕ್ಕೆ ಬೆಂಬಲ ಕೊಡಬೇಡಿರಿ. ಅದನ್ನು ನಿರಾಕರಿಸಬೇಡಿರೆಂದು ನಾನು ಬಿನ್ನವಿಸುತ್ತೇನೆ. ಆದರೆ ನೀವು ಈ ಗೊತ್ತುವಳಿಯನ್ನು ಸ್ವೀಕರಿಸಿ ನನ್ನ ಅಭಿಪ್ರಾಯವನ್ನು ಪೂರ್ಣವಾಗಿ ತಿಳಿದುಕೊಳ್ಳದಿದ್ದರೆ ನಮ್ಮಲ್ಲಿ ಬಿಕ್ಕಟ್ಟು, ಅಂತಸ್ಥದ ತಿಕ್ಕಾಟವುಂಟಾಗುವಲ್ಲಿ ಸಂದೇಹವಿಲ್ಲ. ನೀವು ನಿಮ್ಮ ಹೊಣೆಗಾರಿಕೆಯನ್ನು ತಿಳಿದುಕೊಳ್ಳಬೇಕೆಂಬುದು ಮತ್ತೊಂದು ಸಂಗತಿಯು. ಈ ಬಗ್ಗೆಯೂ ನಾನು ನಿಮಗೆ ಒತ್ತಿ ಹೇಳಬಯಸುತ್ತೇನೆ.

ರಾಷ್ಟ್ರದ ಪ್ರಾತಿನಿಧಿಕ ಸಂಸ್ಥೆ:

ಎ.ಐ.ಸಿ.ಸಿ. ಸದಸ್ಯರೆಂದರ ಪಾರ್ಲಿಮೆಂಟಿನ ಸದಸ್ಯರಿದ್ದಂತೆ. ಕಾಂಗ್ರೆಸ್ಸು ಇಡೀ ರಾಷ್ಟ್ರದ ಪ್ರತಿನಿಧಿಯು. ಕಾಂಗ್ರೆಸ್ಸು ಸ್ಥಾಪನೆಯಾದಂದಿನಿಂದ ಈವರೆಗೆ ಎಂದೂ ಯಾವುದೊಂದು ಗುಂಪು ಇಲ್ಲವೆ ಜಾತಿ, ವರ್ಣ ಅಥವಾ ಪ್ರಾಂತದ ಪ್ರಾತಿನಿಧಿಕ ಸಂಸ್ಥೆಯಲ್ಲ. ಪ್ರಾರಂಭದಿಂದಲೂ ಅದು ಹಿಂದುಸ್ತಾನದ ಪ್ರಾತಿನಿಧಿಕ ಸಂಸ್ಥೆಯಾಗಿದೆ. ನೀವು ಕೇವಲ ನಾಲ್ಕಾಣೆಯ ಕಾಂಗ್ರೆಸ್ ಸದಸ್ಯರು ಮಾತ್ರ ಆಗಿರದೆ ಇಡೀ ರಾಷ್ಟ್ರದ ಪ್ರತಿನಿಧಿಗಳಿರುವಿರೆಂದು ನಿಮ್ಮ ಪರವಾಗಿ ನಾನು ಹೇಳಿಕೊಳ್ಳುತ್ತಿರುವೆನು.

ಸಂಸ್ಥಾನಿಕರ ಸಮಸ್ಯೆ:

ಸಂಸ್ಥಾನಿಕರೆಂದರೆ ಬ್ರಿಟಿಶ್ ಸರಕಾರದವರು ಮಾಡಿದ ಸೃಷ್ಟಿಯು. ಅವರ ಸಂಖ್ಯೆ 600 ಇಲ್ಲವೆ ಅದಕ್ಕೂ ಹೆಚ್ಚು ಇರಬಹುದು. ಹಿಂದೀ ಹಿಂದುಸ್ಥಾನ ಮತ್ತು ಬ್ರಿಟಿಶ್ ಹಿಂದುಸ್ತಾನಗಳಲ್ಲಿ ಭೇದಭಾವಗಳನ್ನುಂಟು ಮಾಡುವದಕ್ಕಾಗಿ ಆಡಳಿತಗಾರರು ಈ ಸಂಸ್ಥಾನಿಕರನ್ನು ನಿರ್ಮಿಸಿದ್ದಾರೆ. ಬ್ರಿಟಿಶ್ ಮತ್ತು ಹಿಂದೀ ಹಿಂದುಸ್ತಾನಗಳಲ್ಲಿನ ಪರಿಸ್ಥಿತಿಗಳಲ್ಲಿ ಸ್ವಲ್ಪ ಭೇದವಿರುವದು ನಿಜ. ಆದರೆ ಹಿಂದೀ ಸಂಸ್ಥಾನಗಳಲ್ಲಿಯ ಜನತೆಯ ದೃಷ್ಟಿಯಿಂದ ಭೇದವೆಂಬುದು ಇರುವದಿಲ್ಲ. ಈ ಸಂಸ್ಥಾನಗಳ ಪ್ರತಿನಿಧಿಯೂ ತಾನಾಗಿರುವದೆಂದು ಕಾಂಗ್ರೆಸ್ಸು ಹೇಳಿಕೊಳ್ಳುತ್ತದೆ. ನಾನು ಸೂಚಿಸಿದ ಬಗೆಯಲ್ಲಿಯೆ ಕಾಂಗ್ರೆಸ್ಸು ಸಂಸ್ಥಾನ ವಿಷಯಕ ಧೋರಣವನ್ನು ಸ್ವೀಕರಿಸಿದೆ. ಅದರಲ್ಲಿ ಸ್ವಲ್ಪ ಬದಲಾವಣೆಯಾಗಿದ್ದರೆ ಮೂಲ ಧೋರಣೆಯು ಇದ್ದಂತೆಯೆ ಇದೆ. ಸಂಸ್ಥಾನಿಕರು ಏನೇ ಹೇಳಿದರೂ ಪ್ರಜೆಗಳಿಗೆ ಬೇಕಾದುದನ್ನೇ ನಾವು ಕೇಳಿಕೊಳ್ಳುತ್ತಿರುವೆವೆಂದು ಸಂಸ್ಥಾನ ಪ್ರಜೆಗಳು ಹೇಳುತ್ತಿರುವರು. ನಾನು ಸೂಚಿಸಿದ ರೀತಿಯಲ್ಲಿಯೇ ನಾವು ಈ ಹೋರಾಟವನ್ನು ನಡೆಸಿದ್ದಾದರೆ ಸಂಸ್ಥಾನಿಕರಿಗಾದರೂ ತಾವು ನಿರೀಕ್ಷಿಸಿದ್ದಕ್ಕಿಂತ ಸರಳವಾಗಿ ಎಲ್ಲವೂ ಸರಿಹೋಗುವದು. ಹಲವು ಸಂಸ್ಥಾನಿಕರನ್ನು ನಾನು ಕಂಡಿರುವೆನು. ನಮ್ಮಕ್ಕಿಂತ ನೀವು ಹೆಚ್ಚು ಸ್ವತಂತ್ರರಿರುವಿರೆಂದೂ ಸಾರ್ವಭೌಮ


ಸರಕಾರದವರು ತಮಗೆ ತೋಚಿದಾಗ ನಮ್ಮನ್ನು ತೆಗೆದು ಹಾಕಬಹುದೆಂದೂ ಹೇಳಿ ಅವರು ತಮ್ಮ ಅಸಹಾಯಕತೆಯನ್ನು ನನಗೆ ಹೇಳಿದರು. ಮನಃಪೂರ್ವಕವಾಗಿ ಈ ಗೊತ್ತುವಳಿಯನ್ನು ನೀವು ಸಮರ್ಥಿಸುತ್ತಿದ್ದರೆ ಮಾತ್ರ ನೀವು ಅದಕ್ಕೆ ಬೆಂಬಲ ಕೊಡಿರೆಂದು ನಾನು ನಿಮಗೆ ಮತ್ತೊಮ್ಮೆ ಬಿನ್ನವಿಸುತ್ತೇನೆ. ನಿಮಗೆ ಅದು ಒಪ್ಪಿಗೆ ಇಲ್ಲದೆ ತೋರಿಕೆಗಾಗಿ ಬೆಂಬಲ ಕೊಟ್ಟರೆ ಗಂಡಾಂತರಕ್ಕೊಳಗಾಗುವಿರಿ.

ಸ್ವಾತಂತ್ರ್ಯವೇ ಮುಖ್ಯ ಗುರಿ:

ಕನಿಷ್ಟ ಏಳು ಪ್ರಾಂತಗಳಲ್ಲಿಯಾದರೂ ಆಡಳಿತೆಯನ್ನು ಸಾಗಿಸುವ ಸಂಧಿಯು ನಮಗೆ ಲಭಿಸಿತ್ತು. ನಾವು ಉತ್ತಮ ರೀತಿಯಿಂದ ಆಡಳಿತಯನ್ನು ಸಾಗಿಸಿದೆವು. ಬ್ರಿಟಿಶ್ ಸರಕಾರದವರು ಕೂಡ ಅದನ್ನು ಬಣ್ಣಿಸಿರುವರು. ಸ್ವಾತಂತ್ರ್ಯ ಸಿಕ್ಕ ಕೂಡಲೆ ನಿಮ್ಮ ಕಾರ್ಯ ಮುಗಿಯಿತೆಂದು ತಿಳಿಯಬೇಡಿರಿ. ನಮ್ಮ ಯೋಜನೆಯಲ್ಲಿ ಸರ್ವಾಧಿಕಾರಿಗಳಿಗೆ ಅವಕಾಶವಿಲ್ಲ. ಸ್ವಾತಂತ್ರ್ಯ ಸಂಪಾದಿಸುವದೆ ನಮ್ಮ ಉದ್ದೇಶವು; ಆಡಳಿತೆಯ ಅಧಿಕಾರವು ಯಾರ ಕೈಗೆ ಹೋದರೂ ಅಷ್ಟೆ. ಪಾರ್ಟಿಗಳ ಕೈಯಲ್ಲಿ ಅಧಿಕಾರ ಕೊಡಬೇಕೆಂಬುದಾಗಿಯೂ ನೀವು ನಿರ್ಣಯಿಸಬಹುದು. ಪಾರ್ಟಿಗಳ ಕೈಯಲ್ಲಿಯೆ ಅಧಿಕಾರವನ್ನೇಕೆ ಕೊಡಬೇಕೆಂದು ನೀವು ಕೇಳಬಾರದು. ಕಾಂಗ್ರೆಸ್ಸಿನಲ್ಲಿ ನೀವೆಂದೂ ಹೆಸರು ಕೇಳದಿದ್ದವರ ಕೈಯಲ್ಲಿಯೂ ಅಧಿಕಾರವನ್ನು ಕೊಡಬಹುದು. ಅದನ್ನು ನಿರ್ಧರಿಸುವುದು ಜನತೆಯೆ. ಹೋರಾಟದಲ್ಲಿ ಹಿಂದುಗಳೆ ಹೆಚ್ಚಿದ್ದರು ಮುಸಲ್ಮಾನ ಪಾರ್ಟಿಗಳು ಬಹಳ ಕಡಿಮೆ ಜನರಿದ್ದರೆಂದು ನಿಮಗನಿಸಬಾರದು. ಸ್ವಾತಂತ್ರ್ಯವು ಸಿಕ್ಕ ಬಳಿಕ ಇಡೀ ವಾತಾವರಣವು ಬದಲಾಗಿ ಹೋಗುವದು.

ದ್ವೇಷ ಭಾವನೆ ಇಲ್ಲ:

ಬ್ರಿಟಿಶರನ್ನು ದ್ವೇಷಿಸುವ ಜನರು ಇರುವರು. ಅವರ ಬಗ್ಗೆ ನಮಗೆ ತಿರಸ್ಕಾರವುಂಟಾಗಿದೆಯೆಂದು ಹೇಳುತಿರುವದನ್ನೂ ನಾನು ಕೇಳಿರುವೆ. ಬ್ರಿಟಿಶರಲ್ಲಿ ಮತ್ತು ಅವರ ಸಾಮ್ರಾಜ್ಯ ಸರಕಾರದಲ್ಲಿ ಸಾಮಾನ್ಯ ಜನರಿಗೆ ಯಾವದೇ ಬಗೆಯ ಭೇದ ಕಾಣಸುವದಿಲ್ಲ. ಅವರಿಗೆ ಎರಡೂ ಅಷ್ಟೆ. ಜಪಾನರು ಬಂದರೂ ಅವರಿಗೆ ಅಷ್ಟೆ, ಅವರಿಗೆ ಕದಾಚಿತ ಒಡೆಯರಲ್ಲಿ ಬದಲಾವಣೆಯೆಂದೆನಿಸಬಹುದು. ಅದನ್ನು ನೀವು ನಿಮ್ಮ ಮನಸ್ಸಿನಿಂದ ತೆಗೆದುಹಾಕಲಿಕ್ಕೆ ಬೇಕು. ಇದು ಅತ್ಯಂತ ಮ[illegible]ತ್ವದ್ದು. ನಾವು ಸ್ವಸ್ಥ ಕುಳಿತು ಯಾವದೆ ಬಗೆಯ ಕಾರ್ಯ ಮಾಡದಿರುವದೆಂದರೆ ಸರಿಯಾಗಲಾರದು. ಬ್ರಿಟನ್ ಮತ್ತು ಅಮೆರಿಕಗಳಷ್ಟೆ ಹೋರಾಡತಕ್ಕದ್ದು, ಮತ್ತು ನಾವು ಮನಸ್ಸಿನಿಂದಲೋ ಇಲ್ಲವೆ ಜುಲುಮೆಯಿಂದಲೋ ಹಣ[illegible]ಡತಕ್ಕದ್ದು ಎಂದು ಹೇಳುವುದು ಅಷ್ಟೇನು ಸಮಂಜಸವಾದುದಿಲ್ಲ. ಆದರೆ ಯುದ್ಧವು ನಮ್ಮದೆಂದು ಎನಿಸಿದರೆ ನಾವು ಅದರಲ್ಲಿ ನಮ್ಮ ಶೌರ್ಯ ಸ್ಥೈರ್ಯಗಳನ್ನು ತೋರಿಸಬಲ್ಲೆವು. ಹಾಗಾದರೆ ಸಣ್ಣ ಕೂಸು ಕೂಡ ಶೌರ್ಯ ತೋರಿಸಬಲ್ಲದು. ಹೋರಾಟ ನಡ[illegible]ನಾವು ಸ್ವಾತಂತ್ರ್ಯವನ್ನು ಸಂಪಾದಿಸಬಲ್ಲೆವು. ಅದೇನು ಆಕಾಶದಿಂದ ಸಿಕ್ಕತಕ್ಕ ವಸ್ತುವಲ್ಲ. ನಾವು ಸಾಕಷ್ಟು ತ್ಯಾಗ ಮಾಡಿ ನಮ್ಮ ಶಕ್ತಿಯನ್ನು ಸಿದ್ಧಮಾಡಿ ತೋರಿಸಿದರೆ ಬ್ರಿಟಿಶರು ನಮಗೆ ಸ್ವಾತಂತ್ರ್ಯವನ್ನು ಕೊಡಲಿಕ್ಕೆ ಬೇಕಾಗುವದೆಂಬು[illegible] ನನಗೆ ಸಂಪೂರ್ಣವಾಗಿ



ಆಟ್ಲೀ ಅಭಿಪ್ರಾಯ

ಲಂಡನ್, 9.10.42: ಕಾಮನ್ಸ್ ಸಭೆಯ ಹಿಂದೀ ಸಮಸ್ಯೆ ಕುರಿತ ಚರ್ಚೆಯಲ್ಲಿ ಉಪ ಮುಖ್ಯಮಂತ್ರಿಗಳಾದ ಮೇಜರ್ ಸಿ.ಆರ್. ಆಟ್ಲೀ ಹೇಳಿಕೆ:

"ಕಾಂಗ್ರೆಸ್ ಈಗ ಪ್ರಜಾಸತ್ತೆಯನ್ನು ಬಿಟ್ಟಿರುವುದು. ಈ ಪರಿಸ್ಥಿತಿಯಲ್ಲಿ ಕಾಯಿದೆ ಭಂಗವನ್ನು ಪ್ರಾರಂಭಿಸಿದರೆ ಹಿಂಸೆಯಲ್ಲಿ ಪರಿಣಮಿಸುವುದೆಂಬುವದರಲ್ಲಿ ಸಂಶಯವಿಲ್ಲ. ಹಲವು ನಿರಪರಾಧಿಗಳ ಮರಣಕ್ಕೆ ಕಾರಣವಾದ ಇಂಥ ಧೋರಣೆಯನ್ನು ಮಹಾತ್ಮರು ಮುಪ್ಪಿನ ಕಾಲದಲ್ಲಿ ಕೈಗೊಂಡದ್ದು ವಿಷಾದಕರವು. ಕಾಯಿದೆ ಮತ್ತು ಸುವ್ಯವಸ್ಥೆಯನ್ನಿಡುವುದು ನಮ್ಮ ಕರ್ತವ್ಯವು. ಗಾಂಧೀಗಳಿಗೆ ಆಸ್ಪದ ಕೊಡುವದು ಬಹಳ ಗಂಡಾಂತರವು. ಈಗ ಕಾಂಗ್ರೆಸ್ಸು ಹೂಡಿರುವಂತಹ ಚಟುವಟಿಕೆಗಳನ್ನು ಕೈಗೊಂಡವರ ಗೂಡ ನಾವು ಒಪ್ಪಂದದ ಪ್ರಸ್ತಾಪವೆತ್ತಿದರೆ, ಹಿಂದುಸ್ತಾನದ ಭಾವೀ ಪ್ರಜಾಸತ್ತೆಗೆ ದ್ರೋಹ ಮಾಡಿದಂತಾಗುವದು. ನಾವು ಇದಕ್ಕೆ ಸಿದ್ಧರಿಲ್ಲ. ಹಾಗೆ ಮಾಡಿದರೆ ಮಿತ್ರರ ದ್ರೋಹವನ್ನು ಮಾಡಿದಂತಾಗುತ್ತದೆ.

"ಆಕ್ರಮಣವನ್ನು ಬೇಗನೆ ಸೋಲಿಸುವ ಕಾರ್ಯದಲ್ಲಿ ಸಹಾಯ ಮಾಡಿ ಸ್ವಾತಂತ್ರ್ಯ ಪಡೆಯುವ ಸಮಯವು ಆದಷ್ಟು ತೀವ್ರ ಬರುವಂತೆ ಪ್ರಯತ್ನಿಸಿರೆಂದು ನಾನು ಹಿಂದೀ ಮುಖಂಡರನ್ನು ಕೇಳಿಕೊಳ್ಳುತ್ತೇನೆ."

ಗೊತ್ತಿದೆ. ಬ್ರಿಟಿಶರ ಬಗ್ಗೆ ನಿಮ್ಮ ಮನಸ್ಸಿನಲ್ಲಿದ್ದ ಕಿಲ್ಬಿಷವನ್ನು ತೆಗೆದುಹಾಕಲಿಕ್ಕೆ ಬೇಕಾಗುವದು. ನನ್ನ ಮನಸ್ಸಿನಲ್ಲಿ ಅಂಥ ದ್ವೇಷ ಭಾವನೆ ಎಳ್ಳಷ್ಟೂ ಇರುವದಿಲ್ಲ. ನಿಜವಾಗಿ ಹೇಳಬೇಕೆಂದರೆ ನಾನು ಮೊದಲಿಗಿಂತ ಹೆಚ್ಚು ಬ್ರಿಟಿಶರ ಮಿತ್ರನಾಗಿರುವೆನು. ಇದಕ್ಕೆ ಕಾರಣವೆಂದರೆ ಸದ್ಯದಲ್ಲಿ ಅವರು ಆಪತ್ತಿನಲ್ಲಿರುವದು. ಅವರು ತಮ್ಮ ತಪ್ಪುಗಳನ್ನು ತಿಳಿದುಕೊಳ್ಳುವಂತೆ ಮಾಡಲಿಕ್ಕಬೇಕೆಂದು ನನ್ನ ಮಿತ್ರತ್ವವು ನನಗೆ ಹೇಳುತ್ತದೆ. ಅವರು ಯಾವ ಪರಿಸ್ಥಿತಿಯಲ್ಲಿರುವರೋ ಆ ಪರಿಸ್ಥಿತಿಯಲ್ಲಿ ನಾನಿಲ್ಲದ್ದರಿಂದ ನಾನು ಅವರ ತಪ್ಪುಗಳನ್ನು ಮಾತ್ರ ತಿಳಿಸಬಲ್ಲೆನು. ಅವರೀಗ ಕಂದಕದ ತುದಿಯಲ್ಲಿರುವರು. ಒಳಗೆ ಬೀಳುವ ಸಂಭವವಿದೆಂಬುದು ನನಗೆ ಗೊತ್ತಿದೆ. ಆದುದರಿಂದ ಅವರು ನನ್ನ ಮಿತ್ರತ್ವವನ್ನು ಕಡೆದುಕೊಳ್ಳಬೇಕೆಂದು ಬಯಸಿದರೂ ಆ ಕಂದಕದಲ್ಲಿ ಬೀಳುವದರಿಂದ ಅವರನ್ನು ಪಾರು ಮಾಡುವದು ನನ್ನ ಕರ್ತವ್ಯವಾಗಿದೆಂದು ನನ್ನ ಗೆಳೆತನವು ನನಗೆ ಒತ್ತಾಯಪಡಿಸುತ್ತದೆ. ಹಾಗೆ ಹೇಳುವ ಹಕ್ಕು ನನಗಿದೆ. ಇದನ್ನು ನೋಡಿ ಅನೇಕರು ನಗಬಹುದು. ಆದರೂ ಇದು ನಿಜವೆಂದು ನನಗೆ ಗೊತ್ತಿದೆ. ನನ್ನ ಜೀವನದಲ್ಲಿ ಅತ್ಯಂತ ದೊಡ್ಡವಾದ ಹೋರಾಟವನ್ನು ಹೂಡುವ ಈ ಸಮಯದಲ್ಲಿ ನನ್ನ ಅಂತಃಕರಣದಲ್ಲಿ ಬ್ರಿಟಿಶರ ಬಗ್ಗೆ ಯಾವದೇ ಬಗೆಯ ದ್ವೇಷವಿರಲಾರದು. ಅವರು ವಿಪತ್ತಿನಲ್ಲಿರುವರೆಂಬುದು ತಿಳಿದು ಅವರನ್ನು ನೂಕಬೇಕೆಂಬುದು ನನ್ನ ಮನಸ್ಸಿನಲ್ಲಿ ಸ್ವಲ್ಪವೂ ಇರುವದಿಲ್ಲ. ಅದು ಎಂದೂ ನನ್ನ ಮನಸ್ಸಿನಲ್ಲಿರುವದಿಲ್ಲ.

ಹಿಂಸೆಗೆ ಅವಕಾಶವಿಲ್ಲ:

ಸಿಟ್ಟಿನ ಭರದಲ್ಲಿ ಅವರು ನಿಮ್ಮನ್ನು ರೊಚ್ಚಿಗೆಬ್ಬಿಸುವಂತಹ ಕೃತಿಯನ್ನು ಮಾಡಬಹುದು. ಏನೇ ಆದರೂ ನೀವು ಹಿಂಸೆಗೆ ಅವಕಾಶ ಕೊಡಬಾರದು. ಅಹಿಂಸೆಯನ್ನು ನಾಚಿಕೆಗೀಡು ಮಾಡಬಾರದು. ಈ ಬಗೆಯ ಕೃತ್ಯ ಸಂಭವಿಸಿದರೆ ನಾನು ಜೀವಂತವುಳಿಯುವದಿಲ್ಲೆಂಬುದನ್ನು ನೀವು ತಿಳಿದುಕೊಳ್ಳಿರಿ. ನಾನೆಲ್ಲಿದ್ದರೂ ಹಾಗಾಗುವದೆಂದು ತಿಳಿಯಿರಿ. ಅವರನ್ನು ಕೊಂದ ಪಾಪವು ಯಾವಾಗಲೂ ನಿಮ್ಮ ತಲೆಯಮೇಲೆಯೇ ಉಳಿಯುವದು. ನಿಮಗೆ ಇದು ತಿಳಿಯದಿದ್ದರೆ ಈ ಗೊತ್ತುವಳಿಯನ್ನು ನಿರಾಕರಿಸುವದು

ಒಳಿತು. ಅದು ನಿಮಗೆ ಶೋಭಿಸುವದು. ನಿಮಗೆ ತಿಳಿಯಲಾರದ ವಿಷಯಗಳಿಗಾಗಿ ನಾನು ನಿಮ್ಮನ್ನು ಹೇಗೆ ಹಳಿಯಲಿ? ಹೋರಾಟದಲ್ಲಿ ಒಂದೇ ತತ್ವವಿರುವದು. ಅದನ್ನು ನೀವು ಸ್ವೀಕರಿಸಲಿಕ್ಕೇಬೇಕು.

ಬ್ರಿಟಿಶರು ಪರಾಜಯಹೊಂದುವರೆಂದು ನೀವೆಂದೂ ಭಾವಿಸಬೇಡಿ. ನಾನು ಹಾಗೆಂದೂ ಭಾವಿಸುವದಿಲ್ಲ. ಹೇಡಿಗಳ ರಾಷ್ಟ್ರವದೆಂದು ನಾನೆಂದೂ ಭಾವಿಸುವದಿಲ್ಲ. ಪರಾಜಯ ಹೊಂದುವ ಪ್ರಸಂಗ ಬಂದರೆ ಬ್ರಿಟನ್‌ದಲ್ಲಿಯ ಪ್ರತಿಯೊಬ್ಬ ಮನುಷ್ಯನು ಆತ್ಮಾಹುತಿ ಮಾಡಿಕೊಳ್ಳುವನೆಂಬುದು ನನಗೆ ಗೊತ್ತಿದೆ. ಅವರು ಪರಾಜಯ ಹೊಂದಬಹುದು ಮತ್ತು ಶಕ್ಯವಾದಾಗ ಪುನಃ ವಶಪಡಿಸಿಕೊಳ್ಳುವಾ ಎಂದು ಹೇಳಿ ಬ್ರಹ್ಮದೇಶ, ಮಲಯ ಮತ್ತು ಉಳಿದ ಕಡೆಗಳಲ್ಲಿಯಂತೆ ನಿಮ್ಮನ್ನು ಬಿಟ್ಟು ಹೋಗಬಹುದು. ಅದು ಅವರ ಸೈನಿಕತಂತ್ರವಾಗಿರಬಹುದು. ಆದರೆ ಒಂದು ವೇಳೆ ಅವರು ನಮ್ಮನ್ನು ಬಿಟ್ಟು ಹೋದರೆಂದು ಭಾವಿಸುವಾ. ಮುಂದೇನಾಗಬಹುದು? ಹಾಗಾದರೆ ಜಪಾನರು ಇಲ್ಲಿ ಬರಬಹುದು. ಚೀನದ ಇತಿಶ್ರೀಯಾಗಬಹುದು. ಕದಾಚಿತ ರಶಿಯದ ಕೊನೆಯೂ ಆಗಬಹುದು. ಈ ವಿಷಯಗಳಲ್ಲಿ ನೆಹರುರವರು ನನ್ನ ಗುರುಗಳು. ರಶಿಯದ ಪರಾಜಯಕ್ಕೆ ಇಲ್ಲವೆ ಚೀನದ ಪರಾಭವಕ್ಕೆ ನಾನು ಹೊಣೆಗಾರ ಆಗುವದು ಬೇಡ. ಹಾಗೆ ಸಂಭವಿಸಿದ್ದಾದರೆ ನಾನೇ ನನ್ನನ್ನು ಹಳಿದುಕೊಳ್ಳುವೆನು.

ಹೃದಯ ಪರಿವರ್ತನೆ:

ಬಹಳ ವೇಗದಿಂದ ಮುನ್ನುಗ್ಗಬೇಕೆಂದು ನನ್ನ ಯೋಜನೆಯಿದೆಂಬುದು ನಿಮಗೆ ಗೊತ್ತಿದೆ. ಆದರೆ ನಿಮ್ಮ ದೃಷ್ಟಿಯಿಂದ ಅಷ್ಟು ವೇಗದಿಂದ ಕದಾಚಿತ ನಾನು ಹೋಗಲಿಕ್ಕಿಲ್ಲ. ಒಂದು ವಾರದಲ್ಲಿ ಈ ಹೋರಾಟವು ಕೊನೆಗೊಳ್ಳುವದೆಂದು ಸರದಾರ ಪಟೇಲರು ಹೇಳಿರುವರೆಂದು ಪ್ರಸಿದ್ಧವಾಗಿದೆ. ಅವಸರ ಮಾಡುವದು ನನಗೆ ಬೇಕಾಗಿಲ್ಲ. ಒಂದು ವಾರದಲ್ಲಿ ಅದು ಕೊನೆಗೊಂಡರೆ ಅದೊಂದು ದೈವೀ ಲೀಲೆಯೆ ಆಗುವದು. ಹಾಗಾಗುವದೆಂದರೆ ಬ್ರಿಟಿಶರ ಹೃದಯ ಪರಿವರ್ತನೆಯಾದಂತೆಯೆ. ತಮ್ಮ ಸಲುವಾಗಿ ಹೋರಾಡಲು ಯಾರು ಸಿದ್ಧರಿರುವರೂ ಅಂಥವರನ್ನು ತುರಂಗಕ್ಕೆ ಅಟ್ಟುವದು ತಪ್ಪೆಂದು ಕದಾಚಿತ ಬ್ರಿಟಿಶರಿಗೆ ಎನಿಸಬಹುದು. ಆ ಬಗೆಯ ಸದ್ಬುದ್ಧಿಯು ಅವರಲ್ಲಿ ಉಂಟಾಗಬಹುದು. ಹೋರಾಡುವವರು ಇದೇ ಮಾತೃಭೂಮಿಯ ಮಕ್ಕಳೆಂದು ಜಿನ್ನಾರವರಿಗೂ ಎನಿಸಹತ್ತಿ ಅವರ ಹೃದಯ ಪರಿವರ್ತನೆಯೂ ಆಗಬಹುದು. ಅವರು ಸುಮ್ಮನೆ ಕುಳಿತರೆ ಪಾಕಿಸ್ತಾನದಿಂದ ಅವರಿಗೇನು ಪ್ರಯೋಜನವಾಗಬಹುದೆಂದೂ ಅವರಿಗೆನಿಸಬಹುದು.

ನಿಜವಾದ ಪ್ರಜಾಪ್ರಭುತ್ವವಾವುದು?

ಅಹಿಂಸೆಯು ಅದ್ವಿತೀಯ ಅಸ್ತ್ರವಾಗಿದೆ. ಪ್ರತಿಯೊಬ್ಬರಿಗೂ ಅದು ಉಪಯೋಗವಾಗುವದು. ಈ ಅಹಿಂಸೆಯಲ್ಲಿ ನಾವು ಹೆಚ್ಚು ಪರಿಶ್ರಮಪಟ್ಟಿಲ್ಲವೆಂಬುದು ನನಗೆ ಗೊತ್ತಿದೆ. ಮತ್ತು ಈ ಬಗೆಯ ಬದಲಾವಣೆಯುಂಟಾದರೆ ಕಳೆದ 22 ವರ್ಷಗಳಲ್ಲಿ ನಾವು ಈ ಬಗ್ಗೆ ಮಾಡಿದ ಪ್ರಯತ್ನದ ಪರಿಣಾಮವೆ ಅದೆಂದು ನಾವು ತಿಳಿಯುತ್ತೇವೆ. ''ಹಿಂದುಸ್ತಾನ ಬಿಟ್ಟು ಹೋಗಿರಿ'' ಎಂದು ನಾವು ಹೇಳಹತ್ತಿದ ಕೂಡಲೆ ಅತ್ಯಂತ ವಿಷಾದ ಪರಿಸ್ಥಿತಿಯಲ್ಲಿದ್ದ ಜನರು ಇದೊಂದು ಹೊಸ ಸಂಗತಿಯೆಂದು ಭಾವಿಸಹತ್ತಿದರು. ನಿಮಗೆ ನಿಜವಾದ ಸ್ವಾತಂತ್ರ್ಯ ಬೇಕಾಗಿದ್ದರೆ ನೀವೆಲ್ಲ ಒಕ್ಕಟ್ಟಾಗಬೇಕಾಗುವದು. ಈ ಐಕ್ಯವು ಸಾಧಿಸಿತೆಂದರೆ ನಿಜವಾದ ಪ್ರಜಾಪ್ರಭುತ್ವವು - ಈ ವರೆಗೆ ಎಲ್ಲಿಯೂ ಇಲ್ಲದಿದ್ದಂಥ ಮತ್ತು ಆ ಬಗೆಯ ಪ್ರಜಾಪ್ರಭುತ್ವಕ್ಕಾಗಿ ಎಲ್ಲಿಯೂ ಪ್ರಯತ್ನ ಮಾಡದೆ ಇದ್ದಂಥದು - ಸ್ಥಾಪಿಸಲ್ಪಡುವದು.

ಫ್ರೆಂಚ್ ಬಂಡಾಯದ ಬಗ್ಗೆ ನಾನು ಬಹಳ ಓದಿರುವೆನು. ನಾನು ತುರಂಗದಲ್ಲಿದ್ದಾಗ ಕಾರ್ಲಾಯಿಲನ ಗ್ರಂಥಗಳನ್ನು ಓದಿರುವೆನು. ಫ್ರೆಂಚ್ ಜನರ ಬಗ್ಗೆ ನನಗೆ ಬಹಳ ಆದರವಿದೆ.



ಮಹಾತ್ಮಾಜಿಯೊಂದಿಗೆ ಪಟೇಲರು (ಮುಂಬಯಿ ಎ.ಐ.ಸಿ.ಸಿ. ಅಧಿವೇಶನ 1942)

ರಶಿಯನ್ ಕ್ರಾಂತಿಯ ಬಗ್ಗೆ ಜವಾಹರಲಾಲರು ನನಗೆ ಎಲ್ಲವನ್ನೂ ಹೇಳಿರುವರು. ಆದರೆ ಆ ಎಲ್ಲ ಹೋರಾಟಗಳು ನನ್ನ ಮನಸ್ಸಿನಲ್ಲಿದ್ದ ಪ್ರಜಾಪ್ರಭುತ್ವದಂಥ ಪ್ರಭುತ್ವದ ಬಗ್ಗೆ ಇರಲಿಲ್ಲೆಂದು ನನ್ನ ಅಭಿಪ್ರಾಯ. ನನ್ನ ಅರ್ಥದಲ್ಲಿ ಪ್ರಜಾಪ್ರಭುತ್ವವೆಂದರೆ ಪ್ರತಿಯೊಬ್ಬನು ತನ್ನ ಒಡೆಯನು ತಾನೇ ಆಗಬೇಕು. ನಾನು ಇತಿಹಾಸವನ್ನು ಹೆಚ್ಚಾಗಿ ಓದಿರುವೆನು. ಆದರೆ ಅಹಿಂಸಾತ್ಮಕ ಮಾರ್ಗದಿಂದ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಇಂಥ ವ್ಯಾಪಕವಾದ ಪ್ರಯೋಗವೆಲ್ಲಿಯೂ ಮಾಡಲ್ಪಟ್ಟದ್ದು ನನಗೆ ಗೊತ್ತಿಲ್ಲ. ಈ ಎಲ್ಲ ವಿಷಯಗಳನ್ನು ನೀವು ಒಮ್ಮೆ ತಿಳಿದುಕೊಂಡರೆ ನೀವು ಹಿಂದು-ಮುಸ್ಲಿಮರಲ್ಲಿಯ ಭೇದಗಳನ್ನೆಲ್ಲ ಮರೆತುಬಿಡುವಿರಿ.

ಅಹಿಂಸೆಯೆ ನಮ್ಮ ದಿವ್ಯಾಸ್ತ್ರ:

ಕೂಪಮಂಡೂಕರಾಗಿರುವದು ನಮಗೆ ಬೇಕಾಗಿಲ್ಲೆಂದು ಈ ಗೊತ್ತುವಳಿಯು ಸ್ಪಷ್ಟವಾಗಿ ಸಾರುತ್ತದೆ. ಜಾಗತಿಕ ಸಂಯುಕ್ತ ಸಂಘ ಸ್ಥಾಪನೆಯೇ ನಮ್ಮ ಧ್ಯೇಯವು. ಅಹಿಂಸೆಯಿಂದಲೆ ಅದು ಸಾಧ್ಯವು. ನೀವು ಈ ಅದ್ವಿತೀಯ ಅಹಿಂಸಾಸ್ತ್ರವನ್ನು ಉಪಯೋಗಿಸಿದರೆ ಮಾತ್ರ ನಿಃಶಸ್ತ್ರೀಕರಣವು ಶಕ್ಯವಾಗುವದು. 'ಶೇಖಮಹಮ್ಮದ' ನೆಂದು ನನಗೆ ಕರೆಯುವ ಜನರೂ ಹಲವರಿರುವರು. ಆದರೆ ನಾನು ಶುದ್ಧ ವ್ಯಾಪಾರಿಯಿರುವೆನು. ಸ್ವರಾಜ್ಯ ಸಂಪಾದನೆಯೆ ನನ್ನ ನಿಜ ವ್ಯಾಪಾರ. ಈ ಗೊತ್ತುವಳಿಯನ್ನು ನೀವು ಸ್ವೀಕರಿಸದಿದ್ದರೆ ನನಗೆ ಆ ಬಗ್ಗೆ ವಿಷಾದವೆನಿಸುವದಿಲ್ಲ. ತದ್ವಿರುದ್ಧವಾಗಿ ನನ್ನ ಮೇಲೆ ನೀವು ಹೊರಿಸಲಿರುವ ಭಾರವಾದ ಹೊಣೆಯಿಂದ ನೀವು ನನ್ನನ್ನು ಮುಕ್ತ ಮಾಡಿದ್ದಕ್ಕಾಗಿ ನಾನು ಆನಂದದಿಂದ ನರ್ತನ ಮಾಡಹತ್ತುವೆ. ಧೋರಣವೆಂದೆ ಅಹಿಂಸೆಯನ್ನು ನೀವು ಸ್ವೀಕರಿಸಿರೆಂದು ನಾನು ಕೇಳಿಕೊಳ್ಳುತ್ತೇನೆ. ನನಗೆ ಅದು ಧರ್ಮ. ಆದರೆ ನಿಮ್ಮ ಮಟ್ಟಿಗೆ ನೀವು ಅದನ್ನು ಧೋರಣವೆಂದು ಸ್ವೀಕರಿಸಿರಿ. ಶಿಸ್ತಿನ ಸೈನಿಕರಂತೆ ನೀವದನ್ನು ಸಂಪೂರ್ಣವಾಗಿ ಸ್ವೀಕರಿಸಲಿಕ್ಕೆ ಬೇಕು. ಹೋರಾಟದಲ್ಲಿ ನೀವು ಸೇರಿದ ಕೂಡಲೆ ಅಕ್ಷರಶಃ ಅದನ್ನು ಪಾಲಿಸಿರಿ. ●

ಬ್ರಿಟಿಷರ ದೃಷ್ಟಿಯಲ್ಲಿ
ಚಲೇಜಾವ್ ಚಳವಳಿ

● *ಗೋವಿಂದಮೂರ್ತಿ ದೇಸಾಯಿ*

"The Englishman in India has no home and leaves no memory" (ಇಂಗ್ಲಿಷರಿಗೆ ಹಿಂದೂಸ್ಥಾನದಲ್ಲಿ ಮನೆಯಿಲ್ಲ; ನೆನಪೂ ಉಳಿಸುವುದಿಲ್ಲ). ಹೀಗೆಂದು ನುಡಿದವನು ಸರ್ ವಿಲಿಯಂ ಹಂಟರ್ ಅನ್ನುವ ಪಾದ್ರಿ. ಸಿಕ್ಕಷ್ಟು ಸತ್ವವನ್ನು ಹೀರಿ ಕಾಲ್ತೆಗೆಯಬೇಕೆಂಬ ಬ್ರಿಟಿಷರ ಒಟ್ಟಾರೆ ಇಂಗಿತ ಈ ಮಾತುಗಳಲ್ಲಡಗಿದೆ. 1947ರಲ್ಲಿ ಬ್ರಿಟಿಷರನ್ನು ಹೊತ್ತೊಯ್ದ ಹಡಗು ಮಾಜಿ ವಸಾಹತಿನ ನೆನಪನ್ನೂ ಕಡಲಲ್ಲಿ ಚೆಲ್ಲಿ ಹೋಯಿತೇನೋ.

ಆಳಿದವರಂತೂ ಆಳಿಯಾದ ಮೇಲೆ ಅಳುಕಿಲ್ಲದೆ ಕಾಲ್ಕಿತ್ತರು. ಆದರೆ ಪರತಂತ್ರದಲ್ಲಿ ಪಡಿಪಾಟಲು ಪಟ್ಟ ಭಾರತೀಯರ ನೆನಪಿನ ಪರದೆ ಹರಿಯಲು ಸಾಧ್ಯವೆ? ದುರ್ದೈವವೆಂದರೆ ಸ್ವಾತಂತ್ರ್ಯಾನಂತರ ಭಾರತ ಸರ್ಕಾರವು ಸ್ವಾತಂತ್ರ್ಯ ಚಳವಳಿಯ ಇತಿಹಾಸವನ್ನು ವ್ಯವಸ್ಥಿತವಾಗಿ ದಾಖಲಿಸುವ ಕಾರ್ಯವನ್ನು ಸಮರ್ಪಕವಾಗಿ ಮಾಡಲಿಲ್ಲ. ಆ ಚಳವಳಿಯ ಇತಿಹಾಸವೆಂದರೆ ತ್ಯಾಗ, ಬಲಿದಾನ, ಶ್ರದ್ಧೆ, ನಾಡಪ್ರೇಮದ ಪರಿಪಾಕವೇ ಸರಿ. ಇದರ ಕುರುಹುಗಳು ಆಂದೋಲನಕಾರರೊಂದಿಗೆ ಸಂಘರ್ಷಕ್ಕಿಳಿದ ಬ್ರಿಟಿಷ್ ಅಧಿಕಾರಿಗಳ ಅನುಭವಗಳ ದಾಖಲೆಗಳಲ್ಲಿಯೂ ಗೋಚರಿಸುತ್ತವೆ.

ನಲವತ್ತೆರಡರ ಚಲೇಜಾವ್ ಚಳವಳಿ ಬ್ರಿಟಿಷರ ಎದೆಗಳಲ್ಲಿ ಭಯದ ತೆರೆಗಳನ್ನೆಬ್ಬಿಸಿತ್ತು. ಅಧಿಕಾರಿಗಳಿಗೆ ತಮ್ಮ ಕೊನೆದಿನಗಳ ಅರಿವಾಗಿ

1942ರ ಚಳುವಳಿಗೂ 1947ರ ಸ್ವಾತಂತ್ರ್ಯಕ್ಕೂ ತೀರ ಹತ್ತಿರದ ಸಂಬಂಧವಿದೆ. ನಲವತ್ತೆರಡರಲ್ಲಿ ನಡೆದ ಆಂದೋಲನ ಬ್ರಿಟಿಷರಿಗೆ ಗುಡಚಾಪಿ ಕಟ್ಟಲು ಕೊಟ್ಟ ಕೊನೆಯ ಎಚ್ಚರಿಕೆ ಎನ್ನುವುದನ್ನು ಬಹುಪಾಲು ಬ್ರಿಟಿಷರು ಒಪ್ಪಿಕೊಂಡಿದ್ದಾರೆ.

ತ್ತಾದರೂ ಯುದ್ಧ ಪಿಪಾಸು ಚರ್ಚಿಲ್‌ರಂತಹ ಕೆಲವರಿಗೆ ಮಾತ್ರ ಭಾರತ ತಮ್ಮ ಮುಷ್ಟಿಯಿಂದ ಜಾರುವುದಿಲ್ಲವೆಂಬ ಭ್ರಮೆ ಇತ್ತು.

'ಭಾರತ ಬಿಟ್ಟು ತೊಲಗಿ' ಚಳವಳಿಯ ಪರಿಣಾಮವನ್ನು ಲೆಫ್ಟಿನಂಟ್ ಕರ್ನಲ್ ಎಡ್‌ವಿನ್ ಪ್ರ್ಯಾಟ್‌ನ ಮಾತುಗಳಲ್ಲಿ ಅರ್ಥೈಸುವುದಾದರೆ....

"....ನಾನು ಅದೇ ಕಲಕತ್ತೆಗೆ ಬಂದಿದ್ದೆ. ಚೌರಂಗಿ ಸೇತುವೆಯ ಮೇಲೆ ನಡೆದು ಹೋಗುವಾಗ ನಮ್ಮೆದುರಿಗೆ ಯಾರಾದರೂ ಭಾರತೀಯರು ಬಂದರೆ, ನಮಗಾಗಿ ಅತ್ತ ಸರಿದು ದಾರಿ ಬಿಡುತ್ತಿದ್ದರು. ಕಾಲ ಪರಿವರ್ತನೆಯಾಯ್ತು. ಈಗ ಆ ಸೇತುವೆ ಮೇಲೆ ನಡೆದಾಡುವಾಗ ನಾವೇ ಅವರಿಗೆ ಹಾದಿಬಿಡಬೇಕಾಗಿದೆ."

ಇದು ಭಾರತೀಯರಲ್ಲಿ ಮೊಳೆತ ಆತ್ಮವಿ

ಶ್ವಾಸ, ಆತ್ಮ ಗೌರವವನ್ನು ಬಿಂಬಿಸುತ್ತದೆ. ಈ ವ್ಯತ್ಯಂತರವನ್ನು ಸರಳ ನಿದರ್ಶನದ ಮೂಲಕ ದಾಖಲಿಸಿದ ಎಡ್‌ವಿನ್ ಸ್ವಾತಂತ್ರ್ಯನಂತರವೂ ಕೆಲಕಾಲ ಭಾರತ ಸರ್ಕಾರದ ಸೇವೆಯಲ್ಲಿದ್ದನು.

ಫೋರ್ಲಲ್ ಎಂಬ ಐರಿಷ್ ದಾದಿ ಚಳವಳಿಯನ್ನು ಮೆಲಕು ಹಾಕುತ್ತಾ, "ದ್ವಿತೀಯ ಜಾಗತಿಕ ಯುದ್ಧದ ವೇಳೆಯಲ್ಲಿ ಸೈಕಲ್ ತುಳಿದುಕೊಂಡು ಆಸ್ಪತ್ರೆಗೆ ಹೊರಟಿದ್ದೆ. ದಾದಿಯ ಸಮವಸ್ತ್ರದಲ್ಲಿದ್ದ ನನ್ನೆದುರು ಸಹಸ್ರಾರು ಯುವಕರು "ಬ್ರಿಟಿಷರೇ ನಿಮ್ಮ ದೇಶಕ್ಕೆ ತೊಲಗಿರಿ" ಎಂದು ಘೋಷಿಸುತ್ತ ಬರುತ್ತಿದ್ದರು. ಇಷ್ಟು ದೊಡ್ಡ ಮತಪ್ರದರ್ಶನವನ್ನು ಈ ಹಿಂದೆ ನಾನೆಂದೂ ನೋಡಿರಲಿಲ್ಲ. ನಾನು ತಲೆಯನ್ನು ತಗ್ಗಿಸಿ ಗಂಟೆ ಬಾರಿಸುತ್ತ ಅವರ ನಡುವೆ ಹಾದುಹೋದೆ! ನನ್ನನ್ನು ತಡೆಯಲೂ ಇಲ್ಲ, ಅಗೌರವವನ್ನೂ ತೋರಲಿಲ್ಲ" ಎಂದು ನೆನಪಿಸಿಕೊಂಡಿದ್ದಾಳೆ. ಭಾರತೀಯರ ದ್ವೇಷ ಸಾಮ್ರಾಜ್ಯಶಾಹಿಗಳ ವಿರುದ್ಧವಿತ್ತೇ ವಿನಾ ಸರ್ಕಾರಿ ಅಧಿಕಾರಿಗಳ ವಿರುದ್ಧವಲ್ಲ. ಕೆಲ ಬ್ರಿಟಿಷ್ ಅಧಿಕಾರಿಗಳ ಕೊಲೆಯಾದುವಾದರೂ ಅವು ವಿರಳ!

ಯುದ್ಧ ಆರಂಭವಾಗಿ ಬ್ರಿಟಿಷರು ಸೋಲಿನಂಚಿಗೆ ತೆವಳದಾಗಲಂತೂ ಬ್ರಿಟಿಷ್ ಅಧಿಕಾರಿಗಳು ಚಳವಳಿಯನ್ನು ಹತ್ತಿಕ್ಕುವ ಕ್ರೂರ ವಿಧಾನಗಳನ್ನು ಅನುಸರಿಸಲಿಲ್ಲ. ಲೆಫ್ಟಿನೆಂಟ್ ಕರ್ನಲ್ ಜಾನ್ ವೆಟ್ ಕಾನಾರ್ಕ್ ಅಭಿಪ್ರಾಯ ಹೀಗಿದೆ:

"ನನ್ನೆದುರು 'ಮಹಾತ್ಮಾ ಗಾಂಧೀಜೀ ಕೀ ಜೈ' ಎನ್ನಲು ಯಾರನ್ನೂ ಬಿಡುತ್ತಿರಲಿಲ್ಲ. ಯಾರಾದರೂ ಹೀಗೆ ಕೂಗಿದರೆ ಅವರ ಹಿಂಭಾಗಕ್ಕೆ ಐದು ಲಘು ಬೆತ್ತಪ್ರಹಾರ ಮಾಡಿ ಬಿಟ್ಟುಬಿಡುತ್ತಿದ್ದೆ. ನನ್ನೆದುರು ಸತ್ಯಾಗ್ರಹಿಗಳು ಬಂದರೆ ಬಿಮ್ಮನೆ ಅಂಜಿಸಿ ಕಳುಹಿಸುತ್ತಿದ್ದೆ. ಚಳವಳಿ ನಡೆದಾಗ ತಲೆಗೆ ಹೆಲ್ಮೆಟ್ ಹಾಕಿಕೊಂಡು, ಅಷ್ಟ ಎತ್ತರದ ಬೂಟನ್ನು ಧರಿಸಿ, ಸಮವಸ್ತ್ರ ತೊಟ್ಟು, ಸೊಂಟದ ಎರಡೂ ಬದಿಗೆ ಪಿಸ್ತೂಲುಗಳನ್ನು ಸಿಕಬಿಟ್ಟುಕೊಂಡು ಸತ್ಯಾಗ್ರಹಿಗಳನ್ನು ಅಂಜಿಸುವುದು ನನಗೆ ಮೋಜೆನಿಸುತ್ತಿತ್ತು. 'ವಂದೇ ಮಾತರಂ' ಹಾಡುತ್ತ ಎದುರಾಗುವವರನ್ನು ನಿಲ್ಲಿಸಿ ಅವರ ಕೈಯಲ್ಲಿಯ ಫಲಕ, ರಾಷ್ಟ್ರಧ್ವಜಗಳನ್ನು ಕಿತ್ತುಕೊಳ್ಳಲು ಪೊಲೀಸರಿಗೆ ಸೂಚಿಸುತ್ತಿದ್ದೆ. ಅನಂತರ ಹೊರಡಲು ತಿಳಿಸಿದರೆ ಕೆಲವು ಹಠಮಾರಿ ಧುರೀಣರು ಒಪ್ಪುತ್ತಿರಲಿಲ್ಲ. ಆಗ ಒಬ್ಬೊಬ್ಬರನ್ನು ಮುಂದೆ ಕರೆದು ಕಪಾಳಕ್ಕೆರಡು ಬಿಗಿಯುತ್ತಿದ್ದೆ. ಇದನ್ನು ನೋಡಿದ ಇತರರು ತಾವೇ ಕಾಲು ಕೀಳುತ್ತಿದ್ದರು. ಹೀಗೆ ಅಂಜಿ ಹೋಗುವವರಲ್ಲಿ ಹಿಂದೂ ಸತ್ಯಾಗ್ರಹಿಗಳೇ ಅಧಿಕ. ಮುಸಲ್ಮಾನ ಗುಂಪಿನವರನ್ನು ಹೀಗೆ ಹೆದರಿಸುವುದು ಗಂಡಾಂತರಕಾರಿ ಎನ್ನಿಸುತ್ತಿತ್ತು. ನಾನು ಹಿಂದೂ ಸತ್ಯಾಗ್ರಹಿಗಳನ್ನು ಹೀಗೆ ಅವಮಾನ ಮಾಡಿದ್ದಕ್ಕೆ ಅವರು ನನ್ನನ್ನು ಕೊಲ್ಲಬಹುದೆಂದು ನನಗನ್ನಿಸಲೇ ಇಲ್ಲ." ಲೆಫ್ಟಿನೆಂಟ್ ಕರ್ನಲ್ ಹಿಂದೂ ಆಂದೋಲನಕಾರರ ಮೇಲೆ ತನಗಿದ್ದ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾನೆ. ಆಂದೋಲನಕಾರರನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಂಡವರೆಂದರೆ ಭಾರತೀಯ ಅಧಿಕಾರಿಗಳೇ! ಬಹುಪಾಲು ಅಧಿಕಾರಿಗಳಿಗೆ ಚಳವಳಿಗಾರರನ್ನು ಹಿಂಸಿಸಿ ಪ್ರಭುಗಳಿಂದ 'ಬಹುದ್ದೂರಕಿ' ಪಡೆವ ಹಂಬಲ.

ಚಲೇಜಾವ್ ಚಳವಳಿ ಬಗ್ಗೆ ಐ.ಸಿ.ಎಸ್. ಅಧಿಕಾರಿ ಹ್ಯೂಬರ್ಟ್ ಇವಾನ್ಸ್ ಬರೆಯುತ್ತಾನೆ: "ಗಾಂಧೀಜಿ ಪ್ರಭುತ್ವವಿರೋಧಿ ಚಟುವಟಿಕೆಗಳನ್ನು ನಿಲ್ಲಿಸಿದರೆ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವೆವೆಂಬ ಸರ್ಕಾರದ ಸಂದೇಶವನ್ನು ಕ್ರಿಪ್ಸ್ ತಂದರು. ಈ ಪೊಳ್ಳು ಆಶ್ವಾಸನೆಯನ್ನು 'a post dated cheque on a failing Bank' ಎಂದು ಬಣ್ಣಿಸಿ ಕೊಡುಗೆಯನ್ನು ತಿರಸ್ಕರಿಸಿದರು ಗಾಂಧೀಜಿ. ಇದೇ ಸಲಹೆಯನ್ನು ನಾವು ಯುದ್ಧದಲ್ಲಿ ಕುಸಿಯುವ ಮುಂಚೆಯೇ (1939 ಸೆಪ್ಟೆಂಬರ್) ಮಾಡಿದ್ದರೆ ಗಾಂಧೀಜಿ ಒಪ್ಪುತ್ತಿದ್ದರು. ಆಗ ಪಾಕಿಸ್ತಾನದ ಮಾತೂ ಕೇಳಿಬರುತ್ತಿರಲಿಲ್ಲ. ಕ್ರಿಪ್ಸ್‌ರ ಮಾತಿಗೆ ಗಾಂಧೀಜಿ, 'ನನಗೆ ಬೆಳಗು ಹರಿಯುವ ಮುನ್ನವೇ ಸ್ವಾತಂತ್ರ್ಯ

ಬೇಕಿದೆ' ಎಂದು ಸ್ಪಷ್ಟಪಡಿಸಿದರು.

''ಜನರ ಗುಂಪುಗಳು 250ಕ್ಕೂ ಮಿಕ್ಕಿ ರೈಲು ನಿಲ್ದಾಣಗಳನ್ನು ಸುಟ್ಟವು; ಅಷ್ಟೇ ಚಾವಡಿಗಳು ಅಗ್ನಿಗಾಹುತಿಯಾದವು. ನೂರೈವತ್ತು ಪೊಲೀಸ್ ಚೌಕಿಗಳು ಸುಟ್ಟುಬೂದಿಯಾದವು. ಕೆಲಕಾಲ ಬಂಗಾಲ ಮತ್ತು ಅಸ್ಸಾಂಗಳು ಭಾರತದಿಂದ ಕಡಿದುಹೋಗಿದ್ದವು. ಮಧ್ಯ ಪ್ರಾವಿನ್ಸ್ ಮತ್ತು ದಿಲ್ಲಿ ತುಂಬಾ ಘಾಸಿಗೊಂಡಿದ್ದವು. ವರ್ಧಾದ ಗಾಂಧಿ ಆಶ್ರಮದಲ್ಲಿ ಮಾತ್ರ ಅಹಿಂಸೆಯಿತ್ತು. ಇದರ ಸಮೀಪದ ಚಿಮಾರದಲ್ಲಿ ಸಬ್-ಡಿವಿಜನಲ್ ಮ್ಯಾಜಿಸ್ಟ್ರೇಟ್, ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ನಾಯಿಬ್ ತಹಶೀಲ್ದಾರ್, ಚಪ್ರಾಸಿ ಕಾಂಗ್ರೆಸ್ ಸೇರಲು ನಿರಾಕರಿಸಿದ್ದರಿಂದ ಆಂದೋಲನಕಾರರು ಅವರನ್ನು ಕೊಂದು ರಕ್ತದ ಮಡುವಿನಲ್ಲಿ ಹಾಕಿಹೋದರು. ಪೊಲೀಸರ ಮತ್ತು ನಾಗರಿಕ ಅಧಿಕಾರಿಗಳ ಸ್ವಾಮಿನಿಷ್ಠೆ ಪ್ರಶಂಸನೀಯವಾಗಿತ್ತು. ಇಪ್ಪತ್ತು ವರ್ಷ ಕಲೆಕ್ಟರರೆಂದು ದುಡಿದ ನಮಗೆ ಅಧೀನ ಅಧಿಕಾರಿಗಳಲ್ಲಿ ಪೂರ್ಣ ವಿಶ್ವಾಸವಿತ್ತು. ಇವರೆಲ್ಲ ಗಾಂಧೀಜಿಯ ಕರೆಗೆ ಓಗೊಟ್ಟು ತಾವು ತಿಂದ ಉಪ್ಪಿಗೆ ತಿರುಗಿ ಬಿದ್ದಿದ್ದರೆ ನಮ್ಮ ನಾಶವಾಗುತ್ತಿತ್ತು.''

ಕಾಂಗ್ರೆಸ್ ಮುಖಂಡರು ಹಾಗೂ ಬ್ರಿಟಿಷ್ ಅಧಿಕಾರಿಗಳ ನಡುವೆ ಅಲ್ಪ ಸ್ವಲ್ಪ ಅಪವಾದ ಬಿಟ್ಟರೆ ಸೌಹಾರ್ದಯುತ ಸಂಬಂಧವಿತ್ತು. ಮುಂಬೈ ಗವರ್ನರರ ಕಾರ್ಯದರ್ಶಿ ಡೇವಿಡ್ ಸಿಮಿಂಗ್ಟನ್, ''ಚಲೇಜಾವ್ ಚಳವಳಿ ಉಗ್ರವಾದಂತೆ ಪೊಲೀಸರು ಮತ್ತು ರಾಷ್ಟ್ರನಾಯಕರ ಮಧ್ಯೆ ತಿಕ್ಕಾಟವಿದ್ದರೂ ಉಳಿದ ಕಾಲದಲ್ಲಿ ಇಬ್ಬರ ನಡುವೆ ತಿಳುವಳಿಕೆ ಇರುತ್ತಿತ್ತು. ಅನೇಕ ಪೊಲೀಸ್ ಅಧಿಕಾರಿಗಳು ರಾಷ್ಟ್ರನಾಯಕರ ಸ್ನೇಹಿತರಂತೆಯೇ ಇದ್ದರು. ನಾನು ಸೊಲ್ಲಾಪುರದಲ್ಲಿದ್ದಾಗ ಒಬ್ಬ ಕಾಂಗ್ರೆಸ್ ನಾಯಕರು ನನ್ನ ಬಳಿ ಬಂದು ಗುಡ್‌ಬೈ ಹೇಳಿಹೋದರು. ಆಗ ಅವರು ಸತ್ಯಾಗ್ರಹ ಮಾಡಿ ಬಂಧನಕ್ಕೊಳಗಾಗಿದ್ದರಿಂದ ಸಂತೋಷಗೊಂಡಿದ್ದರು!'' ಎಂದು ಮುಖಂಡರ ಸ್ವಭಾವವನ್ನು ಚಿತ್ರಿಸಿದ್ದಾರೆ.

ಅನೇಕ ಮುಖಂಡರು ಭೂಗತರಾಗಿ ವಿಧ್ವಂಸ[ಕ] ಚಟುವಟಿಕೆ ನಡೆಸುವ ಬದಲು ಸೆರೆಮನೆ ಸೇ[ರಿ] ಸುರಕ್ಷಿತರಾಗಿರಬಯಸುತ್ತಿದ್ದರು. ಅಂಥ ಅಪ[ಾ]ಯಗಳಿಗೆಲ್ಲ ಕಾರ್ಯಕರ್ತರು ಧೈರ್ಯಗು[ಂ]ದದೆ ಎದೆಯೊಡ್ಡುತ್ತಿದ್ದರು.

ಎಫ್. ಸಿ. ಹರ್ಟ್ ಎಂಬ ಪೊಲೀಸ್ ಅಧಿಕಾ[ರಿ]ರಿಯ ಅಭಿಪ್ರಾಯ ಹೀಗಿದೆ: ''ಹಲವಾರು ಕಾಂಗ್ರೆಸ್ ಮುಖಂಡರು ಸೆರೆಮನೆ ಸೇರಬಯಸುತ್ತಿದ್ದರು. ತಮ್ಮ ಭವಿಷ್ಯದ ರಾಜಕೀಯ ಬದುಕು ಈಗ ಸೆರೆಮನೆ ಸೇರುವುದನ್ನೇ ಅವಲಂಬಿಸಿ[ದೆ] ಯೆಂಬುದು ಅವರ ಭಾವನೆಯಾಗಿತ್ತು. ನಾನೊಮ್ಮೆ ಸಾವಿರಾರು ಸತ್ಯಾಗ್ರಹಿಗಳನ್ನು ಬಂಧಿಸಿ ಸೆರೆಮನೆಗೆ ಕಳಿಸದೆ, ನಗ್ನಗೊಳಿಸಿ ಬೇ[ರೆ] ಕಡೆ ಬಿಟ್ಟಾಗ ಅವರಿಗೆ ತುಂಬಾ ಕೆಡುಕೆನಿಸಿತ್ತು.''

ಜಾಗತಿಕ ಯುದ್ಧದಲ್ಲಿ ಮಲೇಶಿಯಾ[,] ಬರ್ಮಾಗಳನ್ನು ಕಳೆದುಕೊಂಡ ಬ್ರಿಟಿಷರಿಗ[ೆ] ಭಾರತವೂ ಜಪಾನಿಯರ ಕೈವಶವಾಗಬಹು[ದೆ]ದೆಂಬ ಭೀತಿ ಬಂದುದರಿಂದ 1942ರ ಚಳವಳ[ಿ] ಅತ್ಯಂತ ಕಿರಿ ಕಿರಿ ಉಂಟುಮಾಡಿತು. ಒಬ್ಬ ಬ್ರಿಟಿಷ್ ಅಧಿಕಾರಿ, ''ನಾವೇನೋ ಭಾರತದಲ್ಲಿ ಹಲವಾರು ಸುಧಾರಣೆಗಳನ್ನು ಮಾಡಿದ್ದೇವೆ. ಆದರೆ ಅವ್ಯಾವೂ ಭಾರತದ ನೆಲಕ್ಕನುಗುಣವಾ[ಗಿ]ಗಿಲ್ಲ. ಭಾರತೀಯ ಸಂಪ್ರದಾಯ ವಿಚಾರಗ[ಳ]ನ್ನು ಗಣನೆಗೆ ತೆಗೆದುಕೊಂಡಿಲ್ಲ. ಮುಖ್ಯವಾಗಿ ರೈತನ ಆರ್ಥಿಕ ಪರಿಸ್ಥಿತಿ ಸುಧಾರಿಸಲು ನಾವು ಏನನ್ನೂ ಮಾಡಿಲ್ಲ. ಬುದ್ಧಿವಂತ ಭಾರತೀಯ[ರ]ರಿಗೆ ತಾವಿದನ್ನು ಮಾಡಬೇಕನ್ನಿಸುತ್ತದೆ.... ಅದನ್ನು ಸಾಧಿಸಲು ಭಾರತೀಯರಿಗೆ ನಾವು ಅಧಿಕಾರವನ್ನು ಹಸ್ತಾಂತರಿಸಬೇಕು'' ಎಂದು ಪ್ರಾಂಜಲವಾಗಿ ನುಡಿದಿದ್ದಾನೆ.

1942ರ ಚಳುವಳಿಗೂ 1947ರ ಸ್ವಾತಂತ್ರ್ಯಕ್ಕೂ ತೀರ ಹತ್ತಿರದ ಸಂಬಂಧವಿದೆ. ನಲವತ್ತೆರಡರಲ್ಲಿ ನಡೆದ ಆಂದೋಲನ ಬ್ರಿಟಿಷರಿಗೆ ಗುಡಚಾಪಿ ಕಟ್ಟಲು ಕೊಟ್ಟ ಕೊನೆಯ ಎಚ್ಚರಿಕೆ ಎನ್ನುವು[ದ]ದನ್ನು ಬಹುಪಾಲು ಬ್ರಿಟಿಷರು ಒಪ್ಪಿಕೊಂಡಿ[ದ್ದಾರೆ]ದ್ದಾರೆ.

ವಿದ್ವಾಂಸ ಮತ್ತು ಗೂಬೆ

ಮ್ಯೋದ ಒಬ್ಬ ವಿದ್ವಾಂಸರಿಗೆ ಪಕ್ಷಿಭಾಷೆ ತಿಳಿದಿತ್ತು. ಅವರಿಗೊಮ್ಮೆ ಎದುರಾದ ಮುದಿಗೂಬೆಯ ಜೊತೆ ಮಾತನಾಡಬೇಕೆಂಬ ಇಚ್ಛೆಯಾಯಿತು. ಅವರಿಬ್ಬರ ಸಂಭಾಷಣೆ ಹೀಗಿತ್ತು.

ವಿದ್ವಾಂಸ: ನೀನೇಕೆ ಸುವ್ಯವಸ್ಥಿತ ಕಟ್ಟಡದ ಮೇಲೆ ಕುಳಿತುಕೊಳ್ಳುವುದಿಲ್ಲ?

ಗೂಬೆ: ಅದು ಅಶಾಶ್ವತ. ಈ ವೈಭವದ ಕಟ್ಟಡಗಳು ಇಂದಲ್ಲ ನಾಳೆ ನಾಶವಾಗಿ ಹೋಗುತ್ತವೆ.

ವಿದ್ವಾಂಸ: ಪಾಳುಬಿದ್ದ ಸ್ಥಳಗಳಲ್ಲಿ ನೀನೇಕೆ ಕೂಗುತ್ತಿರುವೆ?

ಗೂಬೆ: ನಾನು ಹಿಂದಿನ ಅರಸರನ್ನೂ, ಆಡಳಿತಗಾರರನ್ನೂ, ಶ್ರೀಮಂತರನ್ನೂ ಸ್ಮರಿಸಿ ಕೂಗುವೆ. ಒಂದು ಕಾಲದಲ್ಲಿ ಸುಖಭೋಗದಲ್ಲಿ ಮೆರೆದ ಅವರು ಹೇಗೆ ಹೇಳ ಹೆಸರಿಲ್ಲದೆ ನಾಶವಾದರು? ಹೀಗಾಗುವುದೆಂದು ಅವರು ಯೋಚಿಸಿದ್ದರೆ? ಅವರ ಈ ಸ್ಥಿತಿಗೆ ಮರುಕಗೊಂಡು ಕೂಗುತ್ತಿರುವೆ.

ವಿದ್ವಾಂಸ: ನೀನು ಮನೆಯ ಎದುರು ಏನೋ ಆಲಾಪ ಮಾಡುವೆಯಲ್ಲ?

ಗೂಬೆ: ನಾನು ಆ ಮನೆಯವರನ್ನು ಎಚ್ಚರಿಸುತ್ತೇನೆ; ಬದುಕನ್ನು ನಿರ್ಲಕ್ಷ್ಯ ಮಾಡಬೇಡಿ. ನಿಮ್ಮ ಮರಣ ಹತ್ತಿರಬರುತ್ತಿದೆ. ಪಾಪದಿಂದ ದೂರವಿರಿ. ಸನ್ಮಾರ್ಗದಲ್ಲಿ ನಡೆಯಿರಿ ಎಂದು.

ವಿದ್ವಾಂಸ: ಗೂಬೆಯೇ, ಹಗಲಿನಲ್ಲಿ ನೀನೇಕೆ ಹೊರಬರುವುದಿಲ್ಲ?

ಗೂಬೆ: ಈ ಜಗತ್ತಿನ ಜನರು ಮಾಡುವ ಅನ್ಯಾಯ, ಅಕ್ರಮ, ದೌರ್ಜನ್ಯಗಳನ್ನು ನನ್ನಿಂದ ನೋಡಲು ಸಾಧ್ಯವಿಲ್ಲ. ಅವರ ಅನಾಗರಿಕತೆಗಿಂತ ಈ ಪಾಳು ವಾಸವೇ ಉತ್ತಮ.

ವಿದ್ವಾಂಸ: ಹಗಲು ಹೊತ್ತಿನಲ್ಲಿ ನೀನೇನು ಮಾಡುವೆ?

ಗೂಬೆ: ಹಗಲಲ್ಲಿ ನಾನು ಈ ಲೋಕದ ಕ್ಷೇಮಕ್ಕಾಗಿ ದೇವರಲ್ಲಿ ಪ್ರಾರ್ಥಿಸುವೆನು. ದುರ್ಮಾರ್ಗಿಗಳ ಬದುಕನ್ನು ಇನ್ನಾದರೂ ಯುಕ್ತಿನ ಕಡೆಗೆ ಸಾಗಿಸು ಎಂದು ಬೇಡುತ್ತೇನೆ.

● ಇಂದಾನ್ ಮೂಡುಬಿದಿ,

ಆಸೆ

ತಮಿಳು ಮೂಲ: **ಪ್ರಪಂಚನ್**

ಕನ್ನಡಾನುವಾದ: **ಕೋಲಾರ ಕೃಷ್ಣ ಅಯ್ಯರ್**

ಆತ ಹೊರಗೆ ಹೊರಡಲೆಂದು ಚಪ್ಪಲಿ ಮೆಟ್ಟುತ್ತಿದ್ದಾಗ ಅಮ್ಮ ಬಾಯಿ ಹಾಕಿದಳು,

''ಒಮ್ಮೆ ಅವರ ಮನೆಗೆ ಹೋಗಿ ವಿಷಯ ತಿಳಿಸಿಬಂದರೆ ಚೆನ್ನಾಗಿರುತ್ತೆ....ಅಲ್ಲವೆ?''

''ಅವರೆಂದರೆ ಯಾರಮ್ಮಾ?'' ಮೂರ್ತಿ ಕೇಳಿದ.

''ಅವರೇ....ಎಲ್ಲೊ ಐವತ್ತು ರೂಪಾಯಿ ಸಾಲಸೋಲ ಮಾಡಿ ನಿನಗೆ 'ಸೊಜ್ಜಿ-ಬಜ್ಜಿ' ಚಿಡಿಸಿ ಹುಡುಗಿಯನ್ನು ತೋರಿಸಲಿಲ್ಲವೆ.... ಅವರೇ'' ಎಂದಳು ನಗುತ್ತಾ.

''ಅವರಿಗೆ ಏನು ಹೇಳಬೇಕಂತೀಯಾ ಅಮ್ಮಾ?''

''ಈ ಸಂಬಂಧ ನಮಗೆ ಒಪ್ಪಿಗೆಯಿಲ್ಲ ಎಂದು ತಾನೆ ಹೇಳಬೇಕು....ಅಷ್ಟೇ....ಅವರು ಬೇರೆ ಸಂಬಂಧವನ್ನಾದರೂ ನೋಡಿಕೊಳ್ಳುತ್ತಾರೆ, ಅಲ್ಲವೆ? ಪಾಪ ಆ ಹುಡುಗಿ ನಿನ್ನ ಮೇಲೆ ಆಸೆಯಿಟ್ಟುಕೊಂಡು ಕೂತಿದೆಯೋ ಏನೋ!''

''ಈ ವಿಷಯ ಹೇಳಲು ನಾನು ಹೋಗುವುದೇನು ಚೆನ್ನಾಗಿರುತ್ತಮ್ಮಾ....ಒಂದು ಕಾರ್ಡ್ ಬರೆದು ಹಾಕಿದರೆ ಸಾಕು'' ಮೂರ್ತಿ ಅಯೋಮಯವಾಗಿ ನೋಡುತ್ತಾ ಹೇಳಿದ.

''ಯಾರೋ ಮೂಗು-ಮೂತಿ ತಿಳಿಯದವರಾಗಿದ್ದರೆ ನೀನು ಹೇಳಿದಂತೆ ಕಾರ್ಡ್ ಹಾಕಿ ಕೈತೊಳೆದುಕೊಳ್ಳಬಹುದಿತ್ತು. ಆದರೆ ಇವರು ನಮ್ಮ ಬಂಧುಗಳಲ್ಲವೇ? ನಾನಾದರೋ ಹೆಣ್ಣು ಹೆಂಗಸು. ಮನೆಯಲ್ಲಿ ಗಂಡಸು ನೀನೊಬ್ಬನೇ. ನೀನು ತಪ್ಪದೇ ಹೋಗಿ ಬಾ.''

ಅಮ್ಮನ ಮಾತು ಧೋರಣೆ ಆತನಿಗೆ ಅಪರಿಚಿತವೇನಲ್ಲ. ಸಾಮಾನ್ಯವಾಗಿ ಅಮ್ಮ ಆಜ್ಞಾಪಿಸುವುದಿಲ್ಲ. ಆರ್ಡರ್ಸ್ ಹಾಕದೇ ಮಾತುಗಳಿಂದಲೇ ಕಟ್ಟಿಹಾಕಿ ಕೆಲಸ ಮಾಡಿಸುವುದು ಅಮ್ಮನ ವೈಶಿಷ್ಟ್ಯ.

> "ಪ್ರತಿ ಸಲ ರೇಶ್ಮೆ ಸೀರೆ ಉಟ್ಟು ಬೆಳ್ಳಿ ತಟ್ಟೆಯಲ್ಲಿ ತಾಂಬೂಲ ಕೊಡುವುದು, ನಾಚಿಕೆಯಿಂದ ನೆಲ ನೋಡುತ್ತ ನಿಲ್ಲುವುದು ಇವೆಲ್ಲ ಇನ್ನು ಮುಂದೆ ನನ್ನಿಂದಾಗುವುದಿಲ್ಲ..." ಎಂದಳು ಸುಗುಣ.

ಎಲ್ಲಾ ಅಮ್ಮಂದಿರು ಹೀಗೇ ಇರುತ್ತಾರೆಯೋ? ಸೋಮುಮಾವನ ನೆಂಟನೆಂಬ ಮುಲಾಜನ್ನೂ ಹಿಡಿಯದೆ, "ಐವತ್ತು ರೂಪಾಯಿ ಸಾಲ ತಂದು 'ಸೊಜ್ಜೆ-ಬಜ್ಜಿ' ಬಡಿಸಿದ ಮನುಷ್ಯ" ಎಂದು ಗೇಲಿಯಾಡುವುದು, "ಪಾಪ ಆ ಹುಡುಗಿ" ಎಂದು ಸಹಾನುಭೂತಿ ತೋರಿಸುವುದು ಇದನ್ನೆಲ್ಲ ಏನೆಂದು ತಿಳಿದುಕೊಳ್ಳಬೇಕು? ಸ್ತ್ರೀಜಾತಿಯ ಬಲಹೀನತೆಯೋ ಅಥವಾ ಅಜ್ಞಾತ ಶತ್ರುತ್ವವೋ?! ಒಬ್ಬ ಸ್ತ್ರೀಯ ಪತನ ಅಥವಾ ದುಃಸ್ಥಿತಿಗೆ ಮತ್ತೊಬ್ಬ ಸ್ತ್ರೀ ಪರೋಕ್ಷವಾಗಿಯೋ, ಪ್ರತ್ಯಕ್ಷವಾಗಿಯೋ ಕಾರಣಳಾಗುತ್ತಾಳೆ. ಇದೆಲ್ಲ ಏನು?

ಮೂರ್ತಿ ಧರ್ಮಸಂಕಟಕ್ಕೆ ಗುರಿಯಾದ. ತನ್ನಿಷ್ಟಕ್ಕೆ ವಿರುದ್ಧವಾಗಿ ಸುಗುಣಳ ಮನೆಗೆ ಹೋಗಿ ಬೇಜಾರು ಪಟ್ಟುಕೊಳ್ಳುತ್ತಲೇ ಬಾಗಿಲು ತಟ್ಟಿದ. ಅಮ್ಮನ ಆದೇಶದ ಮೇರೆಗೆ ಆ ಹುಡುಗಿಯನ್ನು ಮದುವೆಯಾಗುವುದಿಲ್ಲವೆಂದು ಅವಳ ತಂದೆಗೆ ಹೇಳಬೇಕು. ಮನದಲ್ಲಿ ಕಸಿವಿಸಿಯಾಯ್ತು. ಯಾರೋ ಗುಂಡಿಗೆಯನ್ನು ಹಿಂಡಿದಂಥ ಅನುಭವ. ಬಾಗಿಲು ತೆರೆದುಕೊಳ್ಳುವಷ್ಟರಲ್ಲೇ ತಾನು ಅಲ್ಲಿಂದ ಪಲಾಯನ ಮಾಡಿದರೆ ಚೆನ್ನಾಗಿರುತ್ತದೆಂದು ಎಣಿಸಿದ. ಆದರೆ ಹಾಗೆ ಮಾಡಲಾಗಲಿಲ್ಲ. ಅಂಥ ಅವಕಾಶ ಒದಗಿಸದೆ ಬಾಗಿಲು ತೆಗೆದುಕೊಂಡಿತು. ಎದುರಿಗೆ ಸುಗುಣ ಕಾಣಿಸಿದಳು.

"ಓ..ಹೋ..ನೀವಾ! ಒಳಗೆ ಬನ್ನಿ. ಅಪ್ಪ ಈಗ ತಾನೆ ಹೊರಗೆ ಹೋದರು. ಇನ್ನೇನು ಬಂದುಬಿಡುತ್ತಾರೆ. ನೀವು ಒಳಗೆ ಕುಳಿತುಕೊಳ್ಳಿ." ಎಂದಳು ಸುಗುಣ - ಬಂದ ದಿಕ್ಕಿನಲ್ಲೇ ಹಿಂದಿರುಗುತ್ತ.

ಮೂರ್ತಿಯ ಮನಸ್ಥಿತಿ ಆತನ ನಡವಳಿಕೆಯಲ್ಲಿ ಎದ್ದು ಕಾಣುತ್ತಿತ್ತು. ಹೊರಗಿನ ಜಗುಲಿ ಬಹಳ ಚಿಕ್ಕದು. ಒಂದು ಚಿಕ್ಕ ಚಾಪೆ ಹಾಸಬಹುದಿತ್ತು. ಸುಗುಣ ಎಡಗಡೆಯ ಸಣ್ಣ ಕೋಣೆಯೊಳಕ್ಕೆ ಹೋದಳು. ಮೂರ್ತಿ ಸಹ ಸಂಕೋಚದಿಂದ ನಿಧಾನವಾಗಿ ಅವಳನ್ನು ಅನುಸರಿಸಿ ಒಳಹೋದ. ಹಳೆಯ ಕಾಲದ ಕುರ್ಚಿಯೊಂದನ್ನು ತೋರಿಸುತ್ತ, "ಕೂತುಕೊಳ್ಳಿ" ಎಂದಳು ಸುಗುಣ, ವಿನಯದಿಂದ. ಮೂರ್ತಿ ಕೂತುಕೊಂಡ. ಅಲ್ಲಿಂದ ಅಡುಗೆಮನೆ ಶುಭ್ರವಾಗಿ ಕಾಣುತ್ತಿತ್ತು. ಗೋಡೆಗೆ ಹೊಡೆದ ಸ್ಟ್ಯಾಂಡ್‌ನಲ್ಲಿ ವಿವಿಧ ಪಾತ್ರೆಗಳು, ಗ್ಲಾಸುಗಳು ಅಚ್ಚುಕಟ್ಟಾಗಿ ಜೋಡಿಸಲ್ಪಟ್ಟಿದ್ದವು. ಒಂದು ಮೂಲೆಯಲ್ಲಿ ಚಿಕ್ಕ ಸ್ಟೂಲ್. ಅದರ ಮೇಲೆ ಟ್ರಾನ್ಸಿಸ್ಟರ್. ಸೊಗಸಾಗಿ ನೇಯ್ದ, ಮಲ್ಲಿಗೆಯಷ್ಟು ಬಿಳುಪಾದ ಹೊದಿಕೆ ಟ್ರಾನ್ಸಿಸ್ಟರ್‌ನ್ನು ಬಳಸಿತ್ತು. ಯಾರೋ ಗಾಯಕಿ ಅತಿ ಮಧುರವಾಗಿ ಹಾಡುತ್ತಿದ್ದಾಳೆ. ಗೋಡೆಯ ಮೇಲೆ ಒಂದು ಕ್ಯಾಲೆಂಡರ್ ಹಾಗೂ ಒಂದು ಫೋಟೋ ತೂಗಾಡುತ್ತಿದ್ದವು. ಫೋಟೋ ಸೋಮುಮಾಮಾನ ಕುಟುಂಬದ್ದು. ಅದರಲ್ಲಿ ಮಾವ, ಅತ್ತೆ, ಸುಗುಣ - ಮೂವರೇ. ಆ ಮನೆಗೆ ಇನ್ನೂ ಟಿ.ವಿ. ಪ್ರವೇಶಿಸಿರಲಿಲ್ಲ. ಮನೆಯಲ್ಲಿ ಬಡತನದ ಛಾಯೆ ಸ್ಪಷ್ಟವಾಗಿ ಕಾಣುತ್ತಿತ್ತು. ಹಾಗೆಂದು ಮನೆಯ ಸೊಗಸು, ಸೌಂದರ್ಯಗಳು ಭಂಗಗೊಂಡಿರಲಿಲ್ಲ. ಅಲ್ಲಿ ಕೊಳಕಿನ ಸುಳಿವೇ ಇರಲಿಲ್ಲ. ಇದ್ದ ವಸ್ತುಗಳೆಲ್ಲ ಸೌಂದರ್ಯ, ಆಕರ್ಷಣೆ ತೋರುತ್ತಿದ್ದವು. ಕನ್ಯೆ ನೋಡಲು ಬಂದಾಗ ಮೂರ್ತಿ ಇದೇ ಕೋಣೆಯಲ್ಲಿ ಕೂತಿದ್ದ. ಎಷ್ಟೋ ವಸ್ತುಗಳು ಅವತ್ತಿಗಿಂತ ಹೆಚ್ಚು ಅಂದವಾಗಿ ಕಾಣಿಸಿದವು.

ಸುಗುಣ ಅಡುಗೆಮನೆಯಲ್ಲಿ ನಿಂತಿದ್ದಳು.

"ನೀವೂ ಕೂತುಕೊಳ್ಳಿ" ಮೂರ್ತಿ ಹೇಳಿದ.

ಆಕೆ ಮೆಲ್ಲಗೆ ಬಂದು ಆತನಿಗೆ ಎದುರಾಗಿ ಕೂತುಕೊಂಡಳು. ಅವಳನ್ನು ಇದೇ ಮೊದಲ ಸಲ ನೋಡುತ್ತಿರುವಂತೆ ಅನ್ನಿಸಿತು ಮೂರ್ತಿಗೆ. ಆ ದಿನ ಕೈಯಲ್ಲಿ ತಾಂಬೂಲದ ತಟ್ಟೆಯನ್ನು ಹಿಡಿದುಕೊಂಡು ಪೂರ್ಣಿಮೆಯ ಚಂದ್ರನಂತೆ ಬಂದಿದ್ದಳು. ತಟ್ಟೆಯನ್ನು ಅಲ್ಲಿಟ್ಟು ಜಿಂಕೆಯಂತೆ ಅದೃಶ್ಯಳಾಗಿದ್ದಳು. ಕಣ್ಣು ಮಿಟುಕಿಸುವಷ್ಟರಲ್ಲಿ 'ಕನ್ಯಾಪರೀಕ್ಷೆ' ಮುಗಿದುಹೋಯಿತು. ಹೆಣ್ಣನ್ನು ವಿದ್ಯುಲ್ಲತೆಗೆ ಹೋಲಿಸುವುದು ಇದ

ಕ್ಕಾಗಿಯೋ ಏನೋ!

ಈಗ ಆ ವಿದ್ಯುಲ್ಲತೆಯನ್ನು ಮೂರಡಿ ದೂರದಿಂದ ನೋಡುತ್ತಿದ್ದ ಮೂರ್ತಿ. ಅವಳಲ್ಲಿ ಯಾವುದೋ ಅದ್ಭುತ ಆಕರ್ಷಣೆ ಕಾಣುತ್ತಿತ್ತು. ನೀಲಿ ಬಣ್ಣದ ಸೀರೆಯಲ್ಲಿ ಅಂದವಾಗಿ ಕಾಣಿಸುತ್ತಿದ್ದ ಸುಗುಣಳನ್ನು ಇನ್ನೂ ಇನ್ನೂ ನೋಡಬೇಕೆನ್ನಿಸುತ್ತಿತ್ತು.

ಆಕೆ ನೆಲದೆಡೆ ದೃಷ್ಟಿ ಹರಿಸಿ ಕೇಳಿದಳು,



"ಅತ್ತೆಯವರು ಬರಲಿಲ್ಲವೇ?"

ನಿಜವಾದ ಕಾರಣವನ್ನು ಹೇಳಲು ಹಿಂಜರಿದ ಮೂರ್ತಿ.

"ಇಲ್ಲ" ಗಂಟಲಲ್ಲಿ ಏನೋ ಅಡ್ಡಬಂದಂತಾಗಿತ್ತು.

'ನಿನ್ನನ್ನು ಮದುವೆಯಾಗುವುದಿಲ್ಲ' ಎಂದು ಹೇಗೆ ತಾನೆ ಹೇಳಬಲ್ಲ? ಅದು ಕಠೋರ ಮಾತಾಗುತ್ತದೆ. ಆದರೆ ಅದನ್ನು ಹೇಳುವುದಕ್ಕೆಂದೇ ಈಗ ಬಂದಿರುವುದು. ಈ ವಿಷಯವನ್ನು ಹೇಳುವುದಕ್ಕಿಂತ ಸುಲಭವಾದ ಕೆಲಸವೊಂದಿದೆ ಎನಿಸಿತು. ಒಲೆಯಲ್ಲಿ ಉರಿಯುತ್ತಿರುವ ಕೆಂಡವನ್ನು ಅವಳ ತಲೆಯ ಮೇಲೆ ಸುರಿಯುವುದು! ಗಂಟಲನ್ನು ಸಾವರಿಸಿಕೊಂಡು ಹೇಳಿದ,

"ಅಮ್ಮನೇ ಬರಬೇಕೆಂದಿದ್ದಳು. ಆದರೆ ಅನಾರೋಗ್ಯದ ಕಾರಣ ಬರಲಾಗಲಿಲ್ಲ. ಆದ್ದರಿಂದ ಮಾಮನಿಗೆ ಒಂದು ಮಾತು ಹೇಳಲು

ನನ್ನನ್ನು ಕಳುಹಿಸಿದಳು.''

ಆಕೆ ಆ 'ಮಾತು' ಏನೆಂದು ಕೇಳುವ ಸಾಹಸ ಮಾಡಲಿಲ್ಲ.

ತಲೆ ಬಾಗಿಸಿ ಕೂತಿದ್ದಳು. ಮೂರಡಿ ಅಂತರ ದಲ್ಲಿ ಅವಳ ಮುಖ ಕಾಣುತ್ತಿತ್ತು. ಮಳೆ ಸುರಿದ ನಂತರ ಹೊಳೆಯುವ ಎಲೆಗಳಂತೆ ಪ್ರಕಾಶಮಾನ ವಾಗಿ ಕಾಣುತ್ತಿದ್ದಳು. ನಿಜ - ಆರೋಗ್ಯಕ್ಕೆ ಮೀರಿದ ಸೌಂದರ್ಯವೆಲ್ಲಿದೆ?

ಸುಗುಣಳ ನೋಟ ನೆಲವನ್ನು ಭೇದಿಸುವಂತಿತ್ತು. ಆಕೆ ಸೀರೆಯ ಸೆರಗನ್ನು ಗಂಟು ಹಾಕುತ್ತಾ, ಬಿಡಿಸುತ್ತಾ ಆಡುತ್ತಿದ್ದಳು. ಕೈಗಳು ತುಸು ಕಂಪಿಸುತ್ತಿದ್ದವು.

ಆತ ಗಂಟಲನ್ನು ಮತ್ತೊಮ್ಮೆ ಸರಿಪಡಿಸಿ ಕೊಂಡು ಹೇಳಿದ,

''ಮಾವ ಬಂದ ಕೂಡಲೆ ಅವರಿಗೊಂದು ವಿಷಯ ತಿಳಿಸಬೇಕು!''

''ಈಗ ಬಂದುಬಿಡುತ್ತಾರೆ. ಸ್ವಲ್ಪ ಹೊತ್ತು ಕೂತಿರಿ. ನಾನೀಗ ಬಂದೆ...'' ಎನ್ನುತ್ತ ಎದ್ದು ಅಡುಗೆಮನೆಯ ಕಡೆ ಹೋದಳು. ಎಂತಹ ಅನಿಶ್ಚಿತ ಸ್ಥಿತಿ! ಆ ವಿಷಯವೇನಿರಬಹುದು?

''ನಾನು ಮನೆಯಲ್ಲಿ ಕಾಫಿ ಕುಡಿದುಬಂದಿದ್ದೇನೆ''

''ಹಾಗೆ ಕಾಣುವುದಿಲ್ಲವಲ್ಲ! ಉಪ್ಪಾ ಮಾಡುತ್ತೇನೆ. ಸ್ವಲ್ಪ ತಿಂದು ಕಾಫಿ ಕುಡಿಯುವಿರಂತೆ.''

''ಈಗ ಏನು ಬೇಡ''

''ಇಲ್ಲಿ ಏನೂ ತಿನ್ನಬೇಡವೆಂದು ಅತ್ತೆ ಹೇಳಿ ಕಳುಹಿಸಿರುವರಾ?'' ಇದು ಶುಭ ಸೂಚನೆ ಎನಿಸಿತು ಅವಳಿಗೆ.

''ಇಲ್ಲ...ಹಾಗೇನೂ ಇಲ್ಲ. ಈಗ ನಿಮಗೇಕೆ ತೊಂದರೆ ಎಂದು...''

''ಇದರಲ್ಲಿ ತೊಂದರೆ ಏನಿದೆ? ಹೇಗೂ ನನಗಾಗಿ ಉಪ್ಪಾ ಮಾಡಿಕೊಳ್ಳುತ್ತಿದ್ದೇನೆ. ನಾನು ರಾತ್ರಿ ಹೊತ್ತು ಊಟ ಮಾಡುವುದಿಲ್ಲವಲ್ಲ. ಇದು ಪರೀಕ್ಷೆಯ ಸಮಯದಲ್ಲಿ ನಿದ್ದೆಯನ್ನು ಗೆಲ್ಲಲು ನನ್ನ ಉಪಾಯ. ಹೊಟ್ಟೆ ತುಂಬಿದರೆ ಹಾಸಿಗೆ ಕರೆಯುವುದು ಸಹಜ ತಾನೆ? ಆದ್ದರಿಂದ ಅಪ್ಪನಿಗೆ ಮಾತ್ರ ಅಡುಗೆ ಮಾಡುತ್ತೇನೆ...ನೀವು...''

''ಅವೊತ್ತು ನೀವು ಸೊಜ್ಜೆ-ಬಜ್ಜಿ ತಿಂದಿರಲ್ಲವೆ? ಅವು ನಾನು ಮಾಡಿದ್ದಲ್ಲ! ಈಗ ಉಪ್ಪಾ ತಿಂದು ನನಗೆ ಅಡುಗೆ ಮಾಡಲು ಬರುತ್ತೋ ಇಲ್ಲೋ ನೀವೇ ತೀರ್ಮಾನಿಸಿ ಹೇಳಬೇಕು. ಪಾಸ್ ಸರ್ಟಿಫಿಕೇಟ್ ಕೊಡುತ್ತೀರೆಂದು ನನ್ನ ನಂಬಿಕೆ...'' ಎನ್ನುತ್ತಾ ಅಡುಗೆಮನೆಗೆ ಹೋದಳು ಸುಗುಣ.

''ನೀವು ಏನು ಓದುತ್ತಿದ್ದೀರಿ?'' ಅಡುಗೆ ಮನೆಗೆ ಕೇಳಿಸುವಂತೆ ಪ್ರಶ್ನಿಸಿದ ಮೂರ್ತಿ.

ಆಕೆ ಅಲ್ಲಿಂದಲೇ ಉತ್ತರ ಕೊಟ್ಟಳು.

''ಬಿ.ಎ - ಕರಸ್ಪಾಂಡೆನ್ಸ್ ಕೋರ್ಸ್''

ಸುಗುಣ ಮಾತು ಮಾತಿಗೂ ನಗುತ್ತಿದ್ದಳು. ವಾಕ್ಯ ಪೂರ್ತಿಯಾದರೆ ಸಾಕು - ನಗೆಮಳೆ ಹನುಕುತ್ತಿತ್ತು.

ಮೂರ್ತಿಯ ಮನಸ್ಸು ಸಂದಿಗ್ಧದಿಂದ ಒದ್ದಾಡಿತು. ಅಮ್ಮನ ಮಾತನ್ನು ಹೇಗೆ ಹೇಳಲು ಸಾಧ್ಯ?

ಒಳಗೆ ಈರುಳ್ಳಿ ಕತ್ತರಿಸುತ್ತಿರುವ ವಾಸನೆ. ಸುಗುಣ ಊದುಬತ್ತಿ ಹೊತ್ತಿಸಿ ತಂದಿಟ್ಟಳು.

''ಈಗೇಕೆ ಊದುಬತ್ತಿ?''

''ಈರುಳ್ಳಿ ವಾಸನೆ ಬರುತ್ತಿದೆ. ಅದು ನಿಮಗೆ ಹಿಡಿಸುತ್ತದೋ ಇಲ್ಲವೋ... ಎರಡು ನಿಮಿಷಗಳಲ್ಲಿ ಉಪ್ಪಾ ತರುತ್ತೇನೆ'' ಎಂದು ಅಡುಗೆಮನೆಗೆ ಹಿಂದಿರುಗಿದಳು.

ಊದುಬತ್ತಿಯ ಸುವಾಸನೆ ಕೋಣೆಯ ತುಂಬ ಹರಡಿಕೊಳ್ಳುತ್ತಿತ್ತು.

ಮೂರ್ತಿ ನೆಮ್ಮದಿಯಾಗಿ ಕಣ್ಣುಗಳನ್ನು ಮುಚ್ಚಿಕೊಂಡು ಕುರ್ಚಿಯಲ್ಲಿ ವಿಶ್ರಮಿಸುತ್ತಿದ್ದ. ಊದುಬತ್ತಿಯ ಸುವಾಸನೆಯಿಂದ ಮೂರ್ತಿಗೆ ತಾನು ದೇವಾಲಯವೊಂದರಲ್ಲಿ ದೇವಿಯ ಮುಂದೆ ಇದ್ದಂತಹ ಅನುಭೂತಿ ಉಂಟಾಯಿತು. ಆತ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದ.



ಏನಿದು ಡಾಕ್ಟರೇ! ಇವತ್ತು ಡಿಸ್‌ಚಾರ್ಜ್ ಮಾಡ್ತೀವಿ ಅಂತ ನಿನ್ನೆ ಹೇಳಿದ್ರಿ.... ಈಗ ನೋಡಿದ್ರೆ ಇನ್ನೂ ಮೂರು ದಿನ ಇರಬೇಕಂತೀರಲ್ಲಾ?
ಹೌದ್ರಿ...ನಿಮ್ಮನ್ನು ರಿಲೀವ್ ಮಾಡಲು ಇನ್ನೊಬ್ಬ ಪೇಶೆಂಟ್ ಬಂದಿಲ್ಲವಲ್ಲ!

''ಸಾರೀ...'' ಸ್ವಲ್ಪ ದೂರದಿಂದಲೇ ಹೇಳುತ್ತ ಹತ್ತಿರ ಬಂದಳು.

ಕಣ್ಣು ಬಿಟ್ಟು ನೋಡಿದ.

ಎದುರಿಗೆ ಒಂದು ಚಿಕ್ಕ ಸ್ಟೂಲ್. ಅದರ ಮೇಲೆ ಉಪ್ಮಾ, ಕಾಫಿ ಇಟ್ಟಿದೆ. ಬಿಸಿಬಿಸಿ ಉಪ್ಮಾವನ್ನು ಸ್ವಲ್ಪ ಕೈಯಲ್ಲಿ ಹಿಡಿದುಕೊಂಡು ಬಾಯಿಯವರೆಗೆ ಒಯ್ದ. ಸಂದಿಗ್ಧ ಕಾಡತೊಡಗಿತು. 'ತಿನ್ನಲೇ?...ಬೇಡವೇ?'

ಅವನ ಮನಸ್ಸಿನ ಭಾವವನ್ನು ಆಕೆ ತಿಳಿದುಕೊಂಡಂತೆ ಅನಿಸಿತು. ಒಮ್ಮೊಮ್ಮೆ ಮನಸ್ಸನ್ನು ಓದಲು ಮಾತುಗಳ ಅಗತ್ಯವಿರುವುದಿಲ್ಲ; ಮುಖದ ಮೇಲಿನ ಭಾವಗಳೇ ಸಾಕು.

''ಹೇಗಿದೆ?''

''ತುಂಬಾ ಚೆನ್ನಾಗಿದೆ''

''ಹದ್ದುಗಳನ್ನೂ ಮೀರಿ ಇದೆಯೇ?''

''ಅಂದರೆ...?''

''ಏನಿಲ್ಲ...ಚೆನ್ನಾಗಿದೆ ಅಂದ್ರೆ ಸಾಕಲ್ಲವೆ. ನಿಮ್ಮ ಸಹೃದಯದಿಂದ ನನ್ನನ್ನು ಗಗನಕ್ಕೆ ಏರಿಸುತ್ತಿದ್ದೀರಾ. ಅಲ್ಲಿಂದ ನೆಲಕ್ಕೆ ತಳ್ಳುವುದಿಲ್ಲವೆ?''

ಮನಸ್ಸು ಬೆದರಿತು.

''ಅಂಥದ್ದೇನೂ ಇಲ್ಲ''

''ಸರಿ...ತಣ್ಣಗಾಗುತ್ತೆ. ಮೊದ್ಲು ಉಪ್ಮಾ ತಿನ್ನಿ'' ಎನ್ನುತ್ತಾ ಅಲ್ಲೇ ನೆಲದ ಮೇಲೆ ಕೂತುಕೊಂಡಳು - ಪಾದಗಳನ್ನು ಸೀರೆಯಿಂದ ಮುಚ್ಚಿಕೊಳ್ಳುತ್ತ. ಅವಳ ತುಟಿಗಳು ಮೆಲ್ಲಗೆ ಕದಲಲಾರಂಭಿಸಿದವು. ನೆಲವನ್ನು ದಿಟ್ಟಿಸುತ್ತಲೇ ಪ್ರಾರಂಭಿಸಿದಳು,

''ನೀವು ಯಾವ ನಿರ್ಣಯವನ್ನು ತೆಗೆದುಕೊಂಡರೂ ನಾನು ಬೇಸರ ಪಡುವುದಿಲ್ಲ. ನೀವು ಹಣವಂತರು. ಆದರೂ ನಮ್ಮ ಕುಟುಂಬದೊಂದಿಗೆ ಸಂಬಂಧ ಬೆಳೆಸಲೆಂದು ನನ್ನನ್ನು ನೋಡಲು ಬಂದಾಗ ಅಪ್ಪ ಎಷ್ಟೊಂದು ಸಂತೋಷಪಟ್ಟರು. ನಿಮ್ಮ ಮೇಲಿನ ಗೌರವಭಾವ ಇಮ್ಮಡಿಯಾಯಿತು. ನೀವು ಅಪೇಕ್ಷಿಸಿದರೆ ನಿಮಗೆ ಬೇಕಾದಷ್ಟು ಸಂಬಂಧಗಳು ಬರುತ್ತವೆ ಕೇಳಿದಷ್ಟು ವರದಕ್ಷಿಣೆ ಸಿಕ್ಕುತ್ತೆ, ಅಲ್ಲವೆ?''

ಸುಗುಣ ಒಂದು ಸಲ ತಲೆ ಮೇಲಕ್ಕೆತ್ತಿ ಆತನ ಮುಖ ನೋಡಿದಳು. ಆತ ತಿನ್ನುವುದು ಗಂಟಲಿನಿಂದ ಒಳಕ್ಕೆ ಇಳಿಯುತ್ತಿರಲಿಲ್ಲ.

''ನಿಮ್ಮ ಬದುಕು, ಭವಿಷ್ಯತ್ತು ನಿಮ್ಮ ಕೈಯಲ್ಲೇ ಇದೆ. ನೀವು ತೆಗೆದುಕೊಳ್ಳುವ ನಿರ್ಣಯ ಮುಂದೆ ನಿಮ್ಮನ್ನು ಬಾಧೆಪಡಿಸುವಂತಹದೂ, ಪಶ್ಚಾತ್ತಾಪಕ್ಕೀಡು ಮಾಡುವಂತಹದೂ ಆಗಿರಬಾರದು.'' ಎನ್ನುತ್ತಾ ಆತನ ಕಣ್ಣುಗಳೊಳಕ್ಕೆ ದಿಟ್ಟಿಸಿ ನೋಡಿದಳು.

ಒಂದು ಕ್ಷಣ ಇಬ್ಬರ ನೋಟಗಳು ಮಿಳಿತವಾದವು. ಇಬ್ಬರ ಮನಸ್ಸುಗಳ ವೇಗ ಹೆಚ್ಚಿತು. ಆಕೆ ಹೇಳುವುದನ್ನು ಮುಂದುವರಿಸಿದಳು.

''ನೀವು ನನ್ನನ್ನು ಮದುವೆಯಾಗದಿದ್ದರೂ ಪರವಾಗಿಲ್ಲ. ಆದರೆ ದೂರದ ಬಂಧುಗಳಾಗಿ, ಒಬ್ಬ ಸ್ನೇಹಿತರಾಗಿ ನೀವು ಯಾವಾಗಲೂ ಇಲ್ಲಿಗೆ ಬರಬಹುದು. ನನ್ನ ಮನದ ಭಾವನೆಗಳನ್ನು

ನಿಸ್ಸಂಕೋಚವಾಗಿ ನಿಮಗೆ ಹೇಳಿಕೊಳ್ಳಬೇಕೆನ್ನಿಸಿತು. ಹೇಳುತ್ತಿರುವೆ. ಅನ್ಯಥಾ ಭಾವಿಸಬೇಡಿ. ನೀವು ನನ್ನನ್ನು ನೋಡಲು ಬಂದಾಗಲೇ ನಾನು ಮನಸ್ಸಿನಲ್ಲಿ ಒಂದು ನಿರ್ಧಾರಕ್ಕೆ ಬಂದಿರುವೆನು - ನಾನು ನೋಡುತ್ತಿರುವ ಕಟ್ಟಕಡೆಯ ವರ ನೀವೇ ಎಂದು! ನೀವು ಒಂದು ವೇಳೆ ತಿರಸ್ಕರಿಸಿದರೆ ಮತ್ತೊಮ್ಮೆ ಈ ಜನ್ಮದಲ್ಲಿ ಕನ್ಯಾಪರೀಕ್ಷೆಗೆ ಅಲಂಕರಿಸಿಕೊಳ್ಳಬಾರದೆಂದು ತೀರ್ಮಾನಿಸಿಕೊಂಡೆ.

ಪ್ರತಿ ಸಲ ರೇಷ್ಮೆ ಸೀರೆ ಉಟ್ಟುಕೊಂಡು ಬೆಳ್ಳಿ ತಟ್ಟೆಯಲ್ಲಿ ತಾಂಬೂಲ ಕೊಡುವುದು, ನಾಚಿಕೆಯಿಂದ ನೆಲ ನೋಡುತ್ತ ನಿಲ್ಲುವುದು - ಇವೆಲ್ಲ ಇನ್ನು ಮುಂದೆ ನನ್ನಿಂದಾಗುವುದಿಲ್ಲ. ಈ ನಾಚಿಕೆ ನಿಜವಾಗಿ ಬಹಳ ನಾಚಿಕೆಗೇಡಿತನ! ನೀವು ಬುದ್ಧಿವಂತರು. ಓದಿದವರು. ಅರ್ಥಮಾಡಿಕೊಳ್ಳುವ ಶಕ್ತಿಯುಳ್ಳವರು. ನನ್ನ ಮಾತುಗಳನ್ನು ಅಪಾರ್ಥ ಮಾಡಿಕೊಳ್ಳುವುದಿಲ್ಲವೆಂದು ಭಾವಿಸುತ್ತೇನೆ. ನೀವೇ ಹೇಳಿ, ಒಬ್ಬ ಹೆಣ್ಣುಮಗಳು ಹೀಗೆ ಎಷ್ಟು ಸಲ 'ಕನ್ಯಾಪರೀಕ್ಷೆ'ಗಳಲ್ಲಿ ವರಮಹಾಶಯರ ಕಣ್ಣುಗಳಿಂದ ಎಂಜಲಾಗುತ್ತಿರಬೇಕು? ಸೊಜ್ಜಿ-ಬಜ್ಜಿ ತಿಂದು ಹೋದವರು ಹಿಂದಿರುಗಿಯೂ ನೋಡದ ಸಂದರ್ಭಗಳೇ ಜಾಸ್ತಿ. ಹೀಗೆ ಹುಡುಗಿಯರು 'ಎಂಜಲು ತಟ್ಟೆ'ಗಳಾಗಿ ಉಳಿಯುವುದು ಎಂತಹ ಸಂಪ್ರದಾಯವೋ ನನಗೆ ಅರ್ಥವಾಗಲಿಲ್ಲ. ಬೇಗ ಮದುವೆಯಾಗದಿದ್ದರೆ ನಮ್ಮ ಸಮಾಜದಲ್ಲಿ ಹೆಣ್ಣುಮಕ್ಕಳನ್ನು ಪಾದರಕ್ಷೆಗಿಂತ ಕೀಳಾಗಿ ಕಾಣುತ್ತಾರೆ. ವಿಧ ವಿಧ ಮಾತುಗಳನ್ನು ಕೇಳಿ ಕೇಳಿ ನನ್ನ ಕಿವಿಗಳಿಗೆ ತೂತು ಬಿದ್ದಿದೆ. ಅವಮಾನದಿಂದ ನನ್ನ ಮನಸ್ಸು ಮುದುಡಿಹೋಗಿದೆ. ಈ ಶಾಪಗ್ರಸ್ತ ಬಾಳನ್ನು ಹೀಗೇ ಸಾಗಿಸುವುದು ಇನ್ನು ಮುಂದೆ ನನ್ನಿಂದಾಗುವುದಿಲ್ಲ. ಒಮ್ಮೊಮ್ಮೆ ಕೆರೆಯನ್ನೋ ಬಾವಿಯನ್ನೋ ನೋಡಿಕೊಳ್ಳಲು ಸಹ ಹುಚ್ಚು ಮನಸ್ಸು ಆಲೋಚಿಸುತ್ತದೆ. ಆದರೆ ಉದ್ವೇಕದಿಂದ ಓಡುವ ಮನಸ್ಸನ್ನು ಮನುಷ್ಯ ಹಿಂಬಾಲಿಸುವುದು ಶುದ್ಧ ಅವಿವೇಕವಲ್ಲವೆ? ಅದು ನನಗೂ ಗೊತ್ತು. ನನಗೆ ಉದ್ಯೋಗ ಸಿಕ್ಕಿದೆ. ಪ್ರತಿ ತಿಂಗಳು ಸಂಬಳ ಬರುತ್ತೆ. ಸುನಾಯಾಸವಾಗಿ ಜೀವನ ಸಾಗಿಸಲು ಇಷ್ಟು ಸಾಕು ನನಗೆ. ಆದರೂ ಅಪ್ಪ ಪಟ್ಟು ಬಿಡದ ತ್ರಿವಿಕ್ರಮನಂತೆ ವರಬೇಟೆಗೆ ಹೊರಡುತ್ತಾರೆ.''

ಎರಡು ನಿಮಿಷ ನಿಶ್ಶಬ್ದ..ಮತ್ತೆ ಹೇಳತೊಡಗಿದಳು.

''ಕಾಫಿ ಹೇಗಿದೆ? ...ಸಂಕೋಚವಿಲ್ಲದೆ ಹೇಳಿ''

''ಚೆನ್ನಾಗಿದೆ...ಚೆನ್ನಾಗಿದೆ...ಥ್ಯಾಂಕ್ಸ್''

ಆಕೆಯ ತುಟಿಗಳಲ್ಲಿ ಮುಗುಳ್ನಗೆ, ಕಣ್ಣುಗಳಲ್ಲಿ ನೀರಿನ ಬಿಂದುಗಳು ಸುರಿಯುತ್ತಿರುವುದನ್ನು ಗಮನಿಸುತ್ತಾ ಆಕೆಯ ಮಾತುಗಳನ್ನು ಆಲಿಸಿದ ಮೂರ್ತಿಯ ಮನಸ್ಸು ಡೋಲಾಯಮಾನ ಸ್ಥಿತಿ ತಲುಪಿತು.

'ಪ್ರತಿ ನಗುವಿಗೂ ಒಂದು ಹೂವು ಅರಳುತ್ತಿದೆ. ಪ್ರತಿಯೊಂದು ಕಣ್ಣೀರು ಬಿಂದುವಿಗೂ ಒಂದು ಸ್ವಾತಿ ಮುತ್ತು ಉದುರುತ್ತಿದೆ...' ಮೂರ್ತಿಯ ಆಲೋಚನೆಯ ಅಲೆಗಳು ಹಾಗೇ ಸಾಗುತ್ತಿದ್ದವು.

''ನೋಡಿ, ನಮ್ಮ ಸಮಾಜದಲ್ಲಿ ಹಣ ಮನುಷ್ಯರ ಬದುಕುಗಳ ಮೇಲೆ 'ಆಟಂ ಕ್ಲೌಡ್ಸ್'ಗಳಂತೆ ಮುತ್ತಿ ಆಟವಾಡುತ್ತಲಿದೆ. ನಾನೂ ಪ್ರೀತಿಸಬಲ್ಲೆ. ಆದರ್ಶ ಹೆಂಡತಿಯಾಗಿ, ತಾಯಿಯಾಗಿ ನಾನು ನನ್ನನ್ನು ರೂಪಿಸಿಕೊಳ್ಳಬಲ್ಲೆ. ನನಗಿರುವ ಅಯೋಗ್ಯತೆ ಯಾವುದು? ಬಡತನ! ನನ್ನ ಅಪ್ಪ ಬಡವನಾಗಿರುವುದೊಂದೇ ನನ್ನ ಅನರ್ಹತೆಯಲ್ಲವೆ? ಇದು ನಿಜವಾಗಿಯೂ ಒಬ್ಬ ಹೆಣ್ಣಿನ ಅವಲಕ್ಷಣವಾಗಿ ಪರೀಕ್ಷೆಗೆ ನಿಲ್ಲುವುದೇ? ನೀವೇ ಯೋಚಿಸಿ.'' ಸುಗುಣ ತನ್ನನ್ನು ತಾನು ಸಂಭಾಳಿಸಿಕೊಳ್ಳುತ್ತಾ ಅತಿ ಜಾಗ್ರತೆಯಿಂದ ತೂಕ ಮಾಡುತ್ತಾ ಮಾತನಾಡುತ್ತಿರುವಳೆಂದು ಅರ್ಥವಾಗುತ್ತಿತ್ತು.

''ಸುಗುಣ!''

ಮೂರ್ತಿಯ ಸಂಬೋಧನೆಯಲ್ಲಿ ಕ್ಷಿಪ್ರ ಬದಲಾವಣೆ. ಆಮೇಲೆ ಮೂರ್ತಿಗೆ ಮಾತನಾಡ



''ನಿಮ್ಮ ವಯಸ್ಸು ಎಷ್ಟು ಅಂತ ಅಭಿಮಾನಿಗಳು ಕೇಳಿದ್ದಾರೆ....''
''ಹಲ್ಲು ಸೆಟ್ಟು ಇಟ್ಟುಕೊಂಡಾಗಲೋ.....ಬಿಚ್ಚಿಟ್ಟಾಗಲೋ....?''

ಲಾಗಲಿಲ್ಲ. ಎಷ್ಟೋ ವಿಷಯಗಳ ಕುರಿತು ಮಾತನಾಡಬೇಕೆಂದು ಆತನ ಮನ ಆತುರಪಡುತ್ತಿತ್ತು. ಒಂದೊಂದು ಸಲ ಮನಸ್ಸು ಬಿಟ್ಟು ಏಳಲು ಮಾತುಗಳಿಗೆ ಬಲವಿರುವುದಿಲ್ಲ, ಅಂತಹ ಸಮಯದಲ್ಲಿ ಮಾತಿಗಿಂತ ಮೌನವೇ ಸಮಂಜಸ. ತಾನು ಪ್ರೇಮಿಸಿದವರಿಗಿಂತ ತನ್ನನ್ನು ಪ್ರೇಮಿಸಿದವರೊಂದಿಗೆ ಬಾಳಹೆಜ್ಜೆ ಹಾಕುವುದು ತುಂಬಾ ವಿವೇಕದ ನಿರ್ಧಾರ. ಈ ಆಲೋಚನೆ ಬಂದ ಕೂಡಲೆ ಆತನ ಮನಸ್ಸಿನಲ್ಲಿ ಪರಿಭ್ರಮಿಸುತ್ತಿದ್ದ ವಿಚಾರಗಳೆಲ್ಲ ಸ್ತಬ್ಧಗೊಂಡು ಕೊನೆಗೆ ಒಂದು ರೂಪಕ್ಕೆ ಬಂದವು.

''ಕ್ಷಮಿಸಿ... ಏನೇನೋ ಮಾತನಾಡಿ ನಿಮಗೆ ಬೇಸರ ಪಡಿಸುತ್ತಿದ್ದೇನೆ.'' ಕಣ್ಣೀರು ಸುರಿಸುತ್ತಾ ಹೇಳಿದಳು.

ಹೊರಗೆ ಚಪ್ಪಲಿಯ ಸದ್ದಾಯಿತು. ಸೋಮುಮಾಮಾ ಬಂದರು. ತಲೆಯೆಲ್ಲಾ ಬೆಳ್ಳಗಾಗಿದೆ. ಮೂರ್ತಿ ಎದ್ದುನಿಂತು ನಮಸ್ಕರಿಸಿದ.

''ಅರರೇ...ನೀನಾ?! ಕೂತುಕೋ.... ಕೂತುಕೋ.... ಸುಗುಣ, ಅವನಿಗೆ ಕಾಫಿ ಆಯಿತೇ? ಏನೋ ಕೆಲ್ಸವಿತ್ತು, ಹೊರಗೆ ಹೋಗಿದ್ದೆ.''

ಅವರ ಕಣ್ಣುಗಳು ವಿಶಾಲಗೊಂಡ ರೀತಿ, ಮಾತನಾಡುವ ವಿಧಾನ ನೋಡಿದರೆ ಮೂರ್ತಿಯ ಆಗಮನ ಅವರಿಗೆ ತುಂಬಾ ಆಶ್ಚರ್ಯವನ್ನುಂಟುಮಾಡಿದೆಯೆಂದು ಅರ್ಥವಾಗುತ್ತದೆ.

ಅವರು ಕುಳಿತ ಮೇಲೆ ಮೂರ್ತಿ ನಿಧಾನವಾಗಿ ಹೇಳಿದ.

''ಕಾಫಿ ಮಾತ್ರವಲ್ಲ...ಬಿಸಿಬಿಸಿ ಉಪ್ಮಾ ಸಹಾ ಆಯಿತು.... ನಿಮ್ಮನ್ನು ಒಮ್ಮೆ ಭೇಟಿ ಮಾಡಿ ಬಾ ಎಂದು ಅಮ್ಮ ಕಳಿಸಿದಳು.''

''ಹೇಳು....'' ಕೇಳಿದರು - ಗುಂಡಿಗೆ ಧಡ ಧಡ ಹೊಡೆದುಕೊಳ್ಳುತ್ತಿತ್ತು.

ಸುಗುಣ ಅಡುಗೆಮನೆಯೊಳಕ್ಕೆ ಹಾರಿ ಹೋಗಿ, ಕಿವಿಗಳನ್ನು ಮುಂದಕ್ಕೆ ಚಾಚಿ, ಆತುರದಿಂದ ಆಲಿಸುತ್ತಿದ್ದಳು.

ಆಗ ಒಂದು ನಿಮಿಷ ಒಂದು ಯುಗ!

''ಸುಗುಣ ಮೆಚ್ಚುಗೆಯಾದಳೆಂದು ನಿಮಗೆ ತಿಳಿಸಲು ಅಮ್ಮ ಹೇಳಿದಳು! ಒಳ್ಳೆ ಮೂಹೂರ್ತವನ್ನು ನೀವೇ ನೋಡಲು ಸಹ ಹೇಳಿದಳು.''

''ಹೌದಾ! ನನಗೆ ಬಹಳ ಆನಂದವಾಗಿದೆ'' ಮೂರ್ತಿಯ ಎರಡೂ ಕೈಗಳನ್ನು ಹಿಡಿದುಕೊಂಡು ಆನಂದಬಾಷ್ಪ ಸುರಿಸಿದರು.

ಮೂರ್ತಿ ಎದ್ದು ಹೊರಗೆ ಬಂದ. ಮುದುಕ ಹೊಸ್ತಿಲವರೆಗೂ ಬಂದು,

''ಒಳ್ಳೆಯ ಮೂಹೂರ್ತ ನೋಡಿದ ಮೇಲೆ ನಿಮ್ಮಮ್ಮನನ್ನು ಕಾಣಲು ಬರುತ್ತೇನೆ. ಈ ವಿಷಯವನ್ನು ತಿಳಿಸಪ್ಪಾ'' ಎಂದರು ಸೋಮುಮಾಮಾ.

''ನಾನಿನ್ನು ಬರಲೇ?'' ಮೂರ್ತಿ ಹೋಗುತ್ತಾ ಹೋಗುತ್ತಾ ತಲೆಯೆತ್ತಿ ಬಾಗಿಲ ಕಡೆ ನೋಡಿದ. ಅಲ್ಲಿ ಸುಗುಣಳು ಸಂತೋಷದ ಸಂಕೇತವಾಗಿ ನಿಂತಿದ್ದಳು - ತನ್ನನ್ನೇ ನೋಡುತ್ತಾ, ನಸುನಗುತ್ತಾ.

ಕರ್ಮವೀರ

ದೀಪಾವಳಿ ಕಥಾ ಸ್ಪರ್ಧೆ

ಈ ವರ್ಷವೂ "ಕರ್ಮವೀರ" ತನ್ನ ದೀಪಾವಳಿ ಸಂಚಿಕೆಗಾಗಿ ಸಣ್ಣಕಥೆಗಳ ಸ್ಪರ್ಧೆ ಏರ್ಪಡಿಸುತ್ತಿದೆ. ನಾಡಿನ ಹಿರಿ-ಕಿರಿಯ ಕಥೆಗಾರರಿಗೆ ಭಾಗವಹಿಸಲು ಸ್ವಾಗತವಿದೆ.

*** ಪ್ರಥಮ ಬಹುಮಾನ 2,000 ರೂ.ಗಳು**

*** ಎರಡನೆ ಬಹುಮಾನ 1,500 ರೂ.ಗಳು**

*** ಮೂರನೆ ಬಹುಮಾನ 1,000 ರೂ.ಗಳು**

ಸ್ಪರ್ಧೆಯ ನಿಯಮಗಳು :-

1. ಕಥೆ ಸ್ವತಂತ್ರ ಕೃತಿಯಾಗಿರಬೇಕು ಅನುಕರಣೆ, ಅನುವಾದಗಳಿಗೆ ಅವಕಾಶವಿಲ್ಲ. ಎಲ್ಲೂ ಪ್ರಕಟವಾಗಿರಕೂಡದು.
2. ಕಥೆ ಹತ್ತು ಪುಲ್‌ಸ್ಕೇಪ್ ಹಾಳೆಗಳನ್ನು ಮೀರಕೂಡದು. ಹಾಳೆಯ ಒಂದೇ ಮಗ್ಗುಲಲ್ಲಿ ಸ್ಪಷ್ಟವಾಗಿ ಬರೆದಿರಬೇಕು.
3. ಕಥೆಗಾರರು ತಮ್ಮ ಹೆಸರು, ವಿಳಾಸಗಳನ್ನು ಹಸ್ತಪ್ರತಿಯಲ್ಲಿ ಎಲ್ಲೂ ಬರೆದಿರಕೂಡದು. ಹೆಸರು, ವಿಳಾಸಗಳುಳ್ಳ ಪ್ರತ್ಯೇಕ ಹಾಳೆಯೊಂದನ್ನು ಹಸ್ತಪ್ರತಿಗೆ ಲಗತ್ತಿಸಿರಬೇಕು.
4. ಹಸ್ತ ಪ್ರತಿಗಳನ್ನು ಹಿಂತಿರುಗಿಸಲಾಗುವುದಿಲ್ಲ.
5. ಈ ಸ್ಪರ್ಧೆಗೆ 'ಸಂಯುಕ್ತ ಕರ್ನಾಟಕ' ಸಂಸ್ಥೆಯ ಸಿಬ್ಬಂದಿ ಮತ್ತು ಅವರ ಸಂಬಂಧಿಗಳಿಗೆ ಪ್ರವೇಶವಿಲ್ಲ.
6. ಸ್ಪರ್ಧಾ ಫಲಿತಾಂಶದ ಅಂತಿಮ ತೀರ್ಮಾನ ವ್ಯವಸ್ಥಾಪಕ ಮಂಡಳಿಯದು. ಪತ್ರ ವ್ಯವಹಾರಕ್ಕೆ ಆಸ್ಪದವಿಲ್ಲ.
7. ಕಥೆ ಕಳಿಸಲು ಕೊನೆಯ ದಿನಾಂಕ - ಆಗಸ್ಟ 1, 1992.

ಸಂಪಾದಕರು:
ಕರ್ಮವೀರ ದೀಪಾವಳಿ ವಿಶೇಷಾಂಕ,
ಸಂಯುಕ್ತ ಕರ್ನಾಟಕ,
ಕೊಪ್ಪೀಕರ ರಸ್ತೆ, ಹುಬ್ಬಳ್ಳಿ - 20.

ಸಂಪಾದಕರು:
ಕರ್ಮವೀರ ದೀಪಾವಳಿ ವಿಶೇಷಾಂಕ,
ಸಂಯುಕ್ತ ಕರ್ನಾಟಕ,
ನಂ. 2 ರೆಸಿಡೆನ್ಸಿ ರಸ್ತೆ, ಬೆಂಗಳೂರು.

ಈ ವಿಳಾಸಕ್ಕೆ ಕಳಿಸಬಹುದು. ಲಕೋಟೆಯ ಮೇಲೆ "ದೀಪಾವಳಿ ಕಥಾ ಸ್ಪರ್ಧೆಗೆ" ಎಂದು ಸ್ಪಷ್ಟವಾಗಿ ಬರೆದಿರತಕ್ಕದ್ದು.

*** ಇದು ಲೋಕ ಶಿಕ್ಷಣ ಟ್ರಸ್ಟ್ ಏರ್ಪಡಿಸಿರುವ ಕಥಾ ಸ್ಪರ್ಧೆ.**

ಜಾಹೀರಾತಿನ ಭ್ರಾಮಕ ಲೋಕ

"ನಿಮ್ಮ ನಾದಿನಿಯ ಮುಖ ನಿಮಗೆ ನೆನಪಿಗೆ ಬರುತ್ತಿಲ್ಲವೇ... ?

ಹಾಗಿದ್ದರೆ ಉಪಯೋಗಿಸಿ...."

ಮೇಲಿನ ಒಕ್ಕಣೆಯ ಹಿನ್ನೆಲೆ ತಕ್ಷಣಕ್ಕೆ ಯಾರಿಗೂ ಅರ್ಥವಾಗದೇ ಹೋಗಬಹುದು. ಕೆಲವು ಸಮಯದ ಹಿಂದೆ ಪ್ರಕಟವಾಗುತ್ತಿದ್ದ ಜಾಹೀರಾತೊಂದರ ಘೋಷವಾಕ್ಯವಿದು. ಆ ಜಾಹೀರಾತಿನ ವಸ್ತು, ವಿದೇಶೀ ತಾಂತ್ರಿಕತೆಯೊಂದಿಗೆ ತಯಾರಾಗುತ್ತಿದ್ದ ಜನಪ್ರಿಯ ಕಂಪೆನಿಯ ಬ್ಲೇಡು. ಕೆಲವರಿಗೆ ಆಶ್ಚರ್ಯ ಹುಟ್ಟಿಸಬಹುದು. ಆದರೂ ಇದು ಸತ್ಯವಾದ ಮಾತು.

ಇಂದು ಜಾಹೀರಾತು ಮಾನವನ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿ ವಿಜೃಂಭಿಸುತ್ತಿದೆ. ಅದಕ್ಕೆ ಪೂರಕವಾಗಿ ಅತ್ಯುಚ್ಚ ಶ್ರೇಣಿಯ ಸಂವಹನ ಮಾಧ್ಯಮವನ್ನು ಅಳವಡಿಸಲು ದೇಶದ ಬಂಡವಾಳಷಾಹಿ ಮಾರುಕಟ್ಟೆಯೂ ಸಿದ್ಧವಾಗಿ ನಿಂತಿದೆ. ಈಗಿನ ಮಾರುಕಟ್ಟೆಯಲ್ಲಿ 'ಜಾಹೀರಾತುಗಳ ಕಲ್ಪನೆ'ಯೇ ಇಲ್ಲದಿರುವ ಸಂದರ್ಭವನ್ನಂತೂ ಊಹಿಸುವುದೇ ಕಷ್ಟ. ಒಟ್ಟಾರೆ ಈಗಿನ ಜಗತ್ತಿನಲ್ಲಿ ಜಾಹೀರಾತು ಅದೆಷ್ಟು ಅನಿವಾರ್ಯ ಎನ್ನಿಸಿ ಬೆಸೆದು ಹೋಗಿದೆಯೆಂದರೆ ಒಂದೊಮ್ಮೆ ಸೂರ್ಯ ಕಾಣಿಸಿಕೊಳ್ಳದೇ ಹೋದರೂ ಜಾಹೀರಾತುಗಳು ಮಾತ್ರ ಕಾಣಿಸದೇ ಇರಲಾರವೇನೋ....

ಈಗಿನ ಜಾಹೀರಾತುಗಳ ಭರಾಟೆಯನ್ನು ಗಮನಿಸಿದ ಪ್ರಮುಖ ಅರ್ಥ ಶಾಸ್ತ್ರಜ್ಞರು ಕೂಡಾ ಅದೊಂದು 'ಅನಿರ್ವಾಯ ಭೂತ'ವೆಂದೇ ಭಾವಿಸಿದ್ದಾರೆ. ಇತ್ತೀಚೆಗೆ ಭಾರತದ ಒಟ್ಟಾರೆ ಜಾಹೀರಾತಿನ ಮಾಧ್ಯಮಗಳಲ್ಲಿ ಟೆಲಿವಿಷನ್ ಪ್ರಮುಖ ಸ್ಥಾನವನ್ನು ಗಳಿಸಿಕೊಳ್ಳುತ್ತಿದೆ. ಅದು ಉಳಿದ ಮಾಧ್ಯಮಗಳಾದ ರೇಡಿಯೋ, ಪತ್ರಿಕಾ ಮಾಧ್ಯಮ, ಕಿರುಚಿತ್ರಗಳ ಮಾಧ್ಯಮಗಳನ್ನು ಮೀರಿಸಿ ತನ್ನ ಬಾಹುಗಳನ್ನು ಕಿರುತೆರೆಯತ್ತ ಚಾಚಿದೆ. ಉತ್ಪಾದಕರಿಗೀಗ ಟಿ.ವಿ. ಅಮೂಲ್ಯ ಆಸ್ತಿಯೂ ಆಗಿದೆ. ಆದ್ದರಿಂದ ಹೆಚ್ಚಿನ ಪ್ರಾಶಸ್ತ್ಯ.

ಇಂದು ದೂರದರ್ಶನದ ಪ್ರಸಾರ ಜಾಲ ಒಂದು ವೇಳೆ ಭಾರತದ ಮೂಲೆಮೂಲೆಗೂ ಹಬ್ಬಿದ್ದರೂ ಅದರ ಬೆಳವಣಿಗೆಯ ತೀವ್ರಗತಿಯನ್ನು ಅಂದಾಜಿಸಲು ಸಾಧ್ಯವಿರಲಿಲ್ಲ

● ಹರೀಶ ಪುತ್ತೂರಾಯ

ವೇನೋ. ಜಾಹೀರಾತುದಾರರು ಈಗ ಯಾವುದೇ ಮಾಧ್ಯಮದಲ್ಲಿ (ಅಂದರೆ ಟಿ.ವಿ. ರೇಡಿಯೋ ಪತ್ರಿಕೆಗಳೂ ಸೇರಿದಂತೆ) ಜಾಹೀರಾತುಗಳನ್ನು ಪ್ರಚುರ ಪಡಿಸಿದಾಗ್ಯೂ ಅದರ ಹಿಂದಿರುವ ಸಾಮಾಜಿಕ ವ್ಯವಸ್ಥೆಗೆ ಪೂರಕವಲ್ಲ ಎನಿಸುವಂತಹವು. ನಾವೀಗಲೇ ಇಪ್ಪತ್ತೊಂದನೆ ಶತಮಾನಕ್ಕೆ ದಾಪುಗಾಲು ಹಾಕುವ ಘೋಷಣೆ ಹಾಕಿಕೊಂಡಿದ್ದರೂ, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಶೇಕಡಾ ಎಪ್ಪತ್ತಕ್ಕೂ ಹೆಚ್ಚಿನವರು ಹಳ್ಳಿ ಗಾಡಿನಲ್ಲಿಯೇ ಉಳಿದುಕೊಂಡಿದ್ದಾರೆ. ಶೇ. ನಲವತ್ತಕ್ಕೂ ಹೆಚ್ಚಿನ ಜನ ದಾರಿದ್ರ್ಯ ರೇಖೆಯ ಅಂಚಿನೊಳಗೆ ಜೀವಿಸುತ್ತಿರುವವರು, ಬದುಕಿನ ಕನಿಷ್ಟ ಸೌಲಭ್ಯಗಳಿಂದಲೂ ವಂಚಿತರಾದವರ ಮಧ್ಯೆ ಇಂತಹ ಮೆರುಗಿನ ಜಾಹೀರಾತುಗಳು ಮೆರೆಯುತ್ತಿವೆ. ಆದ್ದರಿಂದ ಯಾವುದೇ ಮಾಧ್ಯಮದ ಮೂಲಕ ಉತ್ಪಾದಕರು ಪ್ರೊಜೆಕ್ಟ್ ಮಾಡುವ ಸರಕು ಶೈಲಿ ಸಾಮಾಜಿಕ ಹಿನ್ನೆಲೆ

ಯಲ್ಲಿ ಒಳಿತೇನೂ ಅಲ್ಲ. ಇಂತಹ ಜಾಹೀರಾತುಗಳ ಶೈಲಿ ಕೇವಲ ನಗರೀಕರಣದ ಬದುಕಿಗೆ ಹೊಂದಿಕೊಂಡಂತೆ ಅಥವಾ ಅಂತಹ ಬದುಕನ್ನು ವೈಭವೀಕರಿಸಿ ಬಿಂಬಿಸುವ ದೃಶ್ಯಗಳಾಗೇ ಆಗಿವೆ.

ಆಕಾಶವಾಣಿ ೧೯೬೭ ರಲ್ಲಿ ತನ್ನ ಕಮರ್ಷಿಯಲ್ ಸರ್ವೀಸ್ ಆರಂಭಿಸಿತು. ಅದೇ ರೀತಿ ದೂರದರ್ಶನವೂ ಕಮರ್ಷಿಯಲ್ ಸರ್ವೀಸ್ ಆರಂಭಿಸಿದ್ದು ಕೇವಲ ಹದಿನೈದು ವರ್ಷಗಳಹಿಂದೆ. ಅಂದರೆ ೧೯೭೬ ರಲ್ಲಿ. ಮೊದಲು ದೂರದರ್ಶನವೇ ಸಿದ್ಧಪಡಿಸಿದ ಕಾರ್ಯಕ್ರಮಗಳನ್ನು ಇತರ ಪ್ರಾಯೋಜಕರ ನೆರವಿನಿಂದ ಬಿತ್ತರಿಸುತ್ತಿತ್ತು. ಆದರೆ ೧೯೮೪ ರಲ್ಲಿ ಖಾಸಗಿಯವರ ಪ್ರಾಯೋಜಿತ ಕಾರ್ಯಕ್ರಮಗಳನ್ನು ಪ್ರಸರಿಸಲು ಆರಂಭಿಸಿದ ದೂರದರ್ಶನ ಅದರಲ್ಲಿ ಬಹುತೇಕ ಯಶಸ್ಸು ಗಳಿಸಿತು. ಇದರಂತೆ ಪ್ರಸಾರವಾಗುವ ಕಾರ್ಯಕ್ರಮಗಳ ಪೂರ್ಣ ವೆಚ್ಚವನ್ನು ಪ್ರಾಯೋಜಕರೇ ಭರಿಸಿದರೆ, ಇದರಿಂದ ಪ್ರಾಯೋಜಕರಿಗೆ ಲಭ್ಯವಾಗುವುದು ಕೆಲವು ಕ್ಷಣಗಳ ಜಾಹೀರಾತುಗಳಿಗಾಗಿ ಅವಕಾಶ. ಹೀಗೆ ದೂರದರ್ಶನದ ಜಾಹೀರಾತುಗಳು ಉತ್ಪಾದಕರಿಗೆ ವರವಾಗಿಯೇ ಕಾಣುತ್ತಿದೆ.

ಸಮೃದ್ಧ ಆದಾಯ

ವರ್ಷಂಪ್ರತಿ ಇಂತಹ ಜಾಹೀರಾತುಗಳ ಮೂಲದಿಂದ ದೂರದರ್ಶನದ ಗಳಿಕೆ ಏರುಮುಖವಾಗುತ್ತಲೇ ಇದೆ. ಆರಂಭದ ವರ್ಷದಲ್ಲಿ ದೂರದರ್ಶನ ಜಾಹೀರಾತಿನ ಮೂಲಕ ಗಳಿಸಿದ್ದು ಕೇವಲ ೭೫ ಲಕ್ಷ ರೂಪಾಯಿಗಳು ಮಾತ್ರ. ೧೯೮೮-೮೯ ನೇ ಸಾಲಿನಲ್ಲಿ ೧೬೧ ಕೋಟಿ ರೂಪಾಯಿಗಳಿಗೇರಿತು. ಅದು ಕಳೆದ ವರ್ಷದಲ್ಲಿ ೨೦೦ ಕೋಟಿಯನ್ನು ಮೀರಿದೆ.

ಈ ಜಾಹೀರಾತುಗಳು ಹೊಸ, ಹೊಸ ಉತ್ಪಾದನೆಗಳ ಕುರಿತಾಗಿ ಗ್ರಾಹಕನಿಗೆ ಪರಿಚಯಿಸುವ ಸಂದೇಶವೇನೋ ಸರಿ. ಇವುಗಳು ಇಂದಿನ ಮುಂದುವರಿದ ತಾಂತ್ರಿಕತೆ ಮತ್ತು ಸಾಮಾಜಿಕ ಪರಿಕಲ್ಪಗಳಿಗೆ ಪೂರಕವಾಗಿ ಸೃಷ್ಟಿಯಾಗುತ್ತಲಿವೆ. ಒಂದು ವೇಳೆ ಇದು ಇತ್ತೀಚಿನ ಬದಲಾದ ಆರ್ಥಿಕ, ಸಾಮಾಜಿಕ ವ್ಯವಸ್ಥೆಗಳಿಗೆ ಹೊಂದಿಕೊಂಡೇ ಇದೆ ಎನ್ನುವ ಅಭಿಪ್ರಾಯಕ್ಕೆ ಬಂದರೂ, ಮುಖ್ಯವಾಗಿ ಜಾಹೀರಾತಿನ ಮೂಲ ಉದ್ದೇಶಕ್ಕಂತೂ ಹತ್ತಿರ ಬರಲಾರದು. ಜಾಹೀರಾತುಗಳು ಉತ್ಪಾದಿತ ವಸ್ತುವಿನ ಬಗ್ಗೆ ಸ್ಪಷ್ಟ ಚಿತ್ರಣವನ್ನು ಕೊಡುವುದರಿಂದ ದೂರವಾಗಬಾರದು.

ನಿಜಕ್ಕೂ ಗ್ರಾಹಕ ಪ್ರತಿಕ್ರಿಯಿಸುವುದು- ಒಂದು ಜಾಹೀರಾತು- ಆ ಉತ್ಪಾದನೆಯ ಕುರಿತು ಸ್ಪಷ್ಟ ಚಿತ್ರಣವನ್ನು, ಇನ್ನಿತರ ಯಾವುದೇ ಸಂವಹನ ಮಾಧ್ಯಮಕ್ಕಿಂತಲೂ ಅತಿ ಕಡಿಮೆ ವೆಚ್ಚದಲ್ಲಿ ನೀಡಿದಾಗ ಮಾತ್ರ. ಈ ಸೂತ್ರ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಸಮಾಜಕ್ಕೆ ಸಮಾನವಾಗಿ ಅನ್ವಯಿಸಲ್ಪಡುತ್ತದೆ.

ನಿಜಕ್ಕೂ ಜಾಹೀರಾತುಗಳಿಗೆ ಉತ್ಪಾದನಾ ವಸ್ತುಗಳ ಬೆಲೆ ನಿಯಂತ್ರಣ ಹಾಗೂ ಬಂಡವಾಳ ಶಾಹೀ ಉತ್ಪಾದಕನ ಏಕಸ್ವಾಮ್ಯತೆಗಳನ್ನು ಮುರಿಯುವ ಶಕ್ತಿಯೂ ಇದೆ. ಇವು ಅನುಕೂಲದ ಅಂಶಗಳಾಗಿ ಗ್ರಾಹಕನಿಗೆ ಕಂಡರೂ ಮುಖ್ಯವಾಗಿ ಇನ್ನಿತರ ಪರಿಣಾಮಗಳನ್ನು ನಾವು ಗಮನಿಸಬೇಕಾಗುತ್ತದೆ.

ಇಂತಹ ಜಾಹೀರಾತುಗಳ ಪ್ರಭಾವದಿಂದ ಅನಗತ್ಯ ಬಳಕೆ, ಕೃತಕ ಅವಶ್ಯಕತೆಗಳ ಸೃಷ್ಟಿ, ಅನಿಯಂತ್ರಿತ ಬೆಲೆಗಳೂ ಉಂಟಾಗಬಹುದು. ವಾಸ್ತವವಾಗಿ ಇದೇ ನಿಜವಾದ ಮಾತು ಆಗಬಹುದು. ಉದಾಹರಣೆಗೆ ಟಿ.ವಿ.ಯಲ್ಲಿ ಬರುವ ಜಾಹೀರಾತುಗಳು ಸಾಮಾನ್ಯವಾಗಿ ಶ್ರೀಮಂತ ವ್ಯವಸ್ಥೆಗೆ ಸೃಷ್ಟಿಯಾದಂತೆ ಗೋಚರವಾಗುವ ಇವುಗಳು ನೀಡುವ ಸಂದೇಶವೂ ಅಷ್ಟೇ ಕೃತಕವೆನ್ನಿಸುತ್ತವೆ.

ಇವು ಬದುಕಿಗೂ ಮಿಗಿಲಾದ್ದು ಎನ್ನುವ, ಎಲ್ಲರಿಗಿಂತಲೂ ಬುದ್ಧಿವಂತಿಕೆಯನ್ನು ತೋರುವ ನೋಟಗಳು ಒಂದು ಕಡೆಯಾದರೆ, ಕೆಲವೊಮ್ಮೆ ಎಲ್ಲವೂ ಸ್ಟೀರಿಯೋಟೈಪ್, ಇತ್ತೀಚಿನ ಜಾಹೀರಾತುಗಳ ಪ್ರವಾಹದಲ್ಲಿ ಕಾಣಬಹುದಾದ ಮುಖ್ಯ ಅಂಶವೆಂದರೆ ಅದು ಇಡಿಯ ಸಮೂಹವನ್ನೇ 'ಮೆಸ್ಮರಿಸಂ' ಮಾಡುವಷ್ಟು ಪ್ರಭಾವಶಾಲಿಯಾಗಿರುವುದು. ನಿಜಕ್ಕೂ ಇಂದು ಜಾಹೀರಾತುಗಳು ಗ್ರಾಹಕ



ರನ್ನು ಉತ್ತೇಜಿಸುವುದು ಉತ್ತಮವಾದ ವಸ್ತು ಎನ್ನುವುದಕ್ಕಿಂತಲೂ ಹೆಚ್ಚಾಗಿ ಯಾವ 'ಬ್ರ್ಯಾಂಡ್' ಜನಪ್ರಿಯವೆನ್ನುವುದನ್ನಷ್ಟೇ. ಈ ಅಂಶ ಅಡುಗೆ ಎಣ್ಣೆಯ ಜಾಹೀರಾತಿನಿಂದ ಮೊದಲ್ಗೊಂಡು ಗರ್ಭನಿರೋಧಕ ಸಾಧನಗಳ ವರೆಗೂ ಅನ್ವಯವಾಗುತ್ತದೆ.

ಎರಡನೆಯದಾಗಿ ಟಿ.ವಿ. ಎದುರು ಕುಳಿತು ವೀಕ್ಷಿಸುವ ಅಬಾಲ ವೃದ್ಧ-ವೀಕ್ಷಕ ಸಮೂಹಕ್ಕೆ ಕೆಲವು ಜಾಹೀರಾತುಗಳಲ್ಲಿ 'ಸೆಕ್ಸ್' ವೈಭವೀಕರಿಸಲ್ಪಡುತ್ತದೆ. ಅದು ಸಂಬಂಧಿಸಿದ ಸರಕಿಗೆ ಪೂರಕವಾಗಿದೆಯೋ ಇಲ್ಲವೋ, ಒಟ್ಟಿನಲ್ಲಿ 'ಸೆಕ್ಸ್' ಆಕರ್ಷಣೆಯು ಕೇಂದ್ರ ಬಿಂದುವಾಗುತ್ತದೆ. ಉದಾಹರಣೆಗೆ ಒಂದು ದೃಶ್ಯ. 'ಸ್ವಿಮ್ ಸೂಟ್' ಧರಿಸಿದ ಹುಡುಗಿಯೊಬ್ಬಳು ಈಜು ಕೊಳಕ್ಕೆ ಹಾರಿ ಮೇಲೆದ್ದು ಬಂದು ಆಕೆ ನೀಡುವ ಸಂದೇಶ- ಇಂತಹ ಕಾಫಿಯನ್ನೇ ಉಪಯೋಗಿಸಿ.

ಹೀಗೆ ಜಾಹೀರಾತುಗಳಿಂದ ಮಕ್ಕಳ ಮೇಲಾಗುವ ದುಷ್ಪರಿಣಾಮಗಳು ಹಲವು ಇವೆ. ಹಳ್ಳಿಗಾಡಿನಲ್ಲಿ ಹುಟ್ಟಿ ಬೆಳೆದ ಮಕ್ಕಳು ಇಂತಹ ಜಾಹೀರಾತಿನಿಂದ ಮನಸ್ಸಿನೊಳಗೆ ಕೀಳರಿಮೆಗಳನ್ನು ಬೆಳೆಸಿಕೊಳ್ಳುವ ಸಾಧ್ಯತೆಗಳಿವೆ. ಹತಾಶೆಯ ಮನೋಭಾವವೂ ಬೆಳೆಯುತ್ತದೆ. ಇಂಥಾದ್ದೇ ಪ್ರಕ್ರಿಯೆ ಬೆಳೆಯುತ್ತಾ ಬಂದಲ್ಲಿ ಪ್ರತಿಕೂಲ ಪರಿಣಾಮಗಳೇ ಹೆಚ್ಚಾಗಲೂಬಹುದು. ಒಂದು ಕಡೆ ಶ್ರೀಮಂತ ಕುಟುಂಬದ ಕಲ್ಪನೆಗಳನ್ನು ಮೂಡಿಸಿಕೊಳ್ಳುತ್ತಾ ಬೆಳೆಯುವ ಮುಗ್ಧ ಬಡಮಕ್ಕಳ ಮನದಲ್ಲಿ ವರ್ಗಭೇದದ ಮೂಲಬೀಜ ಬಿತ್ತಲೂಬಹುದು.

ವಿಮರ್ಶಾತ್ಮಕ ದೃಷ್ಟಿ

ಒಟ್ಟಿನಲ್ಲಿ ಜಾಹೀರಾತುಗಳಿಂದುಂಟಾಗುವ ತಪ್ಪು-ಒಪ್ಪುಗಳಿಗೆ ಕೇವಲ ಸಮೂಹಗಳಷ್ಟೆ ಹೊಣೆಯಲ್ಲ. ವಾಸ್ತವವಾಗಿ ಇಂತಹ ಜಾಹೀರಾತುಗಳ ಹಿಂದಿರುವ ಉತ್ಪಾದಕರು, ಪ್ರೇಕ್ಷಕರನ್ನು ತಮ್ಮತ್ತ ಸೆಳೆಯುವ ಏಕಮಾತ್ರ ಉದ್ದೇಶದಿಂದ ವೈಭವೀಕರಣ ಹೆಚ್ಚಾಗಿಯೂ ನಡೆದಿದೆ. ಹೆಚ್ಚಿನ ಮಂದಿ ತಮ್ಮ ಜಾಹೀರಾತುಗಳನ್ನು ವೀಕ್ಷಿಸಬೇಕೆನ್ನುವುದೇ ಮುಖ್ಯ

ಜಾಹಿರಾತಿನ ಮರ್ಮ

ದಕ್ಷಿಣ ಭಾರತದ ಸಿಗರೇಟು ಕಂಪೆನಿಯೊಂದು ಹೊಸ ಬ್ರಾಂಡಿನ ಸಿಗರೇಟ್ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತು. ಅದರ ಜಾಹೀರಾತಿಗಾಗಿ ನಗರದ ಜಾಹೀರಾತು ಸಂಸ್ಥೆಗೆ ವಹಿಸಿಕೊಟ್ಟಿತು. ಮುಂಬೈನಿಂದ ಮಾಡೆಲಿಂಗ್‌ಗಳನ್ನು ಕರೆಸಿದ ಆ ಜಾಹೀರಾತು ಸಂಸ್ಥೆ ಎರಡು ನಿಮಿಷದ ಜಾಹೀರಾತು ಚಿತ್ರವನ್ನು (Ad Film) ತಯಾರಿಸಿ ಎಲ್ಲೆಡೆ ಬಿಡುಗಡೆ ಮಾಡಿತು. ತುಂಬಾ ಆಕರ್ಷಕವಾಗಿದ್ದ ಜಾಹೀರಾತು ಪ್ರೇಕ್ಷಕರನ್ನೇನೊ ತಲುಪಿತು.

ನಂತರ ಸಿಗರೇಟು ಕಂಪೆನಿಯ ಅಧಿಕಾರಿಯೊಬ್ಬರು ಆ ಜಾಹೀರಾತು ಸಂಸ್ಥೆಯ ಮುಖ್ಯಸ್ಥರನ್ನು ಕುರಿತು ಜಾಹೀರಾತು ಆಕರ್ಷಕವಾಗಿರುವ ಬಗ್ಗೆಯೂ ಮೆಚ್ಚಿಗೆ ಸೂಚಿಸಿದರು. ಹಾಸ್ಯ ಪ್ರಿಯರಾದ ಜಾಹೀರಾತು ಸಂಸ್ಥೆಯ ಮುಖ್ಯಸ್ಥರು ತಕ್ಷಣವೇ ಹೇಳಿದರಂತೆ. "ನಮ್ಮ ಜಾಹೀರಾತೇನೋ ತುಂಬಾ ಚೆನ್ನಾಗಿದೆ ನಿಜ. ಅದೇ ರೀತಿ ನಿಮ್ಮ ತಯಾರಿಕೆಯ ಸಿಗರೇಟ್ ಶೇಕಡಾ ಹತ್ತರಷ್ಟಾದರೂ ನಿಜವಾಗಿ ಒಳ್ಳೆಯದಿದ್ದಲ್ಲಿ ಒಳ್ಳೆಯ ಮಾರಾಟ ಖಂಡಿತಾ ಎಂದರಂತೆ !

ಇದು ಇಂದಿನ ಉತ್ಪಾದನೆ ಮತ್ತು ಜಾಹೀರಾತುಗಳ ನಡುವಿನ ಗುಣಮಟ್ಟದ ಖಾತರಿ !

ಗುರಿ. ಆದ್ದರಿಂದ ಇಲ್ಲಿ ವೈಚಾರಿಕತೆ, ನೀತಿ, ಸಾಮಾಜಿಕ ಜವಾಬ್ದಾರಿ ಮುಂತಾದ ಉದ್ದೇಶಗಳು ನಗಣ್ಯ. ಎಲ್ಲಿಯೋ ಬೆರಳಣಿಕೆಯ ಉದಾಹರಣೆಗಳಲ್ಲಿ ಮಾತ್ರವೆ.

ಮಕ್ಕಳನ್ನು ಮಂತ್ರಮುಗ್ಧರನ್ನಾಗಿಸುವ ಜಾಹೀರಾತುಗಳು ಹಿರಿಯರಿಗೆ ತಲೆನೋವು. ಅವಾಸ್ತವಿಕ, ಅನಪೇಕ್ಷಿತ ಆಕಾಂಕ್ಷೆಗಳನ್ನು ಮಕ್ಕಳ, ಅಷ್ಟೇಕೆ ಹಿರಿಯರ ಮನಸ್ಸಿನಲ್ಲಿಯೂ ಸೃಷ್ಟಿಸಬಲ್ಲವು ಇವು. ಇಂತಹ ಜಾಹೀರಾತುಗಳ ಸತ್ಯಾಂಶಗಳನ್ನು ಮೊದಲು ನಾವೆಂದೂ ವಿಮರ್ಶಾತ್ಮಕ ದೃಷ್ಟಿಯಲ್ಲಿ ಕಂಡು ಕೊಳ್ಳಬೇಕಾಗುತ್ತದೆ. ಏಕೆಂದರೆ ಪ್ರತಿಯೊಂದು ನಾಡಿನ ಜೀವನ ಶೈಲಿ ವೈವಿಧ್ಯವೇ ಆಗಿರುವ ಕಾರಣ ಪ್ರತಿ ಜಾಹೀರಾತಿನ ವಸ್ತು, ಉದ್ದೇಶಗಳು ಬದಲಾಗುವುದು ಕೂಡಾ ಅನಿವಾರ್ಯವಾಗುತ್ತದೆ.

ಬಂಡವಾಳ ಶಾಹಿ, ಶ್ರೀಮಂತ ರಾಷ್ಟ್ರದ ಮಾರುಕಟ್ಟೆಯಲ್ಲಿ ಇರಬಹುದಾದ ಜಾಹೀರಾತು ಶೈಲಿ ನಮ್ಮ ರಾಷ್ಟ್ರಕ್ಕೆ ಅನ್ವಯಿಸಿಕೊಳ್ಳಲು ಸಾಧ್ಯವೂ ಇಲ್ಲ. ಜಾಹೀರಾತುಗಳ ಮುಖ್ಯ ಪಾತ್ರ ಉತ್ಪಾದಿತ ವಸ್ತುವಿನ ಮಾರಾಟದಲ್ಲಿ 'ಪ್ರಮೋಟರ್' ಆಗಿರಬೇಕೆನ್ನುವುದು ಸತ್ಯವೇ ಆಗಿದ್ದರೂ ಅದರ ಮಾರುಕಟ್ಟೆ ಉದ್ದೇಶ. ಒಂದು ರಾಷ್ಟ್ರೀಯ ಹಿತದ ಪರಿಮಿತಿಯೊಳಗೇ ಇರಬೇಕಾಗುತ್ತದೆ.

ಇಂದು ಜಾಹೀರಾತುದಾರರ ಮೊದಲ ಆಯ್ಕೆ ಏನಿದ್ದರೂ ಟೆಲಿವಿಷನ್. ಉತ್ಪಾದಕರಿಗೆ ಅದೊಂದು ಘನತೆಯ ಪ್ರತೀಕ. ಅಥವಾ ತತ್‌ಕ್ಷಣದಲ್ಲಿ ಗ್ರಾಹಕರ ಮನೋಧರ್ಮವನ್ನು ತಮ್ಮತ್ತ ಹಿಡಿದಿಡುವ ಪ್ರಯತ್ನ.

ಒಟ್ಟಾರೆ ಯಾವುದೇ ಮಾರುಕಟ್ಟೆ ಯಶಸ್ವಿಯಾಗುವುದು ಜನಸಾಮಾನ್ಯ ಗ್ರಾಹಕರ ನಿರ್ಧಾರಗಳಲ್ಲಿ. ನಿಜಕ್ಕೂ ಗುಣಮಟ್ಟ ಮಾತ್ರವೇ ಆ ರೇಸಿನೊಳಗೆ ಗೆಲ್ಲಬಲ್ಲದು. ಆದರೂ ಇಂದಿನ ಜಾಹೀರಾತುಗಳು ಬಹಳಷ್ಟು ಗ್ಲಾಮರ್ ಅಥವಾ 'ಶೋಬಿಜ್' ಎನ್ನುವ ಭ್ರಾಮಕ ಕಲ್ಪನೆಗಳಲ್ಲಿ ಮೆರೆಯುತ್ತಲೇ ಇವೆ. ಒಂದೇ ಮಾತಿನಲ್ಲಿ ಈ ಜಾಹೀರಾತುಗಳ ಶೈಲಿಯನ್ನು ಕುರಿತು ವಿವರಿಸಬಹುದಾದರೆ "ಎಲ್ಲವೂ ಪ್ರಥಮ ದರ್ಜೆಯ ಉತ್ಪಾದನೆಗಳೇ ಮತ್ತು ನಿತ್ಯದ ಬದುಕಿಗೆ ಅನಿವಾರ್ಯವಾದುದೇ" ಐದೇ ನಿಮಿಷದ ಜಾಹೀರಾತಿನ ಅವಧಿಯಲ್ಲಿ "ಪ್ರತಿಯೊಂದು ಸಾಬೂನು ಶ್ರೇಷ್ಠವೆಂದೇ ಆಯಾ ತಾರೆಯರು ಶಿಫಾರಸ್ಸು ಮಾಡುತ್ತಾರಲ್ಲವೇ.... ?"

(ಸಂಗ್ರಹ)

ಭೂಶೃಂಗ ಸಮ್ಮೇಳನ ಸಾಧಿಸಿದ್ದೇನು?


● ಅರುಣ

ಬ್ರೆಜಿಲ್‌ನ ರಿಯೋ ಡಿ ಜನ್ಯೆರೋ ನಗರ ದಲ್ಲಿ (ಜೂನ್ 4ರಿಂದ 14ರ ವರೆಗೆ) ಜರುಗಿದ ಭೂಶೃಂಗಸಭೆಯಲ್ಲಿ ಭೂಮಿಯನ್ನು 'ಬದುಕಿಸಿ ಕೊಳ್ಳುವ' ಬಗೆ ಹೇಗೆ ಎಂಬುದರ ಕುರಿತು ವಿಸ್ತೃತವಾಗಿ ಚರ್ಚಿಸಿ ಮಹತ್ವದ ಒಪ್ಪಂದಗ ಳನ್ನು ಕೈಗೊಳ್ಳಲಾಯಿತು. ಗಾತ್ರ ಹಾಗೂ ವ್ಯಾಪ್ತಿಯ ದೃಷ್ಟಿಯಿಂದ ಇದೊಂದು ಅಭೂತ ಪೂರ್ವ ಸಮಾವೇಶ. ಸಂಯುಕ್ತ ರಾಷ್ಟ್ರ ಸಂಸ್ಥೆಯ ಪರಿಸರ ಮತ್ತು ಅಭಿವೃದ್ಧಿ ಸಮ್ಮೇಳ ನದ ಚೌಕಟ್ಟಿನಲ್ಲಿ ನಡೆದ ಭೂಶೃಂಗ ಸಮ್ಮೇಳ ನವನ್ನು ಅದರ ಸಂಘಟಕ ಮೌರಿಸ್ ಸ್ಟ್ರಾಂಗ್ "ಭೂಮಂಡಲದ ಮಹಾ ಸಂಸತ್ತು" ಎಂದು ವರ್ಣಿಸಿರುವದರಲ್ಲಿ ಅತಿಶಯೋಕ್ತಿ ಏನಿಲ್ಲ. 158 ರಾಷ್ಟ್ರಗಳ 15,000 ಮಂದಿ ಭಾಗವಹಿಸಿದ್ದ ಈ ಶೃಂಗ ಸಭೆಯಲ್ಲಿ ಶಕ್ತ ರಾಷ್ಟ್ರಗಳ, ಅಭಿವೃ ದ್ಧಿಶೀಲ ರಾಷ್ಟ್ರಗಳ ಹಾಗೂ ಕಡುಬಡ ರಾಷ್ಟ್ರಗಳ ...000 ಪ್ರತಿನಿಧಿಗಳೂ ಹಾಗೂ ಈ ರಾಷ್ಟ್ರಗಳ ಮುಖ್ಯಸ್ಥರೂ ಪಾಲುಗೊಂಡಿದ್ದರು. ಭೂ ಗ್ರಹದ ಪರಿಸರವನ್ನು - ಅಭಿವೃದ್ಧಿಯ ಚಕ್ರಗಳ ಗತಿಗೆ ತಡೆಯಾಗದಂತೆ - ರಕ್ಷಿಸುವ ವಿಧಿ ವಿಧಾನಗಳ ಬಗ್ಗೆ ವ್ಯಾಪಕ ಚರ್ಚೆ ನಡೆಯಿತು.

ಭವಿಷ್ಯದ ತಲೆಮಾರಿನ ಜನತೆಗೆ ಸಂಪನ್ಮೂಲ ಗಳ ಕೊರತೆಯಾಗದ ಹಾಗೆ ಪ್ರಸಕ್ತ ತಲೆಮಾರಿನ ಅವಶ್ಯಕತೆಗಳನ್ನು ಪೂರೈಸಲು ಆದ್ಯ ಗಮನ ನೀಡಬೇಕೆಂಬ ಒಮ್ಮತಾಭಿಪ್ರಾಯ ಈ ಸಮ್ಮೇಳ ನದ್ದು. ಬೃಹತ್ ಅಂತಾರಾಷ್ಟ್ರೀಯ ಶೃಂಗಸ ಭೆಯ ಚೌಕಟ್ಟಿನಲ್ಲಿ ಕೊನೆಯೇ ಇಲ್ಲವೇನೊ ಎಂದು ಭಾಸವಾಗುವ ಚರ್ಚೆಗಳು ವಿಚಾರಗೋ ಷ್ಠಿಗಳು ನಡೆದುವು. 'ಹೊಸ ಯುಗದಲ್ಲಿ ಭೌತಿಕ ಅಮರತ್ವಕ್ಕಾಗಿ ಆಧ್ಯಾತ್ಮಿಕ ಪಾವಿತ್ರ್ಯ' ಎಂಬುದು ವಿಚಾರಗೋಷ್ಠಿಯೊಂದರ ಶೀರ್ಷಿಕೆ. ರಿಯೊ ಡಿ ಜನ್ಯೆರೋ ನಗರದಿಂದ 35 ಕಿಲೋ ಮೀಟರ್ ದೂರದಲ್ಲಿ ಆರು ಲಕ್ಷ ಚದರ ಮೀಟರ್ ವಿಸ್ತಾರದ ಭವ್ಯ ಸಭಾಭವನದಲ್ಲಿ ನಡೆದ ಭೂಶೃಂಗಸಭೆ ಅಂತಿಮವಾಗಿ ಸಾಧಿಸಿ ದ್ದೇನು? ಸಾಧನೆಗಿಂತಲೂ ಮಿಗಿಲಾಗಿ ಅಪಸ್ವರ ಗಳು ಕೇಳಿಬಂದುವು, ವಿಫಲತೆಗಳೇ ಅಧಿಕವಾಗಿ ದ್ದುವು. "ಶೃಂಗ ಸಮ್ಮೇಳನದ ಐತಿಹಾಸಿಕ ಘೋಷಣೆಗೆ 'ಟೆನ್ ಕಮಾಂಡ್‌ಮೆಂಟ್ಸ್'ನಷ್ಟೇ ಮಹತ್ವವಿದೆ. ಅದನ್ನು ಪಾಲಿಸದವರು ನರಕಕ್ಕೆ ಹೋಗುತ್ತಾರೆ," ಎಂಬ ಬ್ರೆಜಿಲಿನ ರಾಜತಾಂ ತ್ರಿಕ ಬರ್ನಾಂಡೊ ಪೆರಿಕಾಸ್ ಅವರ ಅಭಿ ಪ್ರಾಯ ಶೃಂಗಸಭೆಯ ಬಗ್ಗೆ ಸಿಕ್ಕಬಹುದಾದ ಅತ್ಯುತ್ತಮ ವ್ಯಾಖ್ಯಾನ. ಪರಿಸರವಾದಿಗಳ ಪ್ರಮುಖ ಚಿಂತೆ ರಿಯೋ ಘೋಷಣೆಗೆ ಸರಕಾರ ಗಳು ಬದ್ಧವಾಗುತ್ತವೆಯೇ ಇಲ್ಲವೇ ಎಂಬುದಾ ಗಿರಲಿಲ್ಲ; ಭೂಮಂಡಲದ ಆರೋಗ್ಯವನ್ನು ಕಾಪಾಡುವ ದಿಶೆಯಲ್ಲಿ ಸಂಪೂರ್ಣ ತದ್ವಿರುದ್ಧ

ವಾದ, ಸ್ವಾರ್ಥ ಹಿತಾಸಕ್ತಿಗಳುಳ್ಳ ರಾಷ್ಟ್ರಗಳನ್ನು ಸಮಾನ ಕಾರ್ಯಭಾರಗಳಿಗೆ ಒಪ್ಪುವಂತೆ ಮಾಡುವುದು ಹೇಗೆ ಎಂಬುದೇ ಆಗಿತ್ತು. ಶೃಂಗ ಸಭೆಯ ಸಮಾರೋಪದ ದಿನದಂದು ಪ್ರಕಟವಾದ ಐತಿಹಾಸಿಕ 'ರಿಯೋ ಘೋಷಣೆ'ಗೆ ಸಹಿಹಾಕಿದ ಸುಮಾರು 178 ರಾಷ್ಟ್ರಗಳಿಗೆ ಭವಿಷ್ಯದ ದಿನಗಳಲ್ಲಿ ಪರಿಸರ ಸಂರಕ್ಷಣೆ ಕುರಿತ ಕಾರ್ಯಕ್ರಮಗಳ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಅವುಗಳ ರಾಷ್ಟ್ರೀಯ ಆರ್ಥಿಕ ಹಿತಾಸಕ್ತಿಗಳೇ ಪ್ರಮುಖವೆನಿಸಲಿವೆ. ಹೀಗಿರುವಾಗ ಭೂ ಪರಿಸರದ ಬಗ್ಗೆ ಕಾಳಜಿ ವ್ಯಕ್ತಪಡಿಸಿ ಒಪ್ಪಂದಗಳಿಗೆ ಸಹಿ ಹಾಕುವುದರಲ್ಲಿ ಯಾವ ಅರ್ಥವಿದೆ ಎಂದು ಬ್ರೆಜಿಲಿನ ಪರಿಸರವಾದಿಗಳ ಕ್ಲಬ್ ಸಿಯೆರಾದ ಮುಖ್ಯಸ್ಥ ವಿಲಿಯಂ ಮಾರ್ಕಿನ್ ಪ್ರಶ್ನಿಸಿದ್ದರಲ್ಲಿ ಹುರುಳಿಲ್ಲದಿಲ್ಲ.

ಅಲ್ಲಿ ನೆರೆದಿದ್ದ ಬಹುತೇಕ ಪ್ರತಿನಿಧಿಗಳಲ್ಲಿ ತೀವ್ರ ಖೇದ ಉಂಟು ಮಾಡಿದ್ದು ಅಮೆರಿಕದ ಅಧ್ಯಕ್ಷ ಬುಶ್ ತಳೆದ ನಿಲುವು. "ನಾನಿಲ್ಲಿ ಕ್ಷಮೆ ಕೇಳಲು ಬಂದಿಲ್ಲ" ಎಂಬ ಮಾತುಗಳಿಂದ ಪ್ರಾರಂಭವಾದ ಬುಶ್‌ರ ಭಾಷಣ ಪರಿಸರವಾದಿಗಳಿಂದ ಉಗ್ರ ಟೀಕೆಗೆ ಗುರಿಯಾಯಿತು. ಈ ವರ್ಷ ನವೆಂಬರ್‌ನಲ್ಲಿ ಅಧ್ಯಕ್ಷ ಚುನಾವಣೆ ಎದುರಿಸುತ್ತಿರುವ ಬುಶ್ ತಮ್ಮ ರಾಷ್ಟ್ರದಲ್ಲಿ ಉದ್ಯೋಗ ಪರಿಸ್ಥಿತಿ, ಆರ್ಥಿಕ ಪರಿಸ್ಥಿತಿ ಹಾಗೂ ಜೀವನ ಶೈಲಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಯಾವುದೇ ನಿರ್ಣಯಗಳಿಗೆ ಬದ್ಧರಾಗಲು, ಯಾವುದೇ ವಾಗ್ದಾನ ನೀಡಲು ಒಪ್ಪಲಿಲ್ಲ. ವಾಸ್ತವವಾಗಿ ಯೋಚಿಸಿದರೆ ಅಮೆರಿಕದ ಜೀವನ ವಿಧಾನ ಪರಿಸರ ಮಾಲಿನ್ಯಕ್ಕೆ ಸಾಕಷ್ಟು ಕೊಡುಗೆ ನೀಡಿದೆ. ಈ ಶತಮಾನದ 90 ವರ್ಷಗಳ ಅವಧಿಯಲ್ಲಿ ಅಲ್ಲಿಯ ಉದ್ಯಮಸ್ಥಾವರಗಳು ತಲಾ ಪ್ರತಿಯೊಬ್ಬ ಅಮೆರಿಕನ್ ನಾಗರಿಕನಿಗೆ ಸಮವಾಗುವಂತೆ 240 ಮಿಲಿಯ ಟನ್ ಕಾರ್ಬನ್ ಡೈ ಆಕ್ಸೈಡನ್ನು ವಾಯುಮಂಡಲಕ್ಕೆ ವಿಸರ್ಜಿಸಿದೆ. ಅಮೆರಿಕದ ಸರೋವರಗಳಲ್ಲಿ



ಶೇಕಡಾ 20ರಷ್ಟು 'ಆಮ್ಲ ಮಳೆ' ಯಿಂದ ಕಲುಷಿತ ವಾಗಿವೆ. ಔದ್ಯಮಿಕವಾಗಿ ಭಾರಿ ಪ್ರಗತಿ ಸಾಧಿಸಿ ರುವ ರಾಷ್ಟ್ರಗಳಲ್ಲಿ ಪ್ರತಿವರ್ಷ 150 ಮಿಲಿಯ ಟನ್‌ಗಳಿಗಿಂತಲೂ ಅಧಿಕ ಸಲ್ಫರ್ ಆಕ್ಸೈಡ್, 40 ಮಿಲಿಯ ಟನ್‌ಗಳಿಗೂ ಅಧಿಕ ನೈಟ್ರೋಜನ್ ಆಕ್ಸೈಡ್ ಮಾನವ ಚಟುವಟಿಕೆಗಳ ಪರಿಣಾಮ ವಾಗಿ ವಾಯುಮಂಡಲಕ್ಕೆ ಸೇರುತ್ತವೆ. ಕೆನಡಾದ ಒಂಟಾರಿಯೋದಲ್ಲಿ ನಿಕ್ಕೆಲ್ - ತಾಮ್ರ ಕರಗಿ ಸುವ ಒಂದು ಕಾರ್ಖಾನೆ ಪ್ರತಿವರ್ಷ 6,50,000 ಟನ್ ಸಲ್ಫರ್ ಆಕ್ಸೈಡನ್ನು ವಾತಾವರಣಕ್ಕೆ ಉಗು ಳುತ್ತದೆ. ಪರಿಸರ ಮಾಲಿನ್ಯವೆನ್ನುವ ರಾಕ್ಷಸ ಎಲ್ಲ ಅಭಿವೃದ್ಧಿ ಶೀಲ ರಾಷ್ಟ್ರಗಳ ಮೇಲೆ ತನ್ನ ಕಬಂಧ ಬಾಹು ಚಾಚಿದ್ದಾನೆ.

ಜೈವಿಕ ವೈವಿಧ್ಯ

ಜಗತ್ತಿನ ಅಮೂಲ್ಯ ಸಸ್ಯ ರಾಶಿಗಳು, ಪ್ರಾಣಿ ಸಂಪತ್ತನ್ನು ರಕ್ಷಿಸುವ ಮಹೋದ್ದೇಶದ ಜೈವಿಕ ವೈವಿಧ್ಯ (Bio diversity) ಒಪ್ಪಂದಕ್ಕೆ ಸಹಿ ಹಾಕಲು ಅಮೆರಿಕ ನಿರಾಕರಿಸಿತು. ಪರಿಸರ ಸಂರ ಕ್ಷಣೆ ಚಳವಳಿಯಲ್ಲಿ ಸದಾ ಮುಂಚೂಣಿಯಲ್ಲಿ ರುವ ಗ್ರೀನ್‌ಪೀಸ್ ಬುಶ್‌ರ ನಿಲುವನ್ನು ಪ್ರಬಲ ವಾಗಿ ಖಂಡಿಸಿ ಅವರನ್ನು ''ಪರಿಸರ ಕ್ಷೇತ್ರದ ಭಯೋತ್ಪಾದಕ'' ಎಂದು ಟೀಕಿಸಿತು. ಅಮೆರಿ ಕದ ಅಧ್ಯಕ್ಷರು ತಳೆದ ನಿಲುವು ಉಗ್ರ ಟೀಕೆಗೆ ಗುರಿಯಾಯಿತು. ಅಮೆರಿಕದ ಬದ್ಧ ಶತ್ರುವಾದ ಕ್ಯೂಬಾ ''ಸ್ವಕಪೋಲಕಲ್ಪಿತ ಕಮ್ಯೂನಿಸಂನ ಬೆದರಿಕೆ ಇಂದು ಜಾಗತಿಕ ರಂಗದಿಂದ ಕಣ್ಮರೆ ಯಾಗಿದೆ. ಶೀತಲಯುದ್ಧದ ಸಬೂಬುಗಳನ್ನು ಅಮೆರಿಕ ಇನ್ನೆಂದೂ ಮುಂದೊಡ್ಡುವಂತಿಲ್ಲ. ಇಂಥ ಪರಿಸ್ಥಿತಿಯಿರುವಾಗ ತೃತೀಯ ಜಗತ್ತಿನ ರಾಷ್ಟ್ರಗಳ ಅಭಿವೃದ್ಧಿಗೆ ನೆರವಾಗುವ ಸಂಪನ್ಮೂ ಲಗಳನ್ನು ತಕ್ಷಣ ಅವಕ್ಕೆ ಬಳಸಲು ಇರುವ ಅಡ್ಡಿಯಾದರೂ ಏನು? ಮೊದಲು ಪರಿಸರದ ಸಾಲವನ್ನು ತೀರಿಸೋಣ, ವಿದೇಶಿ ಸಾಲ ಪಾವ ತಿಯ ವಿಷಯವನ್ನು ಆ ಮೇಲೆ ನೋಡೋಣ'' ಎಂದು ಕ್ಯೂಬಾದ ಅಧ್ಯಕ್ಷ ಫಿಡೆಲ್ ಕಾಸ್ಟ್ರೋ ಗುಡುಗಿದರು.

> ## ಪೃಥ್ವಿ ಶೃಂಗ ಸಭೆಯಲ್ಲಿ ಮಕ್ಕಳು
>
> *''ಓಜೋನ್ ಪದರಿನಲ್ಲಿ ತೂತುಗಳಿರುವುದ ರಿಂದ ಬಿಸಿಲಲ್ಲಿ ಆಡ್ಡಾಡಲು ನನಗೆ ಭಯ ವಾಗುತ್ತದೆ. ಗಾಳಿಯಲ್ಲಿ ಯಾವೆಲ್ಲ ರಾಸಾ ಯನಿಕ ವಸ್ತುಗಳು ಬೆರೆತಿವೆಯೋ ಯಾರಿಗೆ ಗೊತ್ತು? ಆದ್ದರಿಂದ ಉಸಿರಾಡಲೂ ನನಗೆ ಭಯವಾಗುತ್ತದೆ. ಪರಿಸರವನ್ನು ಉತ್ತಮ ಗೊಳಿಸುವುದು ಹೇಗೆಂದು ನಿಮಗೆ ಗೊತ್ತಿಲ್ಲ ದಿದ್ದರೆ, ಅಷ್ಟೇ ಹೋಯಿತು, ದಯವಿಟ್ಟು ಅದನ್ನು ಇನ್ನಷ್ಟು ಹಾಳುಗೆಡವದಿರಿ.'' ಕೆನ ಡಾದ ಹನ್ನೆರಡು ವಯಸ್ಸಿನ ಬಾಲಕಿ ಸುಝುಕಿ ಭೂ ಶೃಂಗ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದ ಮಾತು. ಬಲಾಢ್ಯ ರಾಷ್ಟ್ರಗಳ ಅಧಿಪ ತಿಗಳು ಭಾಗವಹಿಸಿದ ಈ ಮಹಾ ಸಮ್ಮೇಳನ ದಲ್ಲಿ ನಾಲ್ವರು ಮಕ್ಕಳಿಗೆ ಭಾಷಣ ಮಾಡುವ ಅವಕಾಶ ದೊರಕಿತು. ''ಜಗತ್ತಿನಾದ್ಯಂತ ಹೊಟ್ಟೆಗಿಲ್ಲದೆ ಹಸಿವಿನಿಂದ ನರಳುವ ಮಕ್ಕಳ ಪರವಾಗಿ ಹಾಗೂ ದಿನವೂ ಹಿಂಸೆ ಯಿಂದ ಸಾಯುತ್ತಿರುವ ಅಸಂಖ್ಯಾತ ಪ್ರಾಣಿ ಗಳ ಪರವಾಗಿ ಮಾತನಾಡಲು ಬಂದಿದ್ದೇನೆ'' ಎಂದು ಸುಝುಕಿ ಹೇಳಿದಳು. ಭೂ ಶೃಂಗ ಸಮ್ಮೇಳನದಲ್ಲಿ ಕೆನಡಾದ ಇಬ್ಬರು, ಚಿಲಿ ಮತ್ತು ಜರ್ಮನಿಯ ಒಂದೊಂದು ಮಗು ಮಾತನಾಡಿದರು.*

ತನ್ನ ನಿಲುವನ್ನು ಒಪ್ಪಲು ಬ್ರಿಟನ್ ಮತ್ತು ಜಪಾನ್‌ಗಳನ್ನು ಅಮೆರಿಕ ಒತ್ತಾಯಿಸಿದರೂ ಅದು ಸಫಲವಾಗಲಿಲ್ಲ. ವಾತಾವರಣದ ವಾಯುಮಂಡಲಕ್ಕೆ ರಾಚುವ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣವನ್ನು ತಗ್ಗಿಸಲು ಎಲ್ಲ ರಾಷ್ಟ್ರ ಗಳೂ ಒಂದು ನಿರ್ದಿಷ್ಟ ವೇಳಾಪಟ್ಟಿಯನ್ನು ರೂಪಿಸಬೇಕು ಎಂಬ ಸಲಹೆಗೂ ಅಮೆರಿಕ ಒಪ್ಪಲಿಲ್ಲ.


- ಇಂದು ಪೃಥ್ವಿಯಲ್ಲಿರುವ ಒಟ್ಟು ಜೀವರಾಶಿ

ಗಳ ಪೈಕಿ 1.8 ಮಿಲಿಯ ಜೀವರಾಶಿಗಳನ್ನು ಖಚಿತವಾಗಿ ಗೊತ್ತು ಹಚ್ಚಲಾಗಿದೆ. ಇದುವರೆಗೂ ಖಚಿತವಾಗಿ ಗೊತ್ತುಹಚ್ಚಲಾಗದ 60 ಮಿಲಿಯ ಜೀವರಾಶಿಗಳಿವೆ.

- ಒಂದು ನಿರ್ದಿಷ್ಟ ಜಾತಿಯ ಸಸ್ಯ-ಜೀವರಾಶಿಯ ನಾಶದಿಂದ ಆಹಾರಕ್ಕಾಗಿ ಅದನ್ನೇ ಅವಲಂಬಿಸಿದ 30 ಪ್ರಾಣಿ ಹಾಗೂ ಕೀಟ ಪ್ರಭೇದಗಳು ನಿರ್ನಾಮವಾಗುತ್ತವೆ.
- ಮುಂದಿನ ಎಂಟು ವರ್ಷಗಳ ಅವಧಿಯಲ್ಲಿ ಒಂದು ಮಿಲಿಯ ಜೀವರಾಶಿಗಳು ಪೃಥ್ವಿಯಿಂದ ಕಣ್ಮರೆಯಾಗಬಹುದು. ಅದರ ಮುಂದಿನ 60 ವರ್ಷಗಳ ಅವಧಿಯಲ್ಲಿ ಅರ್ಧಕ್ಕರ್ಧ ಜೀವರಾಶಿಗಳು ನಾಶವಾಗಲಿವೆ. ಅಂಥ ಜೀವರಾಶಿಗಳು ಅಸ್ತಿತ್ವದಲ್ಲಿದ್ದುವೇ ಇಲ್ಲವೇ ಎಂಬುದನ್ನು ನಾವು ತಿಳಿದುಕೊಳ್ಳುವ ಮೊದಲೇ ಈ ನಾಶ ಸಂಭವಿಸಲಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಅಮೂಲ್ಯ ಸಸ್ಯ ಹಾಗೂ ಪ್ರಾಣಿ-ಜೀವರಾಶಿಗಳನ್ನು ಉಳಿಸಿ ಸಂರಕ್ಷಿಸುವುದೇ ಜೈವಿಕ ವೈವಿಧ್ಯ ಒಪ್ಪಂದದ ಗುರಿ. ಭಾರತ ಮತ್ತು ಬ್ರೆಜಿಲ್ ಈ ಒಪ್ಪಂದಕ್ಕೆ ಸಹಿ ಹಾಕಿದವು. ಜೈವಿಕ ಸಂಪನ್ಮೂಲಗಳು ಹಾಗೂ ಅದರ ಮೂಲಕ ಹರಿಯುವ ತಂತ್ರಜ್ಞಾನ ಇವುಗಳಿಗಿರುವ ನಿಕಟ ಸಂಬಂಧದ ಅಂಗೀಕಾರ ಈ ಒಪ್ಪಂದದ ಜೀವಾಳವಾಗಿದೆ. ಜೈವಿಕ ಸಂಪನ್ಮೂಲಗಳ ರಕ್ಷಣೆಗಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವಿಶೇಷ ನೆರವು ನಿಧಿ ಒದಗಿಸಲು ಒಪ್ಪಂದ ಸೂಚಿಸಿದೆ.

ಓಜೋನ್ ಪದರ ತೆಳ್ಳಗಾಗುತ್ತಾ ಹೋಗಿ ಕೊನೆಗೆ ತೂತಾಗುವ ಪ್ರಕ್ರಿಯೆ ಜಾಗತಿಕ ಪರಿಸರ ರಂಗದ ಜ್ವಲಂತ ಸಮಸ್ಯೆ. ಓಜೋನ್ ಪದರ ಸೂರ್ಯನಿಂದ ಹೊಮ್ಮುವ ಅಲ್ಟ್ರಾವಯೋಲೆಟ್ ಕಿರಣಗಳ ಬಾಧೆಯಿಂದ ಜೀವರಾಶಿಯನ್ನು ರಕ್ಷಿಸುತ್ತದೆ. ಈ ಸಮಸ್ಯೆ ಇತರ ಎಲ್ಲ ರಾಷ್ಟ್ರಗಳಿಗಿಂತಲೂ ಮಿಗಿಲಾಗಿ ಅಮೆರಿಕ ಮತ್ತು ಕೆನಡಾಗಳ ಮೇಲೆ ತೀವ್ರ ಬೆದರಿಕೆಯೊಡ್ಡಿದೆ.

ಅಮೇರಿಕಕ್ಕೆ ಹೋಲಿಸಿದರೆ ಇಂಧನ ಬಳ



"ಗೊಂಬೆಗಳ ಮದುವೇನಾ ತುಂಬಾ ಅದ್ದೂರಿಯಾಗೇ ಮಾಡೀದ್ರು. ಈಗ ಅದೇನು ತಕರಾರೋ, ಡೈವೋರ್ಸ್ ಬೇಕಂತೆ.."

ಕೆಯ ದೃಷ್ಟಿಯಿಂದ ಜಪಾನ್ ಹೆಚ್ಚು ಪರಿಣಾಮಕಾರಿ ಅರ್ಥವ್ಯವಸ್ಥೆ ಹೊಂದಿದೆ. ಈ ಕಾರಣಕ್ಕಾಗಿಯೇ ಅದು ಕಟ್ಟುನಿಟ್ಟಾದ ಪರಿಸರ ಮಾಲಿನ್ಯ ನಿಯಂತ್ರಣ ಜಾರಿಗೆ ಬರಬೇಕು ಎಂದು ಪ್ರತಿಪಾದಿಸಿತು. ಇದರಿಂದಾಗಿ ಜಪಾನಿಗೆ ಬಿಲಿಯನ್ ಡಾಲರ್‌ಗಳ ಲಾಭವಾಗಲಿದೆ. ಆದರೆ ಇಂಥ ನಿಯಂತ್ರಣ ಈಗಾಗಲೇ ತೀವ್ರ ಆರ್ಥಿಕ ದುಃಸ್ಥಿತಿ ಎದುರಿಸುತ್ತಿರುವ ಅಮೆರಿಕಕ್ಕೆ ತೀವ್ರವಾಗಿ ಘಾತುಕವೆನಿಸಲಿದೆ.

ಸಮ್ಮೇಳನದಲ್ಲಿ ಅಂಗೀಕೃತವಾದ ಅಜೆಂಡಾ - 21 (ವಿಷಯ ಪಟ್ಟಿ 21) ಘೋಷಿತ ಪರಿಸರ ಅಭಿವೃದ್ಧಿಯನ್ನು ಮುಂದುವರಿಸುವ ಉದ್ದೇಶ ಹೊಂದಿದೆ. ಅರಣ್ಯೀಕರಣ ಕುರಿತ ಒಪ್ಪಂದವನ್ನು ಅಭಿವೃದ್ಧಿಶೀಲ ಹಾಗೂ ಶ್ರೀಮಂತ ರಾಷ್ಟ್ರಗಳು ಒಪ್ಪಿಕೊಂಡವು. ಆರ್ಥಿಕ ಅಭಿವೃದ್ಧಿಯಲ್ಲಿ ಅರಣ್ಯಗಳು ಮಹತ್ವದ ಪಾತ್ರವಹಿಸುತ್ತವೆ. ಆಹಾರ, ಇಂಧನ, ನಾರು, ಕಟ್ಟಡ ನಿರ್ಮಾಣ ಸಾಮಗ್ರಿ, ಅಂಟು, ರೆಸಿನ್, ತೈಲ, ಟ್ರಾನ್ಸ್‌ಮಿಶನ್ ಕಂಬಗಳು, ನ್ಯೂಸ್ ಪ್ರಿಂಟ್, ಪ್ಯಾಕಿಂಗ್ ಸಾಮಗ್ರಿಗಳು ಎಲ್ಲವೂ ಅರಣ್ಯ ಗರ್ಭದಿಂದ ಲಭಿಸುತ್ತವೆ. ಜಗತ್ತಿನಾದ್ಯಂತ ಕಾಡುಗಳಿಂದ ಬರುವ ವಾರ್ಷಿಕ ಉತ್ಪನ್ನ 1,15,000 ಮಿಲಿಯ ಡಾಲರುಗಳಿಗಿಂತಲೂ ಅಧಿಕ. ಜಗತ್ತಿನಲ್ಲಿ ಸುಮಾರು 300 ಮಿಲಿಯ ಮಂದಿಗೆ ಕಾಡುಗಳು ಮನೆ ನಿರ್ಮಿಸಲು ನೆರವಾಗಿವೆ. ನಮ್ಮ ಬದುಕಿಗೆ ಆಧಾರವೆನಿಸುವ ಕಾಡುಗಳ ಮಹತ್ವವನ್ನು ಅರಿತುಕೊಳ್ಳದೆ ಯದ್ವಾತದ್ವಾ ಅವುಗಳನ್ನು ಕಡಿದು ನಾಶಗೊಳಿಸುತ್ತಿದ್ದೇವೆ. ಜಗತ್ತಿನಲ್ಲಿ ಪ್ರತಿವರ್ಷ 1.5 ಮಿಲಿಯ ಉಷ್ಣವಲಯದ ಕಾಡುಗಳು ನಾಶವಾಗುತ್ತಿವೆ.

ಈ ಹಿನ್ನೆಲೆಯಲ್ಲಿ ಯೋಚಿಸಿದಾಗ ಅರಣ್ಯೀಕರಣ ಕುರಿತ ಭೂ ಶೃಂಗ ಸಮ್ಮೇಳನದ ಒಪ್ಪಂದಕ್ಕೆ ವಿಶೇಷ ಮಹತ್ವವಿದೆ.

ಶೀತಲಯುದ್ಧದ ಅಂತ್ಯ ಹಾಗೂ ಸೋವಿಯತ್ ಒಕ್ಕೂಟದ ಪತನಾನಂತರ ನಡೆದ ಈ ಮಹಾ ಶೃಂಗಸಭೆ ಜಾಗತಿಕ ಮಟ್ಟದಲ್ಲಿ ಶಕ್ತಿಗಳ

ಕುವೈತ್ ಶೇಖ್‌ನ ಹೋಟೇಲ್ ಬಿಲ್?

ರಿಯೋ ಶೃಂಗ ಸಭೆಯಲ್ಲಿ ಭಾಗವಹಿಸಲು ಬಂದಿದ್ದ ಕುವೈತ್‌ನ ಶೇಖ್ ಅಲ್ ಸಬಾನಿಗೆ ಪಂಚತಾರಾ ಹೋಟೇಲಿನಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯಾಗಿತ್ತು. ಶೇಖನಿಗೆ ಅಗತ್ಯವಿರುವ ಎಲ್ಲಾ ಭೋಗ ವಸ್ತುಗಳ ವ್ಯವಸ್ಥೆಯೂ ಅಲ್ಲಿತ್ತು. ತನ್ನ ಕೊಠಡಿಯಲ್ಲಿದ್ದ ರತ್ನಗಂಬಳಿ, ವಿದ್ಯುದ್ದೀಪ, ಪೀಠೋಪಕರಣಗಳನ್ನು ಕಂಡು ಶೇಖನಿಗೆ ತೃಪ್ತಿಯಾಗಲಿಲ್ಲ. ಅವನ್ನೆಲ್ಲ ತೆಗೆದು ಹಾಕಲು ಹೇಳಿ ಕುವೈತ್‌ನಿಂದ ವಿಶೇಷ ವಿಮಾನದಲ್ಲಿ ತರಿಸಿದ ಇಂಥವೇ ವಸ್ತುಗಳಿಂದ ಕೊಠಡಿಯನ್ನು ಅಲಂಕರಿಸಲು ಆತ ಹೇಳಿದನಂತೆ. ತೈಲದೊರೆಯ ಮೇಲೆ ಹೋಟೇಲ್ ಹೊರಿಸಿದ ಬಿಲ್ ಕೇವಲ 2,50,000 ಡಾಲರ್‌ಗಳು!

ಹೊಸ ಧ್ರುವೀಕರಣಕ್ಕೆ ಅವಕಾಶ ನೀಡಿತು. ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಭಾರತ-ಚೀನಾ-ಪಾಕಿಸ್ತಾನ ಮತ್ತು ಇತರ ಅಭಿವೃದ್ಧಿಶೀಲ ರಾಷ್ಟ್ರಗಳು ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಅಮೆರಿಕದ ದಾಳಿಯನ್ನು ಎದುರಿಸಿದವು. ಪೃಥ್ವಿಯ ಪರಿಸರದ ಆರೋಗ್ಯ ಕಾಪಾಡಲು ಭೂ ಗ್ರಹ ಸಂರಕ್ಷಣಾ ನಿಧಿಯನ್ನು ಸ್ಥಾಪಿಸಬೇಕೆಂದು ನಮ್ಮ ಪ್ರಧಾನಿ ನರಸಿಂಹ ರಾವ್ ಸಮ್ಮೇಳನದಲ್ಲಿ ಸಲಹೆ ಮಾಡಿದರು.

ಈ ಶೃಂಗ ಸಮ್ಮೇಳನದ ಫಲಿತಾಂಶಗಳ ಬಗ್ಗೆ ತೌಲನಿಕವಾಗಿ ವಿಶ್ಲೇಷಿಸಿದಾಗ ಒಂದು ಅಂಶ ಖಚಿತವಾಗುತ್ತದೆ. ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಅಭಿವೃದ್ಧಿಗೆ ಸಂಬಂಧಿಸಿದ ಸಮಸ್ಯೆಗಳಿಂದ ಪ್ರತ್ಯೇಕಗೊಳಿಸಿ ನೋಡಲು ಸಾಧ್ಯವಿಲ್ಲ. ಸಂಪತ್ಸಮೃದ್ಧ ರಾಷ್ಟ್ರಗಳು ಪರಿಸರ ಕ್ಷೇತ್ರದಲ್ಲಿ ಎಸಗಿದ ಪಾಪಗಳಿಗೆ ಬಡರಾಷ್ಟ್ರಗಳು ಬೆಲೆ ತೆರಲು ಮುಂದೆಂದೂ ಸಾಧ್ಯವಿಲ್ಲ ಎಂಬು

ದನ್ನು ಶೃಂಗ ಸಮ್ಮೇಳನ ಸ್ಪಷ್ಟಪಡಿಸಿತು.

ಗ್ಲೋಬಲ್ ಫೋರಮ್

ಈ ಸಮ್ಮೇಳನಕ್ಕೆ ಪ್ರತಿಯಾಗಿ 'ಗ್ಲೋಬಲ್ ಫೋರಮ್' ಇದೇ ಸಂದರ್ಭದಲ್ಲಿ ರಿಯೋದಲ್ಲಿ ಜರುಗಿತು. ರಿಯೋ ಕೇಂದ್ರದಿಂದ 30 ಕಿಲೋ ಮೀಟರ್ ದೂರದಲ್ಲಿ ಫ್ಲೆಮಿಂಗೋ ಪಾರ್ಕ್‌ನಲ್ಲಿ ನಡೆದ ಈ ಸಮ್ಮೇಳನವನ್ನು ಸರಕಾರೇತರ ಸಂಸ್ಥೆಗಳು, ಪರಿಸರ ಪ್ರೇಮಿಗಳು ವ್ಯವಸ್ಥೆಗೊಳಿಸಿದ್ದರು. ಗ್ಲೋಬಲ್ ಫೋರಮ್‌ನ ಪ್ರಧಾನ ಆಕರ್ಷಣೆ 'ಜೀವನ ವೃಕ್ಷ' ಪ್ರದರ್ಶನ. ಪರಿಸರ ನಾಶವನ್ನು ತಪ್ಪಿಸಲು ಕೈಗೊಳ್ಳಬೇಕಾದ ವೈಜ್ಞಾನಿಕ ಉಪಕ್ರಮಗಳನ್ನು ಈ ಪ್ರದರ್ಶನ ವಿಸ್ತೃತವಾಗಿ ಪ್ರದರ್ಶಿಸಿತ್ತು. 'ಗ್ಲೋಬಲ್ ಫೋರಮ್' ಸಂಘಟಿಸಲು ಮುಖ್ಯ ಪಾತ್ರವಹಿಸಿದ 'ಗ್ರೀನ್ ಪೀಸ್' ಭೂ ಶೃಂಗಸಭೆಯ ಐದು ಪ್ರಮುಖ 'ಪಾಪ'ಗಳನ್ನು ಪಟ್ಟಿ ಮಾಡಿದೆ.

- ಜಗತ್ತಿನಾದ್ಯಂತ ವಾತಾವರಣ ಬಿಸಿಯೇರುವ ಪ್ರಕ್ರಿಯೆಗೆ ಶೃಂಗಸಭೆ ಯಾವ ಪರಿಹಾರ ಮಾರ್ಗವನ್ನೂ ಸೂಚಿಸಲಿಲ್ಲ.
- ಗ್ರೀನ್ ಹೌಸ್ ಪರಿಣಾಮ (ಹಸಿರುಗೃಹ) ಬೀರುವ ಅನಿಲಗಳ ಸಾಂದ್ರೀಕರಣ ವಾಯು ಮಂಡಲದಲ್ಲಿ ಜಾಸ್ತಿಯಾಗಲಿದೆ.
- ನ್ಯೂಕ್ಲಿಯರ್ ಅಸ್ತ್ರಗಳ ಪರೀಕ್ಷೆ ಮುಂದುವರಿಯುವ ಸಾಧ್ಯತೆ.
- ರೇಡಿಯೋ ಆಕ್ಟಿವ್ ಮಲಿನ ವಸ್ತುಗಳನ್ನು ಸಮುದ್ರದಲ್ಲಿ ಸುರಿಯುವುದರ ವಿರುದ್ಧ ಸಮ್ಮೇಳನ ಯಾವುದೇ ಕ್ರಮ ಕೈಗೊಂಡಿಲ್ಲ.
- ಜೈವಿಕ ವೈವಿಧ್ಯ ಎಂದೆಂದಿಗೂ ಕಣ್ಮರೆಯಾಗುವುದರಿಂದ ಜೀವ ಪರಿಸರ ವ್ಯವಸ್ಥೆಗೆ ಅಪಾಯ ಹಿಂದಿನಂತೆಯೇ ಮುಂದುವರಿಯಲಿದೆ. ●

(ವಿವಿಧ ಮೂಲಗಳಿಂದ)

ಕಾಕತಾಳೀಯ!

ಅಬ್ರಹಾಂ ಲಿಂಕನ್‌ರು ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾಗಿ 1860ರಲ್ಲಿ ಆಯ್ಕೆಯಾದ ನೂರು ವರ್ಷಕ್ಕೆ ಸರಿಯಾಗಿ 1960ರಲ್ಲಿ ಜಾನ್ ಎಫ್. ಕೆನಡಿಯವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಇಬ್ಬರೂ ಅಧ್ಯಕ್ಷ ಪದವಿಯಲ್ಲಿದ್ದಾಗಲೇ ಹತ್ಯೆಗೊಳಗಾದರು.

ಲಿಂಕನ್ ಅಧ್ಯಕ್ಷರಾಗಿದ್ದಾಗ ಅವರ ಆಪ್ತ ಕಾರ್ಯದರ್ಶಿಯ ಹೆಸರು ಕೆನಡಿ ಎಂದಿದ್ದರೆ, ಜಾನ್ ಎಫ್. ಕೆನಡಿಯವರ ಆಪ್ತ ಕಾರ್ಯದರ್ಶಿಯ ಹೆಸರು ಲಿಂಕನ್ ಎಂಬುದಾಗಿತ್ತು.

ಲಿಂಕನ್‌ರವರ ಕಾರ್ಯದರ್ಶಿ ಅಂದು ಚಿತ್ರಮಂದಿರಕ್ಕೆ ಹೋಗದಂತೆ ಅಧ್ಯಕ್ಷರನ್ನು ತಡೆದರೂ ಅಲ್ಲಿ ಹೋಗಿ ಹತ್ಯೆಗೊಳಗಾದರು.

ಇದೇ ರೀತಿ ಕೆನಡಿಯವರನ್ನು ಡಲ್ಲಾಸ್ ಪಟ್ಟಣಕ್ಕೆ ಹೋಗದಂತೆ ಆಪ್ತ ಕಾರ್ಯದರ್ಶಿ ತಡೆದರೂ ಹೋದಾಗ ಕೆನಡಿಯವರ ಹತ್ಯೆಯಾಯಿತು.

ಲಿಂಕನ್ ಹಾಗೂ ಕೆನಡಿಯವರನ್ನು ಹತ್ಯೆ ಮಾಡಿದ ದುಷ್ಕರ್ಮಿಗಳು ಹುಟ್ಟಿದ ವರ್ಷ 1839 ಮತ್ತು 1939 ಆಗಿತ್ತು.

ಆ ಇಬ್ಬರು ದುಷ್ಕರ್ಮಿಗಳೂ ವಿಚಾರಣಾ ಸಮಯದಲ್ಲೇ ಹತರಾಗಿದ್ದರು! ಆ ಇಬ್ಬರು ಅಧ್ಯಕ್ಷರುಗಳ ಜೀವನದಲ್ಲಿ ನಡೆದ ಘಟನೆಗಳಲ್ಲಷ್ಟೇ ಸಾಮ್ಯತೆ ಇರದೆ, ಹತ್ಯೆಮಾಡಿದವರಲ್ಲೂ ಸಾಮ್ಯತೆ ಇರಬೇಕೆ?

ಸಂಗ್ರಹ: ವೈ.ಎನ್. ಗುಂಡೂರಾವ್

ಜಗದೀಶಚಂದ್ರರ ಆತ್ಮವಿಶ್ವಾಸ

● ಮುರಲೀಧರ ಕುಲಕರ್ಣಿ

ಜಗದೀಶಚಂದ್ರ ಬೋಸರು ಭಾರತದ ಸುಪ್ರಸಿದ್ಧ ಸಸ್ಯ ವಿಜ್ಞಾನಿ. ಅವರು ಸಸ್ಯಗಳಿಗೂ ಜೀವವಿದೆ ಅವೂ ಕೂಡ ಪ್ರಾಣಿಗಳಂತೆಯೇ ಉಸಿರಾಡುತ್ತವೆ; ಆಹಾರ ಸೇವಿಸುತ್ತವೆ; ಪ್ರಚೋದನೆಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತವೆ; ಆಘಾತವಾದಾಗ ಪ್ರಾಣಿಗಳಂತೆಯೇ ಪರಿಣಾಮವನ್ನು ಅನುಭವಿಸುತ್ತವೆ; ಅತಿಯಾದ ಶಾಖಕ್ಕೆ ಬಳಲುತ್ತವೆ; ಅತಿಯಾದ ಚಳಿಗೆ ಕುಗ್ಗುತ್ತವೆ; ಮದ್ಯ ಸಾರವುಳ್ಳ ಪದಾರ್ಥವನ್ನಾಗಲಿ ಅಥವಾ ವಿಷಪದಾರ್ಥವನ್ನಾಗಲಿ ಸಸ್ಯಗಳ ಮೇಲೆ ಪ್ರಯೋಗಿಸಿದಾಗ ಅವೂ ಕೂಡ ಪ್ರಾಣಿಗಳಂತೆಯೇ ಪ್ರಭಾವಕ್ಕೆ ಈಡಾಗುತ್ತವೆ ಎಂದು ಪ್ರತಿಪಾದಿಸಿ ವಿಜ್ಞಾನ ಲೋಕದಲ್ಲಿ ಕೋಲಾಹಲವನ್ನುಂಟುಮಾಡಿದರು. ಏಕೆಂದರೆ ಆ ಕಾಲದ ಸಸ್ಯವಿಜ್ಞಾನಿಗಳು ಸಸ್ಯಗಳಿಗೆ ಸಂವೇದನಾ ಶಕ್ತಿಯೇ ಇಲ್ಲ ಎಂದು ತಿಳಿದಿದ್ದರು. ಬೋಸರ ವಾದವನ್ನು ಅಂದಿನ ವಿಜ್ಞಾನಿಗಳು ಒಪ್ಪುತ್ತಿರಲಿಲ್ಲವಾದುದರಿಂದ ತಾವು ಕಂಡುಹಿಡಿದುದನ್ನು ಪ್ರಯೋಗದ ಮೂಲಕ ಸಿದ್ಧಪಡಿಸಬೇಕಾಗಿತ್ತು. ತಾವು ಕಂಡುಹಿಡಿದ ಅಂಶಗಳನ್ನು ಸಿದ್ಧಪಡಿಸಲು ಅವರು ಕೆಲವು ಉಪಕರಣಗಳನ್ನು ತಯಾರಿಸಿದ್ದರು. ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಅವರು ಸಾರ್ವಜನಿಕರೆದುರಿಗೆ ಕೆಲವು ಪ್ರಯೋಗಗಳನ್ನು ಮಾಡಿ ತೋರಿಸಿದರು.

ಒಮ್ಮೆ ಪ್ಯಾರಿಸ್ಸಿನಲ್ಲಿ ಅವರು ಇಂತಹ ಒಂದು ಪ್ರದರ್ಶನ ನೀಡಬೇಕಾಗಿತ್ತು. ಅನೇಕ ವಿಜ್ಞಾನಿಗಳು ಅವರ ಪ್ರಯೋಗವನ್ನು ನೋಡಲು ಬಂದಿದ್ದರು. ಪೊಟಾಷಿಯಂ ಸೈನೈಡ್ ಎಂಬ ತೀಕ್ಷ್ಣ ವಿಷವನ್ನು ಸಸ್ಯದ ಮೇಲೆ ಪ್ರಯೋಗಿಸಿದಾಗ ಸಸ್ಯ ತಕ್ಷಣವೇ ಹೇಗೆ ಬಾಡಿಹೋಗುತ್ತದೆ ಎಂಬುದನ್ನು ಅವರು ಸಾರ್ವಜನಿಕರಿಗೆ ಪ್ರದರ್ಶಿಸಬೇಕಾಗಿತ್ತು. ಸಸ್ಯದ ಮೇಲೆ ವಿಷ ಪ್ರಯೋಗವನ್ನು ಮಾಡುವ ಮೊದಲು ಅವರು ಸಭಿಕರಿಗೆ ಹೇಳಿದರು. "ನೋಡಿ, ಇದು ಪೊಟಾಷಿಯಂ ಸೈನೈಡ್ ಎಂಬ ತೀಕ್ಷ್ಣವಾದ ವಿಷ. ಇದರ ಒಂದೇ ಕಣವನ್ನು ನಾಲಿಗೆಯ ಮೇಲಿಟ್ಟುಕೊಂಡರೂ ಮನುಷ್ಯ ಕ್ಷಣಾರ್ಧದಲ್ಲಿ ಸಾವನ್ನಪ್ಪುತ್ತಾನೆ. ಈಗ ನಾನು ಸಸ್ಯವೊಂದರ ಮೇಲೆ ಈ ವಿಷವನ್ನು ಪ್ರಯೋಗಿಸುತ್ತೇನೆ. ಪರಿಣಾಮವನ್ನು ನೀವೇ ನೋಡಬಹುದು ಎಂದು ಹೇಳಿ ಒಂದು ಚಿಟಕೆಯಷ್ಟು ಸೈನೈಡ್ ಪುಡಿಯನ್ನು ಸಸ್ಯದ ಮೇಲೆ ಹಾಕಿದರು. ಆದರೆ ಅವರು ನಿರೀಕ್ಷಿಸಿದ್ದಂತೆ ಸಸ್ಯ ಬಾಡಿಹೋಗಲಿಲ್ಲ. ಬೋಸರಿಗೆ ಮುಖಭಂಗವಾದಂತಾಯಿತು. ಆದರೆ ಅವರು ಅಧೀರರಾಗಲಿಲ್ಲ. ಬದಲಾಗಿ ಯೋಚನೆಗೊಳಗಾದರು. ತಮ್ಮ ಉಪಕರಣವನ್ನು ಪರೀಕ್ಷಿಸಿ ನೋಡಿದರು. ಆದರಲ್ಲಿ ಅವರಿಗೆ ಯಾವ ದೋಷವೂ ಕಂಡುಬರಲಿಲ್ಲ.

ಆಗ ಬೋಸರು ತುಂಬ ಆತ್ಮವಿಶ್ವಾಸದಿಂದ ಸಭೆಗೆ ತಿಳಿಸಿದರು. ನಾನು ಈಗ ಸಸ್ಯದ ಮೇಲೆ ಪ್ರಯೋಗಿಸಿದ ಪದಾರ್ಥ ಖಂಡಿತವಾಗಿಯೂ ಪೊಟಾಷಿಯಂ ಸೈನೈಡ್ ಆಗಿರಲಾರದು. ಒಂದು ವೇಳೆ ಅದು ಸೈನೈಡ್ ಆಗಿದ್ದ ಪಕ್ಷದಲ್ಲಿ ಈ ಸಸ್ಯ ತಕ್ಷಣವೇ ಬಾಡಿ ಹೋಗಬೇಕಾಗಿತ್ತು. ಆದುದರಿಂದ ಇದು ವಿಷವಾಗಿರದೆ ಯಾವುದೋ ಸಿಹಿ ಪದಾರ್ಥವಾಗಿರಬೇಕು. ಇರಲಿ, ಇದನ್ನು ಪರೀಕ್ಷಿಸಿಯೇ ಬಿಡುತ್ತೇನೆ ಎಂದು ಹೇಳಿ ಒಂದು ಚಿಟಕೆಯಷ್ಟು ಆ ಬಿಳಿಯ ಪುಡಿಯನ್ನು ನಾಲಿ

ಗೆಯ ಮೇಲೆ ಹಾಕಿಕೊಂಡರು. ಗಾಬರಿಯಿಂದ ಸಭೆ ಸ್ತಬ್ಧವಾಯಿತು. ಸಭಿಕರೆಲ್ಲರ ಉಸಿರು ಗಂಟಲಲ್ಲೇ ಸಿಕ್ಕಿಕೊಂಡಿತು. ಕೂಡಲೇ ಜಗದೀಶ ಚಂದ್ರ ಬೋಸರು ಉದ್ಗರಿಸಿದರು ಓ ಇದಂತೂ ಸಕ್ಕರೆ ಪುಡಿಯಾಗಿದೆ!

ಅವರು ಸಭೆಗಂತೂ ಈ ವಿಷಯವನ್ನು ತಿಳಿಸಿದರು. ಆದರೆ ಪೊಟ್ಯಾಷಿಯಂ ಸೈನೈಡಿಗೆ ಬದಲಾಗಿ ಸಕ್ಕರೆ ಹೇಗೆ ಬಂತು ಎನ್ನುವ ಬಗ್ಗೆ ಸ್ವತಃ ಅವರಿಗೆ ಆಶ್ಚರ್ಯವುಂಟಾಗಿತ್ತು.

ನಡೆದುದಿಷ್ಟು: ಅವರು ಪ್ಯಾರಿಸಿನ ಓರ್ವ ಪ್ರತಿಷ್ಠಿತ ಮಹಿಳೆಯ ಮನೆಯಲ್ಲಿ ತಂಗಿದ್ದರು. ಅವರು ತಮ್ಮ ಪ್ರಯೋಗಕ್ಕೆ ಬೇಕಾದ ಪೊಟ್ಯಾಷಿಯಂ ಸೈನೈಡ್‌ನ್ನು ಪೇಟೆಯಿಂದ ತರಿಸಿಕೊಡುವಂತೆ ಆ ಮಹಿಳೆಯನ್ನು ಪ್ರಾರ್ಥಿಸಿದರು. ಆ ಮಹಿಳೆ ಚೀಟಿಯೊಂದನ್ನು ತನ್ನ ಸೇವಕನ ಕೈಯಲ್ಲಿ ಕೊಟ್ಟು ಕೆಮಿಸ್ಟ್‌ನ ಬಳಿಗೆ ಕಳುಹಿಸಿದಳು. ಕೆಮಿಸ್ಟನಿಗೆ ಆ ಮಹಿಳೆ ಪರಿಚಿತಳಾಗಿದ್ದುದರಿಂದ ಅವಳು ಆತ್ಮಹತ್ಯೆ ಮಾಡಿಕೊಳ್ಳಲು ಸೈನೈಡ್ ತರಿಸುತ್ತಿದ್ದಾಳೇನೋ ಎಂದು ಶಂಕಿಸಿದ ಅವನು ಅವಳ ಪ್ರಾಣವನ್ನು ಉಳಿಸಬೇಕೆಂಬ ಸದಿಚ್ಛೆಯಿಂದ ಸೈನೈಡಿಗೆ ಬದಲಾಗಿ ಸಕ್ಕರೆಪುಡಿಯನ್ನು ಕೊಟ್ಟು ಕಳುಹಿಸಿದ್ದ. ಈ ವಿಷಯವನ್ನರಿಯದ ಬೋಸರು ಅದನ್ನೇ ಸಭೆಗೆ ತೆಗೆದುಕೊಂಡು ಬಂದಿದ್ದರು. ಆದರೆ ಅದನ್ನು ಬಾಯಿಗೆ ಹಾಕಿಕೊಂಡದ್ದು ಬೋಸರ ಆತ್ಮವಿಶ್ವಾಸವನ್ನು ಸೂಚಿಸುತ್ತದಲ್ಲವೆ? ●

ಹೀಗೂ ಆಗುವುದುಂಟು

ನಾಲ್ಕು ವರ್ಷದ ಕಾರ್ಲ್ ಬೋರ್ಗ್ ಎಂಬ ಹುಡುಗ ನಿರಂತರ ಮೂರು ವಾರಗಳವರೆಗೆ ಫ್ರೀಜರ್‌ದೊಳಗಿದ್ದು ಬದುಕಿ ಉಳಿದನೆಂಬುದು ಸೋಜಿಗವಲ್ಲವೆ?

ಸ್ವೀಡನ್ನಿನ ಮಾಲ್ಮೋನಗರದಲ್ಲಿ ಕಾರ್ಲ್‌ಬೋರ್ಗ್‌ನ ತಾಯಿ ತಂದೆ ಹೀಡೀ ಹಾಗೂ ಸ್ವೇನ್ ಮಗನ ನಾಲ್ಕನೇ ಹುಟ್ಟುಹಬ್ಬದ ವಾರ್ಷಿಕ ಸಮಾರಂಭ ಏರ್ಪಡಿಸಿದ್ದರು. ಸಮಾರಂಭ ಮುಗಿಯುತ್ತಲೇ ಕಾರ್ಲ್ ಕಾಣೆಯಾದ.

ಕಾರ್ಲನನ್ನು ಅಡುಗೆ ಮನೆಯಲ್ಲಿ ಬಿಟ್ಟು ತಾಯಿತಂದೆ ಅತಿಥಿಗಳನ್ನು ಬೀಳ್ಕೊಡಲು ಹೊರ ಹೋಗಿದ್ದರು. ಒಂದು ನಿಮಿಷದಲ್ಲೇ ಅವರು ಮರಳಿದ್ದರೂ ಕಾರ್ಲ್ ಕಾಣಸಲಿಲ್ಲ.

ಅವರು ತುಂಬಾ ಹುಡುಕಾಡಿದರು. ಕಾರ್ಲ್ ಮಾತ್ರ ಸಿಗಲಿಲ್ಲ. ಮೂರು ವಾರಗಳ ಬಳಿಕ ಕಾರ್ಲನ ತಾಯಿ ಹೀಡೀ ತಮ್ಮ ಮನೆಗೆ ಹೊಂದಿಕೊಂಡಿದ್ದ ಗ್ಯಾರೇಜಿಗೆ ಹೋಗಿ ಫ್ರೀಜರ್‌ದ ಬಾಗಿಲು ತೆರೆದಳು. ನಾಲ್ಕು ವರ್ಷದ ಕಾರ್ಲ್ ಬರ್ಫದಲ್ಲಿ ಹೂತುಹೋಗಿದ್ದ. ಅವನ ದೇಹವಿಡೀ ಮರಗಟ್ಟಿತ್ತು.

ಕಾರ್ಲ್ ಐಸ್‌ಕ್ರೀಮ್ ಹುಡುಕುತ್ತ ಹುಡುಕುತ್ತ ಫ್ರೀಜರದ ಬಾಗಿಲು ತೆರೆದು ಒಳನಡೆದ. ಆಗಲೇ ಬಾಗಿಲು ತಾನಾಗಿಯೇ ಮುಚ್ಚಿಕೊಂಡು ಕಾರ್ಲ್ ಬಂದಿಯಾದ.

ಕಾರ್ಲನ ಚಿಕಿತ್ಸೆ ಮಾಡುವ ಡಾ. ಎಡ್ವರ್ಡ್ ಸಾಮರ್ ಮೊತ್ತಮೊದಲು ಕಾರ್ಲ್‌ನಲ್ಲಿ ಜೀವನದ ಲಕ್ಷಣಗಳನ್ನು ಕಂಡರು. ಅವರು ಅವನನ್ನು ಒಂದು ಕಂಬಳಿಯಿಂದ ಸುತ್ತಿ ತಕ್ಷಣ ಆಸ್ಪತ್ರೆಗೊಯ್ದರು. ಅಲ್ಲಿ ಕಾರ್ಲನನ್ನು ಬೆಚ್ಚಗೆ ಮಾಡಲು ವಿಶೇಷ ಕೊಠಡಿಯಲ್ಲಿ ರಿಸಲಾಯಿತು.

ಡಾ. ಸಾಮರರ ಪ್ರಕಾರ ಕಾರ್ಲ್ ಭಾಗ್ಯಶಾಲಿ. ಏಕೆಂದರೆ ಆತ ತಕ್ಷಣ ಥಂಡಿಯಿಂದ ಮರಗಟ್ಟಿದ. ಹೀಗಾಗಿ ಅವನ ಆಂತರಿಕ ಅವಯವಗಳು ಪೂರ್ಣ ಸುರಕ್ಷಿತವಾಗಿದ್ದವು. ಇಂಥ ಘಟನೆ ಲಕ್ಷದಲ್ಲಿ ಒಂದುಮಾತ್ರ!

● ಅಡಿಗ

ನಿಮ್ಮ ಶಬ್ದ ಭಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಕ್ಷುರ
   (ಅ) ಹುಣ್ಣು
   (ಆ) ದನದ ಗೊರಸು
   (ಇ) ಕತ್ತಿ
   (ಈ) ಸುಣ್ಣ
2. ಸಬೂಬು
   (ಅ) ಕಾರಣ
   (ಆ) ಸಾಬೂನು
   (ಇ) ಪ್ರಶ್ನೆ
   (ಈ) ಉತ್ತರ
3. ಉದ್ಭಿಜ್ಜ
   (ಅ) ವನಸ್ಪತಿ
   (ಆ) ಉತ್ತಗದ್ದೆ
   (ಇ) ವೈದ್ಯ
   (ಈ) ಶಸ್ತ್ರವಿದ್ಯೆಯ ಶಿಕ್ಷಕ
4. ತ್ರುಟಿ
   (ಅ) ಕಳಚುವಿಕೆ
   (ಆ) ತುಟಿ
   (ಇ) ಒಂದು ಆಯುಧ
   (ಈ) ತರಾಟೆ
5. ಗಜಗರ್ಭ
   (ಅ) ಆನೆಯಮರಿ
   (ಆ) ಬಹಳ ವಿಲಂಬವಾಗಿ ಆಗುವ ಕಾರ್ಯ
   (ಇ) ಒಂದು ಅಳತೆ
   (ಈ) ಗಣೇಶ
6. ಅವಲೋಕನ
   (ಅ) ಪರಲೋಕಕ್ಕೆ ಹೋಗುವಿಕೆ
   (ಆ) ನೋಡುವುದು
   (ಇ) ಕಣ್ಕನಸು
   (ಈ) ಹೊರಡುವುದು
7. ಬುದ್ಧ ಮುಷ್ಟಿ
   (ಅ) ಒಂದು ತರದ ಹುಲ್ಲು
   (ಆ) ಬಿಗಿದ ಮುಷ್ಟಿ
   (ಇ) ಕಳ್ಳತನ
   (ಈ) ಒಬ್ಬ ಋಷಿ
8. ಸತೀರ್ಥ
   (ಅ) ಉತ್ತಮವಾದ
   (ಆ) ಪತಿವ್ರತೆಯ ಗಂಡ
   (ಇ) ಸಹಪಾಠಿ
   (ಈ) ಸಂನ್ಯಾಸಿ
9. ವೈಮನಸ್ಯ
   (ಅ) ಮೋಸ
   (ಆ) ಮೂಗಿನ ರೋಗ
   (ಇ) ವಿರಕ್ತಿ
   (ಈ) ದ್ವೇಷ
10. ಸ್ಪಂದನ
   (ಅ) ಅಲುಗಾಡುವುದು
   (ಆ) ಕಪ್ಪು
   (ಇ) ಮೆಚ್ಚಿಕೆ
   (ಈ) ಕಟ್ಟು
11. ಹೇವರಿಸು
   (ಅ) ಅಸಹ್ಯಪಡು
   (ಆ) ಆಸೆಪಡು
   (ಇ) ಕುದುರೆಯಂತೆ ಕೂಗು
   (ಈ) ಹುಚ್ಚಾಗು
12. ಸ್ಫುರಿಸು
   (ಅ) ಎತ್ತು
   (ಆ) ಮಿಡುಕು
   (ಇ) ರಭಸದಿಂದ ಓಡು
   (ಈ) ಹೊಳೆ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಕ್ಷುರ

(ಇ) ಕತ್ತಿ, ಬಾಣದ ಮೊನೆ, ಚೂರಿ, ಕ್ಷೌರದ ಕತ್ತಿಯೂ ಕ್ಷುರವೆಂದೇ ಕರೆಯಲ್ಪಡುತ್ತದೆ. [ಸಂಸ್ಕೃತ]

2. ಸಬೂಬು

(ಅ) ಕಾರಣ. ಉದಾ: "ಸಬೂಬು ಕೊಟ್ಬೇ ಮಾತಾಡು."[ಉರ್ದು - ಸಬಬ]

3. ಉದ್ಭಿಜ್ಜ

(ಅ) ವನಸ್ಪತಿ, ಸಸ್ಯವರ್ಗಕ್ಕೆ ಶಾಸ್ತ್ರೀಯ ಹೆಸರು. [ಉತ್=ಮೇಲುಗಡೆ+ಭಿದ್=ಒಡೆದು ಅಂದರೆ ಮೊಳಕೆಯೊಡೆದು+ಜ ಉಂಟಾಗುವಂಥದು - ಸಂಸ್ಕೃತ]

4. ತ್ರುಟ

(ಅ) ಕಳಚುವಿಕೆ, ತಪ್ಪು, ಜಾರು - "ಪುಸ್ತಕದ ತ್ರುಟಿತವಾದ ಭಾಗ" ಎಂದರೆ ಹರಿದು ಹಾಳಾಗಿ ಹೋದ ಭಾಗ. "ತ್ರುಟಿಯಿಲ್ಲದ" ಅಂದರೆ ತಪ್ಪಿಲ್ಲದ.[ಸಂಸ್ಕೃತ]

5. ಗಜಗರ್ಭ

(ಅ) ಬಹಳ ತಡವಾಗಿ ಆಗುವ ಕೆಲಸಕ್ಕೆ ಚಮತ್ಕಾರವಾಗಿ ಉಪಯೋಗಿಸುವ ಶಬ್ದ. [ಆನೆಗೆ ಗರ್ಭ ನಿಂತಮೇಲೆ ಮರಿ ಈಯಲು ಒಂದು ವರ್ಷಕ್ಕಿಂತಲೂ ಹೆಚ್ಚುಕಾಲ ಹಿಡಿಯುತ್ತದಾದ್ದರಿಂದ. ಸಂಸ್ಕೃತ]

6. ಅವಲೋಕನ

(ಅ) ನೋಡುವಿಕೆ, ನೋಟ; ಪರೀಕ್ಷಿಸುವಿಕೆ. [ಎತ್ತರದಲ್ಲಿ ನಿಂತು] ಪರಿಶೀಲಿಸುವುದು; ಕಣ್ಣು [ಸಂಸ್ಕೃತ - ಅವ+ಲೋಕನ]

7. ಬುದ್ಧಮುಷ್ಟಿ

(ಅ) ಬಿಗಿದಮುಷ್ಟಿ [ಅಲಂಕಾರಿಕವಾಗಿ] ಜಿಪುಣತನ. ಜಿಪುಣ ಬದ್ಧ=ಬಿಗಿಯಾದ ಮುಷ್ಟಿ; ಕೈಯೊಳಗಿನ ಕಾಸು ಹೊರಬರಗೊಡದವ. [ಸಂಸ್ಕೃತ]

8. ಸತೀರ್ಥ

(ಇ) ಸಹಪಾಠಿ. ಒಬ್ಬನೇ ಗುರುವಿನಿಂದ ವಿಶೇಷತಃ ಧಾರ್ಮಿಕ ವಿದ್ಯೆಯನ್ನು ಅಭ್ಯಾಸ ಮಾಡಿದವನು [ಸಂಸ್ಕೃತ]

9. ವೈಮನಸ್ಯ

(ಈ) ದ್ವೇಷ, ವೈರ, ಮನಃಕಷಾಯ; ವಿಷಾದ, ಚಿತ್ತವಿಕಲತೆ. [ಉದಾ: 'ಅವರೊಳಗಿನ ವೈಮನಸ್ಯ ಹೆಚ್ಚಾಗಿತ್ತು' ಅಂದರೆ ದ್ವೇಷ ಹೆಚ್ಚಾಗಿತ್ತು.] [ಸಂ. ವಿ+ಮನಸ್]

10. ಸ್ಪಂದನ

(ಅ) ಅಲುಗಾಡುವಿಕೆ, ನಡುಗುವಿಕೆ, ಕಂಪಿಸುವುದು. ಉದಾ: ಅವನ ಹೃದಯ ಸ್ಪಂದನ ನಿಂತಿತು. ಈ ಶಬ್ದವನ್ನು 'ಹೆದರಿ ನಡುಗುವುದೇ' ಮೊದಲಾದ ಅರ್ಥಗಳಲ್ಲಿ ಉಪಯೋಗಿಸುವುದಿಲ್ಲ. [ಸಂ.]

11. ಹೇವರಿಸು

(ಅ) ಅಸಹ್ಯಪಡು. ಉದಾ: ಅವನ ವರ್ತನೆ ನೋಡಿ ನಾನು ಹೇವರಿಸಿಹೋದೆ. [ಕನ್ನಡ]

12. ಸ್ಫುರಿಸು

(ಈ) ಹೊಳೆ, ಮನಸ್ಸಿಗೆ ಒಮ್ಮೆಲೆ ತೋಚು. ಉದಾ: ಈ ಪದ್ಯದ ಅರ್ಥ ನನಗೆ ಒಮ್ಮೆಲೆ ಸ್ಫುರಿಸಿತು. [ಸಂ.]

ನಿಮ್ಮ ಶಬ್ದಶಕ್ತಿ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6-8 ಸರಿಯಿದ್ದರೆ ... ಸಾಧಾರಣ

9-10 ಸರಿಯಿದ್ದರೆ ... ಉತ್ತಮ

11-12 ಸರಿಯಿದ್ದರೆ ... ಅತ್ಯುತ್ತಮ

ಇಂದು ಮಹಿಳಾ ವಿಜ್ಞಾನಿಗಳು ಮಾನವಶಾಸ್ತ್ರದಲ್ಲಿ ಬಹಳಷ್ಟು ವಾದವಿವಾದಗಳನ್ನೆಬ್ಬಿಸಿದ್ದಾರೆ. ಇದುವರೆಗೂ ಪರಮಸತ್ಯವೆಂದು ನಂಬಿಕೊಂಡು ಬಂದ ಸಿದ್ಧಾಂತಗಳನ್ನು ಪ್ರಶ್ನಿಸುತ್ತಿದ್ದಾರೆ. ತಮ್ಮ ಅಧ್ಯಯನ-ಸಂಶೋಧನೆಯ ಆಧಾರದ ಮೇಲೆ ಮೂಲ ಮಾನವನ ಪೂರ್ಣಚಿತ್ರವನ್ನು ನೀಡಲು, ಜೀವವಿಕಾಸದಲ್ಲಿ ಗಂಡು-ಹೆಣ್ಣಿನ ಪಾತ್ರವನ್ನು ಅರ್ಥೈಸಲು ಪ್ರಯತ್ನಿಸುತ್ತಿದ್ದಾರೆ.

ಸ್ತ್ರೀವಾದ ಮತ್ತು ಮಾನವ ಶಾಸ್ತ್ರ

● ನೇಮಿಚಂದ್ರ

ಸ್ತ್ರೀವಾದ ಮತ್ತು ಮಾನವ ಶಾಸ್ತ್ರ ಬಹಳ ವಿಚಿತ್ರ ತಳಿಯಾಗಿ ಕಾಣಬಹುದು. ಮಹಿಳಾ ವಿಜ್ಞಾನಿಗಳು ಸ್ತ್ರೀವಾದವನ್ನು ವಿಜ್ಞಾನಕ್ಕೂ ಎಳೆದೊಯ್ಯುತ್ತಿದ್ದಾರೆಯೆ ಎಂದು ಹುಬ್ಬೇರಬಹುದು. ಆದರ ವಿಜ್ಞಾನದಲ್ಲಿ ಕೂಡಾ ವಿಜ್ಞಾನಿಯ ಪೂರ್ವಾಗ್ರಹಗಳು ಹೇಗೆ ಒಂದು ವೈಜ್ಞಾನಿಕ ಸತ್ಯವನ್ನು ತಮಗೆ ಹಿತವಾದ ರೀತಿಯಲ್ಲಿ ಅರ್ಥೈಸುವಲ್ಲಿ, ಪುರುಷಪ್ರಧಾನ ನಂಬಿಕೆಗಳಿಗನುಗುಣವಾಗಿ ಪ್ರತಿಪಾದಿಸುವಲ್ಲಿ ಕೆಲಸ ಮಾಡುತ್ತವೆ ಎನ್ನುವುದನ್ನು ಮಾನವಶಾಸ್ತ್ರ [Anthropology] ಸ್ಪಷ್ಟವಾಗಿ ತೋರಿಸಿದೆ.

ಹೆಚ್ಚಿನ ವಿವರಕ್ಕೆ ಹೋಗುವ ಮೊದಲು ಮಾನವಶಾಸ್ತ್ರದ ಮೂಲ ತತ್ವಗಳತ್ತ ಒಂದು ನೋಟ ಹರಿಸೋಣ. ''ಮಿಲಿಯ ಮಿಲಿಯ ವರ್ಷಗಳ ಹಿಂದೆ, ವಾನರ ಜಾತಿಯ ಗಂಡುಗಳು ಬೇಟೆಗೆ ಹೋಗುತ್ತಿದ್ದವು. ಹೆಣ್ಣುಗಳು ತಮ್ಮ ಪಿಳ್ಳೆಗಳನ್ನು ಕಟ್ಟಿಕೊಂಡು ಗಂಡು ಬೇಟೆಯಾಡಿ ತರುವ ಆಹಾರಕ್ಕಾಗಿ ಕಾಯುತ್ತಾ ಕುಳಿತಿರುತ್ತಿದ್ದವು. ಹೆಣ್ಣು ಮಾಡುತ್ತಿದ್ದ ಕೆಲಸವೇನೆಂದರೆ ಆಹಾರ ಶೇಖರಣೆ ಮತ್ತು ಮರಿಗಳ ಪೋಷಣೆ, ಸುತ್ತಮುತ್ತಲ ಕಾಡು ಸುತ್ತಿ ಒಂದಿಷ್ಟು ಆಹಾರ ಒಟ್ಟೈಸುತ್ತಿದ್ದವು. ಬೇಟೆಗೆ ಹೋದ ಗಂಡು ಗಾತ್ರದಲ್ಲಿ ಬೆಳೆದು ಬಲಾಢ್ಯನಾಗಿ, ಬೇಟೆಗಾಗಿ ಕೈಗಳನ್ನು ಉಪಯೋಗಿಸುತ್ತ. ನಡೆದಾಡಲು ಎರಡು ಕಾಲುಗಳಷ್ಟನ್ನೇ ಬಳಸುವುದು ಅನಿವಾರ್ಯವಾಯ್ತು. ಹೀಗೆ ನಾಲ್ಕು ಕಾಲಿನ ವಾನರ, ಎರಡು ಕಾಲಿನ ಮಾನವನಾಗಿ ವಿಕಾಸಗೊಂಡ. ಬೇಟೆಯ ಆಯುಧಗಳನ್ನು ತಯಾರಿಸಿದ. ತನಗೆ ಕಾದ ಹೆಣ್ಣಿಗೆ - ಮರಿಗಳಿಗೆ ಬೇಟೆಯನ್ನು ಎಳೆದು ತಂದ. ಮೆಲ್ಲನೆ ಸಾಮಾಜಿಕ ಸಂಬಂಧ ಗಂಡು ಹೆಣ್ಣು ಜೊತೆಯಾಗಿ ತಾವು ಹೆತ್ತ ಮಕ್ಕಳನ್ನು ಕಾಪಾಡುವ ಕುಟುಂಬ ವ್ಯವಸ್ಥೆ ರೂಪುಗೊಂಡಿತು.'' ಹೀಗೆ ಜೀವ ವಿಕಾಸದ ಹಾದಿಯಲ್ಲಿ ಗಂಡಿನದೇ ಪ್ರಮುಖ ಪಾತ್ರ. ಪುರುಷ ಮಾನವ ಶಾಸ್ತ್ರಜ್ಞರು ಜಗತ್ತಿಗೆ ನೀಡಿರುವ ಈ ಚಿತ್ರ ''ಅರ್ಧ ಸತ್ಯ'' ಮಾತ್ರ. ಹೆಣ್ಣು ಈ ಜೀವ ವಿಕಾಸದ ಹಾದಿಯಲ್ಲಿ ನಿಷ್ಕ್ರಿಯವಾಗಿ ನೇಪಥ್ಯದಲ್ಲೇ ಉಳಿದವಳಾಗಿದ್ದಾಳೆ.

ಮಾನವ ಶಾಸ್ತ್ರ ಇಲ್ಲಿಯವರೆಗೂ ಪುರುಷ ಪ್ರಧಾನ ರಂಗವಾಗಿತ್ತು. ಇದೀಗ ಸ್ತ್ರೀಯರು ಈ ರಂಗದಲ್ಲಿ ಪ್ರವೇಶಿಸುತ್ತಿದ್ದಂತೆ, ಅಸ್ತ್ರೋಪಾಲಜಿಯ ಮೂಲಸಿದ್ಧಾಂತಗಳನ್ನು ಪ್ರಶ್ನಿಸ ಹೊರಟಿದ್ದಾರೆ. ಅಲ್ಲಿಯ ಲೋಪಗಳಿಗೆ ಬೊಟ್ಟು ಇಟ್ಟು

ತೋರಿಸುತ್ತಿದ್ದಾರೆ. ಸಂತಾ ಕ್ರೂಜ್‌ನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಅಡ್ರಿನ್ ಜಿಲ್ಮನ್ ಎಂಬ ಮಹಿಳಾ ವಿಜ್ಞಾನಿ, ಜೀವ ವಿಕಾಸದ ಅತ್ಯಂತ ಮೂಲಭೂತ ವಿಷಯಗಳೊಡನೆ ಗುದ್ದಾಡುತ್ತಿದ್ದಾಳೆ. ಆಕೆಯ ಅಧ್ಯಯನ ಈ ಮೂಲಭೂತ ತತ್ವಗಳು ತಪ್ಪಾಗಬಹುದೆಂದು ಸೂಚಿಸುತ್ತಿವೆ. ಹೆಣ್ಣಿನ ಆಹಾರ ಶೇಖರಣೆಗೆ ಮತ್ತು ಮಕ್ಕಳ ಪಾಲನೆಗೆ ಕೈಗಳ ಉಪಯೋಗದ ಅವಶ್ಯಕತೆ ಅಧಿಕವಿದ್ದು, ಭೂಮಿಯ ಮೇಲೆ ಮಾನವ ಎರಡು ಕಾಲಿನಲ್ಲಿ ನಿಲ್ಲುವಂತಾಯಿತೆಂದು, ಜಿಲ್‌ಮನ್ ಪ್ರಬಲ ವಾದಗಳನ್ನು ಹೂಡಿದ್ದಾಳೆ. ''ಗಂಡಿನ ಬೇಟೆ ಮಾತ್ರ, ಮಾನವನನ್ನು ಎರಡು ಕಾಲಿನಲ್ಲಿ ನಿಲ್ಲಿಸಿತೆಂದು'' ಮಾನವಶಾಸ್ತ್ರಜ್ಞರು ಹೇಳಲು ಮೂಲ ಕಾರಣ - ಈ ಚಿತ್ರವನ್ನು ಚಿತ್ರಿಸುತ್ತಿದ್ದವರು ಪುರುಷ ಆನ್ತ್ರೋಪಾಲಿಜಿಸ್ಟ್‌ಗಳೆಂದು ಈಕೆಯ ವಾದ. ''ವಿಜ್ಞಾನ ಯಾವಾಗಲೂ ಗಂಡು ಚಟುವಟಿಕೆಯೆಂಬ ಕಲ್ಪನೆ ಇದೆ. ಇಂಥ ಗಂಡು ಸಿದ್ಧಾಂತಗಳಿಗೆ ಪೂರ್ವಾಗ್ರಹವೇ ಮೂಲ ಕಾರಣ'' ಎಂದು ಆಕೆಯ ಅಭಿಪ್ರಾಯ. ಜೀವ ವಿಕಾಸದ ಚಿತ್ರ ಇಂಥ ಪೂರ್ವಾಗ್ರಹಗಳಿಂದ ವಕ್ರವಾಗಿದೆ ಎನ್ನುವ ಈಕೆ ಬಹಳಷ್ಟು ಟೀಕೆಗೆ ಗುರಿಯಾಗಿದ್ದಾಳೆ. ಈ ರಂಗದ ಪ್ರಮುಖ ಸಂಶೋಧಕರೊಡನೆ ಡಿಕ್ಕಿ ಹೊಡೆದಿದ್ದಾಳೆ.

ಗಂಡುಗಳು ಬಹಳ ದೊಡ್ಡ ಗಾತ್ರದಲ್ಲಿದ್ದು, ಶಕ್ತಿಶಾಲಿಗಳಾಗಿದ್ದು ಮರಿಗಳ ಕಾಟವಿಲ್ಲದ ಕಾರಣ ಬೇಟೆಗೆ ಹೋದರೆಂಬುದು ಬಹಳಷ್ಟು ಮಾನವಶಾಸ್ತ್ರಜ್ಞರ ಊಹೆ. ಹೀಗೆಂದೇ ಆದಿ ಮಾನವನ ಸಾಮಾಜಿಕ ಬದುಕಿನ ಚಿತ್ರವನ್ನು ನಿರ್ದಿಷ್ಟವಾಗಿ ಲಿಂಗಾಧಾರಿತವಾಗಿ ನೀಡಿದರು. ಇಂಥಾ ಕಲ್ಪನೆ ಹೆಣ್ಣನ್ನು ಅತ್ಯಂತ ಅಸಹಾಯಕಳನ್ನಾಗಿಸಿ ಗಂಡಿನ ಕೃಪಾಕಟಾಕ್ಷಕ್ಕೆ ಬಿಟ್ಟಿದೆ. ಆಕೆಯ ಬದುಕಿನ ಮೂಲ ಉದ್ದೇಶ ಕೇವಲ ಹೆರುವುದು ಮತ್ತು ಸೇವೆ ಮಾಡುವುದಷ್ಟೇ ಆಗಿದೆ, 1970ರಲ್ಲಿ ಸ್ಯಾಲ ಲಿಂಟನ್ ಎಂಬ ಮಹಿಳಾ ವಿಜ್ಞಾನಿ ಪ್ರಕಟಿಸಿದ ಮಾನವ ಶಾಸ್ತ್ರದಲ್ಲಿ 'ಪುರುಷರ ಪೂರ್ವಾಗ್ರಹ' ಎಂಬ ಗ್ರಂಥ ಈ ದಿಕ್ಕಿನ ಚಿಂತನೆಗಳಿಗೆ ಪ್ರಶ್ನೆಯಾಗಿದೆ. ಆಕೆ ಹೆಣ್ಣಿನ ಮೇಲಿನ ದಬ್ಬಾಳಿಕೆ ಆಧುನಿಕ ಕಾಲದ ದುರ್ದೈವವಷ್ಟೆಯೇ ಹೊರತು ಪ್ರಕೃತಿ ಸಹಜವಾಗಿ, ನಮ್ಮ ಪ್ರಾಣಿ ಪೂರ್ವಜರ ಕಾಲದಿಂದ ಬೆಳೆತು ಬಂದದ್ದಲ್ಲ ಎಂದಿದ್ದಾಳೆ. ಅದೇ ವರ್ಷ ''ಗಂಡು ಬೇಟೆಗಾರ ಕಲ್ಪನೆಯ ಅನೇಕ ಲೋಪಗಳು ಹೊರಬಿದ್ದವು. ಬೇಟೆಯಾಡಿ, ಆಹಾರ ಒಟ್ಟೈಸಿ, ಜೀವಿಸುವ ದಕ್ಷಿಣ ಆಫ್ರಿಕಾದ Kung ಸಮಾಜವ ಕುರಿತಂತೆ ಮಾನವಶಾಸ್ತ್ರಜ್ಞರು ಪಡೆದ ಅಂಕಿ ಅಂಶಗಳು, ಹೆಣ್ಣು ಬಹಳಷ್ಟು ಸ್ವತಂತ್ರಳಾಗಿದ್ದುದನ್ನು ತೋರಿಸಿಕೊಟ್ಟವು. ಹೆಣ್ಣು ತಾನು ಶೇಖರಿಸಿದ ಆಹಾರದ ಮೇಲೆ ಪೂರ್ಣ ನಿಯಂತ್ರಣ ಹೊಂದಿದ್ದೂ ತಿಳಿದು ಬಂತು, ರಿಚರ್ಡ್ ಲೀ ಮುಂತಾದ ವಿಜ್ಞಾನಿಗಳ ಅಧ್ಯಯನ, ಈ ಹೆಣ್ಣುಗಳು Kung ಜನರ ಮೂಲ ಆಹಾರವಾದ ಗೆಡ್ಡೆ-ಗೆಣಸು ಹಣ್ಣುಗಳನ್ನು ಆರಿಸಿ ತರುತ್ತಿದ್ದರೆಂದು ತಿಳಿಸಿತು. ಬಹುಶಃ ಮೂಲ ಮಾನವರ ಹೆಣ್ಣುಗಳ ಬದುಕು ಈ Kung ಹೆಣ್ಣುಗಳಿಗೆ ಹೋಲಿದಂತಿರಬಹುದು ಎಂದು ಅಭಿಪ್ರಾಯಪಟ್ಟರು. ಈ ಹೆಣ್ಣುಗಳು ಹಿಳ್ಳೆಗಳನ್ನು ಕಟ್ಟಿಕೊಂಡು ಮನೆಗೆ ಬಂಧಿಯಾದವರಲ್ಲ. ಬದಲು ಮರಿಗಳೊಡನೆ ಮೈಲಿಗಟ್ಟಲೆ ಅಲೆದಾಡಿ ಆಹಾರಕ್ಕಾಗಿ ಹುಡುಕಾಡಿದವರು. ಈ ಹುಡುಕಾಟದಲ್ಲಿ ಆಫ್ರಿಕಾದ ದಟ್ಟ ಕಾಡುಗಳಲ್ಲಿ ಗಿಡಗಂಟೆಗಳ ನಡುವೆ ಗೆಡ್ಡೆಗೆಣಸು ಹಣ್ಣುಗಳನ್ನು ಅಗೆದು, ಹೆಕ್ಕಿ ತೆಗೆಯಲು ಹೆಣ್ಣುಗಳಿಗೆ ಆಯುಧದ ಅವಶ್ಯಕತೆ ಅನಿವಾರ್ಯವಿತ್ತು. ಇಂಥ ಆಯುಧಗಳನ್ನು ಹಿಡಿದು, ಮರಿಗಳನ್ನು ಕಟ್ಟಿಕೊಂಡು ಅಡ್ಡಾಡುವಾಗ ಕೈಗಳೆರಡನ್ನು ಸ್ವತಂತ್ರ ಮಾಡಿಕೊಳ್ಳುವ ಅಗತ್ಯ ಹೆಚ್ಚಿತ್ತು. ಇವು ಮಾನವ ಶಾಸ್ತ್ರದಲ್ಲಿ ಕೇಳಿಬರುತ್ತಿರುವ ಹೊಸ ವಾದಗಳು.

ಕಾಡು ಬಬೂನ್, ಚಿಂಪಾನ್ಸಿಗಳ ಅಧ್ಯಯನದಲ್ಲಿ ಇಪ್ಪತ್ತು ವರ್ಷಗಳನ್ನು ಕಳೆದ ಬಾರ್ಬರಾ ಸ್ಮಟ್ಸ್, ಮಿಚಿಗನ್ ವಿಶ್ವವಿದ್ಯಾಲಯದ ಮಾನವ

ಶಾಸ್ತ್ರದ ಪ್ರಾಧ್ಯಾಪಕಿ. ಸ್ತ್ರೀವಾದ ಆಕೆಯ ಅಧ್ಯಯನದ ಮೂಲ ದನಿಯಾಗಿದೆ. ನಮ್ಮ ಸಾಂಪ್ರದಾಯಿಕ ಜೀವ ವಿಕಾಸದ ಥಿಯರಿಗಳು ಗಂಡಿನತ್ತ ಮಾತ್ರ ಕೇಂದ್ರೀಕೃತವಾಗಿ, ಗಂಡಿನ ಗತ್ತಿನ ಆಕ್ರಮಣಶೀಲ ಸ್ಪರ್ಧಾಭಾವ ಜೀವ ವಿಕಾಸಕ್ಕೆ ಮೂಲ ಕಾರಣ ಎಂದು ಸಾರುತ್ತವೆ. ತನ್ನ ಜೊತೆಯವರೊಡನೆ ಬಡಿದಾಡಿ ಗೆದ್ದ ಗಂಡು ಹೆಚ್ಚು ಹೆಣ್ಣುಗಳೊಡನೆ ಕೂಡಿ ಹೆಚ್ಚು ಮರಿಗಳನ್ನು ಹುಟ್ಟಿಸಿ, ತನ್ನ ವಂಶವಾಹಿಗಳನ್ನು ಮುಂದಿನ ಜನಾಂಗಕ್ಕೆ ಸಾಗಿಸುತ್ತದೆಂಬುದು ಮೂಲವಾದ. ಅವರ ಕಣ್ಣಿಗೆ ಜೀವ ವಿಕಾಸದ ಹಾದಿಯಲ್ಲಿ ಹೆಣ್ಣಿನ ಪಾತ್ರ ಕಾಣಲೇ ಇಲ್ಲ, ಹೆಣ್ಣು ಪೂರ್ಣ ಅದೃಶ್ಯಳು. ತನ್ನ ವಂಶವಾಹಿಗಳನ್ನು ಕೊಡುವುದಲ್ಲದೆ, ಮರಿಗಳನ್ನು ಪೋಷಿಸಿ ಮುಂದಿನ ಜನಾಂಗವನ್ನು ರೂಪಿಸುವ ಹೆಣ್ಣಿಗೆ, ತನಗೆ ತನ್ನ ಲೈಂಗಿಕ ಜೊತೆಗಾರನನ್ನು ಆಯ್ದುಕೊಳ್ಳುವಲ್ಲಿ, ಮುಂದಿನ ಜನಾಂಗದ ನಿರ್ಮಾಣದಲ್ಲಿ ಪಾತ್ರವಿತ್ತೆಂದು ಹತ್ತೊಂಬತ್ತನೇ ಶತಮಾನದ ವಿಜ್ಞಾನಿಗಳು ಯೋಚಿಸಲೇ ಇಲ್ಲ. ಇದೀಗ ಬಾರ್ಬರಾ ಸ್ಮಟ್ಸ್‌ಳ ಕಟು ಪರಿಶ್ರಮದ 'ಫೀಲ್ಡ್ ವರ್ಕ್,' ಇಂಥಾ ಸಾಂಪ್ರದಾಯಿಕ ನಂಬಿಕೆಗಳ ಮಖಕ್ಕೆ ಹೊಡೆದಂತಿದೆ. ಆಫ್ರಿಕಾದ ಕಾಡುಗಳಲ್ಲಿ ಬೆಳಗಿನಿಂದ ಕತ್ತಲವರೆಗೆ ಕಾಡು ಬಬೂನ್‌ಗಳನ್ನು ಹಿಂಬಾಲಿಸಿ ಅವುಗಳ ನಡುವೆ ಗಂಟೆಗಟ್ಟಲೆ ಕುಳಿತು ಅವುಗಳ ಪ್ರತಿ ಕ್ಷಣದ ಪ್ರತಿ ಚಲನವಲನ ವೀಕ್ಷಿಸಿದ ಈಕೆಯ 'ಫೀಲ್ಡ್ ವರ್ಕ್' ಜೀವ ವಿಕಾಸದ ಹಾದಿಯತ್ತ ಬಹಳಷ್ಟು ಬೆಳಕು ಚೆಲ್ಲಿದೆ. ಹೆಣ್ಣುಗಳು ಸುಮ್ಮನೆ ಕುಳಿತು ಗಂಡುಗಳಿಗೆ ಒಪ್ಪಿಸಿಕೊಳ್ಳದೇ, ತಮ್ಮ ಜೊತೆಗಾರರನ್ನು ಆರಿಸಿಕೊಂಡದ್ದನ್ನು ತೋರಿಸಿದೆ. ಒಂದು ಹೆಣ್ಣು ಬಬೂನ್, ನಲವತ್ತೆರಡು ಬಾರಿ ತನ್ನ ಮೇಲೇರಲು ಪ್ರಯತ್ನಿಸಿದ ಗಂಡನ್ನು ತಿರಸ್ಕರಿಸಿ, ತನಗಿಷ್ಟವಾದ ಗಂಡಿನೊಡನೆ ಕೂಡಿದ ದೃಶ್ಯವನ್ನು ಬಾರ್ಬರಾ ದಾಖಲಿಸಿದ್ದಾಳೆ. ಇಂಥಾ ಅನೇಕ ದೃಶ್ಯಗಳ ಅವಲೋಕನ ಹೆಣ್ಣಿನ ಆಯ್ಕೆಯ ವಿಷಯವನ್ನು, ನಿರ್ಣಯದ ಹಕ್ಕನ್ನು ಸ್ಪಷ್ಟಪಡಿಸುತ್ತಿದೆ. ಗಂಡು ಹೆಣ್ಣನ್ನು ಒಲಿಸುವ ಪ್ರಯತ್ನಗಳೂ ಹೊರ ಬಂದಿವೆ. ಹಲವಾರು ಬಾರಿ ಗಂಡು ಬಬೂನ್‌ಗಳು, ತಾವು ಲೈಂಗಿಕ ಸಂಬಂಧ ಹೊಂದಿಲ್ಲದ ಹೆಣ್ಣುಗಳೊಡನೆ ವಾತ್ಸಲ್ಯದ ಸಂಬಂಧ ಬೆಳೆಸಿಕೊಂಡು ಅವುಗಳೊಡನೆ ಲಲ್ಲೆಗರೆದು, ತನ್ನವಲ್ಲದ ಅವುಗಳ ಮರಿಗಳ ಸಂರಕ್ಷಣೆಗೂ ಧಾವಿಸಿದ ಸಂದರ್ಭಗಳನ್ನು ಉಲ್ಲೇಖಿಸುತ್ತಾಳೆ. ಈ ಗಂಡುಗಳು ಹೆಣ್ಣನ್ನು ಒಲಿಸಲು ಪಡುವ ಪಾಡುಗಳತ್ತ ಬೆರಳಿಟ್ಟು, ತಾನು ಕೂಡುವ ಗಂಡನ್ನು ಆಯ್ದುಕೊಳ್ಳುವ ಶಕ್ತಿ ಈ ಹೆಣ್ಣುಗಳಿಗಿದೆಯೆಂದು ತೋರಿಸಿದ್ದಾಳೆ. ಇಂಥಾ ಅವಲೋಕನಗಳು ಮಾನವ ಶಾಸ್ತ್ರದ ಮೂಲ ಸಿದ್ಧಾಂತಗಳಾದ ಗಂಡು ಹೆಣ್ಣಿನೊಡನೆ ಸಂಭೋಗಕ್ಕೆ ಮಾತ್ರ ಕೂಡಿ, ತನ್ನ ವಂಶವಾಹಿಗಳ ಹೊತ್ತ ಮರಿಗಳನ್ನು ಮಾತ್ರ ಸಂರಕ್ಷಿಸುವುದೆಂಬ ವಾದಗಳಿಗೆ ಪೂರ್ಣ ವಿರೋಧವಿದೆ.

ಅಂತೂ ಇಂದು ಮಹಿಳಾ ವಿಜ್ಞಾನಿಗಳು ಮಾನವ ಶಾಸ್ತ್ರದಲಿ ಬಹಳಷ್ಟು ವಾದ ವಿವಾದಗಳನ್ನೆಬ್ಬಿಸಿದ್ದಾರೆ. ಇದುವರೆಗೂ ಪರಮ ಸತ್ಯವೆಂದು ನಂಬಿಕೊಂಡು ಬಂದ ಸಿದ್ಧಾಂತಗಳ ಪ್ರಶ್ನಿಸುತ್ತಿದ್ದಾರೆ. ತಮ್ಮ ಅಧ್ಯಯನ - ಸಂಶೋಧನೆಯ ಆಧಾರದ ಮೇಲೆ ಮೂಲ ಮಾನವನ ಪೂರ್ಣ ಚಿತ್ರವನ್ನು ನೀಡಲು, ಜೀವ ವಿಕಾಸದಲ್ಲಿ ಗಂಡು ಹೆಣ್ಣಿನ ಪಾತ್ರವನ್ನು ಅರ್ಥೈಸಲು ಪ್ರಯತ್ನಿಸುತ್ತಿದ್ದಾರೆ.

ಸ್ತ್ರೀ ವಾದವನ್ನು ಸಾಹಿತ್ಯದಲ್ಲಿ, ಕಲೆಯಲ್ಲಿ ಕಾಣುವ ನಾವು ಸ್ತ್ರೀವಾದದ ಅಗತ್ಯ ವಿಜ್ಞಾನಕ್ಕೂ ಇರುವುದು ಪರಿಗಣಿಸಿರಲಿಲ್ಲ. ಪೂರ್ವಗ್ರಹಗಳು ವೈಜ್ಞಾನಿಕ ಸತ್ಯಗಳ ಮರೆಮಾಚಬಲ್ಲವು, ವೈಜ್ಞಾನಿಕ ಸತ್ಯಗಳಿಗೆ ಕುರುಡಾಗಬಲ್ಲವು, ಎಂಬ ಸತ್ಯವನ್ನು ಮಹಿಳಾ ಮಾನವ ಶಾಸ್ತ್ರಜ್ಞರು ಇದೀಗ ಜಗತ್ತಿಗೆ ತೋರಿಸಲು ಪ್ರಯತ್ನಿಸುತ್ತಿದ್ದಾರೆ. ●

(ಬೆಂಗಳೂರಿನ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ 'ಅಚಲ' ದ್ವೈಮಾಸಿಕದ ಅನುಮತಿಯಿಂದ.)

ಆಂಗ್ಲ ಜೀವನ: ಯಾತ್ರಿಕನು ಕಂಡಂತೆ

• ಐ. ಶ್ರೀರಾಮ

ಮೋಸ, ವಂಚನೆಗಳಿಂದ ಭಾರತದ ಬೇರೆ ಬೇರೆ ಭಾಗಗಳನ್ನು ಕಿತ್ತುಕೊಂಡು ಸಮಗ್ರ ಭಾರತದ ದೊರೆಗಳಾಗಿ ರಾರಾಜಿಸಿದ ಆಂಗ್ಲ ವ್ಯಕ್ತಿಗಳ ಚಿತ್ರಗಳು ಒಂದೊಂದಾಗಿ ನನ್ನ ಸ್ಮೃತಿ ಪಟಲದಲ್ಲಿ ಹಾದುಹೋದುವು. ಅಸಹಾಯಕ ಸ್ಥಿತಿಯಲ್ಲಿದ್ದ ಸ್ವಾತಂತ್ರ್ಯ ಹೋರಾಟಗಾರರನ್ನು ನಿರ್ದಯವಾಗಿ ಗುಂಡಿಕ್ಕಿ ಕೊಂದ, ಜನಪ್ರಿಯ ರಾಜರನ್ನು ಕುಹಕದಿಂದ ಸೋಲಿಸಿದ, ನಮ್ಮ ಸಂಪತ್ತನ್ನು ದೋಚಿಕೊಂಡು ಹೋದ ಬ್ರಿಟಿಷರು ಇಲ್ಲಿ ಎಸಗಿದ ದುಷ್ಟ ಕೃತ್ಯಗಳು ಒಂದೇ, ಎರಡೇ? ಚರಿತ್ರೆಯ ಆ ಕರಾಳ ದಿನಗಳನ್ನು ನೆನೆದಾಗ ಮೈ ನಡುಗಿತು. ದೆಹಲಿಯಿಂದ ಹೊರಟ ವಿಮಾನವು ಒಂಬತ್ತು ಗಂಟೆಗಳ ಪ್ರಯಾಣದ ಬಳಿಕ ಲಂಡನ್ನಿನ ಹೀಥ್ರೋ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಹಲ್ಲು ಕಡಿಯುತ್ತಲೇ ಕೆಳಗಿಳಿದೆ.

"ವಿಕ್ಟೋರಿಯಾ ಸ್ಟೇಷನ್ನಿಗೆ ಹೋಗುವ ದಾರಿ ತಿಳಿಸುತ್ತೀರಾ?" ಎಂದು ಅಭ್ಯಾಸಬಲದಿಂದ (ಸಾಧಾರಣವಾಗಿ, ಆ ದೇಶದಲ್ಲಿ ಬೇರೆ ಬೇರೆ ವಿಧವಾದ ಮಾರ್ಗದರ್ಶಕಗಳಿರುವುದರಿಂದ ಓದುಬರಹ ಬಲ್ಲವನು ಮಾರ್ಗದರ್ಶನಕ್ಕಾಗಿ ಯಾರನ್ನೂ ಕೇಳಬೇಕಾಗುವುದಿಲ್ಲ.) ಅಲ್ಲಿರುವ ವ್ಯಕ್ತಿಯನ್ನು ಕೇಳಿದೆ. ಆತ ಮೃದುವಾಗಿ, ಮಧುರವಾಗಿ ನಾನು ತನ್ನ ಆತ್ಮೀಯ ಸ್ನೇಹಿತನೆಂಬಂತೆ ನೀಡಿದ ಉತ್ತರ ಕೇಳಿ ಆಶ್ಚರ್ಯವಾಯಿತು. ನಮ್ಮ ದೇಶದಲ್ಲಿ ದಬ್ಬಾಳಿಕೆ ನಡೆಸಿದವರು ಇದೇ ಜನಾಂಗದವರೆಂದು ನಂಬಲಾಗಲಿಲ್ಲ. ಆತನ ಸುಸಂಸ್ಕೃತ ನಡವಳಿಕೆಯು ಒಂದು ಆಕಸ್ಮಿಕ ಘಟನೆಯಾಗಿರಲಿಲ್ಲ. 'ಸುಸಂಸ್ಕೃತ ಬಾಹ್ಯ ನಡವಳಿಕೆ ಈ ಜನಾಂಗದ ಜನ್ಮಜಾತ ಗುಣ' ಎಂಬುದು ಕೆಲವೇ ದಿನಗಳಲ್ಲಿ ಮನದಟ್ಟಾಯಿತು. ದಿನದಲ್ಲಿ ಮೊದಲ ಬಾರಿಗೆ ಯಾರೇ ಎದುರಾಗಲಿ - ಕಸಗುಡಿಸುವವನಾಗಿರಲಿ ಅಥವಾ ಉನ್ನತ ಹುದ್ದೆಯ ಅಧಿಕಾರಿಯಾಗಿರಲಿ ಅವನಿಗೆ ಸುಪ್ರಭಾತ [Good Morning] ಹೇಳಿಯೇ ಹೇಳುತ್ತಾರೆ; ಅದಕ್ಕೆ ಸ್ಥಾನ ಮಾನಗಳ ಅಂತರವಿಲ್ಲ. "ಕ್ಷಮಿಸಿ", "ಧನ್ಯವಾದಗಳು" - ಎಂಬ ಈ ಎರಡು ಪದಗಳು ಅವರ ಮಾತಿನಲ್ಲಿ ಯಥೇಷ್ಟ ಬರುತ್ತಲೇ ಇರುತ್ತವೆ. ಸವಿಮಾತುಗಳಿಗೆ ಅಭಾವವಿಲ್ಲ. ಜೀವನದಲ್ಲಿ ಆಸಕ್ತಿ ಮತ್ತು ಮುಖದಲ್ಲಿ ಪ್ರಸನ್ನತೆ ಎದ್ದು ಕಾಣುತ್ತದೆ.

ಟಿಕೆಟ್ಟಿಲ್ಲದೆ ಪ್ರಯಾಣ ಮಾಡುವವರು ಇರುವುದು ನಮ್ಮ ದೇಶದಲ್ಲಿ ಮಾತ್ರ, ಎಂದು ತಿಳಿಯಬೇಡಿ; ಇಂಗ್ಲಂಡ್‌ದಲ್ಲೂ ಇದ್ದಾರೆ! ಹಾಗೆಯೇ ಒಬ್ಬರ ಉಡುಪು ಇನ್ನೊಬ್ಬರ ಉಡುಪಿಗೆ ತಾಗಿದರೂ 'ಕ್ಷಮಿಸಿ' ಎನ್ನುವ ಸಭ್ಯತನ ಆ ದೇಶದವರದು.





ದಿನವಿಡೀ ಒರಟು ಮಾತುಗಳನ್ನು ಕೇಳಬೇಕಾಗುವ ನಮ್ಮ ದೇಶದವರಿಗೆ ಇದು ಅಸ್ವಾಭಾವಿಕವೆನಿಸಲೂಬಹುದು! ಅವರ ನಡವಳಿಕೆಯನ್ನು ನೋಡಿದಾಗ, ನಮ್ಮ ಪ್ರಾಚೀನ ಸಂಸ್ಕೃತಿಯ ಬಗ್ಗೆ ಹೆಮ್ಮೆಪಡುವ ನಾವು ಏಕೆ ಇಷ್ಟು ಒರಟರಾದೆವು ಎನಿಸದಿರುವುದಿಲ್ಲ.


ಬಸ್ಸಿಗೆ ಏರಿದೊಡನೆ, ''.....ಗೆ ಒಂದು ಟಿಕೆಟು ಕೊಡಿ,'' ಎಂದು ಹೇಳಬೇಕೆನಿಸುವುದು ಸ್ವಾಭಾವಿಕ. ಆದರೆ ಅದನ್ನು ಕೇಳಲು ಅಲ್ಲಿ ಕಂಡಕ್ಟರನಿಲ್ಲ. ಟಿಕೆಟ್ ವೆಂಡಿಂಗ್ ಮೆಶಿನಿಗೆ ಹಣ ಹಾಕಿದರೆ ಟಿಕೆಟು ಬರುತ್ತದೆ; ಬಸ್ಸಿನ ಚಾಲಕನು ಗುಂಡಿ ಒತ್ತಿದೊಡನೆ ಬಾಗಿಲು ತಾನಾಗಿ ಮುಚ್ಚಿಕೊಳ್ಳುತ್ತದೆ; ಬಸ್ಸು ಹೊರಡುತ್ತದೆ. ಬಸ್ಸಿನಿಂದಿಳಿದು, ಭೂಗತ ರೈಲುಗಳಲ್ಲಿ, ನೆಲದಡಿಯಲ್ಲಿಯೇ ಅತ್ತಿತ್ತ ಇಲಿಗಳಂತೆ ಓಡಾಡಿ ಇನ್ನೊಂದು ಬಸ್ಸಿಗೆ ಅಥವಾ ಟ್ಯಾಕ್ಸಿಗೆ ಹತ್ತಿ ನಿರಾಯಾಸವಾಗಿ ಪ್ರಯಾಣ ಮಾಡಬಹುದು. ಟ್ಯಾಕ್ಸಿಗೆ ಹತ್ತಿದೊಡನೆ ''ಎಲ್ಲಿಗೆ ಹೋಗಬೇಕು?'' ಎಂದು ಪಾಕಿಸ್ತಾನಿ ಚಾಲಕನು ಹಿಂದಿಯಲ್ಲಿ ಕೇಳಿದರ ಆಶ್ಚರ್ಯಪಡಬೇಕಾಗಿಲ್ಲ. ಭಾರತ ಮತ್ತು ಪಾಕಿಸ್ತಾನದ ಎಷ್ಟೋ ಜನರನ್ನು ಪ್ರತಿದಿನ ನೋಡಬಹುದು. ''......ಗೆ ಹೋಗುತ್ತಿದ್ದೇನೆ,'' ಎಂದು ಟ್ಯಾಕ್ಸಿ ಹೊರಟೊಡನೆ ಚಾಲಕನು ವಯರ್‌ಲೆಸ್ ಸೆಟ್‌ನ ಮೂಲಕ ಟ್ಯಾಕ್ಸಿಯ ಚಲನೆಯ ವಿವರವನ್ನು ತನ್ನ ಕೇಂದ್ರ ಕಚೇರಿಗೆ ತಿಳಿಸುತ್ತಾನೆ. ಚಾಲಕನು ಟ್ಯಾಕ್ಸಿಯನ್ನು ನಿಲ್ಲಿಸದೆ ಅದರ ಬಾಗಿಲು ತೆರೆಯದು. ಆದುದರಿಂದ [illegible] ಓಡುವ



ಸಾಧ್ಯತೆ ಇಲ್ಲ. ಮಾರ್ಗದ ನಿಯಮಗಳನ್ನು ಸಾಮಾನ್ಯವಾಗಿ ಎಲ್ಲರೂ ಪರಿಪಾಲಿಸುತ್ತಾರೆ. ಎಲ್ಲಿಯಾದರೂ ಪಾದಚಾರಿಯು ಮಾರ್ಗವನ್ನು ದಾಟಲು ಹವಣಿಸುತ್ತಿದ್ದರೆ, ಚಾಲಕನು ವಾಹನವನ್ನು ಕೂಡಲೇ ನಿಲ್ಲಿಸಿ ಅವನನ್ನು ಹೋಗಗೊಡುತ್ತಾನೆ. ಪಾದಚಾರಿಗೆ ಪೆಟ್ಟಾದರೆ ಅತ್ಯಧಿಕ ಪರಿಹಾರಧನ ತೆರಬೇಕಾಗುವುದರಿಂದ ಬಹಳ ಮುಂಜಾಗ್ರತೆ ವಹಿಸುತ್ತಾರೆ. ಒಬ್ಬ ಮನುಷ್ಯನ ಜೀವಕ್ಕೆ ಅಷ್ಟು ಬೆಲೆ ಇದೆ ಎಂದು ನಿಮಗೆ ಆಶ್ಚರ್ಯವಾಗುವುದಿಲ್ಲವೇ?

ಟಿಕೆಟ್ಟಿಲ್ಲದೆ ಪ್ರಯಾಣ ಮಾಡುವವರು ಇರುವುದು ನಮ್ಮ ದೇಶದಲ್ಲಿ ಮಾತ್ರ ಎಂದು ತಿಳಿಯಬೇಡಿ. ಅಲ್ಲಿಯೂ ಇದ್ದಾರೆ! ಆದರೆ ಆತನು ಸಿಕ್ಕಿಬಿದ್ದಾಗ ಆತನನ್ನು ಬಯ್ಯುವುದಿಲ್ಲ; ಅವಮಾನಿಸುವುದಿಲ್ಲ. ಅಲ್ಲಿಯೇ ದಂಡ ಕೊಡಲಾಗದಿದ್ದರೆ ಅವನ ವಿಳಾಸವನ್ನು ಬರೆದುಕೊಂಡು ಹಣವನ್ನು ಆಮೇಲೆ ವಸೂಲಿ ಮಾಡಲಾಗುತ್ತದೆ. ತಪ್ಪುಗಾರನಾಗಿದ್ದರೂ ಆತನು ಅದೇ ದೇಶದ ಪ್ರಜೆಯಲ್ಲವೇ? ಪ್ರಜಾಪ್ರಭುತ್ವವಿರುವ ರಾಜ್ಯದಲ್ಲಿ ಪ್ರಜೆಗೆ ಎಷ್ಟು ಮನ್ನಣೆ ಇದೆ ಎಂಬುದನ್ನು ಮೊತ್ತಮೊದಲ ಬಾರಿಗೆ ಅಲ್ಲಿ ಕಂಡೆ.

ನಮ್ಮ ದೇಶದಲ್ಲಿರುವಂತಹ ಕಿಕ್ಕಿರಿದ ಜನಸಮೂಹ ಅಲ್ಲಿ ಪ್ರತಿದಿನ ಇರುವುದಿಲ್ಲ. ವಾರದ ಕೊನೆಯ ಬಿಡುವಿನ ದಿನ ಮಾತ್ರ ಜನರು ಸಂಭ್ರಮದಿಂದ ಅತ್ತಿತ್ತ ಹೋಗುತ್ತಿರುತ್ತಾರೆ. ಎಷ್ಟೇ ಜನರಿದ್ದರೂ ಗಲಾಟೆಗದ್ದಲಗಳಿಲ್ಲದೆ ತಾಳ್ಮೆಯಿಂದ 'ಕ್ಯೂ'ನಲ್ಲಿ ನಿಂತು ತಮ್ಮ ಸರದಿಗಾಗಿ ಕಾಯುತ್ತಿರುತ್ತಾರೆ. "ಭೂಗತ ರೈಲ್ವೇ ಸ್ಟೇಷನ್ನಿಗೆ ಹೋಗುತ್ತಿರುವ ಆಂಗ್ಲರನ್ನು ನೋಡಿದರೆ, ಆ ದೃಶ್ಯವು ಒಂದು ತೂತನ್ನು ಪ್ರವೇಶಿಸುವ ಇರುವೆಗಳ ಸಾಲಿನಂತಿರುತ್ತವೆ,"



"ಸಾರ್ ಎಲ್ರಿಗೂ ಬೇಗ ಬನ್ನಿ ಅಂತ ಹೇಳ್ಬೇಡಿ. ಅವರೆಲ್ಲ ಬೇಗ ಬಂದ್ರೆ, ನೀವು, ಬಯ್ಯೋದಾದರು ಯಾರಿಗೆ?, ಆದ್ರೂ ಲೇಟ್, ನೀವು, ಬಯ್ಯೋದು ಬಿಟ್ಟುಬಿಡ್ತೀರೇನಾ"

ಎಂದು ಬರಹಗಾರರೊಬ್ಬರು ವರ್ಣಿಸಿದ್ದಾರೆ. ಜನಸಮೂಹದಲ್ಲಿ ಒಬ್ಬರ ಉಡುಪು ಇನ್ನೊಬ್ಬರ ಉಡುಪಿಗೆ ಸಹ ತಗಲುವುದಿಲ್ಲ; ಒಂದು ವೇಳೆ ತಗಲಿದರೆ ಒಡನೆ ''ಕ್ಷಮಿಸಿ,'' ಎನ್ನುತ್ತಾರೆ. ಅವರ ಶಿಸ್ತಿನ ನಡವಳಿಕೆಯನ್ನು ನೋಡಿದರೆ ಯಾರಾದರೂ ತಲೆಬಾಗಲೇಬೇಕು.

''ಸೋಮವಾರ ಹತ್ತು ಗಂಟೆಗೆ ಭೇಟಿಯಾಗೋಣ,'' ಎಂದು ಅಧಿಕಾರಿಯೊಬ್ಬರು ನಿಮಗೆ ತಿಳಿಸಿದ್ದರೆ ಆ ದಿನ ಅಷ್ಟು ಹೊತ್ತಿಗೆ ಅವರು ನಿಮಗಾಗಿ ಕಾದಿರುತ್ತಾರೆ. ಅವರ ಸಮಯದ ಪ್ರಜ್ಞೆ ಮತ್ತು ತಾವು ಮಾಡುವ ಕೆಲಸದ ಗುಣಮಟ್ಟದ ಮೇಲೆ ಅವರಿಗಿರುವ ವಿಶೇಷ ಗಮನ ನಿಜವಾಗಿಯೂ ಶ್ಲಾಘನೀಯ.

ಭೋಜನ ಶಾಲೆಗಳಲ್ಲಿ ಎದುರು ತಟ್ಟೆ ತಂದಿಟ್ಟೊಡನೆ, ''ವೆಜಿಟೇರಿಯನ್?'' ಎಂದು ಕೇಳುವುದು ನಮ್ಮಲ್ಲಿ ಹಲವರಿಗೆ ರೂಢಿ. ''ಯೆಸ್, ವೆಜಿಟೇರಿಯನ್,'' ಎಂದು ಉತ್ತರ ಕೊಡುತ್ತಾರೆ. ನೀವು ಸಂಶಯ ದೃಷ್ಟಿಯಿಂದ, ''ಈ ತಿಂಡಿಯನ್ನು ಯಾವುದರಿಂದ ಮಾಡಿದ್ದು?'' ಎಂದು ಕೇಳಿದರೆ, ಬಹಳ ಸಹಜವಾಗಿ, ''ಮೀನಿನಿಂದ,'' ಎನ್ನುತ್ತಾರೆ. ಅವರ ಪಾಲಿಗೆ ಮೀನಿನ ಅಡುಗೆಯೂ ಸಸ್ಯಾಹಾರವೇ! ಸಸ್ಯಾಹಾರ-ಮಾಂಸಾಹಾರಗಳ ಭೇದವನ್ನು ಅವರಲ್ಲಿ ಅನೇಕರು ಅರಿಯರು. ಉಪ್ಪು, ಹುಳಿ, ಖಾರಗಳಿಲ್ಲದ ಸಪ್ಪೆ ಆಹಾರವನ್ನು ತಿಂದೇ ಆನಂದಪಡುವರು. ಆದರೆ ಶುಚಿತ್ವಕ್ಕೆ ಮತ್ತು ಆಹಾರದಲ್ಲಿರುವ ಸತ್ವಾಂಶಕ್ಕೆ ಎಲ್ಲೆಡೆಯೂ ಆದ್ಯತೆ ಇದೆ. ಆಹಾರದ ಪ್ರತಿಯೊಂದು ಪ್ಯಾಕೆಟ್‌ನಲ್ಲಿಯೂ ಅದರಲ್ಲಿ ಅಡಕವಾಗಿರುವ ಸತ್ವಾಂಶಗಳ ವಿವರ ಇರುತ್ತದೆ. ಅವರು ಅಷ್ಟು ಗಟ್ಟಿಮುಟ್ಟಾಗಿರಲು ಇದೂ ಒಂದು ಕಾರಣವಿರಬಹುದು.

ವಿಶಾಲವಾದ ಮಾರುಕಟ್ಟೆ ಸಂಕೀರ್ಣದಲ್ಲಿರುವ ಒಂದು ಅಂಗಡಿಯಲ್ಲಿ ಒಬ್ಬನು ಬಾಗಿಲಿನಿಂದ ಹೊರಬರುತ್ತಿದ್ದಂತೆಯೇ ಎಚ್ಚರಿಕೆಯ ಗಂಟೆ ಮೊಳಗಿತು. ನಮ್ಮೆಲ್ಲರ ದೃಷ್ಟಿಯೂ ಆತನ ಮೇಲೆ ಬಿತ್ತು. ಆತನು ಏನನ್ನಾದರೂ ಅಪಹರಿಸಿದನೇ? ಅಂಗಡಿಗಳಲ್ಲಿರುವ ವಸ್ತುಗಳ ಪ್ಯಾಕೆಟ್‌ಗಳಲ್ಲಿ ಬೆಲೆಯನ್ನು ಸಾಂಕೇತಿಕ ರೂಪದಲ್ಲಿ ಬರೆದಿರುತ್ತಾರೆ. ಈ ಸಾಂಕೇತಿಕ ಬರಹವನ್ನು ಒಂದು ಉಪಕರಣದ ತಪಾಸಣೆಗೆ ಒಳಪಡಿಸಿದಾಗ ವಸ್ತುವಿನ ಕ್ರಯ ಎಷ್ಟೆಂದು ಕಂಪ್ಯೂಟರಿನ ಸ್ಕ್ರೀನಿನಲ್ಲಿ ಬರುತ್ತದೆ; ಜೊತೆಗೆ ಬಿಲ್ಲೂ ತಯಾರಾಗುತ್ತದೆ. ತಪಾಸಣೆಗೆ ಒಳಪಡಿಸದೆ ವಸ್ತುವನ್ನು ಹೊರಗೆ ತಂದರೆ, ಬಾಗಿಲಿನ ಮೂಲಕ ಬರುವಾಗ ಎಚ್ಚರಿಕೆಯ ಗಂಟೆ ಮೊಳಗಿ ಅಪಹರಣದ ಸಾಧ್ಯತೆಯನ್ನು ಸೂಚಿಸುತ್ತದೆ. ನೀವು ಅಂಗಡಿಯನ್ನು ಪ್ರವೇಶಿಸಿದೊಡನೆ ವಿಡಿಯೋ ಕೆಮರಾಗಳು ನಿಮ್ಮನ್ನು ದುರುಗುಟ್ಟಿ ನೋಡತೊಡಗುತ್ತವೆ. ನಿಮ್ಮ ಚಲನೆಯನ್ನು ವಿಡಿಯೋ ಸ್ಕ್ರೀನಿನಲ್ಲಿ ವೀಕ್ಷಿಸಲಾಗುತ್ತದೆ. ಮಾರುಕಟ್ಟೆಗಳಲ್ಲಿ ನಿತ್ಯ ಜೀವನಕ್ಕೆ ಬೇಕಾದ ಯಾವ ವಸ್ತುವಿಗೂ ಅಭಾವ ಕಂಡುಬರುವುದಿಲ್ಲ. ಈ ಸಂಕೀರ್ಣಗಳು ಅತಿ ವಿಶಾಲವಾಗಿದ್ದು ಎಸ್ಕಲೇಟರುಗಳು ಚಲಿಸುತ್ತಲೇ ಇರುತ್ತವೆ. ಎಸ್ಕಲೇಟರಿನ ಮೆಟ್ಟಲಿನಲ್ಲಿ ನಿಂತರೆ, ಮೆಟ್ಟಲು ಮೇಲಕ್ಕೆ ಅಥವಾ ಕೆಳಕ್ಕೆ ಚಲಿಸಿ ನಿಮ್ಮನ್ನು ಒಂದು ಮಹಡಿಯಿಂದ ಇನ್ನೊಂದು ಮಹಡಿಗೆ ಒಯ್ಯುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ನಿತ್ಯ ಜೀವನವು ಕ್ರಮಬದ್ಧವಾಗಿ ನಡೆಯುತ್ತದೆ.

ಅವರ ಕೌಟುಂಬಿಕ ಜೀವನದ ವಿಷಯ ಹೇಳಲು ಬೇಸರವಾಗುತ್ತದೆ. ಭಗ್ನ ಕುಟುಂಬಗಳೇ ಹೆಚ್ಚು. ವಿವಾಹ ವಿಚ್ಛೇದನ ಒಂದು ಸಾಮಾನ್ಯ ವಿಷಯ. ಟಿ.ವಿ.ಯಲ್ಲಿ ಒಂದು ಸಂದರ್ಶನವನ್ನು ಏರ್ಪಡಿಸಿದ್ದರು. ಸಂದರ್ಶಿಸಲ್ಪಟ್ಟವರು ತಂದೆ ಇಲ್ಲದ ಮಕ್ಕಳು! ನಿಕ್ಕಿ 21 ವರ್ಷದ ಹುಡುಗಿ. ಸಂದರ್ಶಕನು ತಂದೆಯ ವಿಷಯ ಕೇಳಿದಾಗ ಭಾವನೆಗಳ ಅತಿರೇಕದಿಂದ ಬಿಕ್ಕಿ ಬಿಕ್ಕಿ ಅತ್ತಳು ನಿಕ್ಕಿ. ಹುಡುಗನೊಬ್ಬ ''ನಾನು ತಂದೆಯ ವಿಷಯವನ್ನೇ ಯೋಚಿಸಲಿಚ್ಛಿಸುವುದಿಲ್ಲ,'' ಎಂದು ಕಠೋರವಾಗಿ ಗುಡುಗಿದ, ಯಾಕೆ? ಹುಡುಗ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಬಳಲುತ್ತಿದ್ದಾಗ ತಂದೆಗೆ ಕಾಗದ

ಬರೆದನಂತೆ. ಆ ಕಾಗದಕ್ಕೆ ಉತ್ತರ ಬರೆಯುವಷ್ಟು ಸಹೃದಯತೆ ಆ ಪುಣ್ಯಾತ್ಮನಿಗೆ ಇರಲಿಲ್ಲ! ನಿತ್ಯ ಜೀವನದಲ್ಲಿಯೂ ಎಷ್ಟೋ ಒಡೆದ ಕುಟುಂಬಗಳನ್ನು ನೋಡಬಹುದು. ವಿವಾಹ ವಿಚ್ಛೇದನ ಮಾಡಿದ ಒಬ್ಬ ಹೇಳಿದ, "ತಿಂಗಳಿಗೊಮ್ಮೆ ಮಕ್ಕಳನ್ನು ನೋಡಿ ಬರುತ್ತೇನೆ. ಮಕ್ಕಳ ಖರ್ಚಿಗೆ ಹಣವನ್ನು ತಾಯಿಗೆ ಕೊಡುತ್ತೇನೆ." ಹೆತ್ತವರ ಪ್ರೀತಿ, ವಾತ್ಸಲ್ಯಗಳ ಅಭಾವದಿಂದ, ಇಂತಹ ಮಕ್ಕಳು ಬೆಳೆದು ದೊಡ್ಡವರಾದಾಗ ಹಲವು ಮಾನವೀಯ ಗುಣಗಳನ್ನು ಕಳೆದುಕೊಳ್ಳುತ್ತಾರೆ. ಬಾಹ್ಯ ನಡವಳಿಕೆಯಲ್ಲಿ ಎಷ್ಟೇ ಸೌಜನ್ಯ ಮತ್ತು ಸಂಸ್ಕೃತಿ ಕಂಡುಬಂದರೂ ಅವರ ನಿಜವಾದ ಸ್ವಭಾವವು ತೀರ ಭಿನ್ನವಾಗಿರುತ್ತದೆ.

"ಅಂತ್ಯಕ್ರಿಯೆ ಮಾಡುವವರು [Funeral Directors]" ಎಂಬ ಜಾಹೀರಾತನ್ನು ಕಂಡು ದಿಗ್ಭ್ರಮೆಯಾಯಿತು. ನಾವು ಜೀವಂತ ಇರುವಾಗಲೇ ಅಂತ್ಯಕ್ರಿಯೆಗೆ ತಯಾರಿಯಾಗಬೇಕೆಂದರೆ? ಆ ಕೆಲಸವನ್ನು ಮಕ್ಕಳಿಗೆ ಬಿಡುವಂತಿಲ್ಲ. ತಾಯಿ ತಂದೆಯರ ಮೇಲೆ ಭಕ್ತಿ, ಗೌರವ ಅವರಿಗೆ ಹೇಗೆ ಬರಬೇಕು?

ಒಂದು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ತನ್ನ ಮಗುವನ್ನು ತಾಯಿಯು ಅಲ್ಲಿಂದ ಬಿಡಿಸಿ ಬೇರೆ ಶಾಲೆಗೆ ಸೇರಿಸಿದಳು. ಬಿಡಿಸಲು ಕಾರಣ ಇಷ್ಟೆ: ಆ ಶಾಲೆಯಲ್ಲಿ ಮುಕ್ಕಾಲು ಪಾಲು ಏಶಿಯದವರ ಮಕ್ಕಳೇ ಇರುವುದರಿಂದ ತನ್ನ ಮಗುವು ಅವರ ಭಾಷೆ ಮತ್ತು ಸಂಸ್ಕೃತಿಗಳಿಂದ ಪ್ರಭಾವಿತನಾಗಬಹುದೆಂಬ ಭಯ! "ಅವನು ಮನೆಯಲ್ಲಿ ಉರ್ದು ಹಾಡನ್ನು ಹಾಡುತ್ತಿರುವುದು ನನಗೆ ಇಷ್ಟವಿಲ್ಲ. ಅವನು ಅಂತಹ ಭಾಷೆಗಳನ್ನು ಕಲಿಯಬಾರದು," ಎನ್ನುತ್ತಾಳೆ ಆಕೆ. ಅವರ ಅಂತರಂಗದಲ್ಲಿ ಏಶಿಯದವರು ಕೀಳು ಎಂಬ ಭಾವನೆ ದೃಢವಾಗಿ ಬೇರೂರಿದೆ. ಏಶಿಯದವರ ಮೇಲೆ ಏನಾದರೂ ಅತ್ಯಾಚಾರ ನಡೆದಾಗ ಪೋಲೀಸರ ಸಹಾಯ ಕೂಡ ಕ್ಷಿಪ್ರವಾಗಿ ಬರುವುದಿಲ್ಲ ಎಂಬ ದೂರು ಕೇಳಿ ಬರುತ್ತದೆ.

ನಮ್ಮ ಭಾಷೆ, ಸಂಸ್ಕೃತಿ ಮತ್ತು ಪ್ರಾಚೀನ ಪರಂಪರೆಗಳ ಬಗ್ಗೆ ನಾವು ಹೆಮ್ಮೆಪಡುವುದು ಸಹಜ. ವಿಲಾಸಪ್ರಿಯರಾದ ಪಾಶ್ಚಾತ್ಯರ ವಿಷಯದಲ್ಲಿ ಕೆಲವೊಮ್ಮೆ ಜುಗುಪ್ಸೆ ಹೊಂದಿದರೂ ವಿಶೇಷವಿಲ್ಲ. ಆದರೆ ಅವರ ಜೀವನದಿಂದ ನಾವು ಕಲಿತುಕೊಳ್ಳಬೇಕಾದ ಎಷ್ಟೋ ಉತ್ತಮ ಗುಣಗಳಿವೆ ಎಂಬ ಸತ್ಯದ ಅರಿವು, ಅವರ ಜೀವನ ಕ್ರಮವನ್ನು ಪ್ರತ್ಯಕ್ಷ ಕಂಡಾಗ ಉಂಟಾಯಿತು. ●

'ಮೈಸೂರು ಮಲ್ಲಿಗೆ'ಯ ಮೂಲ!

'ಮೈಸೂರು ಮಲ್ಲಿಗೆ' ಹಿರಿಯ ಕವಿ ಕೆ.ಎಸ್.ನರಸಿಂಹಸ್ವಾಮಿಯವರ ಅತ್ಯಂತ ಜನಪ್ರಿಯ ಕವನ ಸಂಕಲನ. 1942ರಲ್ಲಿ ಬರೆದ ಈ ಸಂಕಲನ ಪುನರ್ಮುದ್ರಣ ಕಂಡಿರುವುದು 22 ಬಾರಿ!

ಆಗಾಗ್ಗೆ ಮೈಸೂರಿನ 'ಗಡಿಯಾರ ಚೌಕ'ಕ್ಕೆ ಹೋಗುತ್ತಿದ್ದ ನರಸಿಂಹಸ್ವಾಮಿಯವರಿಗೆ ಅಲ್ಲಿಯೇ ಹೂವಿನ ವ್ಯಾಪಾರ ಮಾಡುತ್ತಿದ್ದ ಮುಸ್ಲಿಂ ವ್ಯಾಪಾರಿಯೊಬ್ಬನ ಪರಿಚಯವಾಗಿತ್ತು. ಪುಸ್ತಕವನ್ನು ಮುದ್ರಣಕ್ಕೆಂದು ಕೊಡುತ್ತಿದ್ದ ನರಸಿಂಹಸ್ವಾಮಿಯವರು, ಆ ವಿಷಯವನ್ನು ಅವನಿಗೆ ಹೇಳುತ್ತ, ಪುಸ್ತಕಕ್ಕೊಂದು ಹೆಸರು ಹುಡುಕುತ್ತಿರುವುದಾಗಿ ತಿಳಿಸಿದರು. ಆಗ ಆ ಮನುಷ್ಯ, ತಾನು ಮಾರುತ್ತಿದ್ದ ಮಲ್ಲಿಗೆಯತ್ತ ಕೈಮಾಡಿ ತೋರಿದ. ಥಟ್ಟನೆ ಪುಸ್ತಕದ ಹೆಸರು ಹೊಳೆದಿತ್ತು, ನರಸಿಂಹಸ್ವಾಮಿಯವರಿಗೆ. 'ಮೈಸೂರು ಮಲ್ಲಿಗೆ' 50 ವರ್ಷಗಳ ನಂತರವೂ ಮಧುರ ಕಂಪನ್ನು ಬೀರುತ್ತಿದೆ!

● ಟಿ.ಎಸ್. ಲಲಿತ

ಕೆಟ್ಟ ಯೋಚನೆಗೆ ಕೊಟ್ಟ ಬೆಲೆ!

ರಾಜನೊಬ್ಬ ತನ್ನ ಮಂತ್ರಿಯನ್ನು ಕರೆದು ಅವನಿಗೆ ಸಾಕಷ್ಟು ಹಣವನ್ನು ಕೊಟ್ಟು, ''ನಾನು ಬೇರೆ ದೇಶಕ್ಕೆ ಹೋಗಿ ಬರುತ್ತೇನೆ. ನಾನು ತಿರುಗಿ ಬರುವಷ್ಟರಲ್ಲಿ ನನಗೊಂದು ಸುಂದರವಾದ, ಉತ್ತಮವಾದ ಮನೆಯನ್ನು ಕಟ್ಟಿಸಿ ಇಡಬೇಕು'' ಎಂದು ಆಜ್ಞಾಪಿಸಿ ಹೊರಟು ಹೋದನು.

ಇತ್ತ ಮಂತ್ರಿ ರಾಜನ ಅಪ್ಪಣೆಯಂತೆ ಮನೆ ಕಟ್ಟಿಸಲು ಪ್ರಾರಂಭಿಸಿದನು. ರಾಜನು ತಿರುಗಿ ಬರಲು ಇನ್ನೂ ಅನೇಕ ದಿನಗಳಿದ್ದವು. ರಾಜನು ಸಾಕಷ್ಟು ಹಣವನ್ನು ನೀಡಿದ್ದರಿಂದ ಮಂತ್ರಿಯ ಮನಸ್ಸಿನಲ್ಲಿ ಒಂದು ಕೆಟ್ಟ ವಿಚಾರ ಹೊಳೆಯಿತು. ರಾಜನು ಕೊಟ್ಟು ಹೋದ ಹಣದಲ್ಲಿ ಸ್ವಲ್ಪ ಭಾಗವನ್ನು ತಾನು ತೆಗೆದಿಟ್ಟುಕೊಂಡು, ಉಳಿದ ಹಣದಿಂದ ಕಡಿಮೆ ಗುಣಮಟ್ಟದ ವಸ್ತುಗಳನ್ನು ಉಪಯೋಗಿಸಿ ಒಂದು ದೊಡ್ಡ ಮನೆ ಕಟ್ಟಿದನು. ಅಲ್ಲದೆ ಅದಕ್ಕೆ ಹೊರಗಿನಿಂದ ಬಗೆ ಬಗೆಯ ಬಣ್ಣಗಳನ್ನು ಹಚ್ಚಿಸಿ ಸುಂದರವಾಗಿ ಕಾಣುವ ಹಾಗೆ ಮಾಡಿದನು. ಆದರೆ ಮನೆ ಮಾತ್ರ ಗಟ್ಟಿ ಇರಲಿಲ್ಲ.

ಕೆಲವು ದಿನಗಳ ಬಳಿಕ ರಾಜನು ತಿರುಗಿ ಬಂದ. ಆಗ ಮಂತ್ರಿ ರಾಜನನ್ನು ಎದುರುಗೊಂಡು ನಮಸ್ಕರಿಸಿ, ''ರಾಜರೇ ನೀವು ಹೇಳಿಹೋದಂತೆ ನಿಮಗಾಗಿ ಒಂದು ಸುಂದರವಾದ ಮನೆಯನ್ನು ಕಟ್ಟಿದ್ದೇನೆ, ತೋರಿಸುವೆ ಬನ್ನಿ'' ಎಂದು ಕರೆದುಕೊಂಡು ಹೋದ. ಆತನು ಕಟ್ಟಿದ ಸುಂದರವಾದ ದೊಡ್ಡ ಮನೆಯನ್ನು ತೋರಿಸಿ, ಆ ಮನೆಯ ಬೀಗದ ಕೈಯನ್ನು ರಾಜನಿಗೆ ನೀಡಿದನು. ರಾಜನು ಅದನ್ನು ತೆಗೆದುಕೊಂಡು, ಮನೆಯ ಬಾಗಿಲವರೆಗೆ ಹೋಗಿ, ಹಿಂತಿರುಗಿ ನೋಡಿ, ಮಂತ್ರಿಯನ್ನು ಕರೆದು ಅವನಿಗೆ, ''ನಿನ್ನ ಕಾರ್ಯವನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ. ಆದ್ದರಿಂದ ಈ ಸುಂದರವಾದ ಮನೆಯನ್ನು ನಿನಗೇ ಕೊಡುತ್ತೇನೆ'' ಎಂದು ಅದರ ಬೀಗದ ಕೈಯನ್ನು ಆತನಿಗೆ ನೀಡಿದನು.

ಈ ಮಾತನ್ನು ಕೇಳಿ ಮಂತ್ರಿಗೆ ಆಶ್ಚರ್ಯ ಮತ್ತು ಪಶ್ಚಾತ್ತಾಪ ಎರಡೂ ಒಟ್ಟಿಗೆ ಆದವು. ಅವನು ತಾನು ಮಾಡಿದ ಕಾರ್ಯಕ್ಕಾಗಿ ಮರುಗಿದ. ಈ ಮನೆ ನನಗೆ ಸಿಗುವದಾಗಿದ್ದರೆ, ಎಲ್ಲ ಹಣವನ್ನು ಖರ್ಚು ಮಾಡಿ ಗಟ್ಟಿ ಮುಟ್ಟಾಗಿ ಕಟ್ಟುತ್ತಿದ್ದೆನಲ್ಲಾ ಎಂದು ಚಿಂತಿಸಿದ. ಆದರೆ ಕಾಲ ಮಿಂಚಿ ಹೋಗಿತ್ತು.

ಸಂಗ್ರಹ: ಜೆ. ಪ್ರೇಮಾನಂದ

“ನಾನು ದೇವರನ್ನು ಕಂಡಿದ್ದೇನೆ”

'ನಾನು ದೇವರನ್ನು ಕಂಡಿದ್ದೇನೆ' ಎಂದು ಖಂಡಿತವಾಗಿ ನುಡಿಯುತ್ತಾರೆ ಪಿ.ಸಿ. ಸರ್ಕಾರ್! ಜಗತ್ಪ್ರಸಿದ್ಧ ಐಂದ್ರಜಾಲಿಕರಾದ ಪಿ.ಸಿ.ಸರ್ಕಾರ್ ಕಂಡ ದೇವರು ಯಾರು? ಎಂಥವನು? ಇತರರಿಗೂ ನೋಡಲು ಸಿಕ್ಕಾನೆಯೆ? ಈ ಪ್ರಶ್ನೆಗಳಿಗೆ ಉತ್ತರ ದೊರಕಿಸಿಕೊಳ್ಳಲು ಈ ಜಾದೂಗಾರರನ್ನು ಸಂದರ್ಶಿಸಿದ್ದಾರೆ ● ಶಿವಾನಂದ ಕಣವಿ

ನನಗೆ ದೇವರಲ್ಲಿ ನಂಬಿಕೆಯಿದೆ. ಹಿಂದೂ ಧರ್ಮದ ವೇದಗಳು ಮಹಾಭಾರತ, ರಾಮಾಯಣ, ದಶಮಹಾವಿದ್ಯೆಗಳಲ್ಲಿ ಕಾಲಕಾಲಕ್ಕೆ ದೇವರನ್ನು ವರ್ಣಿಸಲಾಗಿದೆ; ಇದರಲ್ಲಿ ಧರ್ಮಕ್ಕಿಂತ ರಾಜಕೀಯವೇ ಹೆಚ್ಚು. ದೇವರ ಪರಿಕಲ್ಪನೆಯಿಂದಲೇ ಇಡೀ ರಾಷ್ಟ್ರವನ್ನು ಏಕತ್ರಗೊಳಿಸಲು ಯತ್ನಿಸುವ ಸಮಾಜಶಾಸ್ತ್ರವನ್ನು ನಾನು ತುಂಬಾ ಮೆಚ್ಚಿಕೊಳ್ಳುತ್ತೇನೆ. ದೇವರು ನಿರಾಕಾರ ಸ್ವರೂಪಿ. ಕಾಳಿಯಾಗಲಿ, ಶಿವನಾಗಲಿ, ಸೂಫಿ ಸಂತರು ಮುಂತಾದವರಾಗಲಿ ದೇವರಲ್ಲ; ಅವರೆಲ್ಲ ಅಸಾಮಾನ್ಯ ಬೋಧಕರು.

ನನ್ನ ಪ್ರಕಾರ ದೇವರೆಂದರೆ ಹಿಂದೂವಾದದಲ್ಲಿ ಹೇಳುವಂತೆ 'ಸೋಹಂ'. ನಾನೇ ದೇವರು. ನೀವು ಪ್ರತಿಯೊಂದನ್ನೂ ಗೌರವಿಸಬೇಕು.

ಬ್ರಹ್ಮನೇ ಸತ್ಯ, ಜಗತ್ತು ಮಿಥ್ಯ ಎಂಬುದನ್ನು ಸಹ ಬಹುವಾಗಿ ಮೆಚ್ಚುತ್ತೇವೆ. ಇದು ಕಾವ್ಯಾತ್ಮಕವೂ, ಕಲಾತ್ಮಕವೂ ಮಾತ್ರವಾಗಿರದೆ ವೈಜ್ಞಾನಿಕವೂ ಆಗಿದೆ. ಜ್ಞಾನೇಂದ್ರಿಯಗಳ ಮೂಲಕ ನಾವು ನೋಡುತ್ತೇವೆ, ಅನುಭವಿಸುತ್ತೇವೆ, ಗ್ರಹಿಸುತ್ತೇವೆ. ಆದರೆ ಇದೊಂದು ಪುಟ್ಟ ಕಿಟಕಿ. ಇದರ ಮೂಲಕ ಪೂರ್ಣ ವೃತ್ತ ದಕ್ಕೀತೆ! ತನ್ನ ಸಾವಿರಾರು ಕಣ್ಣುಗಳ ಮೂಲಕ ಪ್ರಾನ್ (ಸೀಗಡಿ ಜಾತಿಯ ಮೀನು) ವೀಕ್ಷಿಸಿದ್ದನ್ನು ನನಗೆ ನೋಡಲಾಗದು. ಹುಡುಗಿಯೊಬ್ಬಳಿಗೆ ನೀವು ಸುಂದರಾಂಗರಾಗಿ ಕಾಣಬಹುದು. ನಿಮ್ಮ ತಾಯಿಗೆ ನೀವು ಜಗತ್ತಿನಲ್ಲೇ ಅತ್ಯಂತ ಚೋಟಿ ಕಂದನಾಗಿ ತೋರಬಹುದು. ಹಲವಾರು ದೃಷ್ಟಿಕೋನಗಳಲ್ಲಿ ಯಾವುದು ಸರಿ? ಯಾರು ಸರಿ?


ಮಾನವ ಜೀವಿಗಳು ರಾಸಾಯನಿಕ ಕ್ರಿಯೆಯ ಪ್ರತಿಫಲ. ಆದರೆ ರಾಸಾಯನಿಕ ಕ್ರಿಯೆಯೇಕೆ ಘಟಿಸುತ್ತಿದೆ? ನಮಗೆ ತಿಳಿಯದು. ಬಹುಶಃ ಇದು ನಮಗೆಂದೂ ತಿಳಿಯಲಾರದು. ಏಕೆಂದರೆ ಮಾನವನ ಮಿದುಳು ಸಹ ಅದರದೇ ಆದ ಮಿತಿಗಳಿಗೊಳಪಟ್ಟಿದೆ. ನಾವು ಅಂಕಿಗಳನ್ನು ಎಣಿಸುತ್ತಾ ಸಾಗಬಹುದು. ಆದರೆ ಅನಂತವನ್ನು [Infinity] ತಲುಪಲಾರೆವು. ಸೃಷ್ಟಿಕರ್ತ ಇರಲಿ ಅಥವಾ ಇಲ್ಲದಿರಲಿ ಅವನನ್ನು ಆತ್ಯಂತಿಕ ಸತ್ಯ ಅಥವಾ ಆತ್ಯಂತಿಕ ವಿಜ್ಞಾನವೆಂದು ಕರೆಯೋಣ. ಕೋತಿಯೊಂದಕ್ಕೆ - ಅದು ಎಂತಹುದೇ ಜಾತಿಯ ಕೋತಿಯಾಗಿರಲಿ - ಗಣಿತವನ್ನು ಬೋಧಿಸಲು ಹೋದರೆ ಅದು ಅರ್ಥಮಾಡಿಕೊಳ್ಳಲಾರದು. ಈ ವಿಷಯದಲ್ಲಿ ನಾವೂ ಸಹ ಈ ಕೋತಿಗಳಂತೆಯೇ. ನಾವು ನಿಸರ್ಗವನ್ನು ಹೆಚ್ಚು ಹೆಚ್ಚು ಅರ್ಥಮಾಡಿಕೊಳ್ಳಲು ಯತ್ನಿಸಿದಂತೆಲ್ಲಾ ದೇವರ ಕುರಿತು ಹೆಚ್ಚು ತಿಳಿದುಬಂದೀತು.

ನನಗಂತೂ ದೇವರೆಂದರೆ ವಿಜ್ಞಾನ. ವಿಜ್ಞಾನವನ್ನು ಅರ್ಥಮಾಡಿಕೊಳ್ಳಲು ನಮಗೆ ಕಲ್ಪನೆ, ಕೆಣ್ಣು ಮತ್ತು ಅಂತಃಶಕ್ತಿ ಅಗತ್ಯ. ಆದರೆ

(ದಿ ವೀಕೆಂಡ್ ಅಬ್ಸರ್ವರ್‌ನಿಂದ ಸಾಭಾರ)

ಕೊನೆಗೂ ನಾವು ಬಯಸುವುದು ಸಂತಸಮಯ ಬದುಕನ್ನು. ಇದರೊಂದಿಗೆ ನಮಗೆ ಸೌಂದರ್ಯವೂ ಬೇಕಾಗುತ್ತದೆ. ಬಟ್ಟೆಗಳನ್ನು ಖರೀದಿಸಲು ಹೋದಾಗ ನಮಗೆ ದೇಹ ರಕ್ಷಣೆಯಷ್ಟೇ ಮುಖ್ಯವಾಗುವುದಿಲ್ಲ; ಬಣ್ಣ, ಚಿತ್ತಾರ, ವಿನ್ಯಾಸ ಇತ್ಯಾದಿಗಳೂ ಮುಖ್ಯವೆನ್ನಿಸುತ್ತವೆ. ಆದುದರಿಂದ ಸೌಂದರ್ಯ ಪ್ರಮುಖವಾದುದು; ಆತ್ಯಂತಿಕವಾದುದು ಸುಂದರವಾಗಿಯೇ ಇರುತ್ತದೆ.

ಗಿದ್ದ ಬುದ್ಧನನ್ನು ಸಹ ಆಧುನಿಕ ಹಿಂದೂವಾದ ದೇವರೆಂದು ಪರಿಗಣಿಸುತ್ತಿದೆ. ಬಹುಶಃ ಕೆಲ ವರ್ಷಗಳ ತರುವಾಯ ಮಹಾತ್ಮಾ ಗಾಂಧೀಜಿಯಂತಹ ರಾಷ್ಟ್ರನಾಯಕರೆಲ್ಲ ದೇವರಾಗುತ್ತಾರೇನೋ! ಬಂಗಾಳದಲ್ಲಿ ರವೀಂದ್ರನಾಥ ಟಾಗೋರ್, ಸುಭಾಸ್‌ಚಂದ್ರ ಬೋಸರು ಈಗಾಗಲೇ ದೇವರಂತೆ ಪೂಜಿಸಲ್ಪಡುತ್ತಿದ್ದಾರೆ. ಪ್ರಾಯಶಃ ಹಿಂದೆ ಶ್ರೀಕೃಷ್ಣ ಕೂಡ ಇವರಂತೆಯೇ ರಾಷ್ಟ್ರ ನಾಯಕನಾಗಿರಬೇಕು.



ದೇವರು ಅಸ್ತಿತ್ವದಲ್ಲಿ ಇರಬೇಕು. ಅವನಿದ್ದಾನೋ ಇಲ್ಲವೋ, ಆದರೆ ಅವನಿಂದ ಸಹಾಯವಾಗುತ್ತಿರುವವರೆಗೆ ನಾವು ಮಾತ್ರ ದೇವರಿದ್ದಾನೆಂದೇ ಊಹಿಸೋಣ. ಯಾವ ಕ್ಷಣದಲ್ಲಿ ಆತನ ಸಹಾಯ ನಿಲ್ಲುವುದೋ ಆಗಿನಿಂದ ನಾನು ಅವನನ್ನು ದೈತ್ಯನೆಂದು ಕರೆಯುವೆ. ದೇವರೇ ಮನುಷ್ಯನನ್ನು ಸೃಷ್ಟಿಸಿರಲಿ ಅಥವಾ ಮನುಷ್ಯನೇ ದೇವರನ್ನು ಸೃಷ್ಟಿಸಿರಲಿ, ನಾವು ವಿವಾದ ಬೆಳೆಸುವುದು ಬೇಡ. ದೇವರು ಇದ್ದಾನೆ ಹಾಗೂ ಇಲ್ಲ. ಆತ ನಮ್ಮ ಕಲ್ಪನೆ ಮತ್ತು ಒಳ್ಳೇತನಗಳಲ್ಲಿ ಅಸ್ತಿತ್ವದಲ್ಲಿದ್ದಾನೆ. ಉತ್ತಮ ನಾಳೆಗಾಗಿ ನಾವು ನಮ್ಮ ಒಳ್ಳೆಯತನದಿಂದ ದೇವರ ಸೌಂದರ್ಯವನ್ನು ಹೆಚ್ಚಿಸೋಣ.

ಭಾರತ ಹಲವಾರು ಭಿನ್ನ ದೇವರುಗಳನ್ನು ಹೊಂದಿದಾಗ್ಯೂ ಆದಿಶಂಕರಾಚಾರ್ಯ ಮತ್ತು ಅದ್ವೈತ ಸಿದ್ಧಾಂತದಿಂದ ರಾಷ್ಟ್ರ ಒಂದುಗೂಡಿತ್ತು. ದಶಮಹಾವಿದ್ಯೆಯ ಪರಿಕಲ್ಪನೆ ಭಾರತ ಏಕೀಕೃತವಾಗಿರಲು ಸಹಾಯಕವಾಗಿತ್ತು. ಕೆಲವು ಶತಮಾನಗಳ ಹಿಂದೆ ಹಿಂದೂವಾದದ ಶತ್ರುವಾ

ಅಡವಿಯೇನೋ ಚಂದವಿದೆ,
ನಿಬಿಡವೂ ಭಯಂಕರ,
ವಚನವನ್ನಿತ್ತಿರುವೆನು,
ನಾನು ಅದರ ಕಿಂಕರ,
ಮಲಗಬೇಕು, ಅದಕೂ ಮುಂಚೆ
ಸಾಗಬೇಕು ಬಹುದೂರ

● ರಾಬರ್ಟ್ ಫ್ರಾಸ್ಟ್

ನೀವೊಂದು ವೇಳೆ ನಾನು ದೇವರನ್ನು ನೋಡಿದ್ದೇನೆಯೇ ಎಂದು ಕೇಳಿದರೆ ಅದಕ್ಕುತ್ತರ - ಹೌದು! ನಾನು ದೇವರನ್ನು ಕಂಡಿದ್ದೇನೆ. ನಾನು ನೋಡಿರುವುದು ಇಬ್ಬರು ದೇವರನ್ನು. ಅವರು ನನಗೆ ಪ್ರತಿಯೊಂದನ್ನೂ ದಯಪಾಲಿಸಿದ್ದಾರೆ. ದುರ್ದೈವವಶಾತ್ ಒಬ್ಬ ದೇವರನ್ನು ನಾನು ಕಳೆದುಕೊಂಡಿದ್ದೇನೆ. ಆದರೆ ಇನ್ನೊಬ್ಬರು ಜೀವಂತವಾಗಿದ್ದಾರೆ. ಅವರು ಬೇರಾರೂ ಅಲ್ಲ, ನನ್ನ ತಂದೆ ಮತ್ತು ನನ್ನ ತಾಯಿ. ಅವರು ಪ್ರತಿಯೊಬ್ಬರನ್ನೂ ಪ್ರೀತಿಸಲು ಮತ್ತು ಕಠಿಣವಾಗಿ ದುಡಿಯಲು ಕಲಿಸಿದರು.

ಬಹುಪಾಲು ಧರ್ಮಗಳು ಇತರ ಧರ್ಮಗಳ ಜನಪ್ರಿಯತೆಯನ್ನು ಕುಗ್ಗಿಸಲು ಅಥವಾ ಅವುಗಳ ಪ್ರಾಮುಖ್ಯತೆಯನ್ನು ತಗ್ಗಿಸಲು ಯತ್ನಿಸುತ್ತವೆ. ಸತ್ಯದ ಮೇಲೆ ತಮ್ಮದೇ ಸರ್ವಾಧಿಕಾರವೆಂದೂ ಉಳಿದವು ಅಪೂರ್ಣವೆಂತಲೂ ಈ ಧರ್ಮಗಳು ಪ್ರತಿಪಾದಿಸುತ್ತವೆ. ಅದಕ್ಕೆಂತಲೇ ನಾನು ರಾಮಕೃಷ್ಣ ಪರಮಹಂಸರನ್ನು ಗೌರವಿಸುತ್ತೇನೆ. ಎಲ್ಲರ ದೃಷ್ಟಿಕೋನಗಳೂ ಸರಿ; ಅವರೆಲ್ಲ ಒಂದೇ ಸತ್ಯದೆಡೆ ಭಿನ್ನ ಮಾರ್ಗಗಳಲ್ಲಿ ಸಾಗುತ್ತಿದ್ದಾರೆ ಎನ್ನುತ್ತಾರೆ ಪರಮಹಂಸರು. ಜನತೆಯನ್ನು ಇಬ್ಭಾಗಿಸುವ ಯಾವುದೇ ಸಂಕುಚಿತ ಬುದ್ಧಿಯ ಧರ್ಮವನ್ನು ನಾನು ಸಂಘಟಿತ ಅಪರಾಧವೆಂದು ಪರಿಗಣಿಸುತ್ತೇನೆ.

ಭಾರತದಲ್ಲಿ ಜನರು ಧರ್ಮದ ಹೆಸರಿನಲ್ಲಿ ಹತ್ಯೆಗೊಳಗಾಗುತ್ತಿದ್ದಾರೆ. ಬ್ರಿಟಿಷರಿಗೆ ಮೊದಮೊದಲು ಇದು ಅರ್ಥವಾಗಲಿಲ್ಲ. ಆದರೆ ಗೋಮಾಂಸ ಹಾಗೂ ಹಂದಿಯ ಮಾಂಸದ ಕುರಿತಾಗಿ ವಿವಾದವೆದ್ದಾಗ ಬ್ರಿಟಿಷರಿಗೆ ಈ ರಹಸ್ಯದ ಅರಿವಾಯಿತು. ಆಗಿನಿಂದ ಭಾರತವನ್ನು ನಿಯಂತ್ರಿಸಲು ಧರ್ಮಗಳನ್ನು ವಿಭಜಿಸಬೇಕೆಂಬುದನ್ನು ಅವರು ಕಲಿತರು. ರಾಷ್ಟ್ರ ವಿಭಜನೆಯಾದದ್ದೂ ಹೀಗೆಯೇ. ನಾನಿದನ್ನು R - ಬಾಂಬು ಎಂದು ಕರೆಯುತ್ತೇನೆ. ನಮ್ಮ ರಾಷ್ಟ್ರವನ್ನು ಹಾಳುಗೆಡಹುತ್ತಿರುವುದೇ ಈ 'ಧರ್ಮಬಾಂಬು' [Religion Bomb].

ಧರ್ಮ ಹಾಗೂ ವಿಜ್ಞಾನಗಳೆರಡೂ ಇಂದ್ರಜಾಲ ಮೂಲದಿಂದಲೇ ಬಂದಿವೆ. ಆದರೆ ಇಂದ್ರಜಾಲಿಕರಾದ ನಾವಿಂದು ಇಂದ್ರಜಾಲವನ್ನು ಮನರಂಜನೆಯ ಹೊರತು ಬೇರಾವುದಕ್ಕೂ ಬಳಸುತ್ತಿಲ್ಲ. ಇದನ್ನು ಯಾರಾದರೂ ವಿಭೂತಿ, ಶಿವಲಿಂಗಗಳನ್ನು ಸೃಷ್ಟಿಸಿ ಜನರನ್ನು ಮರಳುಮಾಡುವುದಕ್ಕೆ ಬಳಸಿದರೆ ಅದು ತಪ್ಪಾಗುತ್ತದೆ. ಈ ತಂತ್ರವನ್ನು ನಾವು ಮಾಡಬಲ್ಲೆವು. ನಾನೊಂದೇ ಏಕೆ, ನಾನು ಅಧ್ಯಕ್ಷನಾಗಿರುವ 'ಭಾರತೀಯ ಇಂದ್ರಜಾಲಿಕರ ಸಂಘ' [Indian Association of Magicians]ದ ಹತ್ತು ಸಾವಿರ ಸದಸ್ಯರೂ ಇದನ್ನು ಮಾಡಬಲ್ಲರು. ಲವಣ ತಂತ್ರವೆಂದು ಕರೆಯಲಾಗುವ ಇದು ಬಹಳ ಹಳೆಯ ಚಮತ್ಕಾರ. ಶಿವಲಿಂಗವನ್ನು ಸೃಷ್ಟಿಸುವ ತಂತ್ರ ಮಾತ್ರ ಇದಕ್ಕಿಂತ ತುಸು ಭಿನ್ನವಾದದು; ಕೊನೆಯಿಲ್ಲದಂತೆ ಕಲ್ಲಿನ ಗೋಲಿಗಳನ್ನು ಬಾಯಿಯಿಂದ ಹೊರತೆಗೆಯಬಹುದು. ಇಂಥ ಜನ ತಮ್ಮ ವಿದ್ಯಾವಂತ ಶಿಷ್ಯಗಣವನ್ನು ತೋರಿಸಿ 'ನೋಡಿ, ಆ ವಿಜ್ಞಾನಿ, ಈ ಸಾಹಿತಿ, ವಕೀಲರೆಲ್ಲ ನನ್ನನ್ನು ನಂಬುತ್ತಾರೆ' ಎಂದು ಪ್ರಚುರ ಪಡಿಸುತ್ತಾರೆ.

ನಾನು ಬಾಕ್ಸಿಂಗ್‌ನಲ್ಲಿ ಐನ್‌ಸ್ಟೈನ್‌ಗೆ ಸವಾಲು ಹಾಕಬಲ್ಲೆ. ಆತನೊಬ್ಬ ಮಹಾನ್ ವಿಜ್ಞಾನಿಯಾದ ಮಾತ್ರಕ್ಕೆ ಬಾಕ್ಸಿಂಗ್‌ನ್ನೂ ಕಲಿತಿರಬೇಕೆಂದಿಲ್ಲ. ಇವರು ತೋರಿಸುವ 'ದೊಡ್ಡ ಮನುಷ್ಯ' ನಿಜವಾಗಿಯೂ ಇವರ ಶಿಷ್ಯನಾಗಿರುವುದಿಲ್ಲ. ಇಂಥ ದೊಡ್ಡ ವ್ಯಕ್ತಿಯ ಮೂರ್ಖತನ ಮಾತ್ರ ಇವರ ಶಿಷ್ಯನೆನಿಸಿರುತ್ತದೆ. ●

ನನ್ನ ಗ್ರಂಥ ಸಂಪಾದನೆ

● *ನೀರಗುಂದ ಕೇಶವಮೂರ್ತಿರಾವ್*



ಗ್ರಂಥ ಸಂಪಾದನೆಯೆಂಬ ಶೀರ್ಷಿಕೆಯನ್ನು ಓದಿದ ಕೂಡಲೇ ಯಾವುದೋ ಮಾಂಧಾತ ರಾಯನ ಕಾಲದ ಗ್ರಂಥದ ಸಂಶೋಧನೆಯ ಕುರಿತು ಕೊರೆಯುತ್ತಿದ್ದಾನೆಂದು ತಿಳಿಯಬೇಡಿ. ನಾನು ಆ ಗ್ರಂಥಗಳ ಸಂಪಾದನೆ ಮಾಡ ಹೊರಟಿಲ್ಲ. ನನ್ನ ಸಂಗ್ರಹದಲ್ಲಿರುವ ಗ್ರಂಥಗಳ ಸಂಪಾದನೆ ಕುರಿತು ಹೇಳುತ್ತಿದ್ದೇನೆ.

ಒಂದು ಕಾಲದಲ್ಲಿ ಪುಸ್ತಕವೆಂದರೆ ಮಸ್ತಕ ತಿರುಗಿಸುತ್ತಿದ್ದ ನನಗೆ ಓದುವ ಹವ್ಯಾಸ ಪ್ರಾರಂಭವಾಯ್ತು. ಎಂ.ಎಸ್.ಪುಟ್ಟಣ್ಣನವರ ಮೊದಲ ಕಾದಂಬರಿ 'ಮಾಡಿದ್ದುಣ್ಣೋ ಮಹಾರಾಯ'ದಿಂದ ಹಿಡಿದು ಇತ್ತೀಚೆಗೆ ಬರುತ್ತಿರುವ 'ಬರೆದದ್ದೋ ಭೀಮರಾಯ'ರ ವರೆಗಿನ ಪುಸ್ತಕಗಳನ್ನೆಲ್ಲಾ ಓದಿದ್ದಾಯ್ತು. ಈಗಿನಂತೆ ಆಗ ಬಡಾವಣೆಗಳಲ್ಲೆಲ್ಲಾ ಪುಸ್ತಕಾಲಯಗಳು ಇರಲಿಲ್ಲ. ಇದ್ದ ಕೆಲವು ಶಾಲಾಕಾಲೇಜು ಪುಸ್ತಕಭಂಡಾರಗಳಲ್ಲಿಯ ಗಳಗನಾಥರ, ಶರಚ್ಚಂದ್ರರ ಅನುವಾದಿತ (ಹಿಂದುಮುಂದು ಹರಿದ) ಸಾಮಾಜಿಕ ಕಾದಂಬರಿಗಳ ಪರಿಚಯವೂ ನನಗಾಯ್ತು. ಕ್ರಮೇಣ ನನಗೆ ಆಗಾಗ ಪುಸ್ತಕಗಳನ್ನು ಕೊಳ್ಳುವ ಪ್ರವೃತ್ತಿಯೂ ಬೆಳೆಯಿತು. ಎರಡೂವರೆ ದಶಕಗಳ ಹಿಂದಿನ ಸಂಗತಿಗಳು ಇವು. ಈಗಿನಂತೆ ಪುಸ್ತಕಗಳ ಬೆಲೆ ಗಗನಕ್ಕೇರಿರಲಿಲ್ಲ. ಆದಾಗ್ಯೂ ನಾನು ಅಂದು ಹೊಸಪುಸ್ತಕಗಳನ್ನು ಕೊಳ್ಳಲು ಹೋಗದೆ ಸೆಕೆಂಡ್‌ಹ್ಯಾಂಡ್ ಪುಸ್ತಕಗಳನ್ನೇ ಖರೀದಿಸುತ್ತಿದ್ದೆ.

ಪ್ರತಿ ಭಾನುವಾರ ಬೆಳಿಗ್ಗೆ ಬಳೇಪೇಟೆ ಚಿಕ್ಕಪೇಟೆಯ ಹಳೇ ಪುಸ್ತಕದ ಅಂಗಡಿಗಳಿಗೆ ತಪ್ಪದೇ ಭೇಟಿಕೊಡುತ್ತಿದ್ದ ಕಾಲವೊಂದಿತ್ತು. ಆ ಸಂದರ್ಭದಲ್ಲಿ ದೊರೆತ ಅಪೂರ್ವ ಪುಸ್ತಕಗಳ ಸಂಗ್ರಹ ನನ್ನಲ್ಲಿದೆ. ಒಮ್ಮೊಮ್ಮೆ ಅಪರೂಪದ ಪುಸ್ತಕಗಳು ದೊರೆತಾಗ ನಿಧಿ ದೊರೆತಷ್ಟು ಸಂತಸ. ಆದರೂ ಅದನ್ನು ತೋರಗೊಡದೆ ಆಲಸ್ಯದಿಂದಲೇ ಪುಸ್ತಕದ ಬೆಲೆಯನ್ನು ವಿಚಾರಿದಾಗ ಆ ಪುಸ್ತಕದ ಮಾಲೀಕ ನನ್ನನ್ನೂ ಪುಸ್ತಕವನ್ನೂ ಆಪಾದಮಸ್ತಕ ನೋಡಿ ಅದರ ಬೆಲೆ ಹೇಳುತ್ತಿದ್ದ. ಹಾಗೂ ಹೀಗೂ ಚೌಕಾಸಿ ಮಾಡಿ ಗ್ರಂಥವನ್ನು 'ಸಂಪಾದಿಸುತ್ತಿದ್ದೆ'.

ಇಂದಿನ ದಿವಸಗಳಲ್ಲಿ ಹೊಸ ಪುಸ್ತಕಗಳನ್ನು ಕೊಂಡು ಓದುವುದೆಂದರೆ ಸಾಹಸದ ಕೆಲಸವೇ ಸರಿ! 'ಪುಸ್ತಕಗಳನ್ನು ಕೊಂಡು ಓದಿ,' 'ಪುಸ್ತಕಗಳನ್ನು (ಕನ್ನಡ) ಉಡುಗೊರೆಯಾಗಿ ನೀಡಿ' - ಇತ್ಯಾದಿ ಘೋಷಣೆಗಳು ಕೇಳಬರುತ್ತಿವೆಯಾದರೂ ಕೊಂಡು ಓದುವ ಕನ್ನಡ ಜನತೆ ಕಡಿಮೆ. ಹೆಚ್ಚು ಬೆಲೆಯ ಪುಸ್ತಕಗಳನ್ನು ಸಾರ್ವಜನಿಕ ಗ್ರಂಥಾಲಯದಿಂದ ಎರವಲು ತಂದು ಓದುವ ಚಪಲ ತೀರಿಸಿಕೊಳ್ಳಬೇಕು. ಆದಾಗ್ಯೂ ಅಪರೂಪಕ್ಕೆ ಪುಸ್ತಕಗಳನ್ನು ಕೊಳ್ಳುತ್ತೇನೆ.

ಆ ಕಾಲದಲ್ಲಿ ನಾನು ಸಂಪಾದಿಸಿದ ಗ್ರಂಥಗಳ ಸಿಂಹಾವಲೋಕನ ಮಾಡಿದಾಗ ಇಂದಿಗೂ ನನಗೆ ಅತ್ಯಾಶ್ಚರ್ಯವೆನಿಸುತ್ತದೆ.

ಪ್ರತಿ ಭಾನುವಾರ ಬೆಳಗ್ಗೆ ಬಗಲಿಗೆ ಚೀಲ ಏರಿಸಿ ಪೇಟೆ ಕಡೆ ಹೊರಟೆನೆಂದರೆ ಸಂಜೆಯ ವೇಳೆಗೆ ಯಾವುದಾದರೂ ಗ್ರಂಥ ಸಂಪಾದನೆ



ಯಾಗಲೇಬೇಕು. ಹಳೆಯ ಗ್ರಂಥ ರಾಶಿಯಲ್ಲಿ 'ಕಿಟ್ಟೆಲ್ ಕೋಶ'ವೋ 'ಕಾಮಶಾಸ್ತ್ರ'ದ ಗ್ರಂಥವೋ ದೊರೆತರೆ ಆಶ್ಚರ್ಯವಿಲ್ಲ.

ಅಂದಿನ ಪೇಟೆಯಲ್ಲಿಯ ಅರಳಿಮರದ ಕೆಳಗಿನ ಪುಸ್ತಕದ ಅಂಗಡಿಗಳೆಂದರೆ ನನ್ನ ಪಾಲಿನ ಬೋಧಿವೃಕ್ಷದಂತೆ. ಇವತ್ತಿಗೂ ನನ್ನ ಗ್ರಂಥ ರಾಶಿಯಲ್ಲಿ ಹೊಸದಾಗಿ ಕೊಂಡ ಪುಸ್ತಕಗಳೊಂದಿಗೆ ಹೋಲಿಸಿದಾಗ ಹಳೆಯ ಪುಸ್ತಕದ ಅಂಗಡಿಗಳಲ್ಲಿ ದೊರೆತ ಪುಸ್ತಕಗಳೇ ಅಮೂಲ್ಯವೆನ್ನಬಹುದು.

ನನ್ನಲ್ಲಿಯ ಕೆಲವು ಪುಸ್ತಕಗಳಲ್ಲಿ ಹೆಸರಾಂತ ವ್ಯಕ್ತಿಗಳ ಸಹಿಗಳಲ್ಲದೇ 'ವಿನಯಪೂರ್ವಕ', 'ಪ್ರಶ್ವಾಸಪೂರ್ವಕ' ಎಂಬ ಒಕ್ಕಣೆ ಇರುವ ಪುಸ್ತಕಗಳೂ ಉಂಟು. ಕೆಲವು ಪುಸ್ತಕಗಳಲ್ಲಿ ಓದುಗರ ಟೀಕೆ, ಟಿಪ್ಪಣಿ, ಅಡಿಗೆರೆ, ಪ್ರಶ್ನಾರ್ಥ, ಆಶ್ಚರ್ಯಕರ ಚಿಹ್ನೆಗಳಲ್ಲದೇ ''33ನೇ ಪುಟ ನೋಡಿ'', ''66ನೇ ಪುಟ ನೋಡಿ'' ಎಂದು ಓದುಗರನ್ನು ಸಸ್ಪೆನ್ಸ್‌ನಲ್ಲಿಟ್ಟು ಕೊನೆಯ ಪುಟದವರೆಗೂ ಕೊಂಡೊಯ್ದು ''ಅಯ್ಯೋ ಗುಗ್ಗು'' ಎಂದು ಮೂರ್ಖರನ್ನಾಗಿಸುವ ಪುಸ್ತಕಗಳೂ ಉಂಟು.

ಹಳೇ ಪುಸ್ತಕದಲ್ಲಿ ದೊರೆತ ಅ.ನ.ಕೃ.ರವರ 'ಕರ್ನಾಟಕದ ಕಲಾವಿದರು' ಭಾಗ-2 (1952ರ ಮುದ್ರಣ) ಬೆಲೆ ನಾಲ್ಕು ರೂಪಾಯಿ ಹದಿನೈದಾಣೆ. ನನಗೆ ದೊರೆತದ್ದು ಒಂದೂವರೆ ರೂಪಾಯಿಗೆ! ಈ ಪುಸ್ತಕ ಟೈಲರ್ ಒಬ್ಬನ ಬಳಿ ಇತ್ತೆಂದು ಕಾಣುತ್ತದೆ. ಕರ್ನಾಟಕದ ಅಪರೂಪದ 27 ಕಲಾವಿದರ 58 ವಿವಿಧ ಚಿತ್ರಗಳನ್ನೊಳಗೊಂಡ ಈ ಪುಸ್ತಕದಲ್ಲಿ ಆ ಟೈಲರ್ ಮಹಾಶಯ ಶರಟು ಪ್ಯಾಂಟುಗಳ ಉದ್ದಳತೆಯನ್ನು ಪೆನ್ಸಿಲ್ಲಿನಿಂದ ನಮೂದಿಸಿದ್ದಾನೆ! ಆದಾಗ್ಯೂ ಪುಸ್ತಕವನ್ನು ಓದಿ ಅಲ್ಲಲ್ಲಿ ರಾಯರ ಬರವಣಿಗೆಗೆ ಪೆನ್ಸಿಲ್ಲಿನಲ್ಲಿ ಅಡಿಗೀಟು ಹಾಕಿದ್ದಾನೆ.

ಕನ್ನಡದ ಗ್ರಂಥ ಪ್ರಕಾಶನದಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆಯ ಪ್ರಕಟಣೆಗಳು ಇಂದಿಗೂ ಪ್ರಬುದ್ಧ. ಆ ಗ್ರಂಥಮಾಲೆ

ಯಲ್ಲಿ ಪ್ರಕಟವಾದ ನಾ. ಕಸ್ತೂರಿಯವರ 'ಚಕ್ರದೃಷ್ಟಿ', ಅ.ನ.ಕೃ.ರವರ ಬೃಹತ್ ಕಾದಂಬರಿ 'ನಟಸಾರ್ವಭೌಮ'ದ 2-3ನೇ ಭಾಗಗಳು ಅಲ್ಲದೆ 'ನಾನಿಯ ಕಾದಂಬರಿ' ಮುಂತಾದ ಮೊದಲ ಮುದ್ರಣದ ಪುಸ್ತಕಗಳು ನನ್ನ ಸಂಗ್ರಹದಲ್ಲಿವೆ.

ನನ್ನಲ್ಲಿರುವ ಅಂದಿನ ಪುಸ್ತಕಗಳಲ್ಲಿ ಕೆಲವು ಇಂದು ಮರು ಮುದ್ರಣಗಳನ್ನು ಕಂಡಿವೆ. ಆದರೆ ಅಂದಿನ ಬೆಲೆಗೆ ಇಂದಿನ ಬೆಲೆಯನ್ನು ಹೋಲಿಸುವಂತಿಲ್ಲ. ಡಾ.ಶಿವರಾಮ ಕಾರಂತರ 'ಗ್ನಾನ' 1947ರಲ್ಲಿ ಮುದ್ರಣವಾದದ್ದು. ಮುಖಪುಟ ಹರಿದಿದೆ. ಕಾರಂತರ ಸಹಿ ಇದೆ. ಕೇವಲ 40 ಪೈಸೆಗೆ ಕೊಂಡಿದ್ದೆ. ಅವರ ಇನ್ನೊಂದು ಕಾದಂಬರಿ 'ಮುಗಿದ ಯುದ್ಧ' (1948ರಲ್ಲಿ ಎರಡನೇ ಮುದ್ರಣ, ಬೆಲೆ ನಾಲ್ಕು ರೂಪಾಯಿ) ಒಂದು ರೂಪಾಯಿಗೆ ಕೊಂಡಿದ್ದೇನೆ. ಆ ದಿವಸಗಳಲ್ಲಿ 'ಒಂದು ರೂಪಾಯಿ'ಗೆ ಎಂದರೆ ದುಬಾರಿ ಬೆಲೆಯಲ್ಲವೆ? ಆದಾಗ್ಯೂ ಅಷ್ಟು ಮೌಲಿಕ ಪುಸ್ತಕಕ್ಕೆ ಆ ಬೆಲೆಯೇನು ಹೆಚ್ಚಲ್ಲ.

ಮೈಸೂರು ಒಡೆಯರ ಇತಿಹಾಸದ ಮೇಲೆ ನಾಟಕಗಳನ್ನು ಬರೆದಿರುವ 'ಸಂಸರ' ನಾಟಕಗಳನ್ನು ಕೆಲವು ವರ್ಷಗಳ ಹಿಂದೆ ಕರ್ನಾಟಕ ನಾಟಕ ಅಕಾಡೆಮಿಯವರು ಒಂದೇ ಸಂಪುಟದಲ್ಲಿ ಸಂಪಾದಿಸಿದ್ದಾರೆ. ನನಗೆ ಸಂಸರ ಈ ನಾಟಕಗಳು ಬಿಡಿಬಿಡಿಯಾಗಿ (ವಿಜಯನಾರಸಿಂಹ, ವಿಗಡ ವಿಕ್ರಮರಾಯ, ಬೆಟ್ಟದ ಅರಸು) ಅತಿ ಕಡಿಮೆ ಬೆಲೆಯಲ್ಲಿ ಸಿಕ್ಕಿವೆ.

ನನ್ನ ಗ್ರಂಥ ಸಂಪಾದನ ಕಾರ್ಯದಲ್ಲಿ ಪುಸ್ತಕಗಳು ಹಳೆಯದಾದಷ್ಟು ಅವಕ್ಕೆ ಮಹತ್ವ ಹೆಚ್ಚು ಎನ್ನುವ ಹುಚ್ಚೂ ಅಂದು ನನ್ನಲ್ಲಿ ಹೇಗೋ ಬೇರೂರಿತ್ತು. ಅದರ ಫಲವಾಗಿ ಹರಿಶ್ಚಂದ್ರ ಕಾವ್ಯ, ಕಾದಂಬರೀ ಸಂಗ್ರಹ, ಅನುಭವಾಮೃತ, ಶಾಸನ ಪದ್ಯಮಂಜರಿ, ವಡ್ಡಾರಾಧನೆ ಹೀಗೆ ಇನ್ನೂ ಕೆಲವು ಗ್ರಂಥಗಳು ಸೇರಿವೆ.

ನಿರಂಜನರ 'ಐದು ನಿಮಿಷ', 'ಪುಷ್ಪಹಾರ', 'ಕಾಲಕ್ಷೇಪ' ರಾಜರತ್ನಂರವರ 'ಮಹಾಕಲಿ



''ಇದ್ದ ಒಂದು ಸೈಟನ್ನೂ ಮಾರಿಬಿಟ್ಟೆ...''
''ಯಾಕೆ?''
''ನನ್ನ ಮಗನನ್ನು ಎಲ್.ಕೆ.ಜಿ.ಗೆ ಸೇರಿಸಿದೆ ಕಣಯ್ಯಾ...!''

ಪುರುಷ ಸರಸ್ವತಿ', 'ಸಂಸಕವಿ', ಬೇಂದ್ರೆಯವರ 'ನಿರಾಭರಣ ಸುಂದರಿ', ದೇವುಡುರವರ 'ಮೀಮಾಂಸ ದರ್ಪಣ' ಗ್ರಂಥಗಳೆಲ್ಲ ಆ ಹಳೆಯ ಪುಸ್ತಕಗಳ ರಾಶಿಯಿಂದಲೆ ನಾನು ಹೆಕ್ಕಿ ತೆಗೆದಂಥವು.

ಇಂದಿಗೂ ನಿತ್ಯನೂತನವಾಗಿರುವ ಡಿ.ವಿ.ಜಿ.ಯವರ 'ಅನ್ತಃಪುರ ಗೀತೆ' (ಮೊದಲ ಮುದ್ರಣ 1950), 'ಶ್ರೀರಾಮ ಪರೀಕ್ಷಣಂ' 'ನಿವೇದನೆ' ಸಹ ಗ್ರಂಥ ಸಂಪಾದನೆಯ ಫಲವೆ!

ಅಂದಿನಿಂದ ಇಂದಿನವರೆಗೂ ನನ್ನ ಗ್ರಂಥ ಸಂಪಾದನೆಯ ಕಾರ್ಯ ಅವ್ಯಾಹತವಾಗಿ ನಡೆಯುತ್ತಲೆ ಇದೆ. ಆದರೆ ಅತಿ ಹೆಚ್ಚು ಬೆಲೆ ಕೊಟ್ಟು ಕೊಂಡ ಹಳೆಯ ಪುಸ್ತಕವೆಂದರೆ ಅ.ನ.ಕೃ.ರವರ ''ಸಾಹಿತ್ಯ ಮತ್ತು ಕಾಮ ಪ್ರಚೋದನೆ.'' 1960ರಲ್ಲಿ ಎರಡನೆ ಮುದ್ರಣ ಕಂಡ ಈ ಪುಸ್ತಕದ ಮೂಲ ಬೆಲೆಯೇ ಎರಡೂವರೆ ರೂಪಾಯಿ. ಆ ಕಾಲಕ್ಕೆ ನಾನು ಆ ಪುಸ್ತಕವನ್ನು ಒಂದೂವರೆಯಷ್ಟು ಜಾಸ್ತಿ ಬೆಲೆ ಕೊಟ್ಟು ಕೊಂಡುಕೊಂಡೆ.

ಕನ್ನಡ ಭಾಷೆಯ ಪುಸ್ತಕಗಳಲ್ಲದೇ ಬೇರೆ (ಭಾರತೀಯ) ಅನುವಾದ ಗ್ರಂಥಗಳೂ, ಇಂಗ್ಲೀಷ್ ಭಾಷೆಯ ಕೆಲವು ಪುಸ್ತಕಗಳೂ ಈ ಪಟ್ಟಿಯಲ್ಲಿ ಸೇರಿವೆ. ಇದೆಲ್ಲ ನನ್ನ ಗ್ರಂಥ ಸಂಪಾದನೆಯ ತೃಪ್ತಿಕರ ಫಲಿತಾಂಶ ಅಲ್ಲವೆ? ಇದಕ್ಕಿಂತ ಇನ್ನೆಂಥ ಸಿರಿ ಬೇಕು? ●

● ಕೆ.ಎಚ್. ಸಾವಿತ್ರಿ

ಪ್ರತಿಭಾ ಕಿಣಿಯ ಅಪೂರ್ವ ನಿಶ್ಶಬ್ದ ಲೋಕ

ಹಕ್ಕಿಯ ಚಿಲಿಪಿಲಿ ಹಾಡು ಆಕೆಗೆ ಅಪರಿಚಿತ. ವಾಹನಗಳ ಕರ್ಕಶ ಸದ್ದು ಕೂಡ ಆಕೆಯಿಂದ ದೂರ. ಆಕೆ ನಿಶ್ಶಬ್ದ ಲೋಕದಲ್ಲಿ ಬದುಕುತ್ತಾಳೆ, ಆದರೂ ಆಕೆ ಏಕಾಂಗಿಯಲ್ಲ. ಆ ಲೋಕದಲ್ಲಿ ಸಂಗೀತವಿಲ್ಲ, ನೋವಿನ ಆಕ್ರಂದನವೂ ಇಲ್ಲ. ಗಾಳಿ ಪಿಸುಗುಡುವುದಿಲ್ಲ, ನೋವು ನರಳಿಕೆಗಳಿಲ್ಲ. ಆದರೆ ಇವೆಲ್ಲವನ್ನೂ ಮೀರಿದ ಬದುಕಿನ ಲಯವನ್ನು ಆಕೆ ಅರಿತಿದ್ದಾಳೆ. ಶಬ್ದಗಳಿಗೆ ಸ್ಪಂದಿಸುವ ಅಗತ್ಯವಿಲ್ಲದ ಆಕೆ ಭಾವನೆಗಳನ್ನು ಓದಬಲ್ಲಳು. ಶಬ್ದಕ್ಕಿಂತ ಅದು ಧ್ವನಿಸಬಲ್ಲ ಅರ್ಥವೇ ಆಕೆಯ ಬದುಕು.

ಸೃಷ್ಟಿಯೇ ಮುನಿದಾಗ, ಮನುಷ್ಯನಿಗೆ ಹುಟ್ಟು ಕೂಡಾ ಶಾಪವಾಗಬಲ್ಲದು. ವಿಧಿ ಕನಿಕರಿಸುವುದಿಲ್ಲವಂತೆ. ಪ್ರತಿಭಾ ಕಿಣಿಗೆ ಆದದ್ದು ಇದೇ.

ಆಕೆ ಹುಟ್ಟು ಕಿವುಡಿ. ಆಕೆಯ ಬಾಲ್ಯದಲ್ಲಿ ತೊದಲು ನುಡಿ ಇರಲಿಲ್ಲ. ಆಕೆ ಮೂದೇವಿಯಾಗಿದ್ದಳು. ಪ್ರೀತಿಯ ಮಾತಿಗೆ, ಗದರಿಕೆಯ ಬಿರುನುಡಿಗೆ ನಗುವಿನ ಪ್ರತಿಕ್ರಿಯೆ ಮೌನವೊಂದೇ ಆದಾಗ ಅಪ್ಪ ಅಮ್ಮ ಕಂಗಾಲಾದರು....

ಇದು ಅಂದಿನ ಕಥೆ. ಬದುಕಿನ ಅಸಂಗತವನ್ನೇ ಸವಾಲಾಗಿ ಸ್ವೀಕರಿಸಿ, ನಂಬಿಕೆಗಳ ನೆಲೆಗ



ದೈಹಿಕ ವಿಕಲತೆಯನ್ನೇ ನೆವ ಮಾಡಿಕೊಂಡು ದಿನವಿಡೀ ಕೊರಗುತ್ತ, ಇನ್ನೊಬ್ಬರ ಅನುಕಂಪದ ನೆರಳಲ್ಲಿ ಪರಾವಲಂಬಿಯಾಗಿ ಬದುಕು ಸವೆಸುವ ಅಥವಾ ನಿರಾಕರಿಸುವಂಥವರಿಗೆ ಪ್ರತಿಭಾರ ಬದುಕೊಂದು ಹೊಸ ಭರವಸೆಯಾಗಿ ನಿಲ್ಲುತ್ತದೆ.

ಟ್ಟನ್ನೇ ಅಲ್ಲಾಡಿಸಿ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಂಡ ಪ್ರತಿಭಾ ಇಂದು ಆತ್ಮ ವಿಶ್ವಾಸಕ್ಕೆ ಇನ್ನೊಂದು ಹೆಸರು.

''ನನಗೆ ನಾನೇ ಮಾದರಿ'' ಎನ್ನುತ್ತ ಆಕೆ ಮುಗುಳು ನಗುತ್ತಾರೆ. ನಿಮ್ಮ ಮಾತಿಗೆ ಮಾತಾಗುತ್ತಾರೆ. ನಿಮ್ಮೆಲ್ಲಾ ಕುತೂಹಲದ ಪ್ರಶ್ನೆಗಳಿಗೆ ಆಕೆಯ ಬಳಿ ಖಚಿತ ಉತ್ತರಗಳಿವೆ. ನಿಮ್ಮ ತುಟಿಗಳ ಚಲನೆಯಿಂದಲೇ ಆಕೆ ಶಬ್ದಗಳನ್ನು ಗ್ರಹಿಸಬಲ್ಲರು, ಪ್ರತಿಕ್ರಿಯಿಸಿ ನಿಮ್ಮನ್ನು ದಂಗುಬಡಿಸಬಲ್ಲರು!

ದೈಹಿಕ ವಿಕಲತೆಯನ್ನೆ ನೆವ ಮಾಡಿಕೊಂಡು ದಿನವಿಡೀ ಕೊರಗುತ್ತಾ, ಇನ್ನೊಬ್ಬರ ಅನುಕಂಪದ ನೆರಳಲ್ಲಿ ಪರಾವಲಂಬಿಗಳಾಗಿ ಬದುಕು ಸವೆಸುವ ಅಥವಾ ನಿರಾಕರಿಸುವ ಮಂದಿಗೆ ಇಂದು ಪ್ರತಿಭಾ ಹೊಸ ಪಾಠವಾಗಿದ್ದಾರೆ.

ನೋಡುವವರ ಕಣ್ಣಿಗೆ ಯಾವುದೇ ಕೊರತೆ ಇಲ್ಲದಂತೆ ಕಾಣುವ ಈ ಸುಂದರ ಯುವತಿ ಹುಟ್ಟು ಕಿವುಡಿ ಎಂದರೆ ನಂಬಲು ಕಷ್ಟವಾಗುತ್ತದೆ. ಆದರೆ ಆಕೆಯ ಮಹತ್ ಸಾಧನೆ ಅಡಗಿರುವುದೇ ಈ ವಿಷಯದಲ್ಲಿ.


ಸಾಮಾನ್ಯವಾಗಿ ಹುಟ್ಟು ಕಿವುಡರಿಗೆ ಮಾತು ಬರಲು ಸಾಧ್ಯವೇ ಇಲ್ಲ ಎಂಬ ನಂಬಿಕೆ ಇದೆ. ಆದರೆ ಈ ನಂಬಿಕೆಯನ್ನು ಸುಳ್ಳು ಮಾಡಿ ತೋರಿಸಿರುವ ಪ್ರತಿಭಾ ವೈದ್ಯರಿಗೆ ಸವಾಲಾಗಿದ್ದಾಳೆ.

ಪ್ರೇಮಾ ಹಾಗೂ ಎಂ.ಜಿ.ಕಿಣಿಯವರ ಮೂರನೇ ಮಗಳಾಗಿ ಹುಟ್ಟಿದ ಪ್ರತಿಭಾ ಎಲ್ಲರಂತಿರಲಿಲ್ಲ.

ಮಗುವನ್ನು ಕಣ್ಣು, ಮೂಗು ಹಾಗೂ ಗಂಟಲು ತಜ್ಞರ ಬಳಿಗೆ ಕರೆದೊಯ್ದಾಗ ವೈದ್ಯರು ಈಕೆ ಹುಟ್ಟು ಕಿವುಡಿ ಎಂದು ಘೋಷಿಸಿದರು. ಆದರೆ ಎಲ್ಲಾ ತಂದೆತಾಯಿಯರಂತೆ ಹತಾಶರಾಗಿ ಕುಳಿತುಕೊಳ್ಳದ ಕಿಣಿ ದಂಪತಿಗಳು ತಮ್ಮ ಮಗಳು ಎಲ್ಲರಂತೆ ಬದುಕಬೇಕು, ಈ ವಿಕಲತೆ ಅವಳ ಭವಿಷ್ಯಕ್ಕೆ ಅಡ್ಡಿಯಾಗಬಾರದು ಎಂದು ನಿರ್ಧರಿಸಿದರು. ಇದಕ್ಕಾಗಿ ಹಲವು



''ಕೆಲವರು ನನಗೆ 'ಕಿವಿ ಕೇಳಿಸುವುದಿಲ್ಲ' ಎಂದು ತಿಳಿದು ಜೋರಾಗಿ ಮಾತನಾಡುತ್ತಾರೆ. ಸನ್ನೆ ಮಾಡುತ್ತಾರೆ. ಆದರೆ ಅದು ನನಗೆ ಅರ್ಥವೇ ಆಗುವುದಿಲ್ಲ. ಅವರು ಶಬ್ದ ಮಾಡದೆ ಬರಿ ತುಟಿಚಾಲನೆ ಮಾಡಿದರೂ ನನಗದು ಅರ್ಥವಾಗುತ್ತದೆ.''



ತಂದೆ-ತಾಯಿ-ಸೋದರ-
ಸೋದರಿಯರೊಂದಿಗೆ ಪ್ರತಿಭಾ

ತಜ್ಞರ ಬಳಿ ಹೋದರು. ಆದರೆ ಎಲ್ಲೆಡೆ ದೊರೆತದ್ದು ನಕಾರಾತ್ಮಕ ಉತ್ತರ.

ಈ ಸಂದರ್ಭದಲ್ಲಿ ಅಮೆರಿಕದ ಜಾನ್ ಟ್ರೇಸಿ ಕ್ಲಿನಿಕ್ ಇವರ ನೆರವಿಗೆ ಬಂದಿತು. ಕಿವುಡ ಮಕ್ಕಳ ತಂದೆತಾಯಿಯರಿಗೆ ನೀಡುವ ಒಂದು ವರ್ಷದ ತುಟಿ ಚಾಲನೆ ಅಭ್ಯಾಸ (ಲಿಪ್ ರೀಡಿಂಗ್) ತರಬೇತಿ ಪಡೆದ ಪ್ರೇಮಾ ಕಿಣಿಯವರು ತಮ್ಮ ಮಗಳಿಗೆ ಮನೆಯಲ್ಲೇ ತಿಳುವಳಿಕೆ ನೀಡಲಾರಂಭಿಸಿದರು. ಇದಕ್ಕೆ ಸಹಾಯಕರಾಗಿ ಮುಂಬಯಿಯ ಮಲಬಾರ್‌ಹಿಲ್ಸ್‌ನ ಇಯರ್ ಆಡಿಯೋ ರಿಸರ್ಚ್ ಆರ್ಗನೈಸೇಷನ್ (EAR) ಮಾಹಿತಿಗಳನ್ನು ಒದಗಿಸಿತು.

''ಈ ತರಬೇತಿ ನೀಡುವ ತಂದೆತಾಯಿಯರಿಗೆ ಅಪಾರ ತಾಳ್ಮೆ ಬೇಕು. ಅದರಲ್ಲೂ ತಾಯಿಯಂತೂ ಸಹನೆಯ ಸಾಕಾರಮೂರ್ತಿ ಎನಿಸಬೇಕು. ಇದಕ್ಕೆ ಪೂರಕವಾಗಿ ಮನೆ ಮಂದಿಯೆಲ್ಲಾ ವರ್ತಿಸಬೇಕು. ಹೀಗಾದಲ್ಲಿ ಮಾತ್ರ ಕಿವುಡ ಮಗು ನಾವೆಲ್ಲರಂತೆ ಮಾತನಾಡಲು ಸಾಧ್ಯ. ತಾಳ್ಮೆಕೆಟ್ಟರೆ ಇಡೀ ಯೋಜನೆ ಸಂಪೂರ್ಣ ವಿಫಲವಾಗುತ್ತದೆ'' ಎನ್ನುತ್ತಾರೆ ಎಂ. ಜಿ. ಕಿಣಿ.

'' 'ಶಬ್ದ'ವೇನೆಂದು ಅರಿಯದ ಮಗು ತುಟಿ ಚಾಲನೆ ಅರ್ಥೈಸಿಕೊಂಡು ಮಾತನಾಡುವುದು ಸುಲಭ ಸಾಧ್ಯವಲ್ಲ. ಪ್ರಾರಂಭದಲ್ಲಿ ಒಂದು ಶಬ್ದ ಕಲಿಸಲು ಆರರಿಂದ ಎಂಟು ಗಂಟೆ ಹಿಡಿಯುತ್ತದೆ. ಕಿವುಡು ಮಗುವಿಗೆ ಯಾವುದಾದರೂ ಒಂದು ಭಾಷೆಯಲ್ಲಿ ಮಾತ್ರ ಕಲಿಸಬೇಕು. ಇಲ್ಲವಾದರೆ ಗೊಂದಲಕ್ಕೀಡಾಗಿ ಮಗು ಏನನ್ನೂ ಕಲಿಯದಿರುವ ಅಪಾಯವಿದೆ. ಇದನ್ನು ಅರಿತು ಕಷ್ಟಪಟ್ಟು ಕಲಿಸಿದರೆ ಮಗು ತನ್ನ ಅಂಗವಿಕಲತೆ ಮರೆತು ಎಲ್ಲರಂತೆ ತಲೆಯೆತ್ತಿ ಬಾಳಬಹುದು'' ಎಂಬುದು ಕಿಣಿಯವರ ಅಭಿಪ್ರಾಯ.

ಮಗುವಿಗೆ ಎರಡು ವರ್ಷವಾಗುವುದರಲ್ಲಿ ಈ ವಿಕಲತೆಯನ್ನು ಅರಿತುಕೊಂಡರೆ ಅವುಗಳಿಗೆ ಕಲಿಸುವುದು ಸುಲಭ. ಐದು ವರ್ಷಗಳ ನಂತರವಾದರೆ ಧ್ವನಿಪೆಟ್ಟಿಗೆ ಸರಿಯಾಗಿ ಕಾರ್ಯ ನಿರ್ವಹಿಸದೆ ಮಗು ಸಂಪೂರ್ಣ ಮೂಗ ಹಾಗೂ ಕಿವುಡಾಗಿ ಜೀವನ ಪರ್ಯಂತ ಕಾಲ ತಳ್ಳಬೇಕಾಗುತ್ತದೆ.

ತಾಯಿಯಿಂದ ಈ ತರಬೇತಿ ಪಡೆದ ಪ್ರತಿಭಾ ನಗರದ ಪೂರ್ಣಪ್ರಜ್ಞ ಶಾಲೆಯಲ್ಲಿ ಒಂದರಿಂದ ನಾಲ್ಕನೇ ತರಗತಿಯವರೆಗೆ ಅಭ್ಯಾಸ ಮಾಡಿದರು. ಈ ಶಾಲೆಯಲ್ಲಿ ಪ್ರವೇಶ ಪಡೆಯಲು ಕಿಣಿ ದಂಪತಿಗಳು ಸಾಕಷ್ಟು ಕಷ್ಟಪಟ್ಟು ಕೊನೆಗೆ ಯಶಸ್ವಿಯಾದರು.

ಆದರೆ ಐದನೇ ತರಗತಿಗೆ ಸೇರಬೇಕಾದಾಗ ಪ್ರತಿಭಾಗೆ 'ಮುಂದೇನು?' ಎಂಬ ಪ್ರಶ್ನೆ ಕಾಡಿತು. ಆಕೆಗೆ ಗೊತ್ತಿರುವುದು ಇಂಗ್ಲಿಷ್ ಭಾಷೆಯೊಂದೇ. ಆದರೆ ಐದನೇ ತರಗತಿ ನಂತರ ಮಕ್ಕಳು ಕಡ್ಡಾಯವಾಗಿ ಇನ್ನೆರಡು ಭಾಷೆ ಕಲಿಯಬೇಕು. ಪ್ರತಿಭಾಳಿಗೆ ಇದರಿಂದ ವಿನಾಯ್ತಿ ನೀಡಲು ಸಾಧ್ಯವಾಗದ ಕಾರಣ ಆಕೆ ಶಿಕ್ಷಣವನ್ನು ಸ್ಥಗಿತಗೊಳಿಸಬೇಕಾದ ಪರಿಸ್ಥಿತಿ ಎದುರಾಯಿತು.

ಕೊನೆಗೆ ಗತ್ಯಂತರವಿಲ್ಲದೆ ಒಂಬತ್ತು ವರ್ಷದ ಪ್ರತಿಭಾಳನ್ನು ಅಮೆರಿಕದ ಫ್ಲೋರಿಡಾದಲ್ಲಿರುವ ಲಾಡೆರ್ಡಾಲೆ ಓರಲ್‌ಸ್ಕೂಲ್‌ಗೆ ಸೇರಿಸಲು

ತೀರ್ಮಾನಿಸಲಾಯಿತು. ಈ ಶಾಲೆಯ ಲಿಖಿತ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಪ್ರತಿಭಾಳಿಗೆ ವಿದ್ಯಾರ್ಥಿವೇತನವೂ ದೊರೆಯಿತು. ಇಲ್ಲಿ ಐದು ವರ್ಷಗಳ ಕಾಲ ವಿದ್ಯಾಭ್ಯಾಸ ನಡೆಸಿದ ಪ್ರತಿಭಾ ತುಟಿ ಚಾಲನೆ ಹಾಗೂ ಮಾತುಗಾರಿಕೆಯಲ್ಲಿ ಪರಿಣತಿ ಪಡೆದರು. ಇದೇ ವೇಳೆಗೆ ವಿಶೇಷ ತಂತ್ರಜ್ಞಾನದಿಂದ ಕೂಡಿದ ಶ್ರವಣ ಸಾಧನಗಳನ್ನು ಬಳಸಿ ಕೆಲವು ಶಬ್ದಗಳನ್ನು ಅರಿತರು.

ಇದಾದ ನಂತರ ತಂದೆಯ ಉದ್ಯೋಗದ ನಿಮಿತ್ತ ನೈರೋಬಿಗೆ ತೆರಳಿದ ಪ್ರತಿಭಾಗೆ ಅಲ್ಲಿನ ಶಾಲೆಗಳಲ್ಲಿ ಕಿವಿ ಕೇಳಿಸುವುದಿಲ್ಲ ಎಂಬ ಕಾರಣದಿಂದ ಪ್ರವೇಶ ದೊರೆಯುವುದು ಕಷ್ಟವಾಯಿತು. ಭಾರತದ ಶಾಲೆಗಳಿಗಿಂತ ಹೇಳಿಕೊಳ್ಳುವ ರೀತಿಯಲ್ಲಿ ಭಿನ್ನವಾಗಿರದ ನೈರೋಬಿಯಲ್ಲಿ ಕೊನೆಗೂ ಡೆನ್ಯಾನ್ ಶಾಲೆಯಲ್ಲಿ ಪ್ರವೇಶ ಗಿಟ್ಟಿಸುವುದರಲ್ಲಿ ಪ್ರತಿಭಾ ಯಶಸ್ವಿಯಾದರು.

ಈ ಹಂತದಲ್ಲಿ ಭಾರತಕ್ಕೆ ಮರಳಿದ ಪ್ರತಿಭಾ ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜ್‌ನಲ್ಲಿ ಗೃಹವಿಜ್ಞಾನ ಪದವಿ ಗಳಿಸಿದರು. ''ನಾನು ಪ್ರತಿ ತರಗತಿಯಲ್ಲೂ ಮೊದಲ ಬೆಂಚ್‌ನಲ್ಲಿ ಕುಳಿತು ಅಧ್ಯಾಪಕರ ತುಟಿ ಚಾಲನೆ ಗಮನಿಸುತ್ತಿದ್ದೆ. ಹೀಗಾಗಿ ನನಗೆ ಅಭ್ಯಾಸ ಮಾಡಲು ಎಂದೂ ಕಷ್ಟವಾಗಲಿಲ್ಲ. ಇದಕ್ಕೆ ಬೆಂಬಲವಾಗಿ ನನ್ನ ಸ್ನೇಹಿತೆಯರು ಸಹಾಯ ಮಾಡಿದರು'' ಎಂದು ಪ್ರತಿಭಾ ಅಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.

''ಕೆಲವರು ನನಗೆ ಕಿವಿ ಕೇಳಿಸುವುದಿಲ್ಲ ಎಂದು ತಿಳಿದು ಜೋರಾಗಿ ಮಾತನಾಡುತ್ತಾರೆ. ಸನ್ನೆ ಮಾಡುತ್ತಾರೆ. ಆದರೆ ಅದು ನನಗೆ ಅರ್ಥವೇ ಆಗುವುದಿಲ್ಲ. ಅವರು ಶಬ್ದ ಮಾಡದೆ ಬರಿ ತುಟಿಚಾಲನೆ ಮಾಡಿದರೂ ನನಗೆ ಅರ್ಥವಾಗುತ್ತದೆ'' ಎನ್ನುವ ಪ್ರತಿಭಾ ಇಂತಹ ಮಕ್ಕಳ ಪಾಲಿಗೆ ಆಶಾ ಕಿರಣವಾಗಿದ್ದಾರೆ.

''ನನ್ನಂತೆ ಇರುವವರು ಮುಂದೆ ಬರಬೇಕು ಮನಸಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ನಾನೇ ಅತ್ಯುತ್ತಮ ಉದಾಹರಣೆ. ನಾನು ಆತ್ಮವಿಶ್ವಾಸದಿಂದ ಸ್ವಾವಲಂಬಿಯಾಗಿ ಬಾಳಲು ನನ್ನ ಪೋಷಕರೇ ಕಾರಣ'' ಎಂದು ಹೆಮ್ಮೆಯಿಂದ ನಗುತ್ತಾರೆ ಪ್ರತಿಭಾ.

ಸಾಮಾನ್ಯ ಶಾಲೆಯಲ್ಲಿ ಎಲ್ಲಾ ಮಕ್ಕಳಂತೆ ಶಿಕ್ಷಣ ಪಡೆದ ರಾಜ್ಯದ ಪ್ರಥಮ ಅಂಗವಿಕಲ ವಿದ್ಯಾರ್ಥಿನಿ ಪ್ರತಿಭಾ.

ತಮ್ಮ ಮಗಳನ್ನು ಸ್ವಾವಲಂಬಿಯಾಗಿ ಬೆಳೆಸಿದ ಪ್ರೇಮಾ ಕಿಣಿಯವರು ತಮ್ಮ ಬಿಡುವಿನ ವೇಳೆಯನ್ನು ಕಿವುಡು ಮಕ್ಕಳಿಗೆ ತರಬೇತಿ ನೀಡಲು ಬಳಸುತ್ತಾರೆ. ಇಂತಹ ಮಕ್ಕಳಿಗೆ ವಿಶೇಷವಾಗಿ ತರಬೇತಿ ನೀಡಲು ಟ್ರಸ್ಟ್ ಪ್ರಾರಂಭಿಸಬೇಕು ಎಂಬ ಉದ್ದೇಶ ಎಂ. ಜಿ. ಕಿಣಿಯವರಿಗಿದೆ.

ಪ್ರಾಥಮಿಕ ಶಾಲೆಗಳ ಶಿಕ್ಷಕ-ಶಿಕ್ಷಕಿಯರಿಗೆ ಈ ಬಗ್ಗೆ ತರಬೇತಿ ನೀಡಿ ಅವರು ಇಂತಹ ಮಕ್ಕಳ ಭವಿಷ್ಯ ಉತ್ತಮಗೊಳಿಸಬೇಕು ಎಂಬ ಆಕಾಂಕ್ಷೆ ಹೊಂದಿರುವ ಕಿಣಿಯವರು ಈ ಕುರಿತು ಸರ್ಕಾರದೊಡನೆ ಮಾತುಕತೆ ನಡೆಸಲು ಯೋಚಿಸಿದ್ದಾರೆ.

1991-92ನೇ ಸಾಲಿನಲ್ಲಿ ಮ್ಯಾನೇಜಮೆಂಟ್ ಡಿಪ್ಲೋಮಾ ಕೋರ್ಸ್ ಮುಗಿಸಿರುವ ಪ್ರತಿಭಾ ಈಗ ತಮ್ಮ ತಂದೆ ನಡೆಸುವ 'ಸನ್ ಕ್ರಷ್ ಲಿಮಿಟೆಡ್'ನಲ್ಲಿ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಾರ್ಟೆರ್ಡ್ ಅಕೌಂಟೆಂಟ್ ಸುಧಾಕರ್ ಮಲ್ಲರ್ ಕಳೆದ ಡಿಸೆಂಬರ್‌ನಲ್ಲಿ ಪ್ರತಿಭಾ ಅವರ ಬಾಳಸಂಗಾತಿಯಾಗಿದ್ದಾರೆ.

ಇಪ್ಪತ್ತೈದರ ಹರೆಯದ ಪ್ರತಿಭಾ ಈಗ ಕಂದನ ನಿರೀಕ್ಷೆಯ ಖುಷಿಯಲ್ಲಿದ್ದಾರೆ. ●

ಬುದ್ಧಿವಂತನಾದವನು ಪುಸ್ತಕ ಹಾಗೂ ಬದುಕು ಎರಡನ್ನೂ ಓದುತ್ತಾನೆ.

ಲಿನ್ ಯೂತಾಂಗ್

ದೈವಿಕ ಸೌಂದರ್ಯಕ್ಕಿರುವ ಮಾನವನ ಆತ್ಮದಾಹವೇ ಪ್ರೇಮ.

ಸಾಕ್ರೆಟಿಸ್

ಕಥೆ ಹೇಳುವೆ....

ನನಗೀಗಿನ್ನೂ ಹದಿನಾಲ್ಕು ಹದಿನಾರರ ಮುಗುಳು. ವಸಂತ
ಚಂದ್ರಿಕೆಯಲ್ಲಿ ಎರಕ ಹುಯ್ಯಿಸಿಕೊಂಡ ಶಾರೀರ
ಜೋಡು ಕಾಮನ ಬಿಲ್ಲುಗಳ ಕೆಳಗೆ ಸಂಚು ಹೂಡಿದ
ಜೋಡು ನಕ್ಷತ್ರಗಳಂಚಿನಿಂದುದುರುವ ಇಬ್ಬನಿ
ಮಾತ್ಸರ್ಯದಾ ಕೋಪ ಚಂಪಕ ನಾಸಿಕದ ಮೇಲೆ
ಮಾಧುರ್ಯದಾ ಮಧುಸೆಲೆಗಳು ತುಂಬಿ
ತುಂಬಿಗ್ಹಬಲಿಸುವ ಅಧರದ್ವಯಗಳು
"ಪದತಳದಿ ನೆಲವಿಲ್ಲ" ಸ್ಪರ್ಧೆಯಲಿ ಸಾರುವ ಕುಚಘನದ್ವಯಗಳು
ಮೈಯೆಲ್ಲ ಓಂಜಿದರಳೆ ಅಂತರ್ಯಾಮಿನಿ
ಗುಳಿಬಿದ್ದ ಗಲ್ಲದಿ ನಕ್ಕ ಹೂನಗೆಗೆ ಪ್ರತಿನಗೆಯಲಿ
ಸೋಲನೊಪ್ಪಿದೆ ಈ ಸೃಷ್ಟಿ.

ಹೇಂಟೆ ಜಾಮದ ಪ್ರತೀಕ್ಷೆಯಲಿ ಕಾಯುತ್ತೇನೆ - ಹೊಸ್ತಿಲೊಳಗೇ,
ಪಂಚವರ್ಣದ ಕುದುರೆ ಏರಿ ಬರುವ ಸನ್ನಿನಿಯ
ಚಿಗುರು ಮೀಸೆಯ ರಾಜಕುಮಾರನಿಗೆ.
ಇಲ್ಲಿಗೆ ಬಾರದಿನ್ನೆಲ್ಲಿಗೆ ಹೋಗುವ!!
ಸರಿ ತಾಸು ಮುಂಬೆಳಗು ನುಂಗುತ್ತಿರುವಾಗ ಕೇಳಿದೆ -
ಖುರಪುಟದ ದನಿ ಹತ್ತಿರ ಹತ್ತಿರ ಬಿಟ್ಟಿದೆವಗೆ
ಕಾತರದ ಢವ ಢವ..ಬಂದಾತ..!
ಒಂದಿನಾ ಮನೆಯ ದಾಸನ ಮಗ ಕಾಲಾಳು -
ಹುಂಚ ಕುದುರೆಯ ಮೇಲೆ ಕುಳಿತಾತ - ಕೇಳುತ್ತಾನೆ
"ಬಾ ನಲ್ಲೆ ನಾ ನಿನ್ನ ದಾಸ ನೀ - ನನ್ನ ಹೃದಯ...."
ರಪ್ಪನೆ ಮುಚ್ಚಿದೆ ಬಾಗಿಲು. ಸಂದಿನಿಂದ ತೂರಿತಾತನ ದನಿ
"ಇದೀಗಾಯಿತು ರಾಜಕುಮಾರನ ಮದುವೆ,
ಮತ್ತೆ ಬರುವೆ ನಿನಗಾಗಿ."

ಜೋಡು ದಶಮಾನಗಳು ಮಧ್ಯಾಹ್ನದಲಿ ಕರಗುತಿರುವಂತೆಯೇ
ಮತ್ತೆಯೂ ಕಾಯುತ್ತೇನೆ
ಧವಳವರ್ಣದ ಹಯವೇರಿ ಬರುವ
ಚತುರ ಮಂತ್ರಿಕುಮಾರನಿಗೆ.
ಬಂದೇ ಬರುತ್ತಾನೆ
ಮೇಷದಲಿ ಶನಿ ವಕ್ರಿಸಿದಂತೆ ಬಂದಾತ ದಾಸ...

“ನಲ್ಲೇ, ಬಂಗಾರ ಬ್ಯಾಳಿ ಮಣಿ ಜೋಡು ಮುತ್ತಿನ ತಾಳಿ
ನಿನಗಾಗಿ ಬಾ ಹಸೆ ಏರು ಇದೀಗ
ಉಂಡು ಬಂದೆ ಮಂತ್ರಿಮಗನ ಶೋಭನದ ಸವಿಯೂಟ”
“ಛೀ ತೊಲಗಾಚೆ!
ನನ್ನೀ ಸೌಂದರ್ಯ
ದೇಶ ರಕ್ಷಕ ಶೂರ ಸೇನಾಪತಿಗೆ
ಇದೀಗ ಬಂದಾನು.”
ಮುಖತಿರುವಿ ನಕ್ಕ ಗರ್ವದ ನನ್ನ ನಗೆಯಲಿ
ಖುರಪುಟದ ದನಿ ಕರಗುತ್ತ ನಡೆದಿದೆ.

ಸಂಜೆ ಸಂಧ್ಯೆಯಲಿ ಒಂದಾಗುತಿರುವಾಗ
ಕಳೆದು ಹೋದವೇ ಮೂರು ದಶಮಾಸಗಳು?
ದಾರಿಕಾಯುವ ಕಾವು ಆವಿ ಮೋಡಗಳಾಗಿ
ಹೆಡೆ ಬಿಚ್ಚಿ ನಿಂತ ನಾಗರನಂತಿರುವ ಕುಂತಳದ
ಮೇಲೆಲ್ಲ ಮಿಂಚು ಸಿಡಿ ಮಿಂಚುಗಳು
ಎರಕದ ಚಕ್ಕಳವು ಹಾರತೊಡಗಿದೆ ಅಲ್ಲಲ್ಲಿ
ಬಾಡಿ ಕರಗುವ ಮಳೆ ಬಿಲ್ಲುಗಳ ಕೆಳಗಿನ
ಆಳದ ಬಾವಿಯಲಿ ಚಿಮ್ಮುತಿದೆ ಬಿಸಿನೀರು ಬುಗ್ಗೆ ಬಗ್ಗೆಯಲಿ
ಅರಳಿದ ಸಂಪಿಗೆಯ ನಗೆಯಲಡಗಿದೆ
ಸೇಡು ತೃಪ್ತಿಯ ಭಾವ
ಮಧು ಸೆಲೆ ಬತ್ತತೊಡಗಿದಂತೆಯೇ ದೇಹ ಭಾರ
ಭಾರದ ಹೆಜ್ಜೆ ಕೆಳಗೆ ನೆಲದಾಳ ಸೇರುವ ಭಯ
“ಹಾಳಾಗಿ ಹೋಗಲಿ ಆ ಮೂರು ಮೂರ್ಖರು”

ದಿಕ್ಕು ತಪ್ಪಿದ ಹುಲ್ಲೆಯಾಗಿ ಹಾರುತ್ತೇನೆ
ನನಗಾಗಿ ಕಾಯ್ವ ಮನೆಯ ಹಿಂಬದಿಯ ನನ್ನ ನಲ್ಲನ ಮನೆಗೆ
ಪ್ರಕೃತಿ ಗೆಲುವಿನ ನಗೆಗೆ
ನಡುನಡುಗಿ....
ಎಣ್ಣೆ ನೀರಲಿ ಮಿಂದೆದ್ದ ಮಗಳ ತಲೆ ಬಾಚುತ್ತ
ಮುಗುಳು ನಗೆಯಲಿ ಕೇಳುತ್ತಾಳೆ
ಆತನ ಮಡದಿ
“ಏನಜ್ಜಿ ಏನು ಬೇಕಿತ್ತು?”

● ವಿದ್ಯಾಧರ ಮುತಾಲಿಕದೇಸಾಯಿ

'ಪ್ರೀತಿ' ಎಂಬುದು ಕೇವಲ
ಎರಡೂಮುಕ್ಕಾಲಕ್ಷರಗಳ
ಶುಷ್ಕ ಪದವೆ?

ಪ್ರೀತಿಸಲರಿಯದ 'ನಾವು'

“ಐ ಲವ್ ಯು” ಎನ್ನುವ ಆಂಗ್ಲ ಪದದಲ್ಲಿರುವ ಪ್ರೀತಿ ಕನ್ನಡದ ಅಥವಾ ಯಾವುದೇ ಭಾರತೀಯ ಭಾಷಾ ಪ್ರಯೋಗದಲ್ಲಿ ಇಲ್ಲದ್ದು ತುಂಬಾ ವಿಷಾದದ ಸಂಗತಿ.

I love you. I love this tree, flower, fountain, life, country ಎನ್ನುವಾಗ ಮನುಷ್ಯ ಮತ್ತು ಸುತ್ತಣ ಪ್ರಕೃತಿ ಪರಿಸರದೊಡನೆಯ ತಾದಾತ್ಮ್ಯವನ್ನು ಈ ಪದ ವಿಶಿಷ್ಟವಾಗಿ ಹೊಮ್ಮಿಸಿ ನಮ್ಮನ್ನು ಆ ವಸ್ತು, ಪ್ರಾಣಿ, ಮನುಷ್ಯರ ಜತೆ ಸಂಪರ್ಕ ಏರ್ಪಡಿಸುವ ಮೋಡಿಯ ಆಕರ್ಷಣೆಯನ್ನು ನೀವು ಗಮನಿಸಿ.

ಹೌದಲ್ಲವಾ, ಪ್ರೇಮಿ, ಪ್ರೇಯಸಿ I love you ಅಂದಾಗ ಆಗುವ ರೋಮಾಂಚನ ಒಬ್ಬರಿಗೊಬ್ಬರು ತಹತಹಿಸುವ ಕ್ರಿಯೆಯನ್ನು ಬಿಂಬಿಸುತ್ತದೆ, ಸಮರ್ಥವಾಗಿ. ತಾಯಿ ಬಗ್ಗೆ ಹೇಳಿದಾಗ, ಸೋದರನಿಗೆ ಹೇಳಿದಾಗ ಉಂಟಾಗುವ ಪ್ರೀತಿಯೇ ಬೇರೆ.

ಆದರೆ ಕನ್ನಡದಲ್ಲಿ ನನ್ನ ಹುಡುಗೀನ ನಾ ಪ್ರೀತಿಸುವೆ, ಪ್ರೀತಿಮಾಡುತ್ತೇನೆ, ತಾಯಿಯನ್ನು ಪ್ರೀತಿಮಾಡುತ್ತೇನೆ, ದೇಶವನ್ನು ಪ್ರೀತಿಮಾಡುತ್ತೇನೆ ಎನ್ನುವಾಗಿನ ನಾಟಕೀಯತೆ ತಕ್ಷಣ ಗೊತ್ತಾಗಿಬಿಡುತ್ತದೆ. ನಿಜವಾದ ಭಾವನೆ ವ್ಯಕ್ತಪಡಿಸಿದರೂ ಅದರಲ್ಲಿ ಇಂಗ್ಲಿಷ್ ಶಬ್ದದ ವೈಶಾಲ್ಯವಿಲ್ಲ, ಬರೀ ಶಬ್ದದಲ್ಲೇ ಅಲ್ಲ, ನಮ್ಮಲ್ಲಿ 'ಪ್ರೀತಿ'ಗೆ ಜಾಗೆಯೇ ಇಲ್ಲ. ಅದಕ್ಕಾಗಿ, ಇಂಗ್ಲಿಷ್ ತರ ನಮ್ಮಲ್ಲಿ ಆ ಶಬ್ದ ಬರಲೇ ಇಲ್ಲ ಅನ್ನಿಸುತ್ತದೆ.

ಭಾರತೀಯರಿಗೆ ಏನು ಕೊರತೆಯಾಗಿದೆ ಎಂದರೆ ಪ್ರೀತಿ ಒಂದೇ. ಅವರಿಗೆ ಬೇರೇನೂ ಕೊರತೆ ಇಲ್ಲ. ಉಳಿದ ವಸ್ತುಗಳನ್ನು ಇಲ್ಲೇ ಪಡೆಯಬಹುದಾಗಿದೆ.

ನಾವು ನಮ್ಮನ್ನು ಪ್ರೀತಿಸುವದಿಲ್ಲ ಮೊದಲಾಗಿ. ಯಾಕೆಂದರೆ ಈ ದೇಹ ನಶ್ವರ, ನಮ್ಮ ಆತ್ಮಕ್ಕಾಗಿಯೇ ಬೇರೊಂದು 'ಸ್ವರ್ಗ'ವಿದೆ ಎಂದು ನಂಬಿರುವಾಗ, 'ಇದನ್ನು' ನಂಬುವುದಿಲ್ಲ. ಇದರಲ್ಲಿ ವಿಶ್ವಾಸ ತಾಳುವಂತೆ ನಾವಿಲ್ಲ. ಅದಕ್ಕಾಗಿ ನಾವು ಪ್ರೀತಿಸುವುದಿಲ್ಲ. ಏನಿದ್ದರೂ ಇದು ತಾತ್ಕಾಲಿಕ, ಕ್ಷಣಿಕ.

ನಮ್ಮ ನೆರೆಯವರನ್ನೂ ನಾವು ಪ್ರೀತಿಸುವುದಿಲ್ಲ. ಯಾಕೆಂದರೆ, ನಮ್ಮ ಅಂಗಳದ ಕಸ ಚೆಲ್ಲುವುದರಿಂದ ಹಿಡಿದು, ನೀರು, ಗಾಳಿ, ಬೆಳಕು, ತಿಂಡಿತೀರ್ಥ ಇತ್ಯಾದಿ ಕೊಡಕೊಳ್ಳುವಾಗ ಜಗಳ ಸಾಮಾನ್ಯ. ನೆರೆಯ ಹೊಲದ ಮೇರೆಗೆ, ಬಚ್ಚಲು ಮೋರೆಗೆ, ಹೋಗಿ ಬರುವ ದಾರಿಗೆ, ಕುಳಿತುಕೊಳ್ಳುವ ಕಟ್ಟೆಗೆ ಯಾವಾಗಲೂ ಮನಸ್ತಾಪ, ಜಗಳ, ವಾಗ್ಯುದ್ಧ, ಕೋರ್ಟ್ ಯುದ್ಧ, ಮಾರಾಮಾರಿ ಇದ್ದೇಇರುತ್ತವೆ. ಊರು/ತಾಲೂಕು/ಜಲ್ಲೆ/ರಾಜ್ಯ ಪ್ರಶ್ನೆ ಬಂದಾಗಲೂ ಅಷ್ಟೇ. ನಾವು ಇಂಥ ಭಾಷಿಕರು, ಬುಡಕಟ್ಟಿನವರು. ನಮಗೇ ಒಂದು ಭಾಷೆ ಇರಬೇಕು, ಜಾಗಬೇಕು, ಸವಲತ್ತುಬೇಕು. ಕನ್ನಡ ಪ್ರದೇಶ ಒಂದಾಗಬೇಕು. ನಮ್ಮ ನೀರು, ಸಂಪನ್ಮೂಲ, ಉದ್ಯೋಗ ಯಾವುದೂ ಬೇರೆಯವರಿಗೆ ಹೋಗಬಾರದು. ನಮ್ಮ ಭಾಷೆ ನಾವು ಆಡುತ್ತ, ನಮ್ಮ ಭೂಮಿ ನಾವು ಉಳುತ್ತ, ನಮ್ಮ ನೀರು ಬೆಳಕು ಕುಡಿಯುತ್ತ ನಮ್ಮ ರಾಜ್ಯದಲ್ಲಿ ನಾವೇ (ನಮ್ಮಮ್ಮ ಸಮುದಾಯ, ಕೋಮಿನವರು) ಆಡಳಿತ ನಡೆಸಬೇಕೆಂದು

ತೀರ್ಮಾನಿಸಿಕೊಂಡು ಬಿಡುತ್ತೇವೆ. ಅದಕ್ಕಾಗಿ, ಬೇರೆಯವರ ಸಹಾಯಬೇಕು. ನಾವು ಕೊಡುವುದು ಬೇಡ.

ಈ ತರ್ಕ ಇಡೀ ಭಾರತದ ಮೂಲೆ ಮೂಲೆಯಲ್ಲಿ ಜೀವಂತವಾಗಿ, ನಮ್ಮನ್ನು ಸೀಮಿತಗೊಳಿಸಿ ಅಲ್ಲೇ ಬದುಕಿನ ಸಾರ್ಥಕ್ಯ ಪಡೆದಿದೆ. ಈ ಕಾರಣಕ್ಕಾಗಿಯೇ ಇಲ್ಲಿಯ ಕ್ರೀಡಾಪಟುಗಳು ಹೋದ ಕಡೆಯೆಲ್ಲಾ ಪದಕವಿಲ್ಲದೆ ವಾಪಾಸು ಬರುತ್ತಾರೆ. ರಾಜಕಾರಣಿಗಳು ಮತಗಳ ಬೇಟೆ ಆಡಿ, ನಿಗದಿತ ಅವಧಿಗಿಂತ ಮುಂಚೆಯೇ ಜನರತ್ತ ಮತ್ತೆ ಮತ್ತೆ ಬರುತ್ತಾರೆ. ಸ್ವಾಮಿಗಳು, ಪವಾಡಪುರುಷರು ಸಹ ಹಣತರುವ ಮೋಜಿಗೆ ಅಧ್ಯಾತ್ಮವನ್ನು ವಿದೇಶಿಯರಿಗೆ ಮಾರುತ್ತ, ಇಲ್ಲಿನ ಜನರು ಮತ್ತಷ್ಟು ಕ್ಷುಲ್ಲಕರಾಗುವಂತೆ ಜಾತಿ ಕೋಮು ಗಲಭೆಯಲ್ಲಿ ತೊಡಗುವಂತೆ ಪ್ರೇರಣೆ ನೀಡುತ್ತಾರೆ. ಮನುಷ್ಯನನ್ನು ದೊಡ್ಡವನೆಂದು (ಆತ ದೇವರಿರಲಿ, ಸಾಹುಕಾರ, ಬಂಡವಾಳಶಾಹಿ, ಕಾರ್ಮಿಕ ಇರಲಿ) ಶರಣಾಗತಿ ಮಾಡಿಸಿ ಸ್ವಾಭಿಮಾನವನ್ನು ಕಳೆಚಿಸಿಬಿಟ್ಟಿದ್ದಾರೆ. ಇನ್ನೊಬ್ಬನೂ ನನ್ನಂತೆ ಮನುಷ್ಯ, ಆತ ನನ್ನ ನೆರೆಯಾತ, ಪಕ್ಕದ ಊರಿನಾತ, ರಾಜ್ಯದ ಪ್ರಜೆ ಎಂದು ಪ್ರೀತಿಸುವ ಪ್ರಮೇಯವೇ ಇಲ್ಲ. ನಮ್ಮ ಕೌಟುಂಬಿಕ ವ್ಯವಸ್ಥೆಯೇ ಹಾಗಿದೆ.

ತಂದೆ ಮಗನನ್ನು ಪ್ರೀತಿಸುವುದಿಲ್ಲ. ಹೆಂಡತಿ ದಾಸಿಯಾಗಿಯೇ ಜೀವಸವೆಸುತ್ತಾಳೆ. ಅತ್ತೆ, ಮಾವ, ಸೊಸೆಯನ್ನು ಮಗಳಂತೆ ನೋಡಿಕೊಳ್ಳುವುದೇ ಇಲ್ಲ. ಬದಲಾಗಿ 'ತೊತ್ತು' ಎಂದೇ ಪರಿಗಣಿಸಿ, ಗೋಳುಹೊಯ್ದುಕೊಳ್ಳುತ್ತಾರೆ. ಹುಟ್ಟಿದ ಮಗ ತರುವ ಆನಂದ ಮಗಳಾಗಿದ್ದರೆ ಇರದು. ಆಸ್ತಿಗಾಗಿ ಸೋದರರರು ನಿರಂತರ ಜಗಳ ಕಾಯುತ್ತಾರೆ. ಇವರ ಆಸ್ತಿ ವಿಲೇವಾರಿಗಾಗಿ ಇಡೀ ಕೋರ್ಟೇ ಸಜ್ಜಾಗಿ ನಿಂತಿರುತ್ತದೆ. ಅವೆಂದೂ ಮಾನವೀಯ ಮುಖದಿಂದ ವಿವಾದ ಬಗೆ ಹರಿಸುವುದೇ ಇಲ್ಲ. ಪೊಲೀಸ ಪೇದೆಗಳು, ಬೇರೆ ಮನುಷ್ಯರು ತಾವು ಒಂದೇ ಎಂದು

● ಮಹಾಬಲೇಶ್ವರ ಕಾಟ್ರಹಳ್ಳಿ

ಎಂದೂ ಭಾವಿಸುವುದಿಲ್ಲ. ಸಿನೆಮಾ ಟಾಕೀಸ್‌ನಲ್ಲಿ ಸಿಗರೇಟು ಬೀಡಿ ಸೇದುವವನನ್ನೂ ಸಹ ಹಣ್ಣಾಗುವಂತೆ ಬಡಿಯುತ್ತಾರೆ. ಅಧಿಕಾರಿಗಳು ಅಪಘಾತದಲ್ಲಿ, ಬರಗಾಲದಲ್ಲಿ, ಪ್ರವಾಹದಲ್ಲಿ ಅಥವಾ ಅಭಿವೃದ್ಧಿ ಕಾರ್ಯಗಳ ಅನುಷ್ಠಾನದಲ್ಲಿ ಜನರನ್ನು ಸುಲಿಯದೇ ಬಿಡುವುದಿಲ್ಲ. ಯಾಕೆಂದರೆ ಮತ್ತೆ ಅಂಥ ಅವಕಾಶ ಯಾವಾಗ ಬಂದೀತು? ರಾಜಕಾರಣಿಗಳು ಯಾವ ನೀತಿ ನಿಯಮಗಳಿಗೂ ಬಗ್ಗದೆ ದೇಶವನ್ನು ಒಂದಾಗಿಸಿಟ್ಟಿರಬೇಕು, ಸುಭದ್ರವಾಗಿಟ್ಟಿರಬೇಕು ಎಂದೆನ್ನುತ್ತಾ, ಓಟಿಗಾಗಿ ಒಡೆಯುತ್ತ ಅಧಿಕಾರಕ್ಕೆ ಬರುವ ಸಂದರ್ಭಗಳಲ್ಲಿ ಯಾವ ನೀತಿ ನಿಯಮಗಳೂ ಅಡ್ಡ ಬರುವುದಿಲ್ಲ. ಆದರೆ ಬಡವನೊಬ್ಬ ಚಿಕ್ಕ ತಪ್ಪು ಮಾಡಿದರೂ ಎಲ್ಲರ ಅವಕೃಪೆಗೆ ಒಳಗಾಗುತ್ತಾನೆ.

ಹುಡುಗ-ಹುಡುಗಿ ಒಂದೆಡೆ ನಿಂತು ಮಾತಾಡುವಂತಿಲ್ಲ. ಗುಲ್ಲುಸುದ್ದಿಯಾಗಿ ಹರಡಿಬಿಡುತ್ತಾರೆ. ಶಿಷ್ಟತನಕ್ಕೆ ಅಂಟಿರುವ ನಾಲ್ಕಾರು ಹುಡುಗರು ಈ ವಿಷಯ ಮಾತಾಡಲು ಸುರು ಮಾಡಿ ಸುಖಿಸುತ್ತಾರೆ. ಮದುವೆಗೆ ಮುನ್ನ ಹುಡುಗಿ ಏನೂ ಮಾಡುವಂತಿಲ್ಲ. ಮಾಡಿಕೊಳ್ಳುವಂತಿಲ್ಲ. ಏನಾದ್ರೂ ಅಪ್ಪಿತಪ್ಪಿ ಪ್ರೀತಿಸಿದರೆ, ದೊಡ್ಡ ರಂಪವಾಗುತ್ತದೆ. ಮುಂದೆ ಮದುವೆಗೂ ವರನ/ಆತನ ತಂದೆ ತಾಯಿಯರ ಮನೆತನದ ಪ್ರಶ್ನೆಯಾಗಿ ಬಿಡುತ್ತದೆ. ಸಂಪ್ರದಾಯಸ್ಥ ಮದುವೆ ನಂತರವೇ ಗಂಡ ಹೆಂಡತಿಯನ್ನು ಪ್ರೀತಿಸುತ್ತಾನೋ? ಇಲ್ಲ. ಆಗ ಆಕೆಯ, ದೇಹ-ಸೌಂದರ್ಯ/ತರುವ ವರದಕ್ಷಿಣೆ ಇತ್ಯಾದಿ ನೋಡಿ ಮೋಹಿಸುತ್ತಾನೆ. ರಾತ್ರಿ, ಕಾಯಿಸುತ್ತಾನೆ, ಸೂಳೆಯಂತೆ. ಬೆಳಿಗ್ಗೆ ಸಹಾಯಕಿಯಂತೆ ನಡೆಸಿಕೊಳ್ಳುತ್ತಾನೆ. ಮಕ್ಕಳ ಸಲಹುವ ಆಯಾಳಂತೆ ಕಾಣುತ್ತಾನೆ. ಹೊರಗಿನ ಪ್ರಪಂಚ ಈತನದಾದರೆ, ಮನೆಯೊಳಗಿನ ಪ್ರಪಂಚ ಆಕೆ

ಯದು. ರಾಮನ ಏಕಪತ್ನಿತ್ವ ಪರಂಪರೆಯಿಂದ ಕಟ್ಟಿಕೊಂಡಿರುವ ಈ ಪದ್ಧತಿಯಿಂದಾಗಿ ಗಂಡ/ಹೆಂಡತಿ ಯಾರನ್ನೂ ಪ್ರೀತಿಸುವುದಿಲ್ಲ.

ಆರೋಗ್ಯಕರ ಲೈಂಗಿಕ ಆಸೆಗಳನ್ನು ನಮ್ಮ ಯುವಕ ಯುವತಿಯರಲ್ಲಿ ಮೂಡಿಸುವ ವಾತಾವರಣವಿಲ್ಲ. ಪಶ್ಚಿಮ ಬದುಕಾದರೂ ಸ್ವಲ್ಪ ಸ್ವಚ್ಛಂದವಾಗಿದೆ. ಮೂಲತಃ ಈ ಏರು ಜವ್ವನಿಗರ ಕನಸುಗಳು ಸಂಪ್ರದಾಯದ, ಧಾರ್ಮಿಕ ಹಾಗೂ ಸಾಮಾಜಿಕ ಕಟ್ಟುಪಾಡುಗಳಿಂದ ಬಂಧಿತವಾಗಿರುತ್ತವೆ. ಕೆಳವರ್ಗದವರಲ್ಲಿ ಕಾಣುವ ಮುಕ್ತಕಾಮ, ಮಧ್ಯಮವರ್ಗದವರ ವಿಪರೀತ ನಾಟಕೀಯ ಬದುಕಿನಲ್ಲಿ ಕಾಣುವುದು ಅಪರೂಪ. ಹಾಗೂ ಅದು ವರ್ಜ್ಯ ಕೂಡ. ಪತ್ನಿಯೊಂದಿಗೆ ಕೂಡುವುದೆಂದರೆ ಸಹಭಾಗಿತ್ವದ ಲೈಂಗಿಕತೆಯಲ್ಲ. ಅದು ಗಂಡಿನ ಲೈಂಗಿಕ ಅತ್ಯಾಚಾರಕ್ಕೆ ನೀಡಿದ ಸಾಮಾಜಿಕ ಪರವಾನಿಗೆಯಾಗಿದೆ ಅಷ್ಟೇ.

ಈ ಕಾರಣದಿಂದಲೇ, ಪಿಯುಸಿ ಓದಿದ ಹುಡುಗಿಗೆ ಮದುವೆಯಾಗುವ ತನ್ನ ಗಂಡಿನಲ್ಲಿ ಕನಿಷ್ಠ 'ಬೇಡ'ಗಳಿರುತ್ತವೆ - ಕುಡಿಯಬಾರದು. ಸೇದಬಾರದು ಎಂಬುವು. ಆದರೆ ಅದೇ ಕೆಳವರ್ಗದ ಹೆಂಗಸು ಗಂಡಸು ಬೀಡಿ ಚಿರೂಟ ಸೇದುವ ಬಗ್ಗೆ, ಕಂಠ ಸರಾಯಿ ಮದ್ಯ ಕುಡಿಯುವ ಬಗ್ಗೆ ಯಾರೂ ತಕರಾರು ಎತ್ತುವುದಿಲ್ಲ. ಅವರೆಂದೂ ಶಿಷ್ಟಾಚಾರದ ಪ್ರಶ್ನೆಯಾಗಿರುವುದಿಲ್ಲ. ಬಸ್ಸಿನಲ್ಲಿ ಪ್ರಯಾಣಿಸುವಾಗ [illegible] ಸಿಗರೇಟು ಹಚ್ಚಿದರೆ ತಲೆ ಬಾಯಿ ಮೂಗು ಕಿವುಚಿಕೊಳ್ಳುವ ಹುಡುಗಿಯರು, ತನ್ನ ಗಂಡ ಬಂದಾಗ, ಇಂಥ ಚಟಗಳನ್ನು ಖಂಡಿತ ಬಿಡಿಸಿಬಿಡುತ್ತಾರೆ. ಇಂಥ ಚಿಕ್ಕ ಪುಟ್ಟ ಚಟಗಳನ್ನು ಮೀರಿದ [illegible] ಕಾರಣ ಜಗತ್ತನ್ನು ಅವರು ನೋಡುವ ರೀತಿಯೇ ಬೇರೆ.

ರಾಮ ಸೀತೆಯನ್ನು ಪ್ರೀತಿಸಲಿಲ್ಲ, ವರಿಸಿದ. ಆಕೆ ಬಗ್ಗೆ ಮಮತೆಯೂ ಇದ್ದಿಲ್ಲ. ಸಮಾಜದ ಕಟ್ಟುಪಾಡುಗಳು, ನೀತಿಯಾಚೆಗೇ ಆತ ಅನುರಕ್ತನಾಗಿದ್ದ. ಸೀಮಿತ ವ್ಯಕ್ತಿತ್ವದ ರಾಮರು ಈ ದೇಶದಲ್ಲಿ ಸೀತೆಯರನ್ನು ನಿರಂತರ ಅಗ್ನಿ ಪರೀಕ್ಷೆಗೆ ಒಳಪಡಿಸುತ್ತಲೇ ಬಂದಿರುವಾಗ, ಇಂಥ ರಾಮರು ಲಕ್ಷ್ಮಣನನ್ನಾಗಲೀ, ರಾವಣನನ್ನಾಗಲೀ ಪ್ರೀತಿಸುವುದಿಲ್ಲ. ಅದಕ್ಕಾಗಿಯೇ ವರದಕ್ಷಿಣೆ ಸಾವುಗಳು ಸಹಗಮನಗಳು ಇನ್ನೂ ನಡೆಯುತ್ತಲೇ ಇವೆ.

ದುಷ್ಯಂತ ಶಕುಂತಲೆಯನ್ನು ಪ್ರೀತಿಸಲಿಲ್ಲ. ಮೋಹಿಸಿದ್ದ. ದೇಹದ ಮೋಹ ಮರವೆ ತರಿಸುತ್ತದೆ ಅನೇಕ ಸಲ. ಅದಕ್ಕಾಗಿಯೇ ಆಕೆಯನ್ನು ಆತ ಮರೆತ. ಆದರೆ, ಲೈಲಾಮಜ್ನು ಪ್ರೀತಿ ಹಾಗಲ್ಲ. ದೇಹ ಮನಸ್ಸು ಸೆಳೆದ ಪ್ರೀತಿ ಅದು. ಭಾರತದ ಇತಿಹಾಸದಲ್ಲೇ ಮಾನವೀಯ ಪ್ರೀತಿಯ ಹಂದರವಿರುವ ಕಥೆಗಳು, ಕಾವ್ಯಗಳು ಇಲ್ಲವೇ ಇಲ್ಲ ಎಂದರೆ ಆಶ್ಚರ್ಯವಾಗುತ್ತದೆ - ಗಾಬರಿಯಾಗುತ್ತದೆ.

ಹಡೆದ ತಾಯಿಗೆ ಮಗ ಆತನ ಹೆಂಡತಿ ಬರುವವರೆಗೆ ಅವಲಂಬನೆ. ನಂತರ ಸೊಸೆ ವಿರುದ್ಧ ತಿರುಗುವ ಆಕೆಯ ಅಸಹನೆಯಿಂದ ಬೆಳೆಯುವ ದ್ವೇಷ, ಕುಟುಂಬದಿಂದ ರಾಷ್ಟ್ರದವರೆಗೆ ಹಬ್ಬಿದೆ. ಎಲ್ಲರನ್ನೂ ಪ್ರೀತಿಸುತ್ತಿದ್ದ ಗಾಂಧೀಜಿ ಹುತಾತ್ಮನಾದದ್ದು ಪ್ರೀತಿಸಲರಿಯದ ಒಬ್ಬ ಅನಾಗರಿಕನಿಂದ ಎಂಬುದನ್ನೂ ನಾವು ಗಮನಿಸಬೇಕು.

ಪ್ರೀತಿಯ ಸ್ಥಾನವನ್ನು ದುರಭಿಮಾನ ತುಂಬಿಕೊಂಡಿದೆ. ಪ್ರೇಮದ ಸ್ಥಾನದಲ್ಲಿ ಮೋಹ, ಕಾಮ ವಿಜೃಂಭಿಸಿದೆ.

ನಾನು ಈ ಸುಂದರ ಹೂ, ಹುಡುಗಿ, ಬೆಳ್ಳಿ ನಾಣ್ಯ ಪ್ರೀತಿಸುವುದಿಲ್ಲ. ಹಾಗೂ ಹಾಗಿರುವಾಗ ನಾನು ನನ್ನ ಮಗನನ್ನು ಸಹ ಪ್ರೀತಿಸುವುದಿಲ್ಲ. ಭಾಷೆಯನ್ನು ಪ್ರೀತಿಸುವುದಲ್ಲ. ನನ್ನ ತಂಗಿಯನ್ನು ಪ್ರೀತಿಸುವುದಿಲ್ಲ. ದೇವಕೋಶವನ್ನು ಪ್ರೀತಿಸುವುದಿಲ್ಲ. ಅವೆಲ್ಲವನ್ನೂ ನನ್ನ ಸ್ವಾರ್ಥಕ್ಕೆ ಇರುವ ವಸ್ತುಗಳು ಎಂದು ತಿಳಿಯುವಾಗ ಇಲ್ಲಿ ಪ್ರೀತಿ ಉಳಿಯುವುದಿಲ್ಲ. ●

ನೀನಾಸಮ್ : ಒಂದು ಸಾಂಸ್ಕೃತಿಕ ಪರ್ಯಾಯ

ಮೂಲ ಇಂಗ್ಲಿಷ್: *ಡಾ. ರುಸ್ತುಂ ಭರೂಚ*
ಸಂಗ್ರಹಾನುವಾದ: *ಟಿ. ಪಿ. ಅಶೋಕ*

ಭಾರತೀಯ ಸಂಸ್ಕೃತಿಯನ್ನು ಕುರಿತ ಎಲ್ಲ ನಿರ್ಧಾರಗಳೂ ಕೇಂದ್ರೀಕೃತಗೊಳ್ಳುತ್ತಿರುವ ನವ ದೆಹಲಿಯಿಂದ ಹೆಗ್ಗೋಡು ತುಂಬ ದೂರದಲ್ಲಿದೆ. ಭತ್ತದ ಗದ್ದೆಗಳಿಂದ ಮತ್ತು ಅಡಿಕೆ ತೋಟಗಳಿಂದ ಆವೃತವಾಗಿರುವ ಈ ಹಳ್ಳಿ 'ನೀನಾಸಮ್' ಎಂಬ ಸಂಸ್ಥೆಯಿಂದಾಗಿ ತುಂಬ ಪ್ರಸಿದ್ಧಿಗೆ ಬಂದಿದೆ. ಇಲ್ಲಿ ಒಂದು ರಂಗಶಿಕ್ಷಣ ಕೇಂದ್ರ, ಅರೆ ವೃತ್ತಿ ಸಂಚಾರೀ ರಂಗ ಘಟಕ, ಒಂದು ಚಲನಚಿತ್ರ ಸಮಾಜ ಮತ್ತು ಗ್ರಾಮೀಣ ಕರ್ನಾಟಕದಲ್ಲಿ ಚಲನಚಿತ್ರ ಮತ್ತು ರಂಗಸಂಸ್ಕೃತಿಯನ್ನು ಬೆಳೆಸಲು ಕಾರ್ಯಸನ್ನದ್ಧವಾಗಿರುವ ಒಂದು ಚಿಕ್ಕ ತಂಡ ಎಲ್ಲವೂ ಇವೆ. ಇಂಡಿಯಾದಲ್ಲಿ ಒಂದು ಸಾಂಸ್ಕೃತಿಕ ಕೇಂದ್ರವನ್ನು ಗುರುತಿಸಲು ಯಾರಾದರೂ ಹೇಳಿದರೆ ದೆಹಲಿ, ಮುಂಬೈ, ಕಲ್ಕತ್ತ, ಮದ್ರಾಸ್ ಅಥವಾ ಭೂಪಾಲ್ ಇವುಗಳಲ್ಲಿ ಯಾವುದನ್ನೂ ನಾನು ಆಯ್ಕೆ ಮಾಡಿಕೊಳ್ಳಲಾರೆ. ಈ 'ಕೇಂದ್ರ'ವನ್ನು ಹೆಗ್ಗೋಡಿನಲ್ಲಿ ಗುರುತಿಸಲು ನಾನು ಇಷ್ಟಪಡುತ್ತೇನೆ. ಇಲ್ಲಿ ರಂಗಭೂಮಿಗೆ ಮಾತ್ರವಲ್ಲ, ನಮ್ಮ ಸಂಸ್ಕೃತಿಯ ಬೆಳವಣಿಗೆ ಮತ್ತು ಸಂಘಟನೆಗೆ ಪರ್ಯಾಯಗಳು ಗೋಚರವಾಗುತ್ತವೆ.

ಹೆಗ್ಗೋಡು ಒಂದು ತುಂಬ ಚಿಕ್ಕ ಹಳ್ಳಿ. ಇದರ ಜನಸಂಖ್ಯೆ ಐನೂರನ್ನೂ ಮೀರುವುದಿಲ್ಲ. ಇದರಷ್ಟೇ ದೊಡ್ಡದಾದ ಹದಿನಾರು ಇತರ ಹಳ್ಳಿಗಳ ಮಧ್ಯದಲ್ಲಿ ಇರುವ ಹೆಗ್ಗೋಡು ಸಾಗರ - ಮಂಗಳೂರು ರಸ್ತೆಯಲ್ಲಿ ಬೆಂಗಳೂರಿಂದ ಸುಮಾರು ಮುನ್ನೂರೈವತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಒಂದು ಪ್ರೌಢಶಾಲೆ, ಅಂಚೆಕಛೇರಿ, ಬ್ಯಾಂಕ್, ಮಹಿಳಾಸಮಾಜ, ಗ್ರಂಥಾಲಯ ಮತ್ತು ಗ್ರಾಮೀಣ ಯುವಕ ಸಂಘಗಳು ಇವೆಲ್ಲಾ ಇವೆ. ಬರೀ ಈ ಅಂಕಿ ಅಂಶಗಳಿಂದಲೇ ನಿರ್ಧರಿಸುವುದಾದರೆ ಒಂದು

ಮೂಲತಃ ಕಲ್ಕತ್ತಾದವರಾದ ಡಾ. ರುಸ್ತುಂ ಭರೂಚ ಅಮೆರಿಕದ ಏಲ್ ಯೂನಿವರ್ಸಿಟಿಯಲ್ಲಿ ಹಲವು ವರ್ಷಗಳ ಕಾಲ ಪ್ರಾಧ್ಯಾಪಕರಾಗಿದ್ದು ಈಗ ಭಾರತಕ್ಕೆ ಮರಳಿ ಬಂದಿದ್ದಾರೆ. "Rehearsals in Revolution" ಹಾಗೂ "Theatre and the World" ಎಂಬುವು ಇವರ ಪ್ರಕಟಿತ ಕೃತಿಗಳು. "Ninasam a Cultural Alternative" ಎಂಬ ಲೇಖನ "Theatre and the World" ನಲ್ಲಿ ಸಂಕಲಿತವಾಗಿದೆ. ಕಳೆದ ಐದು ವರ್ಷಗಳಿಂದ ಹೆಗ್ಗೋಡಿಗೆ ಸತತ ಭೇಟಿ ನೀಡಿ ನೀನಾಸಮ್ ಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸಿ ಭರೂಚ ತಮ್ಮ ಲೇಖನ ಬರೆದಿದ್ದಾರೆ. ಇಪ್ಪತ್ತೈದು ಪುಟಗಳ ಈ ಇಂಗ್ಲಿಷ್ ಲೇಖನ ನೀನಾಸಮ್ ಬಗ್ಗೆ ಪ್ರಕಟವಾಗಿರುವ ಲೇಖನಗಳಲ್ಲೇ ಅತ್ಯಂತ ದೀರ್ಘವಾದದ್ದು ಮತ್ತು ವಿಮರ್ಶಾತ್ಮಕವಾದದ್ದು. ಅದರ ಸರಳ, ಸ್ಥೂಲ, ಸಂಗ್ರಹಾನುವಾದವನ್ನಷ್ಟೇ ಇಲ್ಲಿ ಕೊಡಲಾಗಿದೆ


● ಅನುವಾದಕ

ನಾಟಕ ತಂಡ ಊರ್ಜಿತವಾಗಲು ಹೆಗ್ಗೋಡು ಅಂಥ ದೊಡ್ಡ ಭರವಸೆಯೇನೂ ಅಲ್ಲ. ಆದರೆ ನೀನಾಸಮ್ ಸಂಸ್ಥೆ ತನ್ನ ಹುಟ್ಟಿನಿಂದ ಈವರೆಗೆ ಬೆಳೆದು ನಿಂತ ಪ್ರಮಾಣ ಮಾತ್ರ ಬೇರೆಯವರಿಗೇ ಇರಲಿ, ನೀನಾಸಮ್ ಸಂಸ್ಥೆಯ ಪ್ರೇರಕ ಶಕ್ತಿಯಾದ ವಿನಯಶೀಲ ದಾರ್ಶನಿಕ ಕೆ.ವಿ. ಸುಬ್ಬಣ್ಣನವರಿಗೆ ಅಚ್ಚರಿ ಹುಟ್ಟಿಸುವಂತಿದೆ.

ನೀನಾಸಮ್ ಬೆಳವಣಿಗೆಯಲ್ಲಿ ತಮ್ಮ ಪಾತ್ರವನ್ನು ಸುಬ್ಬಣ್ಣ ಎಷ್ಟೇ ಅಲ್ಲದ್ದು ಎಂದರೂ, ತಮ್ಮ ಸುತ್ತಲಿನ ಜನಸಮೂಹದಿಂದಲೇ ಇದೆಲ್ಲ ಸಾಧ್ಯವಾಯಿತು ಎಂದು ಹೇಳಿಕೊಂಡರೂ, ತಮ್ಮ ಸಮಾಜದೊಂದಿಗೆ ಸುಬ್ಬಣ್ಣ ಸಾಧಿಸಿಕೊಂಡಿರುವ ಗಾಢ ಸಂಬಂಧ ಅವರ ದರ್ಶನವನ್ನು ಕಟ್ಟಿರುವುದು ಸುಸ್ಪಷ್ಟ. ಸಾಮಾಜಿಕ ಸಂಸ್ಥೆಗಳಲ್ಲಿ ಸುಬ್ಬಣ್ಣನವರಿಗೆ ಇರುವ ನಂಬಿಕೆ ಆಳವಾದದ್ದು. ವೈಯಕ್ತಿಕ ಅಗತ್ಯಗಳನ್ನು ಸಾಮಾಜಿಕ ಕ್ರಿಯೆಗಳೂ ಆಗಿ ಪರಿವರ್ತಿಸುವ ಸುಬ್ಬಣ್ಣನವರ ಚಟುವಟಿಕೆಗಳಲ್ಲಿ 'ವೈಯಕ್ತಿಕ' ಮತ್ತು 'ಸಾಮಾಜಿಕ' ಅಭಿನ್ನವಾಗಿರುತ್ತವೆ. ರಂಗ ನಿರ್ದೇಶಕರಾಗಿ ತಮ್ಮ ಪ್ರಭಾವಳಿಯನ್ನು ಬೆಳೆಸಿಕೊಳ್ಳುತ್ತ ಹೋಗುವುದಕ್ಕಿಂತ ಹೆಚ್ಚಾಗಿ ಸುಬ್ಬಣ್ಣ ಭವಿಷ್ಯದಲ್ಲೂ ಗಟ್ಟಿಯಾಗಿ ನಿಲ್ಲಬಲ್ಲ ಸಂಸ್ಥೆಗಳ ನಿರ್ಮಾಣಕ್ಕೇ ಹೆಚ್ಚಿನ ಪ್ರಾಮುಖ್ಯ ನೀಡಿದ್ದಾರೆ.

ತಮ್ಮ ಅನೇಕ ಪ್ರತಿಭಾವಂತ ಸಮಕಾಲೀನರಂತೆ ಮೈಸೂರಿನಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಮುಗಿಸಿಯೂ ಸುಬ್ಬಣ್ಣ ಮೈಸೂರಿನಲ್ಲಿಯೇ ಉಳಿಯಲಿಲ್ಲ. ಅಥವಾ ಅದಕ್ಕೂ ದೊಡ್ಡ ನಗರವಾದ ಬೆಂಗಳೂರಿಗೆ ಹೋಗಲಿಲ್ಲ. ಹಳ್ಳಿಗೆ ಹಿಂತಿರುಗಿದರು. ಸಾಗರದಲ್ಲಿ ಕಾಲೇಜೊಂದನ್ನು ಸಂಸ್ಥಾಪಿಸಲು ಮುಂದಾದರು. ಮುಂದೆ ಪುಣೆಯ ಫಿಲ್ಮ್ ಇನ್‌ಸ್ಟಿಟ್ಯೂಟಿನಲ್ಲಿ ಚಲನಚಿತ್ರ ರಸಗ್ರಹಣ ಶಿಬಿರದಲ್ಲಿ ಪಾಲ್ಗೊಂಡು ವಾಪಸ್ಸಾದಾಗ ತಮ್ಮ ಊರಿನಲ್ಲಿ ಚಲನಚಿತ್ರ ಸಮಾಜವೊಂದನ್ನು ಸ್ಥಾಪಿಸಿದರು. ಹೀಗೆ ಸುಬ್ಬಣ್ಣ ತಾವು ಗಳಿಸಿಕೊಂಡದ್ದನ್ನೆಲ್ಲ ತಮ್ಮ ಸುತ್ತಲಿನವರೊಂದಿಗೆ ಹಂಚಿಕೊಳ್ಳುವ ವೈಯಕ್ತಿಕ ಪ್ರಕ್ರಿಯೆಯಲ್ಲೇ ಸಾಮಾಜಿಕ ಸಂಸ್ಥೆಗಳನ್ನೂ ಕಟ್ಟಿದರು.

ಸಾಮಾನ್ಯವಾಗಿ ಆದರ್ಶವಾದಿಗಳು, ದಾರ್ಶನಿಕರು, ಸಂಸ್ಥೆ ಸಂಘಟನೆಗಳಿಂದ ದೂರವೇ ಉಳಿದಿರುತ್ತಾರೆ. ಅದರಲ್ಲೂ ಕಲಾವಿದರು 'ಸ್ವತಂತ್ರ'ವಾಗಿ ಉಳಿಯಲು ಅಪೇಕ್ಷಿಸುತ್ತಾರೆ. ಅದು ಸುಬ್ಬಣ್ಣನವರ ಮಾರ್ಗವಲ್ಲ. ಸಂಘಟನೆಯ ಕೆಲಸಗಳೂ, ತಮ್ಮ ವೈಯಕ್ತಿಕ ಕಲಾಚಟುವಟಿಕೆಗಳಷ್ಟೇ ಅವರಿಗೆ ಮುಖ್ಯ. ಎಲೆ, ಅಡಿಕೆ, ತಂಬಾಕು ಮೆಲ್ಲುವ ಚಟದಷ್ಟೇ ತೀವ್ರವಾಗಿರುತ್ತದೆ ಅವರ ದುಡಿಮೆ. ಕಲೆಗಳನ್ನು ಕುರಿತಂತೆ ಗಾಂಧೀಜಿಯವರಿಗೆ ಅಂಥ ವಿಶೇಷವಾದ ತುಡಿತಗಳೇನೂ ಇರಲಿಲ್ಲ. ಆದರೂ ಸುಬ್ಬಣ್ಣನವರ ಕಾರ್ಯವಿಧಾನವನ್ನು ಗಾಂಧೀವಾದಿ ಎಂದು ಗುರುತಿಸಲು ನನಗೆ ಆಸೆಯಾಗುತ್ತದೆ. ವಿಕೇಂದ್ರೀಕರಣಕ್ಕೆ ಬದ್ಧತೆ, ಆರ್ಥಿಕ ಶಿಸ್ತು, ಸರಳತೆ, ಎಲ್ಲಕ್ಕಿಂತ ಹೆಚ್ಚಾಗಿ ಗ್ರಾಮವೊಂದನ್ನು ಮೂಲಭೂತ ಸಾಮಾಜಿಕ ಘಟಕವೆಂದು ಭಾವಿಸುವ ದೃಷ್ಟಿ - ಇವೆಲ್ಲ ಗಾಂಧಿಗೆ ಪ್ರಿಯವಾದ ಗುಣಗಳೇ. ಎಲ್ಲ ಚಟುವಟಿಕೆಗಳೂ ಹೊಸ ಅನ್ವೇಷಣೆಗಳೂ ಹಳ್ಳಿಗೇ ಬಂದು ಮುಟ್ಟಬೇಕು ಎಂದು ಗಾಂಧೀಜಿ ಕೂಡ ಹೇಳುತ್ತಿದ್ದರಷ್ಟೆ. ಧರ್ಮನಿರಪೇಕ್ಷ ಸಮಾಜವೊಂದರಲ್ಲಿ ನೀನಾಸಮ್‌ನ್ನು ಆಶ್ರಮವೆಂದು ಕರೆಯುವುದು ಆಭಾಸವಾಗಬಹುದು. ಆದರೆ, ಇಲ್ಲಿನ ಶಿಸ್ತು, ಬದ್ಧತೆ, ಸರಳ ಜೀವನ ಶೈಲಿ, ಸತತ ದುಡಿಮೆ ಇವುಗಳಿಂದಾಗಿ ನೀನಾಸಮ್‌ನ್ನು ಒಂದು 'ರಂಗಭೂಮಿ - ಆಶ್ರಮ' ಎಂದು ಕರೆಯುವುದು ಅಷ್ಟೇನು ಅನುಚಿತವಾಗಲಾರದು. ಹೀಗೆ ಹೇಳುವಾಗ ಗ್ರಾಮ ಜೀವನವನ್ನು ಕುರಿತ ಸುಬ್ಬಣ್ಣನವರ ದರ್ಶನ ಒಂದಿಷ್ಟೂ ರೊಮ್ಯಾಂಟಿಕ್ ಅಲ್ಲ - ಸ್ಪಷ್ಟವಾಗಿ ಗುರುತಿಸಿಕೊಳ್ಳಬೇಕು. ಅದು ಅವರ ಜನ್ಮಸ್ಥಳ. ಅವರ ಗದ್ದೆ, ತೋಟಗಳಿರುವ ಊರು. ಹಾಗಾಗಿ ಹಳ್ಳಿಯನ್ನೇ ಅವರು ಸಹಜವಾಗಿ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದಾರೆ. ಹಳ್ಳಿಯ ಮಣ್ಣು ಮತ್ತು ಮರಗಳು



ಅವರಿಗೆ ಕೇವಲ ಕಾವ್ಯದ ಪ್ರತಿಮೆಗಳಲ್ಲ; ಅಪ್ಪ ಒಬ್ಬ ರೈತನಾಗಿ ಬಾಳನ್ನೇ ನಿರ್ಧರಿಸಿ ರೂಪಿಸುವ ಭೌತಿಕ ವಸ್ತುಗಳು. ಈ ಅಸ್ತಿತ್ವವನ್ನು ಸುಬ್ಬಣ್ಣನವರು ಸಹಜವಾಗಿ ಒಪ್ಪಿಕೊಂಡಿರುವುದರಿಂದಲೇ ಅವರ 'ಜನಸಮೂಹ ಮೂಲ' ಚಟುವಟಿಕೆಗಳಿಗೆ ಅಂಥ ಚೈತನ್ಯ ಬಂದಿರುವುದು. ನೀನಾಸಮ್ ಅನ್ನು ಮತ್ತೊಂದು ಶಾಂತಿನಿಕೇತನವನ್ನಾಗಿ ಮಾಡುವುದರಲ್ಲಿ ಅವರಿಗೆ ಆಸಕ್ತಿ ಇಲ್ಲ. ನಿಜ, ನೀನಾಸಮ್ ಸೃಷ್ಟಿಯ ಹಿಂದೆ ಒಂದು ದೊಡ್ಡ ಆದರ್ಶವಿದೆ. ಆದರೆ, ಅದನ್ನೊಂದು ಜನವಿದೂರವಾದ, ಕೃತಕ ಕಿನ್ನರ ಲೋಕವನ್ನಾಗಿ ಮಾಡಿಲ್ಲ. ನೀನಾಸಮ್‌ನ ಮೌಲ್ಯ ಅದರ ದೈನಂದಿನ ಚಟುವಟಿಕೆಗಳಲ್ಲಿದೆಯೇ ಹೊರತು ಮಾನವತಾವಾದೀ ಪ್ರಭಾವಳಿಯಲ್ಲಾಗಲೀ ಅಥವಾ ನಿಸರ್ಗ ಸಾಮೀಪ್ಯದಲ್ಲಾಗಲೀ ಇಲ್ಲ. ಆದ್ದರಿಂದಲೇ ಮತ್ತೊಮ್ಮೆ ಹೇಳುತ್ತೇನೆ: ನೀನಾಸಮ್ ಒಂದು ಕೆಲಸಮಾಡುವ ಸ್ಥಳ.

ಎಂಥ ಕೆಲಸ? ಇದು ನಮ್ಮನ್ನು ನೀನಾಸಮ್‌ನ ದೈನಂದಿನ ರಂಗಚಟುವಟಿಕೆಗಳ ವಿವರಗಳಿಗೇ ಕೊಂಡೊಯ್ಯುತ್ತದೆ.... ನೀನಾಸಮ್ ರಂಗ ಶಿಕ್ಷಣ ಕೇಂದ್ರ, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಿಂದ ಪ್ರಭಾವಿತವಾಗಿದ್ದರೂ ಅವೆರಡರ ನಡುವಣ ವೈದೃಶ್ಯ ಸ್ಪಷ್ಟವಾಗಿದೆ. ಕೇಂದ್ರ ಸರಕಾರವು ದೆಹಲಿಯ ರಾಷ್ಟ್ರೀಯ ಶಿಕ್ಷಣ ಶಾಲೆಗಾಗಿ ಪ್ರತಿವರ್ಷ ಎಪ್ಪತ್ತೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿರುವುದರ ಹಿಂದಿನ ವಿವೇಚನೆ, ಔಚಿತ್ಯಗಳನ್ನು ನಾನಿಂದು ಪ್ರಶ್ನಿಸಬೇಕಾಗಿದೆ. ತಮ್ಮ ಸ್ಥಳೀಯ ಭಾಷೆ, ಸಂಸ್ಕೃತಿಗಳ ಬಗ್ಗೆ ಒಳನೋಟಗಳನ್ನು ಬೆಳೆಸಿಕೊಳ್ಳಬೇಕಾದ ಯುವ ಪ್ರತಿಭೆಗಳು ದೆಹಲಿಗೆ ಹೋಗಿ ಹಿಂದಿಯನ್ನು ಕಲಿಯಬೇಕೆಂದು ಅಪೇಕ್ಷಿಸಲಾಗುತ್ತಿದೆ. ದೆಹಲಿ ನಾಟಕ ಶಾಲೆಯ ಹಿಂದಿನ ''ರಾಷ್ಟ್ರೀಯ ಪರಿಕಲ್ಪನೆ''ಯೂ ಪ್ರಶ್ನಾರ್ಹವಾಗಿದೆ. ನೀನಾಸಮ್ ತನ್ನ ಸ್ಥಳೀಯ ಭಾಷೆಯಲ್ಲೇ ಜಗತ್ತಿನ ಅತ್ಯುತ್ತಮವಾದದ್ದಕ್ಕೆ ತೆರೆದುಕೊಂಡು ತನಗೆ ಅರ್ಥಪೂರ್ಣವಾದದ್ದನ್ನು ಸ್ಥಳೀಯ ಸಂಸ್ಕೃತಿಗೆ ಬೆಸೆಯುತ್ತಾ ಹೋಗುತ್ತದೆ. ಪಾಶ್ಚಾತ್ಯ ಆಧುನಿಕ ನಾಟಕಗಳ ಬಗ್ಗೆ ಅಥವಾ ಯಕ್ಷಗಾನದಂಥ ಪರಂಪರಾಗತ ಕಲೆಯ ಬಗ್ಗೆ ನೀನಾಸಮ್ ಇಟ್ಟುಕೊಂಡಿರುವ



"ರಮೇಶ್, ಈ ಜಗತ್ತಿನಲ್ಲಿ ನಿಜವಾದ ಪ್ರೇಮಿಗಳೆಂದರೆ ನಾವೇ...."
"ಅದ್ಹೇಗೆ ಸುಧಾ?"
"ಇಲ್ಲದಿದ್ರೆ ನಾವಿಬ್ರೂ ಒಟ್ಟಿಗೇ ಫೇಲ್ ಆಗ್ತಿದ್ವೇ?"

ವಿಮರ್ಶಾತ್ಮಕ ಧೋರಣೆ ಅರ್ಥಪೂರ್ಣವಾಗಿದೆ. 'ತಿರುಗಾಟ'ದ ನಾಟಕಗಳನ್ನು ಕೆಲವು ವಿಮರ್ಶಕರು ಅತಿಜನಪ್ರಿಯತೆಯ ಗೀಳಿನಿಂದ ಕೂಡಿದ್ದು ಎಂದು ಟೀಕಿಸಿದ್ದಾರೆ. ಆದರೆ, 'ತಿರುಗಾಟ'ದ ನಾಟಕಗಳು ಗಾಂಭೀರ್ಯದ ಹೆಸರಿನಲ್ಲಿ ತಲೆಚಿಟ್ಟು ಹಿಡಿಸುವಂಥವುಗಳಾಗಿರಬಾರದೆಂದು ನಿರ್ದೇಶಕರುಗಳು ಪ್ರಯತ್ನಿಸಿದ್ದಾರೆ. ಹಾಗೆಂದು 'ಅನಕ್ಷರಸ್ಥ'ರಿಗೆ ಮುಟ್ಟಲೇಬೇಕೆಂದು ತಮ್ಮ ರಚನೆಗಳನ್ನು ಅತಿಯಾಗಿ ಸರಳೀಕೃತಗೊಳಿಸಿಲ್ಲ. 'ತಿರುಗಾಟ' ನಾಟಕಗಳ ವೈವಿಧ್ಯವೂ ಗಮನಾರ್ಹವಾಗಿದೆ. ಶಾಕುಂತಲಾ, ಮೃಚ್ಛಕಟಿಕದಂಥ ಸಂಸ್ಕೃತ ನಾಟಕಗಳು; 'ಸಾಂಬಶಿವ ಪ್ರಹಸನ', 'ತುಘಲಕ್' ದಂಥ ಸ್ವತಂತ್ರ ಕನ್ನಡ ನಾಟಕಗಳು; 'ಮಿಸ್ ಸದಾರಮೆ'ಯಂಥ ಹಳೆಯ ಕನ್ನಡ ನಾಟಕಗಳ ಹೊಸ ರೂಪಾಂತರಗಳು, 'ಚಿದಂಬರ ರಹಸ್ಯ'ದಂಥ ಸುಪ್ರಸಿದ್ಧ ಕನ್ನಡ ಕಾದಂಬರಿಗಳ ನಾಟಕ ರೂಪಗಳು; ಶೇಕ್ಸ್‌ಪಿಯರ್, ಬ್ರೆಕ್ಟ್ ಮುಂತಾದ ಪಾಶ್ಚಾತ್ಯ ನಾಟಕಕಾರರ ಸುಪ್ರಸಿದ್ಧ ಕೃತಿಗಳು - ಹೀಗೆ ನೀನಾಸಮ್ ದೇಶೀಯ ಮತ್ತು ಅಂತರ್ದೇಶೀಯ ಕಲಾಕೃತಿಗಳನ್ನು ತನ್ನ ಸಾಂದರ್ಭಿಕ ಅಗತ್ಯಕ್ಕಾಗಿ ಅರ್ಥಪೂರ್ಣವಾಗಿ ದುಡಿಸಿಕೊಂಡಿದೆ. ನೀನಾಸಮ್ ಚಿತ್ರಸಮಾಜ ಪ್ರದರ್ಶಿಸುವ ಚಲನಚಿತ್ರಗಳಲ್ಲೂ ಇಂಥ ವೈವಿಧ್ಯವಿದೆ. ತಮ್ಮ ಅಕ್ಷರ ಪ್ರಕಾಶನದಲ್ಲೂ ಸುಬ್ಬಣ್ಣ ಅನೇಕ ಪೀಳಿಗೆಗಳ ಲೇಖಕರಾದ ಶಿವರಾಮ ಕಾರಂತ, ಶ್ರೀರಂಗ, ಅಡಿಗ, ಅನಂತಮೂರ್ತಿ, ಕಂಬಾರ, ಲಂಕೇಶ, ಜಯಂತ ಕಾಯ್ಕಿಣಿ, ವೈದೇಹಿ ಮುಂತಾದ ಲೇಖಕರ ನೂರಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ನೀನಾಸಮ್ ಜನಸ್ಪಂದನ ಯೋಜನೆಯ ಉದ್ದೇಶ ನೀನಾಸಮ್ ತಾನು ಹಲವು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದ ಚಟುವಟಿಕೆಗಳನ್ನು ಕರ್ನಾಟಕದ ಉಳಿದೆಲ್ಲ ಜಿಲ್ಲೆಗಳಿಗೂ ಹಬ್ಬಿಸುವುದೇ ಆಗಿತ್ತು. ನೀನಾಸಮ್‌ನ ಅಸಂಖ್ಯ ರಂಗ ಕಮ್ಮಟಗಳು, ಚಲನಚಿತ್ರ, ರಸಗ್ರಹಣ ಶಿಬಿರಗಳು ಮತ್ತು ಚಲನಚಿತ್ರೋತ್ಸವಗಳಲ್ಲಿ ಕರ್ನಾಟಕದಾದ್ಯಂತ ಕೃಷಿಕರು, ಕಾರ್ಮಿಕರು, ವಿದ್ಯಾರ್ಥಿಗಳು, ಪರಿಸರವಾದಿಗಳು, ಎಡಪಂಥೀಯ ಸಂಘಟನೆಗಳು, ಪರಿಶಿಷ್ಟ ಜಾತಿ, ಬುಡಕಟ್ಟುಗಳಿಗೆ ಸೇರಿದವರು, ಮೀನುಗಾರರು ಮುಂತಾಗಿ ವಿವಿಧ ಜಾತಿವರ್ಗಗಳಿಗೆ ಸೇರಿದ ಸಹಸ್ರಾರು ಮಂದಿ ಪಾಲ್ಗೊಂಡಿದ್ದಾರೆ. ಈ ಯೋಜನೆಗೆ ಫೋರ್ಡ್ ಪ್ರತಿಷ್ಠಾನ ಆರ್ಥಿಕ ನೆರವು ನೀಡಿದ್ದು ಅಲ್ಲಲ್ಲಿ ವಿವಾದಕ್ಕೆ ಕಾರಣವಾಗಿದೆ. ಆದರೆ, ನೀನಾಸಮ್ ಎರಡನೇ ಬಾರಿ ಈ ನೆರವನ್ನು ನಿರಾಕರಿಸಿದ್ದನ್ನು ಒತ್ತಿ ಹೇಳಬೇಕು. ಫೋರ್ಡ್ ಪ್ರತಿಷ್ಠಾನ ನೆರವು ನೀಡದಿದ್ದಾಗಲೂ ನೀನಾಸಮ್ ತನ್ನ ಚಟುವಟಿಕೆಗಳನ್ನು ತನ್ನ ಕಾಲಮೇಲೆ ನಿಂತುಕೊಂಡೇ ನಡೆಸಿಕೊಂಡು ಬರುತ್ತಿತ್ತಷ್ಟೆ. ಈ ಚಟುವಟಿಕೆಗಳಿಂದ ಕರ್ನಾಟಕದ ಇತರ ಭಾಗಗಳೂ ಸ್ಫೂರ್ತಿ ಪಡೆಯಲು ಫೋರ್ಡ್ ನೆರವು ಅನುವು ಮಾಡಿಕೊಟ್ಟಿತು. ಭಾರತದಲ್ಲಿ ಫೋರ್ಡ್ ಪ್ರತಿಷ್ಠಾನದ ವಿಶ್ವಾಸಾರ್ಹತೆಯನ್ನು ಸಮರ್ಥಿಸಿಕೊಳ್ಳಲು ನಾವು ನೀನಾಸಮ್‌ನ್ನು ಬಳಸಿಕೊಳ್ಳಬಾರದು. ಅಷ್ಟೇ ಅಲ್ಲ, ಫೋರ್ಡ್ ನೆರವಿನ ಸದುಪಯೋಗದ ಒಂದು ಅಪವಾದವನ್ನು ಮಾತ್ರ ನಾವು ನೀನಾಸ



[illegible] ನಿರ್ದೇಶನದ '[illegible] ಶಾಕುಂತಲ'

ಮನಸಲ್ಲಿ ಕಾಣುತ್ತೇವೆ. ಫೋರ್ಡ್ ಪ್ರತಿಷ್ಠಾನ ಇಂಡಿಯಾದಲ್ಲಿ ಹಲವಾರು ಸಂಸ್ಥೆಗಳಿಗೆ ಧನಸಹಾಯ ನೀಡಿದೆ. ಆದರೆ, ಈ ಸಂಸ್ಥೆಗಳು ತಮ್ಮ ಸ್ವಂತ ಶಕ್ತಿಯನ್ನು ರೂಪಿಸಿಕೊಳ್ಳುವುದರಲ್ಲಿ ವಿಫಲಗೊಂಡಿವೆ. ಅಷ್ಟೇ ಅಲ್ಲ, ಈ ಸಂಸ್ಥೆಗಳ ಯೋಗ್ಯತೆ, ಅಗತ್ಯತೆಗಳನ್ನು ಮೀರಿ ಅವುಗಳಿಗೆ ಹಣ ಸಂದಾಯವಾಗಿದೆ. ನಮ್ಮ ಕೆಲವು [illegible]ಗಳಲ್ಲಿ ಜನಪದ ಮತ್ತು ಸಾಂಪ್ರದಾಯಿಕ

ಕಲೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಫೋರ್ಡ್ ಪ್ರತಿಷ್ಠಾನದ ನೆರವಿನ ಸ್ವರೂಪ ಖಂಡಿತವಾಗಿಯೂ ಪುರಸ್ಕಾರ್ಹವಾಗಿದೆ. ನೀನಾಸಮ್‌ನ ನಿರ್ದಿಷ್ಟ ಉದಾಹರಣೆ ಹೇಳುವುದಾದರೆ ಅದು ಫೋರ್ಡ್ ಸಹಾಯದಿಂದ ನಾಶವಾಗಲಿಲ್ಲ. ಅದು ತನ್ನ ಮೂಲ ಮೌಲ್ಯಗಳನ್ನು ಉಳಿಸಿಕೊಳ್ಳಲು ಸಾಧ್ಯವಾದಂತೆ ತನ್ನ ಸಂಪನ್ಮೂಲಗಳನ್ನು ವೃದ್ಧಿಸಿಕೊಂಡಿತು. ಅಷ್ಟೇ ಅಲ್ಲ, ಅವುಗಳನ್ನು ಕರ್ನಾಟಕದ ಇತರ ಭಾಗಗಳೊಂದಿಗೆ ಹಂಚಿಕೊಂಡಿತು. ಒಂದು ನಿರ್ದಿಷ್ಟ ಯೋಜನೆ ಪೂರ್ಣಗೊಂಡ ಮೇಲೆ ಮತ್ತೆ ಫೋರ್ಡ್‌ನ ನೆರವಿಗೆ ಕೈಚಾಚಲಿಲ್ಲ.

ಭಾರತ ಸರ್ಕಾರ ಪ್ರೋತ್ಸಾಹಿಸುವ ಅಪಾರ ವೆಚ್ಚದ 'ಅಪನಾ ಉತ್ಸವ್' ಸಂಸ್ಕೃತಿಗೂ ನೀನಾಸಮ್ ಸಂಸ್ಕೃತಿಗೂ ಅಪಾರ ವ್ಯತ್ಯಾಸವಿದೆ. ಏಕೆಂದರೆ, ನೀನಾಸಮ್ ಎಂದೂ ಸಂಸ್ಕೃತಿಯನ್ನು ಮಾರಾಟದ ಸರಕೆಂಬಂತೆ ಪರಿಭಾವಿಸುವುದಿಲ್ಲ. ಅದು ನಗರ ಸಂಸ್ಕೃತಿಯನ್ನು ಹಳ್ಳಿಯವರಿಗಾಗಲೀ, ಗ್ರಾಮೀಣ ಸಂಸ್ಕೃತಿಯನ್ನು ಪಟ್ಟಣದವರಿಗಾಗಲೀ ಮಾರಾಟ ಮಾಡುವುದರಲ್ಲಿ ಉತ್ಸುಕವಾಗಿಲ್ಲ. ನೀನಾಸಮ್ ಚಟುವಟಿಕೆಗಳಲ್ಲಿ ಅಬ್ಬರವಿಲ್ಲ. ಮಹಾರಾಷ್ಟ್ರ ಮತ್ತು ಕರ್ನಾಟಕದ ಮಕ್ಕಳನ್ನು ಒಂದುಗೂಡಿಸಿ ಅದು ನಡೆಸಿದ ರಂಗ ಕಮ್ಮಟವನ್ನು ವಿಶೇಷವಾಗಿ ಪ್ರಸ್ತಾಪಿಸಬೇಕು. ನೀನಾಸಮ್ ಚಟುವಟಿಕೆಗಳು ಕೇವಲ ''ಪ್ರಾದೇಶಿಕ''ವಾಗಿಲ್ಲ ಎಂಬುದಕ್ಕೆ ಆ ಮಕ್ಕಳ ರಂಗಕಮ್ಮಟ ಸಾಕ್ಷಿಯಾಗಿದೆ.

ನೀನಾಸಮ್ ತತ್ವಗಳು ದೇಶದ ಉಳಿದೆಡೆ ಹಬ್ಬಲಿ ಎಂದು ಆಶಿಸೋಣ. ಸಂಸ್ಕೃತಿ ಪೋಷಣೆ ಮತ್ತು ಪ್ರಸಾರದ ಒಂದು ಮಹತ್ವದ ಪ್ರಯೋಗ ನೀನಾಸಮ್‌ನಲ್ಲಿ ಆಗುತ್ತಿದೆ. ಉಳಿದ ರಾಜ್ಯಗಳೂ ಇದನ್ನು ಕೇವಲ ಅನುಕರಿಸಬೇಕೆಂದಲ್ಲ. ಅವುಗಳು ತಮ್ಮ ತಮ್ಮ ಪರ್ಯಾಯಗಳನ್ನು ತಾವೇ ಕಂಡುಕೊಳ್ಳಬೇಕು. ''ರಾಷ್ಟ್ರೀಯ ಏಕತೆ'' ಎಂದರೆ ಇಡೀ ಭಾರತಕ್ಕೆ ಅನ್ವಯಿಸುವಂಥ ಒಂದೇ ಒಂದು ಸಂಸ್ಕೃತಿಯನ್ನು ನಿರ್ಮಿಸುವುದೆಂದಲ್ಲ. ಹಲವು ವಿಭಿನ್ನ ಸಂಸ್ಕೃತಿಗಳು ಸೇರಿ ಭಾರತೀಯ ಸಂಸ್ಕೃತಿ ಎನಿಸಿಕೊಂಡಿದೆಯೆಂಬುದನ್ನು ಮರೆಯದಿರೋಣ. ಇಂದಿನ ಅಗತ್ಯ ಈ ಹಲವು ಸಂಸ್ಕೃತಿಗಳ ಕೊಡುಕೊಳ್ಳುವಿಕೆ; ಪರಸ್ಪರ ಅರಿಯುವಿಕೆ. ನೀನಾಸಮ್‌ನಂಥ ಸಂಸ್ಥೆಗಳ ಮಹತ್ವವಿರುವುದು ಇಲ್ಲಿಯೇ. ●


'ರತ್ನಗರ್ಭ'

ಮಾರ್ಲೀ ಹವರ್ತ ಸಿಕ್ಕಿಬಿದ್ದಾಗ ತುಡುಗ ತಾನು ತಪ್ಪಿತಸ್ಥನಲ್ಲವೆಂದು ಸಾಧಿಸಲು ಏನು ಮಾಡಲೂ ಹಿಂದೆಮುಂದೆ ನೋಡುವುದಿಲ್ಲ. ಮಿಸ್ಸೌರಿಯ ಮೂವತ್ತೈದು ವರ್ಷದ ವಜ್ರಚೋರ ಕಿಂಬೊಮನ್ ಅಂಗಡಿಯೊಂದರ ಮೂರು ವಜ್ರಗಳನ್ನು ಕದ್ದು ಪೋಲೀಸರ ಅತಿಥಿಯಾದಾಗ ಅವುಗಳನ್ನು ಗುಳುಮ್ಮನೆ ನುಂಗಿಬಿಟ್ಟ. ಆದರೆ ಪತ್ತೆಯಂತ್ರ, ಆತ 'ರತ್ನಗರ್ಭ' ನೆಂಬುದನ್ನು ಎತ್ತಿ ತೋರಿಸಿತು. ಸರಿ, ಆಗಿನಿಂದ ಆತನ ಮೇಲೆ ಅಷ್ಟಗಾವಲು. ಕಕ್ಕಸಿಗೆ ಹೋದಾಗೊಮ್ಮೆ ಆತನ ಮಲದೊಂದಿಗೆ ಎರಡು ವಜ್ರಗಳು ಹೊರಬಿದ್ದವು. ಮೂರನೆಯದು ಮಾತ್ರ ದೊಡ್ಡ ಕರುಳಿನಲ್ಲಿ ಅತ್ತಿತ್ತ ಸರಿಯದೇ ಕುಳಿತುಕೊಂಡಿತು. ಅದು ಉಳಿದೆರಡರಂತೆ ತಂತಾನೇ ಹೊರಬರುವುದು ಅಸಾಧ್ಯವೆಂದ ವೈದ್ಯರು ಶಸ್ತ್ರಕ್ರಿಯೆಯೊಂದೇ ಆ ವಜ್ರವನ್ನು ಹೊರತೆಗೆಯಲು ಉಳಿದಿರುವ ಮಾರ್ಗವೆಂದರು. ನಾಲ್ಕು ಸಾವಿರ ಡಾಲರು ಬೆಲೆಯ ಈ ಮೂರನೆಯ ವಜ್ರವನ್ನು ಶಸ್ತ್ರಕ್ರಿಯೆಯ ಮೂಲಕ ಹೊರತೆಗೆಯಲು ತಗಲುವ ವೆಚ್ಚ ಒಂದು ಸಾವಿರ ಡಾಲರುಗಳಂತೆ. ಆದರೆ ಇಷ್ಟು ಹಣವನ್ನು ಮಂಜೂರು ಮಾಡಲು ಇಲಾಖೆ ಜಪ್ಪೆಂದರೂ ಒಪ್ಪದ ಕಾರಣ ವಜ್ರಚೋರನಿನ್ನು ಪೋಲೀಸು ಆತಿಥ್ಯವನ್ನನುಭವಿಸಬೇಕಾಗಿದೆ. ●

ಹೀಗಿದ್ದರು ರಾಜಾಜಿ...

1939ರ ಮಾತು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘದ ಸಮಾವೇಶ. ಆಗಿನ ಮದ್ರಾಸ್ ಪ್ರಾಂತ್ಯದ ಪ್ರಧಾನ ಮಂತ್ರಿ ರಾಜಾಜಿಯ ಅಧ್ಯಕ್ಷತೆಯಲ್ಲಿ (ಆಗ ರಾಜ್ಯಗಳ ಮುಖ್ಯಮಂತ್ರಿಗಳು 'ಪ್ರಧಾನ ಮಂತ್ರಿ' ಎಂದೆನಿಸಿಕೊಳ್ಳುತ್ತಿದ್ದರು.)

ಸಭೆಯನ್ನುದ್ದೇಶಿಸಿ ರಾಜಾಜಿ, ''ಬಹುದಿನಗಳಿಂದ ಇಂಥ ಅವಕಾಶಕ್ಕಾಗಿ ಕಾತರದಿಂದ ಕಾದಿದ್ದೆ. ನನ್ನ ವಿದ್ಯಾಮಂದಿರವಿದು. ಇಲ್ಲಿನ ಇಂಥ ಉತ್ಸವಕ್ಕೆ ನನ್ನನ್ನೇಕೆ ಕರೆಯುತ್ತಿಲ್ಲ ಎಂದು ಅಚ್ಚರಿಪಟ್ಟಿದ್ದೂ ಉಂಟು. ಪ್ರತಿ ವರ್ಷವೂ 'ಈ ಸಲ ಆಮಂತ್ರಣ ಬಂದೀತು' ಎಂದು ನಿರೀಕ್ಷಿಸುತ್ತಲೇ ಇದ್ದೆ. ಇಂಥ ಅವಕಾಶಕ್ಕಾಗಿ ನಾನೆಷ್ಟು ಹಪಹಪಿಸಿದ್ದೆನೆಂಬುದು ಯಾರಿಗೆ ಗೊತ್ತಿತ್ತು?



''ಸೋದರ-ಸೋದರಿಯರ, ನಿಜ ಹೇಳಬೇಕೆಂದರೆ ಇಂಥ ಅವಕಾಶವೊಂದು ಸನ್ಮಾನವೆ ಸರಿ. ನನಗಿದು ತೀರ ತಡವಾಗಿ ಸಿಕ್ಕುತ್ತಿದೆ. ನಾನೊಂದು ಪ್ರಾಂತದ ಪ್ರಧಾನಮಂತ್ರಿಯಾದ ಮೇಲೆಯೆ ನನ್ನನ್ನು ನೀವೆಲ್ಲ ಆಮಂತ್ರಿಸಿದ್ದೀರಿ. ನಾನು ಕೇವಲ ಈ ಕಾಲೇಜಿನ ಹಳೆ ವಿದ್ಯಾರ್ಥಿ ರಾಜಗೋಪಾಲಾಚಾರಿ ಆಗಿದ್ದಾಗ ಒಂದು ವೇಳೆ ಈ ಅವಕಾಶ ಪ್ರಾಪ್ತವಾಗಿದ್ದಿದ್ದರೆ ನಾನದನ್ನು ಈ ಪ್ರಧಾನಮಂತ್ರಿ ಪದಕ್ಕಿಂತಲೂ ಉನ್ನತವೆಂದು ಭಾವಿಸುತ್ತಿದ್ದೆ.

''ನನಗನಿಸುತ್ತಿರುವುದನ್ನು ಹೇಳಿಬಿಡುತ್ತೇನೆ: ನೀವಿಂದು ಒಬ್ಬ ಪ್ರಧಾನಮಂತ್ರಿಯನ್ನು ಸನ್ಮಾನಿಸುತ್ತಿದ್ದೀರಿ - ನಿಮ್ಮ ಕಾಲೇಜಿನ ಹಳೆ ವಿದ್ಯಾರ್ಥಿಯೊಬ್ಬನನ್ನಲ್ಲ. ಈ ರೀತಿ ಸ್ಪಷ್ಟವಾಗಿ ಹೇಳಿಬಿಡುವ ಮೂರ್ಖತನವನ್ನು ಯಾರಾದರೂ ಮಾಡುತ್ತಾರೆಯೆ? ಆದರೆ ಗೆಳೆಯರೆ, ನೀವು ದಯವಿಟ್ಟು ಪದವಿ ಮತ್ತು ಅಧಿಕಾರಗಳ ಪೂಜೆಗೆ ನಿಲ್ಲಬೇಡಿ...''

ರಾಜಾಜಿ ಸ್ಥಾನಮಾನದೆದುರು ಮಾನವೀಯತೆಯನ್ನೆಂದೂ ಕಡೆಗಾಣಿಸಲಿಲ್ಲ. ಅಧಿಕಾರಕ್ಕೆ ನೀಡುತ್ತಿದ್ದುದಕ್ಕಿಂತ ದೊಡ್ಡ ಸ್ಥಾನವನ್ನವರು ಮಾನವೀಯತೆಗೆ ನೀಡುತ್ತಿದ್ದರು. ಭಾರತದ ಶ್ರೇಷ್ಠ ಗ್ರಂಥಾಲಯ ವಿಜ್ಞಾನಿ ದಿವಂಗತ ಡಾ. ಎಸ್. ಆರ್. ರಂಗನಾಥನ್‌ರ ಅನುಭವ ನೋಡಿ: ರಾಜಾಜಿಯನ್ನವರು 1948ರಲ್ಲಿ ರಾಷ್ಟ್ರಸಂಘ ದಿನಾಚರಣೆಯ ಸಂದರ್ಭದಲ್ಲಿ ಭೇಟಿಯಾದರು. ಆ ಸಂದರ್ಭವೆಂದರೆ ವಿಶಿಷ್ಟ ವ್ಯಕ್ತಿಗಳ ಸಮಾವೇಶವೆ ಸೈ. ಜಗತ್ತಿನ ಅನೇಕ ರಾಜಕೀಯ ಮುತ್ಸದ್ದಿಗಳು ಮುಂದುಗಡೆ ವಿರಾಜಮಾನರಾಗಿದ್ದರು. ರಂಗನಾಥನ್ ಹಿಂದಿನ ಸಾಲಿನಲ್ಲೆಲ್ಲೊ ಕುಳಿತಿದ್ದರು. ಅವರು ಅಲ್ಲಿಗೆ ಹೋದದ್ದು ಕೇವಲ ರಾಜಾಜಿಯ ಭಾಷಣ ಕೇಳಲು.

''ನನ್ನನ್ನವರು ನೋಡಿದರು. ಅಷ್ಟೇ ಅಲ್ಲ, ಆ ಜನ ಸಮೂಹವನ್ನು ದಾಟಿಕೊಂಡು ದಾರಿ ಮಾಡಿಕೊಳ್ಳುತ್ತ ನನ್ನತ್ತ ಬಂದರು. 'ಈ ರಾಜಕೀಯ ನಾಯಕರ ಜಾತ್ರೆಯಲ್ಲಿ ನಿಮ್ಮದೇನು ಕೆಲಸ, ಪ್ರೊಫೆಸರುಗಳಿಗೆ?' ಎಂದರು ನಗುತ್ತ. 'ಈ ರಾಜನೈತಿಕರ ಜಾತ್ರೆಗೆ ಅಕೆಡೆಮಿಕ್ ಗಂಧದ ಲೇಪ ನೀಡಲು ಬಂದಿದ್ದೇವೆ' ಎಂದೆ. ಆ ನಂತರ ಎಲ್ಲರೂ ಒಂದು ಚಲಚ್ಚಿತ್ರ ಪ್ರದರ್ಶನದಲ್ಲಿ ಭಾಗಿಯಾದೆವು.

''ರಾಜಾಜಿ ಸ್ವಾಭಾವಿಕವಾಗಿ ಮೊದಲ ಸಾಲಿನಲ್ಲಿ ಕುಳಿತಿದ್ದರು. ನಾನು ಹತ್ತು ಸಾಲುಗಳ ಹಿಂದೆ ಒಂದೆಡೆ ಇದ್ದೆ. ಅವರ ಆಪ್ತಕಾರ್ಯದರ್ಶಿ ನನ್ನೆಡೆ ಬಂದರು. 'ಸಾಹೇಬರು ನಿಮ್ಮನ್ನು ಜ್ಞಾಪಿಸಿಕೊಂಡರು' ಎಂದರು. ನಾನು ಆತನೊಂದಿಗೆ ನಡೆದೆ.

''ರಾಜಾಜಿ ತಮಿಳಿನಲ್ಲಿ ಹೇಳಿದರು: 'ಇಲ್ಲಿಯೇ ಕುಳಿತುಕೊಳ್ಳಿ. ಪ್ರೊಫೆಸರ್ ಆಗಲಿ, ಗ್ರಂಥಾಲಯಾಧ್ಯಕ್ಷರಾಗಲಿ ಗವರ್ನರ್ ಜನರಲ್ಲರಿಗೆ ಏನು ಕಡಿಮೆ? ಹಿಂದೆ ಹೋಗಿ ಕುಳಿತುಕೊಳ್ಳುತ್ತೀರಲ್ಲ, ಯಾಕೆ ಇಲ್ಲಿ ಕುಳ್ಳಿರಲು ನಿಮಗೆ ನಾಚಿಕೆಯೆ?'

''ಹೇಳಿ, ಮಾನವೀಯ ಮೌಲ್ಯ ಮತ್ತು ಮಾನವೀಯ ಸಂಬಂಧಗಳಿಗೆ ಇದಕ್ಕಿಂತ ಶ್ರೇಷ್ಠ ಉದಾಹರಣೆ ಬೇರೆಲ್ಲಾದರೂ ಸಿಕ್ಕೀತೆ?'' ●

ಕ್ರಿಸ್‌ಮಸ್ ಐಲೆಂಡಿನ ಕೆಂಪು ಕನಸು...

● ವೃಷಭೇಂದ್ರಯ್ಯ

ಈ ದೇಶದಲ್ಲೆಲ್ಲೂ ನಿಮಗೆ ತೆರೆದ ಬಾಗಿಲುಗಳು ಸ್ವಾಗತಿಸುವುದಿಲ್ಲ. ಯಾವುದೇ ಮನೆಯ ಬಾಗಿಲು ತೆರೆಸಬೇಕೆಂದರೂ ಅದು ನಿಮಗೆ ಸುಲಭಸಾಧ್ಯದ ಮಾತಲ್ಲ. ಕಿಟಕಿಗಳೂ ಅಷ್ಟೇ: ಮುಚ್ಚಿಕೊಂಡು ಮುಗುಳ್ನಗುತ್ತಿರುತ್ತವೆ.

"ಯಾರ ಭಯ? ಕಳ್ಳ-ಕಾಕರದೆ?"

"ನಿಮ್ಮೆಣಿಕೆ ತಪ್ಪು."

"ಹಾಗಿದ್ದರೆ ಮತ್ತಿನ್ನೇನು?"

"ಅವರಿಗೆ ಕೆಂಪು ಏಡಿಗಳ ಭಯ"!

– ಈ ಮಾತು ನಿಮಗೆ ನಗೆಬರಿಸೀತು. ಆದರಿದು ನಿಜಸ್ಥಿತಿ.

ನೆಲಕ್ಕೆ ಹಾಸಿದ ಜಿಂಕೆಯ ಚರ್ಮದಂತೆ ಕಾಣುವ, ಹಿಂದೂ ಮಹಾಸಾಗರದ ದ್ವೀಪ ಕ್ರಿಸ್‌ಮಸ್ ಐಲೆಂಡ್. ಅಲ್ಲಿಯ ಜನಕ್ಕೆ ಮಳೆಗಾಲದ ಒಂದು ನಿರ್ದಿಷ್ಟ ಅವಧಿಯೆಲ್ಲ ಕಾಡುತ್ತದೆ 'ಕೆಂಪು ಕನಸು'. ರಸ್ತೆಗಳಲ್ಲಿ ಅವರು ಕಣ್ಣುಮಿಟುಕಿಸದೆ ನಡೆಯಬೇಕು. ಸೈಕಲ್ಲೇರಿ ಹೊರಟರೋ ಎಲ್ಲಿ, ಯಾವಾಗ ಕೆಂಪು ಏಡಿಯ ಬಿರುಸು ಮುಳ್ಳು ಟಯರನ್ನು ಟುಸ್ಸೆನಿಸುತ್ತದೋ. ಕಾರು ಉಳ್ಳವರಿಗಂತೂ ದುಬಾರಿ ಕೊರಗು - ಒಂದೆಡೆ ತುಟ್ಟಿ ಟಯರು ಬದಲಿಸುವ ಚಿಂತೆ; ಮತ್ತೊಂದೆಡೆ, ಬದಲಿಸಲು ಕೂತರೆ ಕೆಂಪು ಏಡಿ ಮೈಮೇಲೆ ಯಾವಾಗ ಎಲ್ಲಿ ಏರಿ ಕಚುಗುಳಿಯಿಡುತ್ತದೋ ಎಂಬ ಹೆದರಿಕೆ. ಒಂದೆರಡಾದರೆ ಹೊಡೆದೋಡಿಸಿಯಾರು; ಕಾಲಡಿ ಹೊಸಕಿಹಾಕಿಯಾರು. ಸಾವಿರ ಸಂಖ್ಯೆಯಲ್ಲಿ ಈ 'ಕೆಂಪು ಸೈನ್ಯ' ದಾಳಿ ಮಾಡಿದರೆ?

ಪ್ರತಿ ಚದರಡಿಗೊಂದರಂತೆ ಇಲ್ಲಿ ಕಾಣಸಿಗುವ ಕೆಂಪು ಏಡಿಗಳು ಈ 135 ಚದರ ಕಿಲೋಮೀಟರ್ ವಿಸ್ತಾರದ ದ್ವೀಪದಲ್ಲಿ ಎಷ್ಟಿದ್ದಾವು? ಒಂದು ಅಂದಾಜಿನಂತೆ 12 ಕೋಟಿಗಳಷ್ಟು! ಅಂದಮೇಲೆ ಕೇವಲ ಎರಡು-ಎರಡೂವರೆ ಸಾವಿರದಷ್ಟಿರುವ ಈ ದ್ವೀಪದ ನಿವಾಸಿಗಳಿಗೆ 'ಕರ್ಕಸ್ವಪ್ನ' ಕಾಡದಿನ್ನೇನು ಮಾಡೀತು?

ಇಲ್ಲಿ ದೊರೆಯುವ ಅಲ್ಪಸಂಖ್ಯಾತವಾದ ಇನ್ನಿತರ 14 ಪ್ರಭೇದದ ಏಡಿಗಳಿಗೆ ಹೋಲಿಸಿದರೆ ಈ ಕೆಂಪು ಏಡಿಗಳದೇ ಪ್ರಾಬಲ್ಯ. ಹೌದು, ಅವು ಒಂದು ನಿಶ್ಚಿತ ಅವಧಿಯಲ್ಲಿ ಕ್ರಿಸ್‌ಮಸ್ ಐಲೆಂಡನ್ನು ಆಳುತ್ತವೆ.


ಇಂಡೋನೇಶಿಯಾದ ಜಾವಾ ದ್ವೀಪದ ದಕ್ಷಿಣಕ್ಕೆ 360 ಕಿಲೋಮೀಟರು ಅಂತರದಲ್ಲಿರುವ ಪುಟ್ಟ ದ್ವೀಪ ಕ್ರಿಸ್‌ಮಸ್ ಐಲೆಂಡ್. ಇದರ ಮುಖ್ಯ ಸಂಪರ್ಕವೆಲ್ಲ ಪೂರ್ವಕ್ಕೆ ಸುಮಾರು 2000 ಕಿಲೋಮೀಟರ್ ದೂರದಲ್ಲಿರುವ ಆಸ್ಟ್ರೇಲಿಯದೊಂದಿಗೆ. ಉಷ್ಣವಲಯದ ಹವಾಮಾನವಿದೆಯಾದರೂ ಇಲ್ಲಿ ಮೈ ಅಂಟಂಟು ಬೆವರುವುದಿಲ್ಲ.

ಸುಣ್ಣಗಲ್ಲಿನ ದಿಣ್ಣೆಗಳಿಂದೊಡಗೂಡಿರುವ ಕ್ರಿಸ್‌ಮಸ್ ಐಲೆಂಡಿನ ಸಮುದ್ರ ತೀರಗಳು

ಒಂದು ರೀತಿಯಲ್ಲಿ ರಕ್ಷಣಾಕವಚಗಳಿದ್ದಹಾಗೆ. ಸಾಗರ ಜಲದ ಒತ್ತಿನಿಂದ ಆ ಭೂಪ್ರದೇಶ ವನ್ನವು ಕಾಪಾಡುತ್ತವೆ. ಅಲ್ಲಿಂದ ಒಳಪ್ರದೇಶ ದೆಡೆ ಸಾಗಿದರೆ ನಿಮಗೆ ಮೆಟ್ಟಿಲೇರುತ್ತ ಹೋದಂಥ ಅನುಭವ. ನಟ್ಟ ನಡುವಿನ ಸಮ ತಟ್ಟು ಪ್ರದೇಶ ಸಮುದ್ರಪಾತಳಿಯಿಂದ 200 ಮೀಟರ್ ಎತ್ತರದಲ್ಲಿದೆ. ವಸಾಹತುವಾಗಿ ಶತ ಮಾನ ಸಂದರೂ ಇಲ್ಲಿಯ ಮುಕ್ಕಾಲು ಪಾಲು ವರ್ಷಾರಣ್ಯಗಳು ವಾರ್ಷಿಕ 2000 ಮಿಲಿಮೀ ಟರ್ (78 ಅಂಗುಲ) ಮಳೆಯಿಂದ ನಳನಳಿಸು ತ್ತವೆ.

ಈ ದ್ವೀಪದ ಪ್ರಕೃತಿಯದು ವರ್ಣಮಯ ಸೊಬಗು. ವಿಹಂಗಮ ನೋಟದಲ್ಲಿದು ದಟ್ಟ ಹಸಿರಿನ ಕಾಡು. ಅದರ ನಡುವೆಯೇ ಬೆನ್ನುಹುರಿ ಯಂತೆ ರೈಲು ಮಾರ್ಗ ಕಂಡೀತು. ಅದು ಪಶ್ಚಿಮದಿಂದ ಪೂರ್ವದೆಡೆ ಸಾಗಿ ನಟ್ಟನಡುವೆ ಟಿಸಿಲೊಡೆದು ದಕ್ಷಿಣೋತ್ತರವಾಗಿ ಸಾಗುವಂ ಥದು. ಪ್ರಯಾಣಿಕರಿಗಲ್ಲ, ಸರಕು ಸಾಗಾಟಕ್ಕೆ ಈ ರೈಲು. ಕ್ರಿಸ್‌ಮಸ್ ಐಲೆಂಡಿನ ಪ್ರಮುಖ ಆದಾಯಮೂಲವಾದ ಫಾಸ್ಫೇಟ್ ಗಣಿಗಳಿಗೆ ಈ ರೈಲಿನ ಸಂಪರ್ಕ. ಉಳಿದಂತೆ ನಾಡಿನ ಉದ್ದಗ ಲಕ್ಕೂ ಸಂಚರಿಸಲು ಇಕ್ಕಟ್ಟಾದ ರಸ್ತೆಗಳಿವೆ. ದೇಶದ ಬಹುಪಾಲು ಗಣಿಗಳೇ ತುಂಬಿರುವುದ ರಿಂದ ಜನವಸತಿಯಿರುವುದು ಈಶಾನ್ಯದ ಮೂಲೆಯ ಸಿಲ್ವರ್‌ಸಿಟಿ ಮತ್ತು ಡ್ರಮ್‌ಸೈಟ್ (ಇಲ್ಲೊಂದು ವಿಮಾನ ನಿಲ್ದಾಣವಿದೆ)ಗಳಲ್ಲಿ ಮಾತ್ರ. ಸಿಲ್ವರ್‌ಸಿಟಿಯಿಂದ ವಾಯವ್ಯಕ್ಕೆ ಮೂವತ್ತು ಕಿಲೋಮೀಟರ್ ದೂರದಲ್ಲಿ ಸಾಗ ರತೀರದಲ್ಲಿರುವ 'ವಸಾಹತು' ಎಂದೇ ಕರೆಸಿಕೊ ಳ್ಳುವ ಪ್ರದೇಶದಲ್ಲಿ ಐರೋಪ್ಯ ಶ್ರೀಮಂತರು ವಾಸಿಸುತ್ತಾರೆ. ದ್ವೀಪದ ನೈಋತ್ಯಕ್ಕೆ ರಾಷ್ಟ್ರೀಯ ಉದ್ಯಾನವಿದೆ.

ಇಲ್ಲಿಯ ನಿವಾಸಿಗಳು ಈ ನೆಲದವರಲ್ಲ. ಗಣಿಗಳ ಒಡೆತನ ಪಡೆದ ಯುರೋಪಿಯನ್ನರು ಐಷಾರಾಮದಿಂದ ಬದುಕುತ್ತಿದ್ದರೆ, ಹೊಟ್ಟೆಪಾ ಡಿಗೆ ಗಣಿಗಳಲ್ಲಿ ದುಡಿಯಲು ಬಂದ ಚೀನಿ ಯರು, ಮಲೇಶಿಯನ್ನರು ಎಂದಿನಿಂದಲೂ ಬಡ ತನದ ರೇಖೆಯ ಅಡಿಯಲ್ಲೇ ಜೀವಸವೆಸುತ್ತಿ ದ್ದಾರೆ. ಜಗತ್ತಿನ ಇತರ ದೇಶಗಳ ಫಸಲಿನ ಹುಲುಸಿಗೆ ಗೊಬ್ಬರಕ್ಕಾಗಿ ಬೇಕಾದ ಫಾಸ್ಫೇಟ್ ಅಗೆಯುವ ಈ ಜನರದು ಅನಿವಾರ್ಯದ ದುಡಿಮೆ. ಅವರಿಗೆ ಇದನ್ನು ಬಿಟ್ಟರೆ ಬೇರೆ ಕೆಲಸ ಗೊತ್ತಿಲ್ಲ, ಮತ್ತು ಬೇರೆ ಯಾವ ಉದ್ಯೋ ಗಕ್ಕೂ ಇಲ್ಲಿ ಆಸ್ಪದವಿಲ್ಲ.



ನಿನಗೆ - ನನಗೆ

ಪೃಥ್ವಿ ಆಳುವ ಬಯಕೆ
ಕಾಲಿಲ್ಲದ ನಿನಗೆ
ಮನಸ್ಸು ಗೆಲ್ಲುವ ಕನಸು
ಹೃದಯವಿಲ್ಲದ ನನಗೆ

● ಕಲ್ಲೇಶ ಕುಂಬಾರ

ಜಗತ್ತಿನ ಬೇರೆಲ್ಲೂ ಕಾಣಸಿಗದ ಕೆಲವು ಪಕ್ಷಿ ಪ್ರಭೇದಗಳ ತವರು ಕ್ರಿಸ್‌ಮಸ್ ಐಲೆಂಡ್. ಸಾಗರಪಕ್ಷಿಯ ಎಂಟು ಜಾತಿಗಳು ಇಲ್ಲಿಯ ವೈಶಿಷ್ಟ್ಯ. ಹೊಂಬಣ್ಣದ ಬೋಸನ್ ಹಕ್ಕಿಯನ್ನು ನೋಡಲೆಂದೇ ದಿನವಿಡೀ ಕಾಯುತ್ತಾರಂತೆ ಇಲ್ಲಿಯ ಶ್ರೀಮಂತರು.

ಏಡಿಗಳ ಸಾಮ್ರಾಜ್ಯ ಇದು. ಬೃಹದ್ಗಾತ್ರದ ತೆಂಗೇಡಿ (Coconut crab) ಮೂರು ಕೇಜಿಗಳಷ್ಟು ತೂಗುವಂಥದು. ಹೇಳಿದ ಕೆಂಪು ಏಡಿ ಒಂದಡಿ ಉದ್ದ ಮತ್ತು ಅಷ್ಟೇ ಅಗಲದ್ದು. ಈ ಮೊದಲೇ ಹೇಳಿದಂತೆ, 12 ಕೋಟಿಗಳಷ್ಟಿರುವ ಈ ಕೆಂಪು ಏಡಿಗಳ ಒಟ್ಟು ತೂಕವೆಷ್ಟು ಗೊತ್ತೆ? ಎಂಟು ಸಾವಿರ ಮೆಟ್ರಿಕ್ ಟನ್‌ಗಳಷ್ಟು! ವರ್ಷಾಂತ್ಯಕ್ಕೆ ಆರಂಭವಾಗುವ ಮಳೆಗಾಲವೆಂದರೆ ಕೆಂಪು ಏಡಿಗಳ 'ಪ್ರಸವ ಪ್ರವಾಸ'ದ ಪ್ರಾರಂಭ. ಸಮತಟ್ಟಾದ ಒಳನಾಡಿನಿಂದ ಕೆಳಕ್ಕಿಳಿದು ಸಾಗರತೀರದ ಪ್ರದೇಶದೆಡೆ ಇವುಗಳ ದೌಡು. ಆಗೆಲ್ಲ ಕ್ರಿಸ್‌ಮಸ್ ಐಲೆಂಡ್ ಕೆಂಪು ರಗ್ಗು ಹೊದ್ದಂತಿರುತ್ತದೆ. ಕಾಡಿನಲ್ಲಿ ಗಾಳಿ-ಮಳೆಗೆ ಬಿದ್ದ ಹಸಿರೆಲೆ-ಹಣ್ಣುಗಳನ್ನು ತಿನ್ನುವುದರಲ್ಲಿ ತಲ್ಲೀನವಾಗಿರುವ ಕೆಂಪು ಏಡಿಗಳು ಅಲ್ಲೆಲ್ಲಾ ಕಸವಿರದಂತೆ ನೋಡಿಕೊಳ್ಳುತ್ತವೆ. ಒಂದು ರೀತಿಯಲ್ಲಿ ಇವು ಪರಿಸರ ನೈರ್ಮಲ್ಯದ ಜವಾಬ್ದಾರಿಯನ್ನು ನಿಭಾಯಿಸುತ್ತವೆನ್ನಬೇಕು. ಎಲೆಗಳು ಇತ್ಯಾದಿಗಳನ್ನವು ತಿಂದು ಹಾಕುವುದರಿಂದ ಮಳೆನೀರಿನಿಂದ ಅವೆಲ್ಲ ಕೊಳೆತು ರೋಗಕಾರಕ ಕ್ರಿಮಿಕೀಟಗಳು ಹುಟ್ಟಿ ಹರಡುವುದು ಅಸಂಭವ.

ಒಣ ಗಾಳಿಯ ದಿನಗಳಲ್ಲಿ ಗಿಡಮರಗಳು ಬೋಳಾಗಿ ನೆರಳು ಕಡಿಮೆಯಾಗುತ್ತದಷ್ಟೆ. ಆಗೆಲ್ಲ ಈ ಏಡಿಗಳಿಗೆ ಭೂಗತವಾಸ. ಮೊಳಕಾಲುಮಟ್ಟ ರಾಶಿ ಬೀಳುವ ಒಣ ಎಲೆಗಳ ಅಡಿಯಲ್ಲಿ ಅವಿತುಕೊಂಡು ಅಲ್ಲಿಯ ಆರ್ದ್ರತೆಯಲ್ಲಿವು ಜೀವಿಸುತ್ತವೆ. ಹೀಗೆಯೇ ಅವು ಹಲವು ತಿಂಗಳು ಬದುಕಬಲ್ಲವು. ಕೆಂಪು ಏಡಿ ಶುದ್ಧ ಸಸ್ಯಾಹಾರಿಯೇನಲ್ಲ. ಇಲ್ಲಿ ಕಾಣುವ ಆಫ್ರಿಕನ್ ಬಸವನಹುಳು ಮತ್ತು ಮೃತ ಸಾಗರ ಪಕ್ಷಿಗಳನ್ನವು ಚಪ್ಪರಿಸುತ್ತ ಭುಂಜಿಸುತ್ತವೆ. ಇನ್ನೂ ಆರಿರದ ಹೊಗೆಯುಗುಳುವ ಸಿಗರೇಟಿನ ತುಂಡುಗಳನ್ನು ಕಚ್ಚಿಕೊಂಡು ತಿನ್ನಲೆಳಸುವ ಕೆಂಪು ಏಡಿಗಳು ಕಂಡರೂ ಅಚ್ಚರಿಪಡಬೇಕಿಲ್ಲ.

ಹೆಕ್ಟೇರೊಂದರಲ್ಲಿ ಟನ್ನು ಭಾರದಷ್ಟು ಓಡಾಡಿಕೊಂಡಿರುವ ಕೆಂಪು ಏಡಿಗಳು ವರ್ಷಾರಣ್ಯದ ಭೂಮಿಯ ಸಾರಸತ್ವವನ್ನು ಕಾಪಾಡುವಲ್ಲಿ ಪ್ರಮುಖಪಾತ್ರ ವಹಿಸುತ್ತವೆ. ತಮ್ಮ ಬಿರುಸು ಮುಳ್ಳಿನಿಂದ ಭೂಮಿಯನ್ನು ಅಗೆದಗೆದು ಮಣ್ಣನ್ನು (ನೇಗಿಲಿನಂತೆ) ಎತ್ತಿಹಾಕುವ ಏಡಿಗಳು ತಿಂದೆಸೆಯುವ ಹಸಿರೆಲೆಗಳ ಅವಶೇಷಗಳು ವಿಸರ್ಜಿಸುವ ಮಲ ಈ ಭೂಮಿಗೆ ಒಳ್ಳೆಯ ಗೊಬ್ಬರವಾಗಿ ಪರಿಣಮಿಸುತ್ತದೆ.

ಕೆಂಪು ಏಡಿಗಳ 'ಪ್ರಸವ ಪ್ರವಾಸ' ಕಾಲ ಒಂಬತ್ತರಿಂದ ಇಪ್ಪತ್ತು ದಿನಗಳ ಅವಧಿಯದು. ಸಾಗರತೀರದೆಡೆ ಸಾವಿರ ಸಾವಿರ ಸಂಖ್ಯೆಯಲ್ಲಿ ಧಾವಿಸುತ್ತವೆ. ಬೀದಿಗಳು, ಬಯಲುಗಳು, ಬೆಟ್ಟ-ದಿನ್ನೆಗಳು, ಎಲ್ಲೆಂದರಲ್ಲಿ ಹಣ್ಣು ದೊಣ್ಣ ಮೆಣಸಿನಕಾಯಿಯ ಚೀಲ ಹರಿದು ಉರುಳಿದಂತೆ ಭಾಸವಾಗುವ ಹಾಗೆ. ಈ ಪ್ರಯಾಣ ಸಂದರ್ಭದಲ್ಲಿ ರೈಲಿನಡಿ, ವಾಹನಗಳಡಿ ಸಿಕ್ಕು ಅಪ್ಪಚ್ಚಿಯಾಗುವ ಕೆಂಪು ಏಡಿಗಳ ಸಂಖ್ಯೆ ಹತ್ತು ಲಕ್ಷದಷ್ಟು! ವಾತಾವರಣದಲ್ಲಿನ ಉಷ್ಣತೆಯ ಪ್ರಮಾಣದಲ್ಲಿ ಸ್ವಲ್ಪ ಏರಿಕೆಯುಂಟಾದರೂ

ಇಲ್ಲೀಗ ಬಂದೂಕಿನ ಸದ್ದಿಲ್ಲ

ಕ್ರಿಸ್‌ಮಸ್ ಐಲೆಂಡಿನಲ್ಲಿ ವಸಾಹತು ಸ್ಥಾಪನೆಯಾದದ್ದು 1888ರಲ್ಲಿ. ಅದುವರೆಗೂ ಅಲ್ಲಿ ಜನವಸತಿಯೇ ಇರಲಿಲ್ಲ. ವನ್ಯಸಂತತಿಗಳ ವಾಸಸ್ಥಾನವಾಗಿತ್ತದು. ಆಗೀಗ ಅತ್ತ ಸುಳಿದ ಸಾಹಸಿಗರ ನೌಕೆಗಳಿಂದಾಗಿ ಈ ದ್ವೀಪ ಯುರೋಪಿಗೆ ಹತ್ತಿರವಾಗತೊಡಗಿತು. ಈ ಸುಂದರ ಪ್ರದೇಶದ ಪತ್ತೆಯಾದಂದಿನಿಂದ ಇಲ್ಲಿ ಮನುಷ್ಯನ ಹೆಜ್ಜೆಗಳು ಮೂಡತೊಡಗಿದವು.

ಕಳೆದ ಶತಮಾನದ ಅಂತ್ಯಕಾಲವದು. ಪ್ರಕೃತಿಶಾಸ್ತ್ರಜ್ಞ ಸರ್ ಜಾನ್ ಮುರ್ರೆ ಕ್ರಿಸ್‌ಮಸ್ ಐಲೆಂಡಿನ ಕಲ್ಲು-ಮಣ್ಣುಗಳನ್ನು ಕೆದಕಿ ನೋಡಿದ. ಫಾಸ್ಫೇಟ್! ಸರಿ, ಶುರುವಾಯಿತು ಇಲ್ಲಿ ಯುರೋಪಿಯನ್ನರ ಆಧಿಪತ್ಯ. ಗಣಿಗಳ ತೋಡುವಿಕೆ, ಆಗೆತ. ಅರಿಯದ ಸದ್ದಿನಿಂದ ಗಾಬರಿಗೊಂಡವು ಇಲ್ಲಿಯ ಹಲವು ಜೀವಜಾತಿಗಳು. ಎರಡು ಅಪೂರ್ವ ಮೂಷಿಕ ಪ್ರಭೇದಗಳು ಇಲ್ಲಿಂದ ಕಾಲುಕಿತ್ತಿದವು. ಪಕ್ಷಿ ಸಂಕುಲಗಳು ಕಂಗಾಲಾದವು. ನೆಮ್ಮದಿ ಕಳಕೊಂಡ ಅವು ಬರಬರುತ್ತ ವಂಶಾಭಿವೃದ್ಧಿಯ ಕೆಲಸವನ್ನೇ ಮರೆತವು. ಬಂದೂಕಿನ ಭಯದಿಂದಾಗಿ ಕೆಲವು ಹಕ್ಕಿಗಳು ಸುರಕ್ಷಿತ ಜಾಗಕ್ಕೆ ಹಾರಿದವು.

ಈ ಜೀವವಿನಾಶದಿಂದಾಗಬಲ್ಲ ಅನಾಹುತದ ಅರಿವಿದ್ದ ಇನ್ನು ಕೆಲವು ಜೀವಶಾಸ್ತ್ರಜ್ಞರ ಪ್ರಯತ್ನದಿಂದಾಗಿ ಕ್ರಿಸ್‌ಮಸ್ ಐಲೆಂಡಿನಲ್ಲೀಗ ಬಂದೂಕಿನ ಸದ್ದು ಕೇಳುತ್ತಿಲ್ಲ. ಅಪರೂಪದ ಮೃಗ-ಖಗ ಸಂಕುಲಗಳು ಮತ್ತೆ ನೆಮ್ಮದಿಯಿಂದ ಬದುಕುವಂತಾಗಿವೆ. ಫಾಸ್ಫೇಟ್ ನಿಕ್ಷೇಪ ದಿನೇ ದಿನೇ ಕಡಿಮೆಯಾಗುತ್ತಿದೆ. ಅದರ ಕೊನೆಯ ಅಣುವೂ ಶೋಧಿಸಲ್ಪಟ್ಟ ಮೇಲೆ ಕ್ರಿಸ್‌ಮಸ್ ಐಲೆಂಡನ್ನು ಪಕ್ಷಿಧಾಮ-ಪ್ರಾಣಿಧಾಮವನ್ನಾಗಿಸುವ ಹೆಬ್ಬಯಕೆ ಇದರ ಅಧಿಪತಿಗಳಿಗೆ. ಕೆಂಪು ಏಡಿಗಳ [Gecarcoidea natalis] ಈ ನಾಡಿಗೆ ಪ್ರವಾಸಿಗರ ನುಗ್ಗಲು ಜಾಸ್ತಿಯಾಗುವ ದಿನಗಳು ದೂರವಿಲ್ಲ.

ಇವು ಚಟಪಟ ಒದ್ದಾಡಿ ಸಾವಿನ ಮನೆ ಸೇರುತ್ತವೆ. ಆದರೂ ಈ ಸಾವಿನ ಪ್ರಮಾಣ ಅವುಗಳ ಒಟ್ಟು ಸಂಖ್ಯೆಯ ಶೇಕಡಾ ಒಂದರಷ್ಟು ಎನ್ನುತ್ತಾರೆ ಪ್ರಾಣಿಶಾಸ್ತ್ರಜ್ಞರು. ಕೆಲದಿನಗಳಲ್ಲೇ ಒಂದಕ್ಕೆ ಸಾವಿರವಾಗಿ ಹುಟ್ಟಿಬರುತ್ತವಲ್ಲ ಕನಕಾಂಬರದಂತೆ ಕಂಗೊಳಿಸುವ ಮರಿಗಳು.

ಆ ಅವಧಿಯ ಅಮವಾಸ್ಯೆ ಕಳೆದು ಬಿದಿಗೆಯ ಚಂದ್ರ ಕಾಣಿಸಿಕೊಂಡಂದಿನಿಂದ ಸಾಗರತೀರಕ್ಕೆ ಹೊರಡುವ ಹೆಣ್ಣು ಏಡಿಗಳ ಬೆಂಗಾವಲಾಗಿ ನಡೆಯುತ್ತವೆ ಗಂಡು ಏಡಿಗಳು. ಕುತ್ತುಗಳೆಲ್ಲ ಕಳೆದು ಬದುಕಿದರೆ ಈ ಏಡಿಗಳ ಆಯುಸ್ಸು ಗರಿಷ್ಠ ಹದಿನೈದು ವರ್ಷಗಳಂತೆ. ಆಗ ಇದರ ಉದ್ದ 12ಸೆಂಟಿಮೀಟರು, ಅಗಲ 10ಸೆಂಟಿಮೀಟರುಗಳು. ಈ ದೌಡಿನಲ್ಲಿ ಹೆಚ್ಚಾಗಿ ಕಾಣುವವೆಂದರೆ ಆರರಿಂದ ... ಸೆಂಟಿಮೀಟರುಗಳ ಉದ್ದಗಲದ ಹೆಣ್ಣುಗಳು.


ಈ ಪ್ರಸವ ಪ್ರವಾಸ ತುಂಬ ಕ್ರಮಬದ್ಧ. ಬಿಸಿಲು ಏರುವುದರೊಳಗೇ ಸಾಧ್ಯವಾದಷ್ಟು ಅಂತರ ಕ್ರಮಿಸಿ ನೆರಳಲ್ಲಿ ಅವಿತಿಟ್ಟುಕೊಂಡು ವಿಶ್ರಮಿಸುತ್ತವೆ. ಬಿಸಿಲಿಳಿದ ಮೇಲೆ ಮತ್ತೆ ಹೊರಟು ನಿರ್ದಿಷ್ಟ ...ವನ್ನು ದಾಟುತ್ತವೆ. ಗಂಡಿಗೆ ಸಾಗರತೀರ ಸೇರಲು ಐದರಿಂದ ಏಳು ದಿನಗಳು ಸಾಕು. ಹೆಣ್ಣಿಗೆ ಒಂಬತ್ತು ದಿನಗಳಾದರೂ ಬೇಕು. ಸಾಗರತೀರ ಸೇರಿದಾಗಿನ ಇವುಗಳ ಸಂಭ್ರಮ ನೋಡಬೇಕು. ಪ್ರವಾಸ ಕಾಲದಲ್ಲಿ ಕಳೆದುಕೊಂಡ ಆರ್ದ್ರತೆ ಮತ್ತು ದೇಹದ

ಲ್ಲಿನ ಲವಣಾಂಶವನ್ನು ಮರಳಿ ಪಡೆಯಲು ನೀರಲ್ಲಿ ಮುಳುಮುಳುಗಿ ಏಳುತ್ತವೆ. ಆಮೇಲೆ ಹಸಿಮರಳೋ ಒದ್ದೆಗಲ್ಲೋ ಇವುಗಳ ಹಾಸಿಗೆ. ಹೊಟ್ಟೆಯಡಿಯ ರೋಮಗಳಿಂದ ನೀರು ಹೀರಿಕೊಳ್ಳುತ್ತ ಮಿಲನ ಕಾಲವನ್ನು ಎದುರುನೋಡುತ್ತವೆ.

ಸಾಗರತೀರ ಸೇರಿದ ಮೇಲೆ ಶುರುವಾಗುತ್ತದೆ ವಸಾಹತು ಸ್ಥಾಪನೆಯ ಹೋರಾಟ. ಗಂಡುಗಳು ಸುರಕ್ಷಿತ ಸ್ಥಳವನ್ನಾಯ್ದು ವಸತಿಹೂಡುವಲ್ಲಿ ಪೈಪೋಟಿ ನಡೆಸುತ್ತವೆ. ಸಮಬಲದ ಗಂಡುಗಳು ಹತ್ತು ನಿಮಿಷಗಳವರೆಗೆ ಜೀವದ ಹಂಗು ದೊರೆದು ಕಾದಾಡುತ್ತವೆ. ಸೋತ ಗಂಡು ಬೇರೆ ಜಾಗ ಅರಸಿ ಓಡತೊಡಗಿದಂತೆಯೇ ವಿಜಯಿಯ ಪ್ರೇಯಸಿ ಪ್ರಿಯಕರ ಹೂಡಿದ ಠಾಣ್ಯದಲ್ಲಿ ಸೇರಿ ಸಾರ್ಥಕಭಾವ ತಾಳುತ್ತದೆ. ಆ ಸುಖದ ಸುಪ್ಪತ್ತಿಗೆಯಲ್ಲಿ ಗಂಡು-ಹೆಣ್ಣುಗಳು ರಮಿಸುತ್ತವೆ. ಸಂಭೋಗಾನಂತರ ಗಂಡು ಸಾಗರಜಲದಲ್ಲಿ ಮುಳುಗೆದ್ದು ವರ್ಷಾರಣ್ಯದ ಸಮತಟ್ಟು ಪ್ರದೇಶದೆಡೆ ಗಡಿಬಿಡಿಯಿಂದ ಸಾಗುತ್ತದೆ.

ಮುಂದಿನ ಹನ್ನೆರಡು ದಿನಗಳ ಕಾಲ ಬಸಿರಿ ಏಡಿಯ ಪಾಲಿಗೆ ಆತಂಕದ ಅವಧಿ. ಅದರ ಬಾಚಿಕೊಂಡ ಹೊಟ್ಟೆಯಿಂದ ಎದೆಗೂಡಿನವರೆಗೂ ಸಾವಿರಾರು ಮೊಟ್ಟೆಗಳು ಬೆಳೆಯತೊಡಗುತ್ತವೆ. ಸಾಗರತೀರದುದ್ದಕ್ಕೂ ಇಂಥ ಲಕ್ಷಾಂತರ ಬಸಿರಿಯರು ವಂಶಾಭಿವೃದ್ಧಿಯ ಕಾರ್ಯದಲ್ಲಿ ನಿರತರು.

ಪ್ರಿಯಕರ ಕಟ್ಟಿಕೊಟ್ಟ ಗೂಡಿನಿಂದ ಸಂಜೆ ಸಮಯಕ್ಕೆ ಇವು ಹೊರಟವೆಂದರೆ ಮರಿಯಿಕ್ಕುವ ಕಾಲ ಸನ್ನಿಹಿತವೆಂದೇ ಅರ್ಥ. ಸಮುದ್ರತೀರದಲ್ಲಿ ರಕ್ತ ಹೆಪ್ಪುಗಟ್ಟಿದಂತೆ ಕಾಣುವ ಲಕ್ಷಾಂತರ ತಾಯಂದಿರು ಹೊಟ್ಟೆ ಮೇಲೆ ಮಾಡಿಕೊಂಡು ನೀರಲ್ಲಿ ತೇಲಾಡಿ ಒತ್ತಿಬರುವ ತೆರೆಗಳ ಕೂಡ ಆಟವಾಡುತ್ತಾರೆ. ಇದೇ ಅವುಗಳ ಹೊಟ್ಟೆಯಿಂದ ಮೊಟ್ಟೆ ಹೊರಬಿದ್ದು ಮರಿಗಳು ಕಾಣಿಸಿಕೊಳ್ಳುವ ಮುಹೂರ್ತ. ಮರಿಹಕ್ಕಿಗಳು ಹಸಿವಿನಿಂದ ಕೂಗುವ ಹಾಗೆ ಒಮ್ಮೆಲೇ ಧ್ವನಿ ಹೊರಡಿಸುತ್ತ ಬೇನೆ ತಿನ್ನುವ ಈ ಹೆಣ್ಣುಗಳ ಅರಚಾಟ ನಿಂತಿತೆಂದರೆ ಪ್ರಸವಪ್ರಕ್ರಿಯೆ ಪೂರ್ತಿಯಾದಂತೆ.



ಯಾವ 'ಭಜನಾ' ಮಂಡಳಿ ?!

ಗೂಡಿನಲ್ಲಿ ಮೊದಲ ಕೆಲದಿನಗಳಲ್ಲಿ ಭೂತಗನ್ನಡಿಯಿಟ್ಟು ನೋಡಿದರೆ, ಪಾಕದಲ್ಲದ್ದಿ ಎಸೆದ ಜಿಲೇಬಿಯ ತುಂಡುಗಳಂತೆ ಕಂಡುಬರುತ್ತವೆ ಎಳೆಯ ಮರಿಗಳು. ಆ ನಂತರ ಶುರುವಾಗುತ್ತದೆ ತಾಯಿ-ಮಕ್ಕಳ ಮರು ಪ್ರಯಾಣ. ಹೆರಿಗೆ ಆಸ್ಪತ್ರೆಯಿಂದ ಮನೆಗೆ ಬರುವ ಮಡದಿ-ಮಗುವನ್ನು ಸ್ವಾಗತಿಸುವ ಮನುಷ್ಯನ ಸಂಭ್ರಮಕ್ಕೂ ಮೀರಿದ್ದು ಗಂಡು ಏಡಿಯ ಸಡಗರ. ಸಾಗರತೀರದಿಂದ ಆ ಸುಣ್ಣಗಲ್ಲಿನ ಮೇರೆದಾಟಿ ಹೊರಟ ಕರ್ಕ ಸಂತಾನ ವರ್ಷಾರಣ್ಯದ ಸಮತಟ್ಟು ಪ್ರದೇಶವನ್ನು ತಲುಪಲು ಬೇಕಾದ ಅವಧಿ ನಾಲ್ಕರಿಂದ ಏಳುದಿನಗಳು. ಈ ಪ್ರಯಾಣದಲ್ಲಿ ಒಂದು ತಾಯಿಯ ಸಾವಿರಕ್ಕೆ ಸಾವಿರ ಮರಿಗಳೂ ಮನೆ ಸೇರುವುದು ಅಸಾಧ್ಯದ ಮಾತು. ದಾರಿಯಲ್ಲೇ ಕೆಲವು ಅಸುನೀಗಿದರೆ ಇನ್ನು ಕೆಲ ಎಳೆಮರಿಗಳು ಹಕ್ಕಿ-ಇರುವೆಗಳಿಗೆ ಬೇಟೆಯಾಗುತ್ತವೆ.

ಮೋರೆ ಎಂದು ಕರೆಯಲ್ಪಡುವ ಹಾವು ಮೀನುಗಳು ಈ ಮರಿಗಳಿದ್ದಲ್ಲೇ ಸುಳಿದಾಡುತ್ತಿರುತ್ತವೆ. ಇತರ ಜಾತಿಯ ಏಡಿಗಳಿಗಂತೂ ಈ ಕೆಂಪುಮರಿಗಳು ಸ್ವಾದಿಷ್ಟ ಆಹಾರ. ಒಂದು ಸಮಾಧಾನದ ಸಂಗತಿಯೆಂದರೆ ಕೆಂಪು ಏಡಿಗಳು ಮನುಷ್ಯನಿಗೆ ಖಾದ್ಯ ಯೋಗ್ಯವಾಗಿಲ್ಲದಿರುವುದು.

ಮೊಟ್ಟೆಯಿಂದ ಹೊರಬಂದ ಲಾರ್ವಾ ಮುಂದಿನ 25 ದಿನಗಳ ಕಾಲ ಸಮುದ್ರದಲ್ಲೇ ಕಾಲಕಳೆಯುತ್ತದೆ. ನಂತರ ಬಿಡುಗಣ್ಣ ಹುಳುವಿನ ರೂಪಧರಿಸಿ ದಡದಲ್ಲಿ ತಿರುಗಾಡತೊಡಗುತ್ತದೆ. ಈ ಅವಸ್ಥೆಯಲ್ಲಿ ಅದು ಏಡಿಯಂತೆ ಕಾಣುವುದಿಲ್ಲ. ಆ ಘಾಸಲೆಯಲ್ಲಿ ಸಮುದ್ರಸ್ನಾನ ಮಾಡುವವರಿಗೆ ಮೈಚುಚ್ಚುವಂತೆ ಮಾಡುವ ಈ ಹುಳು ಕೆಂಪು ಇರುವೆಯಂತೆ ಚರ್ಮವನ್ನು ಕಚ್ಚಿ ಹಿಡಿದು ಕೊಡುತ್ತದೆ. ವಾರವೊಂದರ ನಂತರ ಪುಟ್ಟ ಏಡಿಯಾಗಿ ರೂಪಾಂತರಗೊಳ್ಳುವ ಇದು ಐದು ಮಿಲಿಮೀಟರ್ ಉದ್ದ ಬೆಳೆದಾಗ ಸಮುದ್ರತೀರದಿಂದ ಹೊರಟು ವರ್ಷಾರಣ್ಯದ ಸಮತಟ್ಟು ಜಾಗದೆಡೆ ಪ್ರಯಾಣ ಬೆಳೆಸುತ್ತದೆ.

ಹತ್ತಾರು ಕಂಟಕಗಳನ್ನು ಕಂದಕಗಳನ್ನು ಪಾರುಮಾಡಿ ಜನವಸತಿಯಿರುವಲ್ಲಿಗೆ ಬಂದು ಸೇರುವ ಈ ಮರಿಸೈನ್ಯದಿಂದ ಮಾತ್ರ ಮನುಷ್ಯ ತಪ್ಪಿಸಿಕೊಳ್ಳುವಂತಿಲ್ಲ. ಬಾಗಿಲು-ಕಿಟಕಿಗಳು ಮುಚ್ಚಿದ್ದರೆ ದೊಡ್ಡ ಏಡಿಗಳಿಗೆ ಒಳಪ್ರವೇಶಕ್ಕೆ ಅಡ್ಡಿ. ಈ ಅರ್ಧಸೆಂಟಿಮೀಟರ ಅಗಲ ಉದ್ದದ ಮರಿಗಳಿಗೇನು? ಎಂಥ ಚಿಕ್ಕ ರಂಧ್ರವಾದರೂ ಸರಿ ಮನೆಯೊಳಗೆ ಸೇರಿಕೊಳ್ಳುತ್ತವೆ. ಆಮೇಲೆ ಅಡಿಗೆಮನೆ, ಬಚ್ಚಲುಮನೆ, ಮಲಗುವ ಕೋಣೆ ಎಲ್ಲೆಂದರಲ್ಲಿ ಅಡ್ಡಾಡಿ ನಿವಾಸಿಗಳನ್ನು ನಡುಗಿಸುತ್ತವೆ. ಆಗ ಪ್ರಾರಂಭ ಕ್ರಿಮಿನಾಶಕಗಳ ಸಿಂಪರಣೆಯಿಂದ ಇವುಗಳ ಮಾರಣ ಹೋಮ.

ಇಷ್ಟಕ್ಕೂ ಮೀರಿ ಬದುಕುಳಿವವುಗಳ ಸಂಖ್ಯೆ ಲೆಕ್ಕಕ್ಕೆ ಸಿಕ್ಕದ್ದು. ಆದರೆ ಮಳೆಗಾಲದ ನಂತರ ಬರುತ್ತದಲ್ಲ ದುಷ್ಟ ಬೇಸಿಗೆ. ವಾತಾವರಣದಲ್ಲಿ ಆರ್ದ್ರತೆ ಕಡಿಮೆಯಾಗತೊಡಗಿದಂತೆ ಅದನ್ನರಸಿಕೊಂಡು ನೆಲದ ಆಳವನ್ನು ಸೇರಿಕೊಳ್ಳುವ ಪ್ರಯತ್ನ. ಆದರೆ ಇದರಲ್ಲಿ ಸಫಲವಾಗುವ ಏಡಿಗಳು ಕಡಿಮೆ. ಬೆಳೆದವು ಮಾತ್ರ ಬದುಕಬಲ್ಲವು. ಬಿಸಿಲತಾಪಕ್ಕೆ ಒದ್ದಾಡಿ ಗತಪ್ರಾಣವಾಗುವ ಮರಿ ಏಡಿಗಳ ಸಂಖ್ಯೆ ಜಾಸ್ತಿ. ನಮ್ಮ ಮಲೆನಾಡುಗಳಲ್ಲಿ ಬೇಸಿಗೆಯಲ್ಲಿ ಕಾಣುವ ಸತ್ತ ಜಿಗಣೆ (ಲೀಚ್)ಗಳ ಹಾಸಿಗೆಯಂತೆ ಕ್ರಿಸ್‌ಮಸ್ ಐಲೆಂಡಿನ ಅರಣ್ಯದಲ್ಲಿ ಹಾಸಲ್ಪಡುತ್ತದೆ 'ಕೆಂಪು ಕಂಬಳಿ.' ●

ಅತಿಭಯಂಕರ ಕಾಯಿಲೆ

ಒಬ್ಬಮನುಷ್ಯ, ತನಗೆ ಅತಿಭಯಂಕರ ಕಾಯಿಲೆ ಇದೆಯೆಂದೂ, ಅದರ ಹೆಸರು ಕೂಡ ಹೇಳಬಾರದೆಂದೂ, ಅದರಿಂದಾಗಿ ತನಗೆ ಕೆಲಸ ಮಾಡಲು ಅಸಾಧ್ಯವೆಂದೂ ಹೇಳಿಕೊಂಡು ಭಿಕ್ಷೆಬೇಡಿ ಜೀವನ ಸಾಗಿಸುತ್ತಿದ್ದ. ಅದನ್ನು ಕೇಳಿದವರು ಅವನಿಗೇನು ಕಾಯಿಲೆ ಎಂದು ವಿಚಾರಿಸಲು ಹೋಗದೆ ಭಿಕ್ಷೆ ಹಾಕಿ ಹೋಗಿಬಿಡುತ್ತಿದ್ದರು.

ಒಬ್ಬ ಮಾತ್ರ, ಅವನ ಕಾಯಿಲೆ ಯಾವುದೆಂದು ತಿಳಿಯಲೇಬೇಕೆಂಬ ಹಟದಿಂದ ಭಿಕ್ಷುಕನನ್ನು ಹಿಂಬಾಲಿಸಿ ಕಾಯಿಲೆಯ ಹೆಸರು ಹೇಳಲು ಒತ್ತಾಯಿಸಿದ. ಕೊನೆಗೆ ಭಿಕ್ಷುಕ ಹೇಳಿದ: ''ಆ ಭಯಂಕರ ಕಾಯಿಲೆಯ ಹೆಸರು ಆಲಸ್ಯ ಮತ್ತು ಮೈಗಳ್ಳತನ!''

ಸಂಗ್ರಹ: ಸುಧಾ ಭಟ್

ಸಾಧು ವಾಸ್ವಾನಿಯವರ ಕಿರುಗತೆಗಳು

ಸಂಗ್ರಹಾನುವಾದ : *ಸಂಪಟೂರ ವಿಶ್ವನಾಥ್*

ಮಗು ಮಾತು

ಸಾಹುಕಾರ್ ಸಣ್ಣಪ್ಪ, ಸಂಜೆ, ಸುಸ್ತಾಗಿ ಮನೆಗೆ ಬಂದರು. ಆರಾಮ ಕುರ್ಚಿಯಲ್ಲಿ ಕಾಲು ಚಾಚಿ ಕುಳಿತು ಹುರಿಗಾಳನ್ನು ಬಾಯಿಗೆ ಎಸೆದು ಕೊಳ್ತಾ ಸಂಜೆ ಪೇಪರನ್ನು ನೋಡಲಾರಂಭಿಸಿದರು. ಸಣ್ಣಪ್ಪನವರ ಮಗ ಸುನೀಲ ನಿಮಿಷಕ್ಕೊಂದು ಪ್ರಶ್ನೆ ಕೇಳ್ತಾ ಇದ್ದ. ಅವನಿಗೆ ಉತ್ತರ ಹೇಳುವಷ್ಟು ಸಹನೆ, ತಾಳ್ಮೆ ಸಣ್ಣಪ್ಪನವರಿಗಿರಲಿಲ್ಲ.

ಸಂಜೆ ಪೇಪರಿನ ಕೊನೆಪುಟದಲ್ಲಿ ಜಾಹಿರಾತಿನ ರೂಪದಲ್ಲಿ ಪ್ರಪಂಚದ ಭೂಪಟವನ್ನು ಅಚ್ಚುಮಾಡಿದ್ದರು. ಸಣ್ಣಪ್ಪ ಈ ಪುಟವನ್ನು 24 ತುಂಡುಗಳಾಗಿ ಹರಿದು, ಚೂರುಗಳನ್ನು ಅದಲು ಬದಲು ಮಾಡಿ, ''ಪ್ರಪಂಚವನ್ನೆಲ್ಲಾ ಸರಿಯಾಗಿ ಜೋಡಿಸು, ನಿನಗೆ ನಾಲ್ಕು ಚಾಕಲೇಟು ಕೊಡ್ತೀನಿ,'' ಅಂದರು.

ಐದು ನಿಮಿಷಗಳನ್ನು ಕೂಡಾ ತೆಗೆದುಕೊಳ್ಳಲಿಲ್ಲ ಜಾಣ ಸುನೀಲ. ಪ್ರಪಂಚದ ಭೂಪಟದ ಚೂರುಗಳನ್ನು ಸರಿಯಾಗಿ ಜೋಡಿಸಿ ಅಪ್ಪನಿಗೆ ತೋರಿಸಿದ.

''ಇಷ್ಟು ಬೇಗ ಪ್ರಪಂಚವನ್ನು ಸರಿ ಮಾಡಿದೆಯಾ?'' ಅಂತ ಸಣ್ಣಪ್ಪ ಮಗನನ್ನು ಕೇಳಿದಾಗ, ಸುನೀಲ ಸೂಕ್ಷ್ಮವಾಗಿ ಉತ್ತರಿಸಿದ, ''ಅಪ್ಪಾ, ಪ್ರಪಂಚದ ಹಿಂದೆ ಒಂದು ಮಗು ಇತ್ತು. ಮಗುವನ್ನು ತಲೆಯಿಂದ ಕಾಲಿನವರೆಗೂ, ನೋಡಿ ನೋಡಿ ಜೋಡಿಸಿದೆ. ಮಗು ಸರಿ ಹೋದಕೂಡಲೇ ಪ್ರಪಂಚವೂ ಸರಿ ಹೋಯಿತು.''

ಸುನೀಲನ ಉತ್ತರದ ಹಿಂದೆ ಇರಬಹುದಾದ ವಿಶೇಷ ಅರ್ಥವನ್ನು ಸಣ್ಣಪ್ಪ ಹೀಗೆ ಯೋಚಿಸಿದ, 'ಮಕ್ಕಳೇ ಪ್ರಪಂಚದ ಮುಂದಿನ ಪ್ರಜೆಗಳು, ಮಕ್ಕಳು ಸರಿಹೋದರೆ, ಅಂದರೆ ಅವರನ್ನು ಸರಿಯಾಗಿ ಓದಿಸಿ, ಬರೆಸಿ, ಬೆಳೆಸಿದರೆ ಪ್ರಪಂಚ ಉತ್ತಮವಾಗೇ ಆಗುತ್ತೆ. ಆದ್ದರಿಂದ ಇನ್ನು ಮೇಲೆ ನಾನು ಪ್ರತಿದಿನ, ಬಿಡುವು ಸಿಕ್ಕಿದಾಗಲೆಲ್ಲಾ, ಮಗನ ಪ್ರಶ್ನೆಗಳಿಗೆ ಉತ್ತರಿಸಬೇಕು.'

ಸಣ್ಣಪ್ಪನ ಅನಿಸಿಕೆ ನಿಮಗೆ ಸರಿ ಅನ್ನಿಸಿರಬೇಕಲ್ಲವೇ?

★

ಜನಕ ರಾಜನ ಗುಟ್ಟು

ಜನಕಮಹಾರಾಜ ಅರಮನೆಯಲ್ಲೇ ಇದ್ದ. ಆದರೂ ಯಾವುದೂ ತನ್ನದಲ್ಲ ಎನ್ನುವಂತೆಯೇ ಇದ್ದ. ಅವನು ನಿಜವಾದ ಅರ್ಥದಲ್ಲಿ ತ್ಯಾಗಿ ಆಗಿದ್ದ.

ಒಂದು ದಿನ ಕಾವಿ ಉಡುವು ಧರಿಸಿದ್ದ ಸಂನ್ಯಾಸಿಯೊಬ್ಬ ಅವನ ಅರಮನೆಗೆ ಬಂದ. ಆಭರಣ, ಬೆಲೆಬಾಳುವ ಉಡುವು, ಉತ್ತಮ ತಿಂಡಿತಿನಿಸು ಮುಂತಾದವುಗಳ ನಡುವೆ ಇದ್ದ ಜನಕನನ್ನು ನೋಡಿ , ''ಹೀಗೆಲ್ಲಾ ಇದ್ದರೂ ಈತ ಹೇಗೆ ದೇವರಿಗೆ ಹತ್ತಿರದವನಾಗಿದ್ದಾನೆ, ಅಚ್ಚುಮೆಚ್ಚಿನವನಾಗಿದ್ದಾನೆ,'' ಅಂತ ಅಂದುಕೊಂಡ.

ಅಂದುಕೊಂಡಿದ್ದು ಮುಗಿಯುವುದಕ್ಕೆ ಮುಂಚೆಯೇ, ''ಅರಮನೆಗೆ ಬೆಂಕಿ ತಗುಲಿದೆ, ಓಡಿ, ಓಡಿ, ಕಾಪಾಡಿಕೊಳ್ಳಿ,'' ಅನ್ನುವ ಕೂಗು

ಕೇಳಿಸಿತು.

ಕಾವಿ ಧರಿಸಿದ್ದ ಸಂನ್ಯಾಸಿ ಓಡಿದ. ತಾನು ಒಗೆದು ಒಣಗಿಹಾಕಿದ್ದ ಕಾವಿ ಪಂಚೆಯನ್ನು ಬೆಂಕಿಯಿಂದ ತಪ್ಪಿಸಲು ಓಡಿದ. ಪಂಚೆಯನ್ನು ಭದ್ರವಾಗಿ ತೆಗೆದು ಮಡಿಸಿಟ್ಟು ಹಿಂದಿರುಗಿ ಬಂದರೂ ಜನಕ ಮಹಾರಾಜ ಕದಲದೆ ಕುಳಿತಲ್ಲಿಯೇ ಕುಳಿತಿದ್ದ.

''ರಾಜರೇ, ಬೆಂಕಿಹತ್ತಿಕೊಂಡಿದೆ ಅಂತ ಕೂಗಿಕೊಂಡಿದ್ದು ನಿಮಗೆ ಕೇಳಿಸಲಿಲ್ಲವೇ? ಆದರೂ ನಿಶ್ಚಿಂತೆಯಾಗಿ ಕೂತಕಡೆಯೇ ಕೂತಿದ್ದೀರಲ್ಲಾ?'' ಅಂದ ಸಂನ್ಯಾಸಿ. ''ನನ್ನ ಆಸ್ತಿ ನನ್ನ ಬಳಿ ಭದ್ರವಾಗಿದೆ. ಅದು ಬೆಂಕಿಯಲ್ಲಿ ಸುಡುವುದಿಲ್ಲ.'' ಜನಕರಾಜ ನಿರ್ಲಿಪ್ತ; ಇಹಲೋಕದ ಭೋಗಗಳನ್ನು ಕಡೆಗಾಣಿಸಿದ್ದವನು. ಅಹಂಕಾರವನ್ನು ಬಿಟ್ಟು, ತಾತ್ಕಾಲಿಕ ಸುಖಕ್ಕೆ ಬುದ್ಧಿಯನ್ನು ಬಲಿಕೊಡದವನು ನಿಜವಾಗಿಯೂ ತ್ಯಾಗಿಯೇ.

ಮೈಸ್ಟರ್ ಎಕ್‌ಹಾರ್ಟ್ ಎಂಬ ಜರ್ಮನಿಯ ತತ್ವಜ್ಞಾನಿ, ದೇವರಿಗೆ ಪ್ರಿಯರಾದವರು ಯಾರು ಅನ್ನುವ ಪ್ರಶ್ನೆಗೆ ಉತ್ತರಿಸುತ್ತಾನೆ - 22ಆಸ್ತಿಪಾಸ್ತಿಗಳ ಆಸೆ ಬಿಟ್ಟವನು, ಬಂಧುಮಿತ್ರರ ಬಂಧವನ್ನು ಕಳಚಿಕೊಂಡವನು, ಅಹಮಿಕೆಯನ್ನು ದೂರಮಾಡಿದವನು ದೇವರಿಗೆ ಹತ್ತಿರದವನಾಗುತ್ತಾನೆ.''

ಎಕ್‌ಹಾರ್ಟ್‌ನ ಮಾತು, ಜನಕರಾಜನ ಜೀವನ ದೃಷ್ಟಿ ನಮಗೆ ದಾರಿದೀಪವಾದರೆ, ನಮ್ಮ ಬಾಳೂ ಹಸನಾದೀತು.

★

ಬಾಗಿದ ಬಿಲ್ಲು

ಪ್ರಖ್ಯಾತ ಕತೆಗಾರ ಈಸೋಪನ ಹೆಸರನ್ನು ಯಾರು ತಾನೇ ಕೇಳಿಲ್ಲ? ಇಂಥಾ ಪ್ರಖ್ಯಾತ ವ್ಯಕ್ತಿ, ಒಂದು ದಿನ ಬೀದಿಯ ಪಕ್ಕದಲ್ಲಿ ಮಕ್ಕಳ ಜೊತೆಗೆ ಕೂಗ್ತಾ, ಕೇಕೆ ಹಾಕಿ ನಗ್ತಾ ಆಡ್ತಾ ಇದ್ದ. ಇದನ್ನು ಅಥೆನ್ಸ್‌ನ ನಾಗರಿಕನೊಬ್ಬ ನೋಡಿದ. ಈಸೋಪನನ್ನು ಕೇಳಿದ, ''ನಿನ್ನನ್ನು ನೋಡಿದರೆ ಆಶ್ಚರ್ಯ ಆಗುತ್ತೆ. ಇಷ್ಟು ದೊಡ್ಡವನಾಗಿ ಮಕ್ಕಳ ಹಾಗೆ, ಅವರ ಜೊತೆಗೆ ಸೇರಿಕೊಂಡು ಆಡ್ತಾ ಕಾಲ ವ್ಯರ್ಥ ಮಾಡ್ತಾ ಇದ್ದೀಯಲ್ಲಾ, ಯಾಕೆ?''

ಈಸೋಪ ತಕ್ಷಣ ಉತ್ತರಿಸಲಿಲ್ಲ. ಮಕ್ಕಳು ಆಡ್ತಾ ಇದ್ದ ಬಿಲ್ಲನ್ನು ಕೈಗೆತ್ತಿಕೊಂಡ, ಬಾಗಿಸಿ ಕಟ್ಟಿದ್ದ ದಾರವನ್ನು ಕಿತ್ತುಹಾಕಿ ಬಿಲ್ಲನ್ನು ನೆಲದ ಮೇಲೆ ಎಸೆದ, ''ಈ ಬಿಲ್ಲಿಗೆ ಏನು ಅರ್ಥ,'' ಅಂತ ಕೇಳಿದ.

ಅಥೆನ್ಸ್‌ನ ಬುದ್ಧಿವಂತ ನಾಗರಿಕ ತಲೆ ಕೆರೆದುಕೊಂಡ. ಅವನಿಗೆ ಉತ್ತರ ಹೊಳೆಯಲಿಲ್ಲ. ''ನಿನ್ನ ಒಗಟಿಗೆ ಉತ್ತರ ನನ್ನ ಬಳಿ ಇಲ್ಲ, ನೀನೇ ಹೇಳಬೇಕು,'' ಅಂದ.

''ಬಿಲ್ಲನ್ನು ಯಾವಾಗಲೂ ಬಗ್ಗಿಸಿಯೇ ಇಟ್ಟಿದ್ದು, ದಾರ ಬಿಗಿದೇ ಇದ್ದರೆ ಬಿಲ್ಲಿನ ಸ್ಥಿತಿಸ್ಥಾಪಕ ಶಕ್ತಿ ಕಡಿಮೆಯಾಗುತ್ತೆ. ಅದಕ್ಕೇ ಆಗಾಗ ದಾರವನ್ನು ಬಿಚ್ಚಿ, ಹಿಗ್ಗಲು ಅವಕಾಶ ಕೊಡಬೇಕು. ಹೀಗೆ, ಹಿಗ್ಗಿ ಕುಗ್ಗುವುದರಿಂದ ಸ್ಥಿತಿಸ್ಥಾಪಕ ಶಕ್ತಿ ಹೆಚ್ಚುತ್ತೆ, ಬಿಲ್ಲೂ ಬಾಳಿಕೆ ಬರುತ್ತೆ,'' ಅಂತ ವಿವರಿಸಿದ ಬುದ್ಧಿವಂತ ಈಸೋಪ.

ನಮ್ಮ ಬಾಳೂ ಬಿಲ್ಲಿನ ಹಾಗೆಯೇ ಅಲ್ಲವೇ? ಆಗಾಗ ಮನಸ್ಸಿಗೆ ವಿರಾಮ, ಆರಾಮ, ಕೊಟ್ಟು 'ಆಡಿ'ಕೊಳ್ಳಬೇಕು. ಇಲ್ಲದಿದ್ದರೆ ಒತ್ತಡದ ಬೇನೆಗಳಿಗೆ, ಮನೋ-ದೈಹಿಕ ರೋಗಗಳಿಗೆ ತುತ್ತಾಗುವುದು ಖಂಡಿತ. ●

ಜನಸಂಖ್ಯಾಸ್ಫೋಟಕ್ಕೆ ಕಡೆಗೀಲು...

ಪ್ರತಿವರ್ಷವೂ ಆಸ್ಟ್ರೇಲಿಯದ ಒಟ್ಟು ಜನಸಂಖ್ಯೆಯಷ್ಟನ್ನು ತನ್ನ ಜನಸಂಖ್ಯೆಗೆ ಸೇರಿಸುತ್ತ ಹೊರಟಿದೆ ನಮ್ಮ ದೇಶ. ಜಗತ್ತಿನ ಒಟ್ಟು ಜನಸಂಖ್ಯೆಯ ಶೇಕಡಾ 15ರಷ್ಟನ್ನು ಹೊತ್ತುಕೊಂಡೇ ಮುಂದೆ ಸಾಗಿದರೆ ಪರಿಣಾಮವೇನಾದೀತು? ಇದಕ್ಕೆ ಪರಿಹಾರವೆ ಇಲ್ಲವೆ?

● ಟಿ.ಆರ್. ಚಂದ್ರಶೇಖರ

ಇನ್ನೆಂಟು ವರ್ಷಕ್ಕೆ, ಅಂದರೆ 2000 ಇಸವಿಗೆ, ನಮ್ಮ ದೇಶದ ಜನಸಂಖ್ಯೆ 100 ಕೋಟಿಯಾಗುತ್ತದೆ ಎಂಬುದು 1991ರ ಜನಗಣತಿಯಿಂದ ಸ್ಪಷ್ಟವಾಗಿದೆ. 21ನೇ ಶತಮಾನದಲ್ಲಿ ಭಾರತ ''ಜಗತ್ತಿನ 'ಜನಸಂಖ್ಯಾ ಬಾಹುಳ್ಯ'ದ ಕೇಂದ್ರ ಬಿಂದು''ವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಯಾಕೆಂದರೆ ಪ್ರತಿವರ್ಷ ಭಾರತವು ತನ್ನ ಜನಸಂಖ್ಯೆಗೆ ಆಸ್ಟ್ರೇಲಿಯಾ ದೇಶದ ಒಟ್ಟು ಜನಸಂಖ್ಯೆಯಷ್ಟು ಅಂದರೆ 1.61 ಕೋಟಿ ಜನರನ್ನು ಸೇರಿಸುತ್ತಿದೆ! ಜನಸಂಖ್ಯಾಸ್ಫೋಟದಿಂದಾಗಿ ಆರ್ಥಿಕಾಭಿವೃದ್ಧಿಯ ಯತ್ನ ಯಶಸ್ವಿಯಾಗದೆ ಸಮುದ್ರಕ್ಕೆ 'ಹುಳಿ' ಹಿಂಡುವ ಪ್ರಯತ್ನದಂತಾಗಿದೆ. ಜನಸಂಖ್ಯಾಸ್ಫೋಟಕ್ಕೆ ಕಡೆಗೀಲು ಜಡಿಯದೆ ಯಾವುದೇ ದೇಶದ ಅಭಿವೃದ್ಧಿ ಸಾಧ್ಯವಾಗದ ಮಾತು. ನಮ್ಮ ದೇಶದಲ್ಲಿ ಜನಸಂಖ್ಯಾಸ್ಫೋಟಕ್ಕೆ ಕಡೆಗೀಲು ಜಡಿಯುವ ಪ್ರಯತ್ನ ಸ್ವಾತಂತ್ರ್ಯೋದಯದ ಹೊಸತಿನಿಂದಲೂ ನಡೆಯುತ್ತಲೇ ಇದೆ. ಆದರೆ, ಕಡೆಗೀಲಿಲ್ಲದ ಬಂಡಿಯಂತೆ ನಮ್ಮ ದೇಶ ಜಗತ್ತಿನ ಶೇಕಡಾ 15ರಷ್ಟು ಜನಸಂಖ್ಯೆಯನ್ನು ಹೊತ್ತುಕೊಂಡೇ ಸಾಗಿದೆ. ಈ ಬಂಡಿ ಎಲ್ಲಿ ಚಕ್ರ ಕಳಚಿ ಬೀಳುತ್ತದೊ?


ಕುಟುಂಬಯೋಜನಾ ಕಾರ್ಯಕ್ರಮ ಜನಸಂಖ್ಯಾಸ್ಫೋಟವನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾಗಿಲ್ಲ. ಮಿತ ಸಂತಾನದ ಘೋಷಣೆಗಳು ಅಪಹಾಸ್ಯಕ್ಕೀಡಾಗಿವೆ. ಗರ್ಭನಿರೋಧಕ ಸಾಧನಗಳು ದುರುಪಯೋಗಗೊಳ್ಳುತ್ತಿವೆ. ಆದರೂ ಕುಟುಂಬಯೋಜನಾ ಕಾರ್ಯಕ್ರಮ ಈ ಘೋಷಣೆ-ಸಾಧನಗಳ ಸುತ್ತಲೇ ಗಿರಕಿ ಹೊಡೆಯುತ್ತಿರುವಂತಿದೆ. ಸರ್ಕಾರ ಕೂಡ ಜನಸಂಖ್ಯಾಸ್ಫೋಟಕ್ಕೆ ಕುಟುಂಬಯೋಜನೆಯೊಂದೆ ಬಲವಾದ ಕಡೆಗೀಲು ಎಂದು ಧೃಡವಾಗಿ ನಂಬಿಟ್ಟಿದೆ. ಇದು ನಿರಾಧಾರಿತ ನಂಬಿಕೆ.

ಜನಸಂಖ್ಯಾಸ್ಫೋಟಕ್ಕಿರುವ ನಿರ್ಣಾಯಕ ಕಡೆಗೀಲು ಯಾವುದೆಂಬುದು ನಮ್ಮ ಸರ್ಕಾರಕ್ಕಿನ್ನೂ ಅರಿವಾಗಿಲ್ಲದಿರುವುದು ಶೋಚನೀಯ. ಆರ್ಥಿಕಾಭಿವೃದ್ಧಿ, ಸಾಕ್ಷರತೆ, ಆರೋಗ್ಯ, ಮಹಿಳಾ ಉದ್ಯೋಗ, ಶಿಶುಸ್ವಾಸ್ಥ್ಯ ಮುಂತಾದವುಗಳ ಮೂಲಕ ಜನಸಂಖ್ಯಾಸ್ಫೋಟಕ್ಕೆ ಯಶಸ್ವಿಯಾಗಿ ಕಡೆಗೀಲು ಜಡಿದ ಕೆಲವು ದೇಶಗಳ ಉದಾಹರಣೆಗಳಿಂದ ಭಾರತ ಪಾಠ ಕಲಿತಿಲ್ಲ.

ಅಭಿವೃದ್ಧಿ, ಸಾಕ್ಷರತೆ, ಮಹಿಳೆಯ ಸ್ಥಾನ-ಮಾನದ ಉನ್ನತಿ, ಬಡತನ ನಿವಾರಣೆ, ಆರೋಗ್ಯ ಸುಧಾರಣೆಗಳೊಂದಿಗೆ ಜನಸಂಖ್ಯಾ ನಿಯಂತ್ರಣವು ನಿಕಟ ಸಂಬಂಧ ಹೊಂದಿದೆಯೆಂಬುದನ್ನು ಜನಸಂಖ್ಯಾತಜ್ಞರೆಲ್ಲಾ ಒಪ್ಪಿಕೊಂಡಿದ್ದಾರೆ. ನಮ್ಮ ದೇಶದ ಕೇರಳ ರಾಜ್ಯವನ್ನೇ ನೋಡಿ. ಅಲ್ಲಿಯ ವಾರ್ಷಿಕ ಜನಸಂಖ್ಯಾ ಏರಿಕೆಯು ಅಖಿಲ ಭಾರತ ಸರಾಸರಿ ಜನಸಂಖ್ಯಾ ಏರಿಕೆದರಕ್ಕಿಂತ ಬಹಳಷ್ಟು ಕಡಿಮೆ ಇದೆ. ಇದು ಕುಟುಂಬಯೋಜನಾ ಪ್ರಚಾರದಿಂದ ಉಂಟಾದ ಪರಿಣಾಮವಲ್ಲ, ಕೇರಳದಲ್ಲಿ ಸಾಕ್ಷರತಾ ಪ್ರಮಾಣ ಹೆಮ್ಮೆ ಪಡುವಷ್ಟು ಹೆಚ್ಚಿಗಿದೆ. (ಕಳೆದ ವರ್ಷ ಕೇರಳವನ್ನು "ಸಂಪೂರ್ಣ ಸಾಕ್ಷರತಾ ರಾಜ್ಯ"ವೆಂದು ಘೋಷಿಸಲಾಯಿತು) ಅಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವೂ ಉಳಿದ ರಾಜ್ಯಗಳಿಗೆ ಹೋಲಿಸಿದರೆ ಅತ್ಯುನ್ನತ ಮಟ್ಟದ್ದು. ಹೀಗಾಗಿ ಸಮಾಜದಲ್ಲಿ ಮಹಿಳೆಗೆ ಅಭಿಮಾನಾಸ್ಪದ ಸ್ಥಾನ-ಮಾನವೂ ದೊರೆತಿದೆ. ಸಾರ್ವಜನಿಕ ಆರೋಗ್ಯ ಸುಧಾರಣೆಯ ದೃಷ್ಟಿಯಿಂದ ವೈದ್ಯಕೀಯ ಸೌಲಭ್ಯಗಳನ್ನು ಗ್ರಾಮಾಂತರ ಪ್ರದೇಶದಲ್ಲಿ 'ಅಕ್ಷರಶಃ' ವ್ಯಾಪಕವಾಗಿ ಒದಗಿಸಲಾಗಿದೆ. ಇವೆಲ್ಲ ಅಂಶಗಳಿಂದಾಗಿ ಆ ರಾಜ್ಯದಲ್ಲಿ ಜನಸಂಖ್ಯೆ ನಿಯಂತ್ರಣದಲ್ಲಿದೆ. ಕುಟುಂಬಯೋಜನೆಗೂ ಸಾಕ್ಷರತೆಗೂ ಇರುವ ಸಂಬಂಧ ತುಂಬ ಮಹತ್ವದ್ದು. ಅಸ್ವಸ್ಥ, ಅನಕ್ಷರಸ್ಥ ತಾಯಿ ಮತ್ತೆ ಮತ್ತೆ ಗರ್ಭವತಿಯಾಗುವುದು ದುರ್ಬಲ ಮಕ್ಕಳಿಗೆ ಜನ್ಮ ನೀಡುವುದು ನಾವು ಎಲ್ಲೆಲ್ಲೂ ಕಾಣುವ ಸಂಗತಿ. ಹುಟ್ಟಿದ ಮಕ್ಕಳಲ್ಲಿ ಅಧಿಕಾಂಶ ತಮ್ಮ ಐದನೇ ಹುಟ್ಟುಹಬ್ಬ ಆಚರಿಸುವ ಮೊದಲೇ ಅಸುನೀಗುತ್ತವೆ. ಶಿಶುಮರಣ ಸಂಖ್ಯೆ ಕಡಿಮೆಯಾಗಿದೆ ಎಂದು ಸರ್ಕಾರ ಘೋಷಿಸುತ್ತಲೇ ಇದ್ದರೂ ಅದು ಇನ್ನೂ ಅಧಿಕ ಪ್ರಮಾಣದಲ್ಲಿದೆ. ತಾಯಿ-ಮಗುವಿನ ಆರೋಗ್ಯದ ಬಗ್ಗೆ ಸರ್ಕಾರ ಜನಕ್ಕೆ ನೀಡಬೇಕಾದಷ್ಟು ತಿಳುವಳಿಕೆ ನೀಡಿಲ್ಲವೆನಿಸುತ್ತದೆ.

ಜನನ ದರದಲ್ಲಿ ಇಳಿಮುಖ ಪ್ರವೃತ್ತಿ

ಸ್ವಾತಂತ್ರ್ಯಾನಂತರ ನಮ್ಮ ದೇಶದಲ್ಲಿ ಮರಣ ಪ್ರಮಾಣ ತೀವ್ರವಾಗಿ ಇಳಿಯಿತು. ಸಾರ್ವತ್ರಿಕ ಆರೋಗ್ಯ ಕ್ರಾಂತಿ ಮತ್ತು ಸಾಂಕ್ರಾ



ಮಿಕ ರೋಗಗಳ ನಿವಾರಣೆ ಪರಿಣಾಮದಿಂದಾಗಿ ಈ ಮರಣ ಪ್ರಮಾಣ 1951ರಲ್ಲಿ 25ರಷ್ಟಿದ್ದದ್ದು 1991ಕ್ಕೆ 2.6ಕ್ಕೆ ಇಳಿದಿದೆ. ಆದರೆ ಜನನ ಪ್ರಮಾಣದಲ್ಲಿ ಇಳಿಕೆ ಪ್ರವೃತ್ತಿ ತೋರಿಬಂದಿಲ್ಲ. 1951ರಿಂದ 1991ರ ಅವಧಿಯಲ್ಲಿ ಜನನ ಪ್ರಮಾಣ 45ರಿಂದ 30ಕ್ಕೆ ಇಳಿದಿದೆ. 1951ರಲ್ಲಿ ಜನಸಂಖ್ಯೆಯ ವಾರ್ಷಿಕ ಏರಿಕೆ ಶೇಕಡಾ 1.25 ಇತ್ತು. 1981ರಷ್ಟೊತ್ತಿಗೆ ಅದು ಶೇಕಡಾ 2.22ಕ್ಕೆ ಇಳಿಯಿತು. 1991ರ ಜನಗಣತಿಯ ಪ್ರಕಾರ ಅದು ಶೇಕಡಾ 2.13ಕ್ಕೆ ಇಳಿದಿದೆಯೆಂಬುದೊಂದು ಆಶಾದಾಯಕ ಬೆಳವಣಿಗೆ. (ಚಿತ್ರ ನೋಡಿ) ಇಂಥ ಪ್ರವೃತ್ತಿಯನ್ನು ಈಗ ಗಟ್ಟಿಗೊಳಿಸುವ ಮತ್ತು ಉತ್ತೇಜಿಸುವ ಕಾರ್ಯ ಶುರುವಾಗಬೇಕಾಗಿದೆ. ಕುಟುಂಬಯೋಜನೆಯಂಥ ಸೀಮಿತ ಕಾರ್ಯಕ್ರಮ ಬಿಟ್ಟು ಸಾಕ್ಷರತೆ-ಸಾರ್ವಜನಿಕ ಆರೋಗ್ಯ-ಅಭಿವೃದ್ಧಿ-ಮಹಿಳೆಯ ಸ್ಥಾನಮಾನ ಸುಧಾರಣೆಗಳನ್ನು ಒಳಗೊಂಡ ಸಮಗ್ರ ಕಾರ್ಯಕ್ರಮ ರೂಪಿಸುವುದರಿಂದ ಮಾತ್ರ, ಇದು ಸಾಧ್ಯವಾದೀತು. ಕುಟುಂಬಯೋಜನೆಯನ್ನು ಅಭಿವೃದ್ಧಿ ಚಟುವಟಿಕೆಗಳಿಂದ ಬೇರ್ಪಡಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಕಡ್ಡಾಯ ಶಿಕ್ಷಣವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು, ಹೆಣ್ಣುಮಕ್ಕಳ ಮದುವೆ ವಯಸ್ಸನಲ್ಲಿ ಕಾಯಿದೆಬದ್ಧ ಏರಿಕೆ ತರುವುದು ಮಕ್ಕಳ ಆರೋಗ್ಯವನ್ನು ಸುಧಾರಿಸುವುದು ಮುಂತಾದವುಗಳಿಂದ ಶಿಶುಮರಣ ಪ್ರಮಾಣವನ್ನು ಕಡಿಮೆ ಮಾಡಬಹುದು. ಹುಟ್ಟಿದ ಮಗು ಆರೋಗ್ಯವಂತನಾಗಿ ಬೆಳೆಯುವ ಭರವಸೆ ಮೂಡುವಂಥ ಸ್ವಾಸ್ಥ್ಯಸ್ಥಿತಿಯುಂಟಾದರೆ ದಂಪತಿಗಳು ಹೆಚ್ಚು ಮಕ್ಕಳನ್ನು ಪಡೆಯುವ ಪ್ರಮೇಯ ಬರತ್ತದೆಯೆ?

ಜನಸಂಖ್ಯಾಸ್ಫೋಟದ ಒತ್ತಡ

ನಮ್ಮ ದೇಶದಲ್ಲಿ ಇಂದು ಜನಸಂಖ್ಯಾಸ್ಫೋಟದ ಒತ್ತಡ ಕೇವಲ ನಾಲ್ಕು ರಾಜ್ಯಗಳಲ್ಲಿ ಕೇಂದ್ರೀಕೃತಗೊಂಡಿದೆ. ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಉತ್ತರ ಪ್ರದೇಶ ರಾಜ್ಯಗಳು ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 40ರಷ್ಟನ್ನು ಹೊಂದಿವೆ. ಜನಸಂಖ್ಯಾಸ್ಫೋಟಕ್ಕೆ ಗಟ್ಟಿಯಾಗಿ ಕಡಿಗೀಲು ಬೀಳಬೇಕಾದರೆ ನಮ್ಮ ಪ್ರಯತ್ನವೆಲ್ಲಾ ಈ ನಾಲ್ಕು ರಾಜ್ಯಗಳಲ್ಲಿ ಸಾಂದ್ರಗೊಳ್ಳಬೇಕಾಗಿದೆ. ಆ ರಾಜ್ಯಗಳಲ್ಲಿ ಅನಕ್ಷರತೆಯ ಪ್ರಮಾಣವೂ ತೀವ್ರವಾಗಿದೆ. ಬಡತನ-ನಿರುದ್ಯೋಗ ಸಮಸ್ಯೆಗಳೂ ಗಂಭೀರವಾಗಿವೆ. ಈ ರಾಜ್ಯಗಳ ಆರೋಗ್ಯ-ವೈದ್ಯಕೀಯ ಸೌಲಭ್ಯ, ಮಹಿಳೆಯ ಸ್ಥಾನ-ಮಾನದ ಬಗ್ಗೆ ಹೇಳದಿರುವುದೇ ಲೇಸು.

ಕೇವಲ ಸಂತಾನ ನಿಯಂತ್ರಣ ಸಾಧನಗಳ ಜಾಹೀರಾತುಗಳನ್ನು ದೂರದರ್ಶನ-ಆಕಾಶವಾಣಿಗಳ ಮೂಲಕ ಪ್ರಸಾರ ಮಾಡಿ ಜನಸಂಖ್ಯಾಸ್ಫೋಟವನ್ನು ತಡೆಯಬಹುದೆಂದು ಸರ್ಕಾರದ ಭ್ರಮೆ.

ಕುಟುಂಬಯೋಜನೆಯ ಬಗ್ಗೆ ಇಂದು ಜನಜಾಗೃತಿ ಮೂಡುತ್ತಿದೆ. ದಿನಮಾನಗಳು ಮೂಡಿಸಿದ ಜಾಗೃತಿ ಇದು. ಸರ್ಕಾರ ಇನ್ನಷ್ಟು ಮುತುವರ್ಜಿವಹಿಸಿದರೆ ಜನಸಂಖ್ಯಾಸ್ಫೋಟಕ್ಕೆ ಕಡಿಗೀಲು ಜಡಿಯಲ್ಪಡುವುದು ಖಂಡಿತ. ●

ದಿವಂಗತ ಸೈಗಾಲರು ಒಮ್ಮೆ ಊಟಮಾಡಲು ಹೋಟಲಿಗೆ ಹೋದರು. ಒಬ್ಬ ವ್ಯಕ್ತಿ ಅವರಿಗೆ ಬಹಳ ಪ್ರಿಯವಾಗಿದ್ದ ಹಾಡೊಂದನ್ನು ಅಪಸ್ವರದಲ್ಲಿ ಹಾಡುತ್ತಾ ಇದ್ದ. ಬಹಳ ಹೊತ್ತಾದರೂ ಪಿಟೀಲಿನ ಅಪಶ್ರುತಿ ಹಾಗೇ ಇತ್ತು. ಕೇಳಲಾಗದೆ ಅವರು ಎದ್ದು ಹೋಗಿ ಪಿಟೀಲಿನ ಶ್ರುತಿಯನ್ನು ಸರಿಮಾಡಿ ಕೊಟ್ಟು ಹೇಗೆ ಹಾಡಬೇಕೆಂದು ಹಾಡಿ ತೋರಿಸಿಕೊಟ್ಟರು. ನಂತರ ಊಟಕ್ಕೆ ಹೋದರು. ಊಟ ಮುಗಿಸಿ ಹೊರ ಬಂದಾಗ ಅವರಿಗೊಂದು ಆಶ್ಚರ್ಯ ಕಾದಿತ್ತು. ಆ ಹಾಡುಗಾರ ''ನಾನು ಸೈಗಾಲರ ಶಿಷ್ಯ'' ಎಂದು ಬರೆದ ಬೋರ್ಡೊಂದನ್ನು ತನ್ನ ಪಕ್ಕದಲ್ಲಿ ಹಾಕಿಕೊಂಡಿದ್ದ.

ಸಂಗ್ರಹ: **ಎಚ್.ಆರ್. ವಿಮಲಮ್ಮ**

ಕವಿಗೋಷ್ಠಿ

● ಎಂ.ಡಿ. ಗೋಗೇರಿ

ಶಂಕ್ರಣ್ಣನಿಗೆ ಕವನ ಬರೆಯುವ ಹುಚ್ಚು ಹೊಕ್ಕು ಆಗಲೆ ಎರಡು ವರ್ಷ ಮಿಕ್ಕಿತ್ತು. ಕಂಡ ಕಂಡ ವಸ್ತುಗಳನ್ನು ಕುರಿತು, ಪ್ರಾಣಿಗಳನ್ನು ಕುರಿತು, ಕವನ ಬರೆದೂ ಬರೆದೂ ರಾಶಿರಾಶಿ ಒಟ್ಟಿದ್ದ. ಪ್ರೇಮಗೀತೆಗಳು, ಭಕ್ತಿಗೀತೆಗಳು, ಭಾವಗೀತೆಗಳು ಅವನ ಕೃತಿಗಳಲ್ಲಿ ಸಿಕ್ಕಾಪಟ್ಟೆ ಪಾಲು ಪಡೆದಿದ್ದವು. ಸ್ಥಳಿಕರಾದ ಯಾರಾದರೂ ಹಿರಿಯ ಕವಿಗಳು ರಸ್ತೆಯಲ್ಲಿ ಸಿಕ್ಕುಬಿಟ್ಟರೆ ತಾಸೆರಡು ತಾಸು ಕವನಗಳ ಲಯ, ಪ್ರಾಸ, ವಿಷಯ ಮುಂತಾದವುಗಳ ಬಗ್ಗೆ ಹಿಂಜಿ ಹಿಂಜಿ ಮಾತು. ಫುಟ್‌ಪಾತ್ ಬ್ಲಾಕು. ಚಹದಂಗಡಿ ಹೊಕ್ಕು ಕುಳಿತರೆ ಮುಗಿದೇಹೋಯ್ತು, ''ಕುರ್ಚಿ ಡಬ್ಬು ಹಾಕ್ತೇವೆ ಏಳ್ರಿ'' ಎನ್ನುವತನಕವೂ ಇವನ ಗಹನ ಘೋರ ಚರ್ಚೆ. ಇವನ ಮನೆಯಾಕೆ ಯಂತೂ ಬೇಸತ್ತು ಕ್ಯಾನ್ಸರ್ ತಗಲಿದಷ್ಟೇ ಚಿಂತೆ ಹಚ್ಚಿಕೊಂಡಿದ್ದಳು.

ಶಂಕ್ರಣ್ಣನಿಗೆ ಕವನದ ಹುಚ್ಚು ತಲೆಗೇರಿ ಸನ್ನಿಪಾತವಾದದ್ದು ತಿಳಿದ ನಾಲ್ಕಾರು ಗೆಳೆಯರು ಸರಿಯಾಗೇ ಇದರ ಉಪಯೋಗ ಪಡೆದುಕೊಳ್ಳುತ್ತಿದ್ದರು. ಎದುರಿಗೆ ಬಂದೊಡನೆ ''ಕವಿಗಳಿಗೆ ನಮಸ್ಕಾರ'' ಎಂದು ಒಬ್ಬ ಎನ್ನುತ್ತಿದ್ದ. ಮತ್ತೊಬ್ಬ ''ಮಹಾ ಕವಿಪುಂಗವರು ಹೊಸ ಕವನ ಬರೆದಿದ್ದರೆ ಓದಿ ಹೇಳುವ ಕೃಪೆಯಾಗಬೇಕು'' ಎಂದು ಪಂಪು ಹೊಡೆದುಬಿಡುತ್ತಿದ್ದ. ಕವಿಗೆ ಇದಕ್ಕಿಂತ ಹೆಚ್ಚಿನದೇನು ಬೇಕು! ಎರಡು ಮೂರು ನಿಮಿಷ ಓದಿ ಹೇಳುವ ಕವನದ ಸಲುವಾಗಿ ನೂರಾರು ಮೈಲು ದೂರದ ಊರಿಂದ ''ಕವಿಗೋಷ್ಠಿ ಇದೆ ಬರಬೇಕು'' ಎಂದು ಒಂದು ಪತ್ರ ಬಂದರೆ ಸಾಕು, ಸತ್ತೆನೊ ಎಪ್ಪಾ, ಬಂದೆನೊ ಎಪ್ಪಾ, ಎಂದು ನೂರಿನ್ನೂರು ರೂಪಾಯಿ ಖರ್ಚುಮಾಡಿ ಒಮ್ಮೊಮ್ಮೆ ಬೀಗುತ್ತಾ, ಒಮ್ಮೊಮ್ಮೆ ಏಗುತ್ತಾ ಓಡಿ ಹೋಗುವ ಕವಿಗಳಿಗೆ ''ಕವಿತೆ ಓದ್ರಿ, ಕೇಳ್ತೀವಿ'' ಎಂದರೆ ಎಷ್ಟು ಹೆಮ್ಮೆಯಾಗಲಿಕ್ಕಿಲ್ಲ, ಅಭಿಮಾನ ಉಕ್ಕಿಹರಿಯಲಿಕ್ಕಿಲ್ಲ! ಆದರೆ ಶಂಕ್ರಣ್ಣನ ಗೆಳೆಯರು ಕವನ ಕೇಳುವ ಪ್ರೀತಿಯಿಂದ ಓದಲು ಹೇಳುತ್ತಿದ್ದಿಲ್ಲ. ಹರಟೆ ಹೊಡೆದು ಟೈಂ ಪಾಸು ಮಾಡಲು ಒಳ್ಳೆ ಅವಕಾಶ, ಮತ್ತು ಚಹ ತಿಂಡಿಯೂ ಪುಕ್ಕಟೆ ಸಿಗುತ್ತದಲ್ಲ.. ಹೀಗಾಗಿ ದಿನಾಲು ಈ ಸೋಗು ಹಾಕುತ್ತಿದ್ದರು.

ತಗ್ಗು-ದಿನ್ನೆ ಇರಲಿ, ಹುಲ್ಲು-ಹುಡಿ ಇರಲಿ

ಒಂದನೂರಾ ಐವತ್ತು ಓಣಿಗಳ ಕುರಿತಾದ ಪದ್ಯವನ್ನು ಶಂಕ್ರಣ್ಣ ಓದಲಾರಂಭಿಸಿದ್ದು ಒಂದು ರೀತಿ ವರದಾನವಾಗಿ ಪರಿಣಮಿಸಿತು. ಶಂಕ್ರಣ್ಣನಿಗೆ ಪ್ರಮೋಶನ್! ಬರಿ ಕವಿಯಾಗಿ ಭಾಗವಹಿಸುತ್ತಿದ್ದ ಆತ ಈಗ ಎಲ್ಲೆಲ್ಲೂ ಕವಿಗೋಷ್ಠಿಯ ಅಧ್ಯಕ್ಷ!

"ಬನ್ರೋ ಬನ್ನಿ, ಕುಳಿತುಕೊಳ್ಳಿ" ಎಂದು ಶಂಕ್ರಣ್ಣ ಕವನದ ಗಂಟು ಬಿಚ್ಚಿ ಮುಖ ಒಂದು ನಮೂನೆ ಸೊಟ್ಟ ಮಾಡಿ ದುಶ್ಯಾಸನನಂತೆ ದೊಡ್ಡ ಧ್ವನಿ ತೆಗೆದು ಕೈ ಅಲುಗಾಡಿಸುತ್ತ, ಹುಬ್ಬು ಮಣಿಸುತ್ತಾ ಎಂಥದೊ ಭಾವವನ್ನು ಮುಖದ ಮೇಲೆ ತಂದುಕೊಂಡು ತಾನೇ ಬ್ರಹ್ಮ ಸ್ವರೂಪಿ ಎನ್ನುವಂತೆ ಕವನ ಓದಿ ಹೇಳಲು ಸುರುಮಾಡುತ್ತಿದ್ದ. ಸುತ್ತಲೂ ಕುಳಿತ ಬೆರಕಿ ಗೆಳೆಯರು "ವ್ಹಾರೆ ವ್ಹಾ! ದುಬಾರಾ, ದುಬಾರಾ, ಆ ಹಾ ಹಾ ಹಾ" ಎಂದು ಅವನಿಗಿಂತ ಹೆಚ್ಚು ನಟಿಸುತ್ತಾ ಒಬ್ಬರಿಗೊಬ್ಬರು ಕಣ್ಣು ಕಿಸಿದು ಕೈ ಚಿವುಟುತ್ತಾ ನಗುತ್ತಿದ್ದರು. ಆಗ ಶಂಕ್ರಣ್ಣನ ಕಾವ್ಯದ ಉದ್ವೇಗ ತಾರಕಕ್ಕೆ ಏರಿ ಕಣ್ಣಲ್ಲಿ ದಳ ದಳ ನೀರು ಸುರಿಸುತ್ತಿತ್ತು. ಇವನ ಓಕಲಾಟ ಕಂಡು ಒಬ್ಬಿಬ್ಬ ಗೆಳೆಯರೂ ಕಣ್ಣಲ್ಲಿ ನೀರು ತಂದುಕೊಂಡರೆ ತನ್ನ ಕವನ ಕೇಳಿಯೇ ಅಳುತ್ತಿದ್ದಾರೆ! ಎಂದು ಮತ್ತಷ್ಟು ಬಿಕ್ಕಿ ಬಿಕ್ಕಿ ಅತ್ತು ರಸಸ್ರಾವ ಮಾಡಿಕೊಳ್ಳುತ್ತಿದ್ದ. ನಂತರ ಅವರು ಕೇಳುವ ಮೊದಲೇ ಸ್ವೀಟ್ ಸಹಿತ ತಿಂಡಿ ಚಹಕ್ಕೆ ಆರ್ಡರ್ ಕೊಟ್ಟು ಕೃತಾರ್ಥನಾಗುತ್ತಿದ್ದ.

ಸಣ್ಣ ಪುಟ್ಟ ಪತ್ರಿಕೆಯ ಕೆಲವು ಸಂಪಾದಕರಂತೂ ಶಂಕ್ರಣ್ಣನ ಈ ಖಾಯಿಲೆಯನ್ನು ಚೆನ್ನಾಗಿ ಅರಿತಿದ್ದರು. ಅವರು ಯಾವಾಗಾದರೊಮ್ಮೆ (ಜಾಹಿರಾತು ದೊರಕದಿದ್ದಾಗ) ಖಾಲಿ ಇದ್ದ ತಮ್ಮ ಪತ್ರಿಕೆಯ ಸ್ಥಳದಲ್ಲಿ ಇವನ ಕವನ ಪ್ರಕಟಿಸಿದರೂ ಪ್ರತಿ ಕಳಿಸುತ್ತಿರಲಿಲ್ಲ. ಶಂಕ್ರಣ್ಣನಿಗೆ ಕವನ ಪ್ರಕಟಗೊಂಡ ಸುದ್ದಿ ತಿಳಿದೊಡನೆ - ಕರ್ಫ್ಯೂ ಸಡಿಲಿಸಿದಾಗ ಗಡಿಬಿಡಿಯಿಂದ ಮನೆಗೆ ಬೇಕಾದ ಕಾಳುಕಡಿ ಕಾಯಿಪಲ್ಯಗಳನ್ನು ಹೇಳಿದಷ್ಟು ದುಡ್ಡುಕೊಟ್ಟು ಬಳಿದುಕೊಂಡು ಬರುವಂತೆ - ಬೀದಿ ಅಂಗಡಿಗಳ ಮುಂದೆ ಜೋತುಬಿದ್ದ ತನ್ನ ಕವನ ಪ್ರಕಟವಾದ ಎಲ್ಲ ಪತ್ರಿಕೆಗಳನ್ನು ಕೊಂಡು ತಂದುಬಿಡುತ್ತಿದ್ದ. ಗುರುತಿನ ಗೆಳೆಯರಿಗೆಲ್ಲ ಪುಕ್ಕಟೆ ಪ್ರತಿ ಹಂಚಲು ಬಜಾರದಿಂದಲೇ ಸುರು. ಕೆಲವರು "ಏನಪ್ಪ ಈಗ ಪತ್ರಿಕೆ ಮಾರ್ತೀಯಾ?" ಎಂದು ಕೇಳಿದ್ದೂ ದಂಟು. ಆಗೆಲ್ಲ "ಇಲ್ಲ ಸ್ವಾಮಿ ಇದೋ ನೋಡಿ, ನನ್ನ ಕವನ ಇಲ್ಲಿ ಪ್ರಕಟವಾಗಿದೆ, ತಕ್ಕೊಳ್ಳಿ ಓದಿ ನೋಡಿ" ಎಂದು (ಅಂಗಲಾಚಿ) ಕೊಡುತ್ತಿದ್ದ. ಅವರು ಓದುವಾಗ ಅವರ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದ. ಅವರು ತಿಳಿಯದಿದ್ದರೂ ನಕ್ಕು "ಚೆನ್ನಾಗಿದೇರಿ. ಥ್ಯಾಂಕ್ಸ್," ಹೇಳಿ ಮುಂಜಾನೆ ಉಪ್ಪಿಟ್ಟು-ಚುರಮರಿಗೆ ಆದೀತು ಎಂದು, ಗೆಳೆಯರ ಹೆಸರು ಹೇಳಿ ಮತ್ತೆ ನಾಲ್ಕಾರು ಪ್ರತಿ ಇಸಿದುಕೊಂಡು ಕಡೆಗಾಗುತ್ತಿದ್ದರು. ಇನ್ನು ಕೆಲವರು ಒತ್ತಾಯ ಮಾಡಿ ಶಂಕ್ರಣ ಕೊಟ್ಟ ಪತ್ರಿಕೆಯನ್ನು ತೆಗೆದುಕೊಂಡು, ಹೊರಳಿನೋಡದೆ ಹೋಗುತ್ತಿದ್ದರು, ಬೀದಿಯಲ್ಲಿ ಮಾರುವ ಔಷಧದ ಜಾಹಿರಾತು ಕರಪತ್ರಗಳನ್ನು ನೋಡುವಂತೆ ನೋಡಿ, ಹೋಗಹೋಗುತ್ತಲೆ ರಸ್ತೆಯಲ್ಲಿ ಚೆಲ್ಲಿ ಮುಂದೆ ಸಾಗುತ್ತಿದ್ದರು.

ಎಲ್ಲಿಯಾದರೂ ಕವಿಗೋಷ್ಠಿ ಏರ್ಪಾಡಾಗುತ್ತದೆ ಎಂಬ 'ಬಾತಮಿ' ಗೊತ್ತಾಗಿಬಿಟ್ಟರೆ ಶಂಕ್ರಣ್ಣನಿಗೆ ಮೈಯೆಲ್ಲಾ ರೋಮಾಂಚನವಾಗುತ್ತಿತ್ತು. ರಾತ್ರಿ, ನಿದ್ರೆ, ಹತ್ತುತ್ತಿರಲಿಲ್ಲ ಕವಿಗೋಷ್ಠಿಯ ಸಂಘಟಕರನ್ನು ಕೋಲಂಬಸನಿಗಿಂತಲೂ ಶತಪ್ರಯತ್ನ ಮಾಡಿ ಹುಡುಕುತ್ತಿದ್ದ. ಅವರು "ಕವಿಗಳ ಸಂಖ್ಯೆ ಜನಸಂಖ್ಯೆಯ ಪ್ರಮಾಣಕ್ಕೆ ತಕ್ಕಂತೆ ಹೆಚ್ಚಾಗಿದೆ ಸ್ವಾಮಿ, ವೇಳೆಯಿಲ್ಲ," ಎಂದು ಹೇಳಿಬಿಟ್ಟರಂತೂ ಶಂಕ್ರಣ್ಣನ ಪ್ರಾಣವೇ ಹೋದಂತಾಗುತ್ತಿತ್ತು. ತನಗೆ ಪರಿಚಯವಿದ್ದ ಪ್ರತಿಷ್ಠಿತರಿಗೆ ದುಂಬಾಲು ಬಿದ್ದು ಕವನ ಓದುವ ಛಾನ್ಸು ಕೊನೆಗೂ ಪಡೆಯುವಲ್ಲಿ ಯಶಸ್ವಿಯಾಗುತ್ತಿದ್ದ. ಕವಿಗೋಷ್ಠಿಯಲ್ಲಿ ಒಂದೇ ಕವನ ಓದಬೇಕೆಂದು ಕಟ್ಟಳೆ ಹಾಕಿದರೆ "ಹೂಂ" ಎನ್ನುತ್ತಿದ್ದ. ಆದರೆ ಮೊದಲು ಓದುವ ಕವನದ ಶಿರೋನಾಮೆಯನ್ನು ಮಾತ್ರ ಹೇಳಿ ಓದಲು ಪ್ರಾರಂಭಿಸಿ ಎರಡನೆ ಹಾಗೂ ಮೂರನೇ ಕವನದ ಶಿರೋನಾಮೆ ಹಾರಿಸಿ, ಇಲ್ಲವೇ "ಇನ್ನೆರಡು ಕಿರಿ(ಕಿರಿ) ಕವನಗಳು" ಎಂದು ಹೇಳಿ



ಬಡಬಡನೇ ಓದಿಬಿಡುತ್ತಿದ್ದ. ಸಂಘಟಕರು ಕೈ ಕೈ ಹಿಚುಕಿಕೊಂಡು ''ಏ.. ಸಾಕು ಮಾಡೋ ಮಾರಾಯಾ'' ಎಂದು ಚೀಟಿ ಕೊಟ್ಟು ಅಂಗಿ ಹಿಡಿದು ಎಳೆದರೂ ಹಟಮಾರಿ ಹುಡುಗನಂತೆ ಕೊಸರಿಕೊಂಡು ''ಒಂದೇ ನಿಮಿಷ, ಒಂದೇ ನಿಮಿಷ'' ಎಂದು ಮುಂದುವರೆಸುತ್ತಿದ್ದ. ಸಭಿಕರು ಚಪ್ಪಾಳೆ ಹೊಡೆದು ಸಂಜ್ಞೆ ಮಾಡಿದರೂ ಬಿಡುತ್ತಿರಲಿಲ್ಲ. ಪ್ರೋತ್ಸಾಹ ಕೊಟ್ಟರೆಂದು ಮತ್ತಷ್ಟೂ ಜೋರು ಮಾಡುತ್ತಿದ್ದ. ಹೀಗಾಗಿ ಶಂಕ್ರಣ್ಣ 'ಮೂರಾಣೆ ಕೊಟ್ಟು ಹಚ್ಚಿ ಆರಾಣೆ ಕೊಟ್ಟು ಬಿಡಿಸುವ ಕವಿ' ಎಂದೇ ಹೆಸರಾಗಿದ್ದ.

ಒಂದು ಸಲ ಹೀಗೇ ಆಯ್ತು. ನಗರಸಭೆಯ ಸಭಾಭವನದಲ್ಲಿ ಅದ್ದೂರಿಯಿಂದ ನವಂಬರ್ ಒಂದರಂದು ಕವಿಗೋಷ್ಠಿ ಏರ್ಪಡಿಸಲಾಗಿತ್ತು. ದೊಡ್ಡ ದೊಡ್ಡ ಅತಿಥಿಗಳು ಆಗಮಿಸಿದ್ದರು. ಸಭಾಭವನದ ಕುರ್ಚಿಗಳೆಲ್ಲ ತುಂಬಿ ತುಳುಕುತ್ತಿದ್ದವು. ಇಂಥ ದೊಡ್ಡ ಸಭೆಯಲ್ಲಿ ಕವನ ಓದುವ ಕವಿಗಳದೇ ಮಹಾಭಾಗ್ಯ ಎಂದು ಶಂಕ್ರಣ್ಣ ಶತಾಯ ಗತಾಯ ಪ್ರಯತ್ನ ಮಾಡಿ ಕವನ ಓದುವ ಛಾನ್ಸ್ ಗಿಟ್ಟಿಸಿಕೊಂಡ. ಸಂಘಟಕರು ''ಕನ್ನಡ ಭಾಷೆಯ ಬಗ್ಗೆ ಒಂದು ಕವನವನ್ನು ಕಡ್ಡಾಯವಾಗಿ ಓದಲೇಬೇಕು. ಮತ್ತೊಂದು ಚಿಕ್ಕ ಕವನ, ಯಾವುದೇ ವಿಷಯ ಕುರಿತು ಇರಬಹುದು'' ಎಂದು ಸೂಚಿಸಿದರು. ಶಂಕ್ರಣ್ಣನಿಗೆ ಮೈ ಪುಲಕಗೊಂಡಿತು. ಅಂದೇ ಕನ್ನಡದ ಬಗ್ಗೆ ಹೊಸ ಕವನ ಬರೆದಿದ್ದ. ಮೊದಲು ಅದನ್ನೇ ಪ್ರಾರಂಭಿಸಿದ.

ನೆಲವು ಕನ್ನಡ ಜಲವು ಕನ್ನಡ
ಕಲ್ಲು ಕನ್ನಡ ಉಸುಕು ಕನ್ನಡ
ಮೋಡ ಕನ್ನಡ ಮಳೆಯು ಕನ್ನಡ
ಕೈಯು ಕನ್ನಡ ಕಾಲು ಕನ್ನಡ
ಕಣ್ಣು ಕನ್ನಡ ಕಿವಿಯು ಕನ್ನಡ

ಮೊದಮೊದಲು ಒಂದೆರಡು ಸಾಲು ಕೇಳಿದ ಜನ ಕಿವಿ ನಿಮಿರಿಸಿ ಕುಳಿತರು. ಮುಂದೆ ಕೈ ಕಾಲು ಕನ್ನಡ ಎಂದು ಓದಿದೊಡನೆ ''ಸಾಕು ನಿಲ್ಲಿಸಪ್ಪೊ '' ಎಂದು ಕೂಗತೊಡಗಿದರು. ಆದರೆ ಶಂಕ್ರಣ್ಣ

ಇಲ್ಲಿಸಿಮಾನೆ? ಜೋರಾಗಿ ಮುಂದುವರೆಸಿದ.

ಕಸ್ತೂರಿ ಚೆನ್ನಮ್ಮ ಕನ್ನಡ
ಆವಳ ಕುದುರೆ ಕನ್ನಡ
ಆವಳ ಸೀರೆ ಕನ್ನಡ
ಆವಳ ಖಡ್ಗ ಕನ್ನಡ
ಒನಕೆ ಓಬವ್ವ ಕನ್ನಡ
ಓಬವ್ವನ ಒನಕೆ ಕನ್ನಡ

ಮುಂದೆ ಏನೇನು ಅನ್ನುತ್ತಿದ್ದನೊ ಏನೊ! ಕೂಡಲೇ ಕವಿಗೋಷ್ಠಿಯ ಅಧ್ಯಕ್ಷರು ಬೆಲ್ಲು ಹೊಡೆದು 'ಸಾಕು ಸಾಕು' ಎಂದರು. ಆಮೇಲೆ ಕವಿಗೋಷ್ಠಿಯ ನಿಯಮದಂತೆ ಎರಡನೇ ಕವನವನ್ನು ಓದಲು ಶಂಕ್ರಣ್ಣ ಪ್ರಾರಂಭಿಸಿದ.

ನಮ್ಮ ನಗರದಲ್ಲಿ ಇಹುದು ದೊಡ್ಡದೊಂದು ಓಣಿ
ದೊಡ್ಡ ಓಣಿ ಮಗ್ಗುಲಲ್ಲಿ ಇಹುದು ದ್ವಿತೀಯ ಓಣಿ
ದ್ವಿತೀಯ ಓಣಿ ಮಗ್ಗುಲಲ್ಲಿ ಇಹುದು ತೃತೀಯ ಓಣಿ
ತೃತೀಯ ಓಣಿ ಪಕ್ಕದಲ್ಲಿ ಇಹುದು ನಾಲ್ಕನೇ ಓಣಿ
ನಾಲ್ಕನೇ ಓಣಿಗ್ಹತ್ತಿರುವುದೇ ಐದನೆ ಓಣಿ
ಐದನೆ ಓಣಿ ಬಳಿಯಲಿಹುದು ಆರನೇ ಓಣಿ
ಆರನೇ ಓಣಿ ಮಗ್ಗಲಿಹುದು ಏಳನೇ ಓಣಿ

ಕವನವು ಯಾವಾಗ ಮುಗಿದೀತೋ ಎಂದು ಆಲಿಸುತ್ತಲೇ ಇದ್ದ ಅಧ್ಯಕ್ಷರ ತಲೆ ಆಗಲೇ ಏಳು ಓಣಿಯಲ್ಲಿ ತಿರುಗಾಡಿ ಕೆಟ್ಟು ಹೋಗಿತ್ತು. ''ರೀ ಮಿಸ್ಟರ್, ಏನಿದು ನಿಮ್ಮ ಓಣಿ ಪದ್ಯ?'' ಎಂದರು. ಶಂಕ್ರಣ್ಣ ವಿನೀತಭಾವದಿಂದ ''ಅಧ್ಯಕ್ಷರೆ, ಒಟ್ಟು ನಮ್ಮ ಊರಲ್ಲಿ ಒಂದುನೂರಾ ಐವತ್ತು ಓಣಿಗಳು ಇವೆ. ಅವು ಎಲ್ಲಾ ಮುಗಿಯುವವರೆಗೆ ಓದುತ್ತೇನೆ. ದಯಮಾಡಿ ಪರವಾನಿಗೆ ಕೊಡಬೇಕು'' ಎಂದ. ಸಭಿಕರಿಗೂ ಈ ಓಣಿಯ ಕವನ ಕೇಳಿ ರೋಸಿಹೋಗಿತ್ತು. ಅದರಲ್ಲೊಬ್ಬ ''ಸ್ವಾಮಿ, ಕವಿಗಳೆ, ನಿಮ್ಮ ಎಲ್ಲಾ ಓಣಿ ನಂಗೆ ತೋರಿಸಿ ಬಿಡಿ. ನೋಡಿಕೊಂಡು ಬಂದ ಮೇಲೆ ನಿಮ್ಮ ಕವನ ಕೇಳ್ತೇವೆ'' ಎಂದ. ''ಆಗಲಿ ಬನ್ನಿ ತೋರಿಸ್ತೇನಿ, ಹಾಡು ಹೇಳ್ತಾ ತೋರಿಸ್ತೇನಿ'' ಎಂದವನೇ ವೇದಿಕೆಯಿಂದ ಕೆಳಗೆ ಇಳಿದು ಹೊರಟೇ ಬಿಟ್ಟ. ಸಭೆಗೆ ಹಿಡಿದ ಗ್ರಹಣ ಕಳಚಿದಂತಾಯಿತು. ಅಂದಿನಿಂದ ಶಂಕ್ರಣ್ಣನಿಗೆ ಪ್ರಮೋಶನ್ ಆಯಿತು. ಈಗ ಆತನನ್ನು ಕವಿಗೋಷ್ಠಿಯ ಅಧ್ಯಕ್ಷ ಸ್ಥಾನಕ್ಕೆ ಮಾತ್ರ ಕರೆಯುತ್ತಿದ್ದರು. ಅಧ್ಯಕ್ಷರು ಕವನವನ್ನು ಕೊನೆಗೆ ಓದುವ ಪರಿಪಾಠವಿರುತ್ತದಲ್ಲವೆ? ಕವಿಗೋಷ್ಠಿಯ ಅಧ್ಯಕ್ಷ ಕವಿ ಶಂಕ್ರಣ್ಣ ಕವನವಾಚನ ಆರಂಭಿಸಲು ಏಳುತ್ತಿದ್ದಂತೆಯೇ ತಮಗೆ ಎದ್ದು ಹೋಗಲು ಅನುಕೂಲವಾಗುವುದೆಂದು ಕೆಲವು ಜಾಣಾಕ್ಷರು ಮಾಡಿದ ಉಪಾಯ ಇದು.

ಅಂದಹಾಗೆ ಇದೀಗ ಕಾರ್ಡು ಬಂತು. ಕವಿಗೋಷ್ಠಿಯದು. ಅಧ್ಯಕ್ಷತೆ ನಮ್ಮ ಶಂಕ್ರಣ್ಣನದೇ. ಹೋಗೋಣ ಬರುತ್ತೀರಾ? ●

ಸಾಮಾನ್ಯ ವಸ್ತುಗಳ ಬೆಲೆ!

ಒಬ್ಬ ಶ್ರೀಮಂತ ತನ್ನಲ್ಲಿರುವ ಬೆಲೆ ಬಾಳುವ ಕಲ್ಲುಗಳನ್ನು ಮಿತ್ರನೊಬ್ಬನಿಗೆ ತೋರಿಸುತ್ತಿದ್ದ. ಅವನ ಬಳಿ ಮುತ್ತು, ರತ್ನ, ವಜ್ರ, ಪಚ್ಚೆ, ಹವಳ, ಕೆಂಪು ಮುಂತಾದ ಹರಳುಗಳ ಅದ್ಭುತ ಸಂಗ್ರಹವಿತ್ತು. ಜಗತ್ತಿನ ಎಲ್ಲ ಪ್ರದೇಶಗಳಿಂದ ಅವುಗಳನ್ನು ಅವನು ತುಂಬ ಹಣಕೊಟ್ಟು ತರಿಸಿದ್ದ. ''ಇವುಗಳಿಂದ ನನಗೆ ಸಂಪಾದನೆಯಾಗಲಿ, ಲಾಭವಾಗಲಿ ಇಲ್ಲ'' ಎಂದು ಶ್ರೀಮಂತ ಹೇಳಿದ.

ಅವನ ಮಿತ್ರ, ತನ್ನಲ್ಲಿ ಬಹಳ ಕಡಿಮೆ ಬೆಲೆಯ ಎರಡೇ ಕಲ್ಲುಗಳಿವೆಯೆಂದೂ, ಅವುಗಳಿಂದಲೇ ತನ್ನ ಜೀವನ ಸಾಗುತ್ತಿರುವುದೆಂದೂ ಹೇಳಿದ; ಶ್ರೀಮಂತನನ್ನು ತನ್ನ ಗಿರಣಿಗೆ ಕರೆದುಕೊಂಡು ಹೋಗಿ ಗಿರಣಿಯ ಕಲ್ಲುಗಳನ್ನು ತೋರಿಸಿದ.

ಸಂಗ್ರಹ: **ಸುಧಾ ಭಟ್**

ಹದಿನೈದನೆ ಶತಮಾನದ
ಬಲೂಚಿ ಜಾನಪದ ಕಥೆ

ಶಾಹ ಮುರೀದ ಮತ್ತು ಹಾನೀ

● ಎಮ್. ದಸ್ತಗೀರ್

ಮೀರ್ ಚಾಕರಖಾನನ ನೇತೃತ್ವದಲ್ಲಿ ಬಲೂಚಿಯ ಶೂರ ಯೋಧರು ಸೀಸ್ತಾನ ಮತ್ತು ಮಕರಾನದ ಗುಡ್ಡಗಾಡು ಪ್ರದೇಶವನ್ನು ಸವರುತ್ತ ಸಿಬೀಯ ಸಮೀಪ ತಂಗಿದರು.

ಸಿಬೀ ಕಬೀಲೆಯ ಮುಖ್ಯಸ್ಥ ಮುಬಾರಕನ ಮಗ ಮುರೀದ ಒಳ್ಳೆ ಶೂರ. ಹರವಾದ ಎದೆ, ಹುಲಿಯನ್ನು ತಡೆಯಬಲ್ಲ ಶಕ್ತಿ. ಜೊತೆಗೆ ಅನುಪಮ ಸೌಂದರ್ಯಶಾಲಿ, ಕವಿ-ಸಂಗೀತಗಾರ ಮತ್ತು ಶ್ರೇಷ್ಠ ಗುರಿಕಾರನಾಗಿದ್ದ. ತನ್ನದೇ ಆದ ಸಮವಯಸ್ಕರ ತಂಡವನ್ನಾತ ಕಟ್ಟಿಕೊಂಡಿದ್ದನು.

ಬಾಲ್ಯದಿಂದಲೂ ಮುರೀದ ತನ್ನ ವಂಶದವಳಾದ ಹಾನೀಯನ್ನು ಪ್ರೀತಿಸುತ್ತಿದ್ದ. ಅವರು ದೊಡ್ಡವರಾದಂತೆ ಈ ಪ್ರೇಮವು ಗಾಢವಾಯಿತು.

ಒಂದು ದಿನ ಮೀರ್‌ಚಾಕರ್‌ಖಾನ್ ಮತ್ತು ಅವನ ಸಂಗಡಿಗರು ಹರಟೆಯಲ್ಲಿ ಮಗ್ನರಾಗಿದ್ದರು. ಆಗ ಬಂದ ಸೂಚನೆಯಂತೆ ಪ್ರತಿಯೊಬ್ಬ ಸರದಾರನೂ ಒಂದೊಂದು ದೃಢ ನಿಶ್ಚಯ ಮಾಡಿ ಅದರಂತೆ ನಡೆಯುವ ಪ್ರತಿಜ್ಞೆ ಮಾಡಿದರು-

ಮೊದಲನೆಯ ಸರತಿ ಚಾಕರಖಾನನದು. ''ನನ್ನ ಜೀವಮಾನದಲ್ಲಿ ನಾನೆಂದೂ ಸುಳ್ಳು ಹೇಳುವುದಿಲ್ಲ,'' ಎಂದಾತ ಪ್ರತಿಜ್ಞೆ ಮಾಡಿದ.

ಇನ್ನೊಬ್ಬ ಸರದಾರ ಜಾಡೇಖಾನ್ - ''ಯಾರೇ ಆಗಲಿ ನನ್ನ ದಂಡಿಗೆ ಕೈ ಹಚ್ಚಿದರೆ ಅವನ ಪ್ರಾಣ ತೆಗೆದುಕೊಳ್ಳುವೆ'' - ಎಂದು ಆಣೆ ಮಾಡಿದ.

ಮುರೀಖಾನ್ ಎದ್ದು ನಿಂತು - ''ನನ್ನಿಂದ ದಾನವಾಗಿ ಕೇಳಿದ ಯಾವ ವಸ್ತುವನ್ನು ಕೊಡಲೂ ನಾನು ಹಿಂದು - ಮುಂದೆ ನೋಡಲಾರೆ,'' ಎಂದ.

ಕೆಲ ಸಮಯದ ನಂತರ ಮೀರ್‌ಚಾಕರಖಾನನು ಈ ಸರದಾದರರ ನಿಶ್ಚಯಗಳನ್ನು ಪರೀಕ್ಷಿಸಬೇಕೆಂದುಕೊಂಡು, ವಿಚಾರಿಸಿದನು. ಹಾಗೆಯೆ ಜಾಡೇಖಾನನ ಮಗನನ್ನು ರಮಿಸಿ, ಅವನು ತನ್ನ ತಂದೆಯ ಗಡ್ಡಕ್ಕೆ ಕೈಹಚ್ಚುವಂತೆ ಪುಸಲಾಯಿಸಿದನು. ಚಿಕ್ಕ ಮಗುವಿನ ಈ ಕೃತಿಯಿಂದಾಗಿ ಕುಪಿತನಾದ ಜಾಡೇಖಾನನು ಖಡ್ಗವನ್ನು ಹಿರಿದು ತನ್ನ ಮಗುವನ್ನು ಕತ್ತರಿಸಿ ಹಾಕಿದನು.

ನಂತರ ಚಾಕರಖಾನನಿಗೆ ಇನ್ನೊಂದು ಚೇಷ್ಟೆ ತಲೆದೋರಿತು - ಶಾಹಮುರೀದನೊಡನೆ ವಿವಾಹ ನಿಶ್ಚಯವಾದ ಕುಮಾರಿ ಹಾನೀಯ ಮೇಲೆ ಚಾಕರಖಾನನಿಗೂ ಪ್ರೀತಿ. ಮೊದ-ಮೊದಲು ಅವನು ಹಾನೀಯ ವಿಷಯದಲ್ಲಿ ಸಂದೇಹದ ಬೀಜ ಬಿತ್ತಲು ಪ್ರಯತ್ನಿಸಿದನು.



ಬಿ.ಪಿ. ಇನ್ಸ್ಪೆಕ್ಟರನ್ನ ಅಂಗಡಿಗೆ ಏಕೆ ಕರೆದು ಕೊಂಡು ಬರಬೇಕಿತ್ತಮ್ಮ!!

ಆದರೆ ಅದರಲ್ಲಿ ಫಲ ಸಿಗಲಿಲ್ಲ. ಆದುದರಿಂದಾಗಿ ಚಾಕರಖಾನ್ ಇನ್ನೊಂದು ತಂತ್ರ ಹೂಡಿದ.

ಒಂದು ದಿನ ನೃತ್ಯ ಕಾರ್ಯಕ್ರಮ ನಡೆದಿದ್ದಿತು. ಎಲ್ಲರೂ ಸುರೆಯ ಮತ್ತಿನಲ್ಲಿ ತೂಗಾಡುತ್ತಿದ್ದರು. ಚಾಕರಖಾನನು ಮೊದಲೇ ನರ್ತಕಿಯನ್ನು ಒಲಿಸಿದ್ದನು - ಶಾಹಮುರೀದನಿಂದ ಅವನ ಹಾನೀಯನ್ನು ಬೇಡಬೇಕೆಂದು!

ಶಾಹಮುರೀದ ಪೂರ್ಣ ಮತ್ತಿನಲ್ಲಿದ್ದಾಗ ನರ್ತಕಿಗೆ ಕೇಳಿದ - ''ಕೇಳು, ನೀನು ಕೇಳುವುದಿದೆಯೋ ಕೇಳು!''

''ಹಾನೀ...!''

ಈ ಬೇಡಿಕೆಯನ್ನು ಕೇಳಿದ ಕೂಡಲೆ ಶಾಹ ಮುರೀದನ ಮತ್ತಿಳಿದು ಹೋಯಿತು. ಆದರೇನೂ ಮಾಡಲಾರದವನಾಗಿದ್ದ. ಯಾಕೆಂದರೆ, ಕೊಟ್ಟ ಮಾತಿಗೆ ತಪ್ಪುವವನಲ್ಲವೆಂದು ಪ್ರತಿಜ್ಞೆ ಮಾಡಿದ್ದನಲ್ಲ.

ಶಾಹಮುರೀದನ ವಿಯೋಗದಿಂದ ದುಃಖಿತಳಾದ ಹಾನೀ ಯಾವಾಗಲೂ ವಿರಹ ಗೀತೆಗಳನ್ನು ಹಾಡಹತ್ತಿದಳು.

ಶಾಹಮುರೀದನು ನಿತ್ಯವೂ ರಾತ್ರಿ ಚಾಕರಖಾನನ ಮಹಲಿಗೆ ಹೋಗಿ ಪ್ರೇಮಪೂರಿತ ಮಾತುಗಳನ್ನಾಡಿ ಬೆಳಗಾಗುವುದರೊಳಗಾಗಿ ಮನೆಗೆ ಮರಳತೊಡಗಿದ. ಇದೆಲ್ಲವೂ ಗೌಪ್ಯವಾಗಿ ನಡೆಯುತ್ತಿತ್ತು. ಹೀಗೆ ಬಂದುಹೋಗುವುದು ಸರಿಯಲ್ಲವೆಂದು ಹಾನೀ ತಿಳಿಹೇಳಿದಳು - ಚಾಕರಖಾನನ ಸಿಪಾಯಿಗಳು ಬಂಧಿಸಿದರೆ ಅನರ್ಥವಾಗುವುದೆಂದೂ ಎಚ್ಚರಿಸಿದಳು.

ಆದರೆ ಮುರೀದ ನಗುನಗುತ್ತಾ - ''ಪ್ರಿಯ ಹಾನೀ, ನೀನು ಒಳ್ಳೆ ಶೂರ ವೀರನ ಮಗಳು. ನಾನಾದರೂ ಶೂರ ಯೋಧ ಮುಬಾರಕನ ಜ್ಯೇಷ್ಠಪುತ್ರನು. ನನಗೆ ಚಾಕರಖಾನನ ಸಿಪಾಯಿಗಳ ಅಂಜಿಕೆಯಿಲ್ಲ. ಆದರೆ ಅವನು ನನ್ನ ವಿರುದ್ಧ ಹೂಡಿದ ಈ ತಂತ್ರದ ಸೇಡು ತೀರಿಸಲು ಬರುತ್ತಿದ್ದೇನೆ.''

ಒಂದು ರಾತ್ರಿ ಮುರೀದನು ಚಾಕರಖಾನನ ಮಹಲನ್ನು ಪ್ರವೇಶಿಸುತ್ತಿದ್ದಂತೆ ಅಲ್ಲಿಯ ಕುದುರೆಗಳು ಕೆನೆಯಹತ್ತಿದವು.

ಆಗಲೆ ಹಾನೀ ಬಂದು ಪ್ರಾರ್ಥಿಸಿದಳು - ''ದಯವಿಟ್ಟು ನೀವು ಇಲ್ಲಿಗೆ ಬರಬೇಡಿ. ನಿಮ್ಮ ಪ್ರಾಣಕ್ಕೆ ಗಂಡಾಂತರವಿದೆ.''

ಶಾಹ ಮುರೀದ ಖಡ್ಗ ಹಿರಿದು - ''ಎಲ್ಲಿಯವರೆಗೆ ಈ ಖಡ್ಗ ನನ್ನ ಕೈಯಲ್ಲಿರುವುದೋ ಅಲ್ಲಿಯವರೆಗೆ ಈ ಚಾಕರಖಾನನ ನಾಯಿಗಳು ನನ್ನ ಕೂದಲನ್ನೂ ಕೊಂಕಿಸಲಾರವು.''

ಮುಬಾರಕನೂ ತನ್ನ ಮಗ ಮುರೀದನನ್ನು ಎಚ್ಚರಿಸಿದ. ಆದರೆ ಅದರಿಂದೇನೂ ಲಾಭವಾಗಲಿಲ್ಲ. ಚಾಕರಖಾನನನ್ನು ಆ ಕಬೀಲೆಯ ಮುಖ್ಯಾಧಿಕಾರಿಯನ್ನಾಗಿ ಆರಿಸಲಾಯಿತು. ಇದರಿಂದಲೂ ಶಾಹ ಮುರೀದನ ಮೇಲೆ ಯಾವ ಪರಿಣಾಮವೂ ಆಗಲಿಲ್ಲ.

ಮುಬಾರಕ ಮತ್ತು ಶಾಹ ಮುರೀದರಲ್ಲಿ ವೈಮನಸ್ಸೇ ಆಯಿತು. ಇದರಿಂದಾಗಿ ಶಾಹ

ಮುರೀದನು ದೇಶತ್ಯಾಗ ಮಾಡಿ ಸಾಧಕರೊಡನೆ ತಿರುಗಾಡತೊಡಗಿದನು.

ಅವನ ವೈರಾಗ್ಯವನ್ನು ಕೇಳಿ ಹಾನೀ ಬಹಳ ದುಃಖಿತಳಾದಳು. ಅವಳು ಮಹಲಿನಲ್ಲೇ ಕೊರಗತೊಡಗಿದಳು.

ಬಹುದಿನಗಳ ನಂತರ ಮುಂದೊಂದು ದಿನ ಶಾಹ ಮುರೀದನು ಅತ್ಯಂತ ದಯನೀಯ ಸ್ಥಿತಿಯಲ್ಲಿ ಚಾಕರಖಾನನ ಕಿಲ್ಲೆಯ ಸಮೀಪ ಬಂದನು. ಅಲ್ಲಿ ಕೆಲ ನವಯುವಕರು ಗುರಿ ಹೊಡೆಯುವ ಸ್ಪರ್ಧೆಯಲ್ಲಿ ನಿರತರಾಗಿದ್ದರು. ಅಲ್ಲಿಗೆ ಬಂದ ಶಾಹಿ ಮುರೀದನು - ತಾನೂ ಬಾಣ ಹೊಡೆಯುವ ಸ್ಪರ್ಧೆಯಲ್ಲಿ ಭಾಗಿಯಾಗುವ ಇಚ್ಛೆಯನ್ನು ಪ್ರಕಟಿಸಿದನು. ಅವನಿಗೆ ಒಂದು ಬಿಲ್ಲನ್ನು ಕೊಡಲಾಯಿತು. ಅವನು ಬಿಲ್ಲಿಗೆ ಬಾಣ ಹೂಡಿ ಎಳೆಯುತ್ತಿದ್ದಂತೆ ಅದು ಮುರಿದುಹೋಯಿತು.

ಪ್ರೇಕ್ಷಕರೆಲ್ಲ ಅವನ ಶಕ್ತಿಯನ್ನು ನೋಡಿ ಅಚ್ಚರಿಗೊಂಡರು. ಇನ್ನೂ ಎಷ್ಟೋ ಬಿಲ್ಲುಗಳು ಮುರಿದುಹೋದವು.

''ಮುರೀದನ ಬಿಲ್ಲನ್ನೇ ತರಬೇಕು''- ಎಂದು ಅವರಲ್ಲೊಬ್ಬ ಹೇಳಿದನು. ಅದನ್ನೇ ತರಲಾಯಿತು.

ಈ ಬಿಲ್ಲನ್ನು ಮುರೀದನೊಬ್ಬನೆ ಮಣಿಸಬಲ್ಲವನಾಗಿದ್ದ. ಮುರೀದನಿಗೆ ತನ್ನ ಧನುಷ್ಯನ್ನು ನೋಡಿ ಒಳ್ಳೆ ಹರ್ಷವಾಯಿತು. ಅದನ್ನು ಕೈಗೆತ್ತಿಕೊಂಡು ಚುಂಬಿಸಿದನು. ಹಾಗೆಯೇ ಹದವೆರಿಸಿ ಬಾಣಬಿಟ್ಟನು. ಆಗಲೆ ಯಾವನೋ ಒಬ್ಬ '' ಅರೆ, ಈ ಧನುಷ್ಯಕ್ಕೆ ಮುರೀದನೊಬ್ಬನೆ ಹದವೆರಿಸಬಲ್ಲ. ಹಾಗಾದರೆ ಇವನೇ ಶಾಹಮುರೀದ'' ಎಂದ.

ತೀವ್ರವೆ ಈ ಸುದ್ದಿ ದಾವಾನಲದಂತೆ ಇಡೀ ಪ್ರದೇಶದ ತುಂಬ ಹರಡಿತು. ಹಾನೀ ಆನಂದದಿಂದ ಕುಣಿದಾಡಿದಳು.

ಮುರೀದನ ಸಾಹಸವನ್ನು ಕೇಳಿ ತಿಳಿದ ಚಾಕರಖಾನನಿಗೆ ಆನಂದವಾಯಿತು. ಆಗ ಅವನು ಹಾನೀಗೆ ತಲ್ಲಾಕ್ ನೀಡಿ ಸಾಕಷ್ಟು ಒಂಟೆ, ಐಶ್ವರ್ಯಗಳೊಂದಿಗೆ ಅವಳನ್ನು ಕರೆತಂದು ಶಾಹಮುರೀದನಿಗೆ ಒಪ್ಪಿಸಿದನು. ●

ನೀವು ವ್ಯಂಗ್ಯಚಿತ್ರಕಾರರೆ ?

'ಕಸ್ತೂರಿ'ಯಲ್ಲಿ ಪ್ರಕಟಣೆ ಕೋರಿ ದಿನವೂ ನಮ್ಮ ಕೈಸೇರುವ ವ್ಯಂಗ್ಯಚಿತ್ರಗಳು ಅಸಂಖ್ಯ. ಇದಕ್ಕಾಗಿ ವ್ಯಂಗ್ಯಚಿತ್ರಕಾರರಿಗೆ 'ಕಸ್ತೂರಿ' ಕೃತಜ್ಞ.

ಆದರೆ, ಕೆಲವು ಅಂಶಗಳತ್ತ ನಮ್ಮ ವ್ಯಂಗ್ಯಚಿತ್ರಕಾರ ಮಿತ್ರರು ಗಮನಹರಿಸುವುದೊಳಿತು. ನೀವು ಕಳಿಸುವ ಚಿತ್ರದ ಆಕಾರದ ಬಗ್ಗೆ ಖಚಿತತೆ ಇರಲಿ. ನಮ್ಮ ಕಾಲಮ್ಮುಗಳ ಅಳತೆಗೆ ಮೀರುವ ವ್ಯಂಗ್ಯ ಚಿತ್ರಗಳು ಕೆಲವಾದರೆ, ಅದರ ಅಡಿಟಿಪ್ಪಣಿಯನ್ನು ಬರೆಯುವಾಗ ಭಾಷೆ, ವ್ಯಾಕರಣಗಳ ಸ್ಖಾಲಿತ್ಯಗಳೂ ಕೆಲವದರಲ್ಲಿ ಕಂಡುಬರುತ್ತವೆ. ಇನ್ನು ವ್ಯಂಗ್ಯ ಚಿತ್ರಕಾರರನೇಕರು ತಮ್ಮ ಹೆಸರು ಢಾಳಾಗಿ ಕಾಣುವಂತೆ ಬರೆಯುತ್ತಾರೆ. ಚಿತ್ರಕ್ಕಿಂತ ಹೆಸರೇ ಮುಖ್ಯವಾಗಿಬಿಡುವುದು ಸರಿಯಲ್ಲ, ಅಲ್ಲವೆ ?

ಹೀಗೆ ಮಾಡಿ: ಒಂದು ಡೆಮಿ ಆಕಾರದ ಡ್ರಾಯಿಂಗ್ ಪೇಪರಿನಲ್ಲಿ ಸರಿಯಾಗಿ ೩೨ ಭಾಗಮಾಡಿಕೊಳ್ಳಿ. ಒಂದೊಂದು ಭಾಗವೂ ನಮ್ಮ ಪೋಸ್ಟ್‌ಕಾರ್ಡ್ ಸೈಜಿನದಾಗುತ್ತದೆ. ಇಂಥದೊಂದು ಭಾಗದಲ್ಲಿ ಸ್ಫುಟವಾಗಿ ಬಿಡಿಸಿದ ವ್ಯಂಗ್ಯಚಿತ್ರ ನಮ್ಮ ಎರಡು ಕಾಲಂ ಅಳತೆಗೆ ಸರಿಹೊಂದುತ್ತದೆ. ಒಂದು ಕಾಲಂ ಚಿತ್ರ ಬಿಡಿಸಬಯಸುವಿರೋ-ಆ ಭಾಗದಲ್ಲಿ ಎರಡು ಚಿತ್ರ ಬಿಡಿಸಿ ಸಾಕು. ಹಾಂ, ಎಲ್ಲೂ ತಿದ್ದುಪಡಿಗಳು ಬೇಡ. ಅಡಿಟಿಪ್ಪಣಿಯನ್ನು ಬೇಕಾದರೆ ಹಿಂಭಾಗದಲ್ಲಿ ಬರೆಯಬಹುದು. ಚಿತ್ರ ಬಿಡಿಸಲು ಇಂಡಿಯನ್ ಇಂಕನ್ನೇ ಬಳಸಿ.

ಇಂಥ ಪರಿಪೂರ್ಣ ವ್ಯಂಗ್ಯಚಿತ್ರಗಳಾದರೆ ಶೀಘ್ರ ನಿರ್ಧಾರಕ್ಕೆ ಅನುಕೂಲ. ಗಮನಿಸುವಿರಲ್ಲವೆ ?

-ಸಂಪಾದಕ

π

ಪೈ

ಗಣಿತದ ವಿಸ್ಮಯ!

ಪೈ ಗಣಿತ ಲೋಕದ ಒಂದು ಕಗ್ಗಂಟು. ಗಣಿತ ಪಂಡಿತರ ತಲೆ ತಿನ್ನುವ ಒಂದು ಸ್ಥಿರ ಸಂಖ್ಯೆ.

ಪೈ* ...ದರೇನು ಎಂಬ ಕುರಿತು ಚರ್ಚೆಗೆ ಮೊದಲು ಗಣಿತ ರೀತ್ಯ ಇದರ ವ್ಯಾಖ್ಯೆ ಏನೆಂದು ತಿಳಿಯೋಣ. ಗಣಿತ ಶಾಸ್ತ್ರದ ಪ್ರಕಾರ ''ಯಾವುದೆ ಒಂದು ವೃತ್ತದಲ್ಲಿ ಅದರ ಪರಿಧಿಯನ್ನು ವ್ಯಾಸದಿಂದ ಭಾಗಿಸಿದಾಗ ಸಿಗುವ ಸಂಖ್ಯೆಯೆ ಪೈ.'' ಇದೊಂದು ಸ್ಥಿರ ಸಂಖ್ಯೆ.

ಒಂದು ವೃತ್ತದ ಕ್ಷೇತ್ರಫಲ ಕಂಡುಹಿಡಿಯಬೇಕಾದರೆ ನಮಗೆ ತ್ರಿಜ್ಯದ ಕಲ್ಪನೆ ಅವಶ್ಯ. ಒಂದು ನಿರ್ದಿಷ್ಟ ಬಿಂದುವನ್ನು ಕೇಂದ್ರವಾಗಿಟ್ಟುಕೊಂಡು ಎಳೆದ ಒಂದು ಬಿಂದುಪಥವನ್ನು ನಾವು ವೃತ್ತ ಎಂದು ಹೇಳುತ್ತೇವೆ. ಮಧ್ಯದ ಬಿಂದುವಿಗೆ ವೃತ್ತ ಕೇಂದ್ರವೆಂತಲೂ, ವೃತ್ತಕೇಂದ್ರದಿಂದ ಬಿಂದು ಪಥಕ್ಕೆ ಇರುವ ಅಂತರವನ್ನು ತ್ರಿಜ್ಯವೆಂದೂ ಕರೆಯುತ್ತೇವೆ.

ಆದ್ದರಿಂದ ಕ್ಷೇತ್ರಫಲ = π (ತ್ರಿಜ್ಯ)^2

ಪ್ರಾಚೀನ ಕಾಲದಿಂದಲೂ ಈ π ನ ಬೆಲೆಯ ಬಗ್ಗೆ ಚಿಂತನೆ ನಡೆದಿದೆ. ಕ್ರಿಸ್ತ ಪೂರ್ವ 2000ದಲ್ಲಿ ಬ್ಯಾಬಿಲೋನಿಯನ್ನರು ಹಾಗೂ ಇಜಿಪ್ಶಿಯನ್ನರು π ನ ಬೆಲೆ ಸರಿಸುಮಾರಾಗಿ 3 ಎಂದು ವ್ಯಾಖ್ಯಿಸಿದ್ದರು. ಇದೇ ರೀತಿಯ ಕಲ್ಪನೆಯನ್ನು ಕ್ರಿಸ್ತಪೂರ್ವ 500ರಲ್ಲಿ ಯಹೂದಿಗಳಲ್ಲಿಯೂ ಕಾಣುತ್ತೇವೆ.

ಪ್ರಾಚೀನ ಚೀನದ ಗಣಿತಜ್ಞರು ಕೂಡ π ನ ಬೆಲೆಯನ್ನು 3 ಎಂದು ಸಿದ್ಧಪಡಿಸಿದ್ದರು. ಹೊ-ಹಾನ್-ಶು [Hou-Han-Shu] ಎಂಬ ಗಣಿತಜ್ಞ (ಕ್ರಿಸ್ತಪೂರ್ವ 130) 10 ರ ವರ್ಗಮೂಲವೆ π ನ ಬೆಲೆ ಎಂದು ತಿಳಿಸಿದ್ದನು. ಈ π ನ ಬೆಲೆಯನ್ನು ಕಂಡುಹಿಡಿಯುವ ದಿಸೆಯಲ್ಲಿ ಚೀನೀ ಗಣಿತಜ್ಞರ ಕಾಣಿಕೆಯನ್ನು ಮರೆಯುವಂತಿಲ್ಲ. ಈ ಚೀನೀ ಗಣಿತ ಶಾಸ್ತ್ರಜ್ಞರು ಜೀವಿಸಿದ ಕಾಲದ ಬಗ್ಗೆ ಸಾಕಷ್ಟು ವಿವಾದಗಳಿವೆ. ಅದರಲ್ಲಿ ನಂಬಲರ್ಹ ಅವಧಿಯೆಂದರೆ ಕ್ರಿಸ್ತಪೂರ್ವ 2750ದಲ್ಲಿದ್ದ ಚೀನೀ ನಾಗರೀಕತೆ. ಚೀನಿಯರೂ π ನ ಬೆಲೆಯನ್ನು 3 ಎಂದು ಭಾವಿಸಿದ್ದರು. ಈ ಬೆಲೆಯ ಲೆಕ್ಕಾಚಾರಕ್ಕೆ ಅವರು 192 ಬಾಹುಗಳುಳ್ಳ ಒಂದು ಬಹುಭುಜಾಕೃತಿಯನ್ನು ರಚಿಸಿದ್ದರು. ಇದರ ಪ್ರಕಾರ π ನ ಬೆಲೆ: $3.141024 < \pi < 3.142704$, ಅದೇ ರೀತಿ 3.072 ಬಾಹುಗಳುಳ್ಳ ಬಹುಭುಜಾಕೃತಿಯ ಸಹಾಯದಿಂದ π ನ ಬೆಲೆ 3.14159 ಎಂದು ತಿಳಿಸಿದ್ದರು.

(''<'' ಇದು ಗಣಿತಶಾಸ್ತ್ರದಲ್ಲಿ ಬರುವ ಒಂದು ಸಂಜ್ಞೆ. ಇದರರ್ಥ ''ಚಿಕ್ಕದು'' ಎಂದು)

ಐದನೇ ಶತಮಾನದಲ್ಲಿ ತ್ಸು-ಚುಂಗ್-ಚಿ [Tsu-Chung-Chih] ಎಂಬ ಗಣಿತಜ್ಞ

---

* π - ಇದು ಗ್ರೀಕ್ ಅಕ್ಷರ

● ಬಿ.ಪಿ. ಚಳಗೇರಿ

ತನ್ನ ಮಗ ತ್ಸು-ಕೆಂಗ್-ಚಿ [Tsu-Keng-Chih] ಯ ಜೊತೆಗೂಡಿ π ನ ಬೆಲೆ $3.141592 < \pi < 3.1415927$ ಎಂದು ಗುಣಿಸಿದ್ದನು. ಇದು ಪ್ರಸ್ತುತ ಬಳಕೆಯಲ್ಲಿರುವ π ನ ಬೆಲೆಗೆ ತೀರ ಹತ್ತಿರವಿದೆ.

ಆಧುನಿಕ ಅವಧಿಯಲ್ಲಿ π ನ ಬೆಲೆ

ಈ π ನ ಬೆಲೆ ಎಷ್ಟೊಂದು ಕುತೂಹಲ ಹುಟ್ಟಿಸಿತೆಂದರೆ ಇದು ಬಿಂದು ವೃತ್ತದಷ್ಟೆ ಕ್ಷೇತ್ರಫಲ ಇರುವ ಚಚ್ಚೌಕವನ್ನು ರಚಿಸಿ ಅದರ ಮುಖಾಂತರ π ನ ಬೆಲೆ ಕಂಡುಹಿಡಿಯಲು ಪ್ರಚೋದಿಸಿತು. ಈ ಅಂಶದ ಆಧಾರದ ಮೇಲೆ 18ನೇ ಶತಮಾನದಲ್ಲಿ ಲೆಗೆಂಡ್ರೆ (Legendre) ಎಂಬ ಗಣಿತ ವಿದ್ವಾಂಸ π^2 ಒಂದು ಅವಿಭಾಜ್ಯ ಸಂಖ್ಯೆ (Irrational number) ಅಂದರೆ π ಒಂದು ಭಾಜ್ಯ ಸಂಖ್ಯೆಯ ವರ್ಗಮೂಲ ಅಲ್ಲ ಎಂದು ಸಿದ್ಧಮಾಡಿ ತೋರಿಸಿದ.

ಈ π ನ ವಿಷಯ ಗಣಿತ ಮೇಧಾವಿಗಳಾದ ಲಿಬ್‌ನಿಟ್ಜ್ (Laibnitz) ನ್ಯೂಟನ್ ಹಾಗೂ ಯೂಲರ್ (Euler)ರ ಗಮನ ಸೆಳೆಯಿತು. ಮುಂದೆ ಯೂಲರನು ವೃತ್ತ ಪರಿಧಿಯನ್ನು ಅದರ ವ್ಯಾಸದಿಂದ ಭಾಗಿಸಿದಾಗ ಸಿಗುವ ಸಂಖ್ಯೆಯೆ π ನ ಬೆಲೆ ಎಂದು ಪ್ರಚುರಪಡಿಸಿದನು. ಇದೇ ಸಮಯದಲ್ಲಿ ಲಘುಗಣಕಗಳ ಬೆಳವಣಿಗೆ π ನ ಬೆಲೆ ಗುಣಿಸುವಲ್ಲಿ ಸಹಾಯಕವಾಯಿತು. π ನ ನಿಖರ ಬೆಲೆಗಾಗಿ ಮತ್ತಷ್ಟು ಪ್ರಯತ್ನಕ್ಕೆಡೆ ಮಾಡಿಕೊಟ್ಟಿತು.

ಅಬ್ರಹಾಂ ಶಾರ್ಪ್ (Abraham Sharp) ಎಂಬುವವನು 70 ದಶಮ ಸ್ಥಾನಗಳವರೆಗೆ π ನ ಬೆಲೆ ಗುಣಿಸಿದರೆ ಜಾನ್ ಮಚಿನ್ (John Machin) ಎಂಬುವವನು 100 ದಶಮಾಂಶ ಸ್ಥಾನಗಳವರೆಗೂ, ವೇಗಾ (Vega) ಎಂಬುವವನು 140 ದಶಮಾಂಶ ಸ್ಥಾನಗಳವರೆಗೆ π ನ ಬೆಲೆ ಗುಣಿಸಿದರು. ಸಹಜವಾಗಿಯೇ ಈ π ನ ಬೆಲೆ ಗಣಕ ಯಂತ್ರ ಜಗತ್ತನ್ನು ಆಕರ್ಷಿಸಿತು.

1949ನೆ ಇಸ್ವಿಯಲ್ಲಿ 237 ದಶಮಾಂಶ ಸ್ಥಾನಗಳವರೆಗೆ ಈ π ನ ಬೆಲೆ ಗುಣಿಸಲಾಯಿತು, ಮುಂದೆ 1958ರಲ್ಲಿ 10,000 ಸ್ಥಾನಗಳವರೆಗೆ ಗುಣಿಸಿದರೆ, 1966ರಲ್ಲಿ ಇದು 500,000 ಸ್ಥಾನಗಳವರೆಗೆ ಏರಿತು. ಪ್ರಸ್ತುತ ಸೂಪರ್ ಕಂಪ್ಯೂಟರ್‌ಗಳ ನೆರವಿನಿಂದ ಇದರ ಬೆಲೆ ಮಿಲಿಯನ್ ಸ್ಥಾನಗಳವರೆಗೆ ಹೋಗಿದೆ.

ಭಾರತೀಯರ ಕೊಡುಗೆ

π ನ ಬೆಲೆಯನ್ನು ನಿರ್ಧರಿಸುವಲ್ಲಿ ಭಾರತೀಯರೇನೂ ಹಿಂದೆ ಬಿದ್ದಿಲ್ಲ. ಪ್ರಸಿದ್ಧ ಗಣಿತಜ್ಞ ಆರ್ಯಭಟನು π ಬೆಲೆ ಬಗ್ಗೆ ಈ ರೀತಿ ಹೇಳಿದ್ದಾನೆ: ''100ಕ್ಕೆ 4 ಸೇರಿಸಿ, 8ರಿಂದ ಗುಣಿಸಿ, ಪುನ: 62,000 ಕೂಡಿಸಿ, ಬಂದ ಸಂಖ್ಯೆಗೆ 20,000ದಿಂದ ಭಾಗಿಸಿದರೆ ಬರುವ ಸಂಖ್ಯೆಯೆ π ನ ಬೆಲೆ.''

ಈತನ ನಂತರ ಬಂದವರಲ್ಲಿ ಭಾಸ್ಕರ ಉಲ್ಲೇಖನೀಯ. ತನ್ನ ''ಬೀಜಗಣಿತ'' ಎಂಬ ಗ್ರಂಥದಲ್ಲಿ ಹೇಳಿರುವ ಬೀಜಗಣಿತದ ಮೂಲಭೂತ ಕಲ್ಪನೆಗಳು ಹಾಗೂ ಸೊನ್ನೆಯ ಮೇಲಿನ (ಗಣಿತ) ಕ್ರಿಯೆ, ಮೊದಲಾದವು ಅದ್ಭುತವಾದವು. ಭಾಸ್ಕರ ಪ್ರಕಾರ π ನ ಬೆಲೆ 3927/1250 ಅಥವಾ ಇದರ ಸಂಕ್ಷಿಪ್ತ ರೂಪ 22/7. ಇನ್ನೊಬ್ಬ ಪ್ರಖ್ಯಾತ ಗಣಿತಜ್ಞ ಹಾಗೂ ಖಗೋಳ ಶಾಸ್ತ್ರಜ್ಞ ವರಾಹಮಿಹಿರ 3.0+177/1250 ನ್ನು π ನ ಬೆಲೆಯಾಗಿ ಸೂಚಿಸಿದನು.

ಇಷ್ಟಾದರೂ ಇದರ ನಿಖರ ಬೆಲೆ ಇಷ್ಟೆ ಅಂತ ಹೇಳಲಾಗದು. ಮುಂದೆ ಬರಬಹುದಾದ ಫಲಿತಾಂಶಗಳನ್ನು ಕಾದು ನೋಡಬೇಕು. ●

(ವಿವಿಧ ಮೂಲಗಳಿಂದ)

ಜಿಪುಣರ ಜಿಪುಣ
ಜಾನ್ ಎಲ್ವ್ಸ್

"ನನ್ನ ಹಣವನ್ನು ನಾನೇ ಇಟ್ಟುಕೊಳ್ಳುತ್ತೇನೆ - ನನ್ನ ಆಸ್ತಿಯನ್ನು ಯಾರೂ ಕಸಿದುಕೊಳ್ಳಲಾರರು," - ಎಂದು ಚೀರುತ್ತ ಆ ಆಂಗ್ಲ ಶ್ರೀಮಂತ ವೃದ್ಧ ಪ್ರಾಣ ಬಿಟ್ಟ!

ಮರಣಶಯ್ಯೆಯಲ್ಲೊರಗಿದ್ದ ಆ ಮುದುಕ ಬ್ಯಾಂಕಿನಿಂದ ಆಗತಾನೆ ತಂದು ಎದುರು ಸುರಿದಿದ್ದ ಹೊಚ್ಚ-ಹೊಸ, ಥಳ-ಥಳ ಹೊಳೆಯುವ ಬಂಗಾರದ ನಾಣ್ಯಗಳ ರಾಶಿಯನ್ನು ಆಸೆಯಿಂದ ಕಣ್ಣಗಲಿಸಿ ನೋಡುತ್ತ, ನಡುಗುವ ಕೈಗಳಿಂದ ಒಂದೊಂದೇ ನಾಣ್ಯವನ್ನು ಮುಟ್ಟಿ, ಮುಟ್ಟಿ ಮುದ್ದಿಸುತ್ತಿದ್ದಂತೆಯೇ, ಕಣ್ಣಿಗೆ ಕತ್ತಲು ಕವಿದಂತಾಗಿ, ಆತ ಚೀರುತ್ತಿದ್ದ ಹಾಗೇ ಅವನ ಪ್ರಾಣಪಕ್ಷಿ ಹಾರಿಹೋಯಿತು! ಆತನೆ ಇಂಗ್ಲೆಂಡಿನ ಜಾನ್ ಎಲ್ವ್ಸ್ (1714-1789). ಜಗತ್ತು ಹಿಂದೆಂದೂ ಕಂಡಿರದಿದ್ದ ಆ ಜಿಪುಣಾಗ್ರೇಸರ.

ಕೊಳೆತು ಹೋಗುವಷ್ಟು ಆಸ್ತಿ ಇದ್ದರೂ ಕೊಳೆತ - ಹಳಸಿದ ಮಾಂಸ ತಿಂದೇ ಬದುಕಿದ ಭೂಪ ಜಾನ್ ಎಲ್ವ್ಸ್. ಬ್ರಿಟಿಶ್ ಪಾರ್ಲಿಮೆಂಟಿನ ಚುನಾಯಿತ ಸದಸ್ಯನಾಗಿದ್ದ ಆತ ಚುನಾವಣೆಗಾಗಿ ಮಾಡಿದ ಖರ್ಚು ಎಷ್ಟು ಗೊತ್ತೆ? ಕೇವಲ 18 ಪೆನ್ನಿಗಳು! ಸ್ವಂತದ ಆರೋಗ್ಯ ರಕ್ಷಣೆಗೂ ಖರ್ಚು ಮಾಡಲು ಹಿಂದೆ ಮುಂದೆ ನೋಡಿದ ಜಾನ್ 75 ವರ್ಷ ಬದುಕಿದ!

ವಿಲಕ್ಷಣ ವ್ಯಕ್ತಿ

ಜಾನ್ ಒಬ್ಬ ವಿಲಕ್ಷಣ ವ್ಯಕ್ತಿ. ಸಣ್ಣ ದುಂಡ ನಸು ಹೊಳೆಯುವ ಕಣ್ಣುಗಳು, ಹಿಂದಕ್ಕೆ ಚಾಚಿಕೊಂಡಿರುವ ಹಣೆ, ಹಂಸಪಕ್ಷಿಯ ಕೊಕ್ಕಿನಂಥ ಮೂಗು.

ಆತನ ತಂದೆ ಸೌತ್‌ವರ್ಕ್‌ನ ಸುಪ್ರಸಿದ್ಧ ಶ್ರೀಮಂತ, ಮದ್ಯ ತಯಾರಕ. ಚಿಕ್ಕಪ್ಪ ಸರ್ ಹರ್ವಿ ಎಲ್ವ್ಸ್ ಸಫೋಕ್ ಪ್ರಾಂತದ ಸ್ಟೋಕ್‌ನ ಭಾರಿ ಜಮೀನ್ದಾರ. ಶ್ರೀಮಂತಿಕೆಗೂ ಜಿಪುಣತನಕ್ಕೂ ಹೆಸರಾಗಿದ್ದ ಆ ಮಹಾನುಭಾವ ಒಂದು ಕಟ್ಟಿಗೆ ಸೀಳು ಉರಿದು ಬೂದಿಯಾಗುವವರೆಗೆ, ಒಲೆಗೆ ಮತ್ತೊಂದನ್ನು ಹಾಕುವವನಲ್ಲ. ಆತ ಕತ್ತಲಾಗುವುದಕ್ಕಿಂತ ಮುಂಚೆಯೇ ಊಟ ಮುಗಿಸಿ ಮಲಗಿಬಿಡುತ್ತಿದ್ದ - ರಾತ್ರಿ ಮೇಣದ ಬತ್ತಿಯನ್ನು ಉರಿಸಬೇಕಾಗುತ್ತದಲ್ಲ! ನಮ್ಮ ಕೃಪಣ ಕಥಾನಾಯಕನ ಮಹಾಮಾತೆಯಾದರೋ, ತನ್ನ ಪತಿಯ ಆಸ್ತಿ ಒಂದು ಲಕ್ಷ ಪೌಂಡ್‌ಗಳಷ್ಟಿದ್ದರೂ, ತನ್ನ ಭವ್ಯನಿವಾಸದಲ್ಲಿ ಉಪವಾಸವೇ ಸತ್ತಳು!

ಮೈದಾಸನ ಅಪರಾವತಾರ

ತಾರುಣ್ಯದ ದಿನಗಳಲ್ಲಿ ಜಾನ್ ಎಲ್ವ್ಸ್ ಸೊಗಸಾದ ಉಡುಪು ಧರಿಸಿ, ಮೋಜುಗಾರರೊಂದಿಗೆ ಓಡಾಡುತ್ತಿದ್ದನಾದರೂ ಆಗಲೇ ಅವನು ಮೈದಾಸನ ಅಪರಾವತಾರ! ಆತನ ಸುವರ್ಣ

ವ್ಯಾಮೋಹ ಅದೆಷ್ಟು ಅದಮ್ಯವಾಗಿದ್ದಿತೆಂದರೆ, ಆತ ಜೂಜುಕಟ್ಟೆಗಳಲ್ಲಿ ತಪ್ಪದೆ ಜೂಜಾಡಿ, ಸಾವಿರಗಟ್ಟಲೆ ಹಣವನ್ನು ಗೆಲ್ಲುತ್ತಲೂ ಇದ್ದ ಕಳೆದುಕೊಳ್ಳುತ್ತಲೂ ಇದ್ದ! ಸಾವಿರಗಟ್ಟಲೆ ಹಣವನ್ನು ಗೆದ್ದ ದಿನ ಕೂಡ ಅವನು ಮನೆಗೆ ನಡೆದೇ ಹೋಗುತ್ತಿದ್ದ. ಕುದುರೆಗಾಡಿ ಬಾಡಿಗೆಗೆ ಒಂದು ಷಿಲ್ಲಿಂಗ್ ಯಾಕೆ ಖರ್ಚು ಮಾಡಬೇಕು?

ತನ್ನ ಚಿಕ್ಕಪ್ಪನ ಜಿಪುಣ ಸ್ವಭಾವವನ್ನು ಚೆನ್ನಾಗೇ ಅರ್ಥಮಾಡಿಕೊಂಡಿದ್ದ ಜಾನ್, ಆತ ಎದುರಿಗಿದ್ದಾಗ ಯಾವಾಗಲೂ ಹಳೆಯ, ಹರಕು ಬಟ್ಟೆಗಳನ್ನೇ ಹಾಕಿಕೊಂಡಿರುತ್ತಿದ್ದ. ಹರಕು ಬಟ್ಟೆ ತೊಟ್ಟ ತರುಣನನ್ನು ಕಂಡಾಗ, ಜಿಪುಣ ಚಿಕ್ಕಪ್ಪನಿಗೆ ಹಿಡಿಸಲಾರದಷ್ಟು ಆನಂದ! ಹೀಗೆ, ಕೃಪಣ ಚಿಕ್ಕಪ್ಪನ ಮನಸ್ಸನ್ನು ಸೂರೆಗೊಂಡ ಜಾನ್, ಕಾಲಗತಿಯಲ್ಲಿ, ಆತನ ಎರಡೂವರೆ ಲಕ್ಷ ಪೌಂಡ್ ಬೆಲೆಬಾಳುವ ಆಸ್ತಿಗೆ ಉತ್ತರಾಧಿಕಾರಿಯಾದ!

ಇದಕ್ಕೆ ಮೊದಲೇ ತಂದೆಯ ಆಸ್ತಿ - ಕುಟುಂಬದ ಭವ್ಯಸೌಧ 'ಮರ್ಚನ್' ಮತ್ತು ತಾಯಿಯಿಂದ ಬಂದ ಒಂದು ಲಕ್ಷ ಪೌಂಡ್ ಹಣ ಜಾನ್ ಎಲ್ವ್ಸ್‌ನ ಕೈಸೇರಿತ್ತು. ಎಷ್ಟೋ ವರ್ಷಗಳಿಂದ ಸುಣ್ಣ-ಬಣ್ಣ-ರಿಪೇರಿ ಕಾಣದೆ, ತುಂಬ ದುಸ್ಥಿತಿಯಲ್ಲಿದ್ದ ಆ ಸೌಧದ ರಿಪೇರಿಗಾಗಿ ಹಣವನ್ನು ಖರ್ಚುಮಾಡುವುದು ವ್ಯರ್ಥವೆಂದಿತು ಜಾನ್‌ನ ಮನಸ್ಸು. ಲಂಡನ್‌ನಗರದ ಬಳಿ ಇದ್ದ 'ಥೀಡನ್ ಹಾಲ್' ತೋಟವನ್ನು ಆತ ಖರೀದಿಸಿದ.

ಅಶ್ವಪ್ರೇಮ

ಜಾನ್ ಎಲ್ವ್ಸ್‌ಗೆ ಕುದುರೆಗಳೆಂದರೆ ಪಂಚಪ್ರಾಣ. ಆತನ ಅಶ್ವಪ್ರೇಮ ಆತನ ಜಿಪುಣ ಸ್ವಭಾವವನ್ನೂ ಗೆದ್ದಿತು! ಇಂಗ್ಲೆಂಡಿನಲ್ಲಿಯೆ ಅತ್ಯುತ್ತಮವೆನ್ನಬಹುದಾದ ಕುದುರೆಗಳನ್ನೂ ನರಿ ಬೇಟೆಯ ನಾಯಿಗಳನ್ನೂ ಸಾಕಿದ್ದ. ಆದರೆ, ಅವುಗಳ ಸಾಕಣೆಯ ವೆಚ್ಚ ಮಾತ್ರ ಕಡಿಮೆಯೇ! ಆತನ ಅದೃಷ್ಟವೋ ಎಂಬಂತೆ, ಆತನಿಗೊಬ್ಬ ಉತ್ತಮ, ನಿಷ್ಠಾವಂತ ಬೇಟೆಗಾರ ಸಿಕ್ಕಿದ್ದ. ಆ ಬಡಪಾಯಿ ಪ್ರತಿನಿತ್ಯ ಬೆಳಗಿನ ಜಾವ ನಾಲ್ಕು

● ಎ. ಶ್ರೀನಿವಾಸ

ಗಂಟೆಯಿಂದ ರಾತ್ರಿಯವರೆಗೆ ಬಿಡುವಿಲ್ಲದಂತೆ ದುಡಿಯುತ್ತಿದ್ದ - ವರ್ಷಕ್ಕೆ ಐದು ಪೌಂಡ್‌ಗಳ ಅಲ್ಪ ವೇತನಕ್ಕಾಗಿ!

ಸ್ಪೋರ್ಕ್‌ನ ಸುತ್ತಮುತ್ತಲಿನ ಪ್ರದೇಶದಲ್ಲೆಲ್ಲ ಎಲ್ವ್ಸ್ ನಿಪುಣ ಕುದುರೆ ಸವಾರನೆನಿಸಿಕೊಂಡಿದ್ದ.

ಒಮ್ಮೆ ಆತ ಕುದುರೆಯಿಂದ ಬಿದ್ದ; ಕಾಲಿಗೆ ಆಳವಾದ, ತೀವ್ರಸ್ವರೂಪದ ಗಾಯವಾಯಿತು. ಗಾಯದ ಆಳದಿಂದ ಕಾಲು ಮೂಳೆ ಕಾಣಿಸುತ್ತಿದ್ದರೂ, ನಮ್ಮ ಜಿಪುಣಾಗ್ರೇಸರ ಕಥಾನಾಯಕ ಯಾವ ಚಿಕಿತ್ಸೆಯ ಗೋಜಿಗೂ ಹೋಗದೇ ಸುಮ್ಮನೆ ಇದ್ದುಬಿಟ್ಟ. ದಿನಗಳೆದಂತೆ, ಗಾಯ ಉಲ್ಬಣಗೊಂಡಿತು. ಇನ್ನು ಹೆಚ್ಚು ಅಲಕ್ಷ್ಯ ಮಾಡಿದರೆ, ಕಾಲನ್ನೇ ಕತ್ತರಿಸಿ ಹಾಕಬೇಕಾಗಬಹುದೆಂದು ವೈದ್ಯರು ಎಚ್ಚರಿಸಿದಾಗಲೇ, ಎಲ್ವ್ಸ್ ಒಲ್ಲದ ಮನಸ್ಸಿನಿಂದ ಚಿಕಿತ್ಸೆ ಪಡೆದ!

ವೈದ್ಯನಿಗೇ ಸವಾಲು

ಮತ್ತೊಮ್ಮೆ, ಎಲ್ವ್ಸ್‌ನ ಎರಡು ಕಾಲುಗಳಿಗೂ ಪೆಟ್ಟಾಯಿತು. ಯಾರದೋ ಒತ್ತಾಯದಿಂದ ವೈದ್ಯನೊಬ್ಬ ಆತನಿಗೆ ಚಿಕಿತ್ಸೆ ನೀಡಲು ಮುಂದೆ ಬಂದ. ಆತನನ್ನು ಕಂಡೊಡನೆಯೇ, ಎಲ್ವ್ಸ್ ಸವಾಲು ಹಾಕಿದ: ''ನೋಡಿ, ವೈದ್ಯರೆ, ನನ್ನ ಕಾಲುಗಳಿಗೆ ಹೆಚ್ಚು ಪೆಟ್ಟು ಬಿದ್ದಿಲ್ಲವೆಂದೇ ನನ್ನ ಅಭಿಪ್ರಾಯ. ಆದರೆ, ನೀವು ಹೆಚ್ಚು ಪೆಟ್ಟು ತಗಲಿದೆಯೆಂದು ಹೇಳುತ್ತಿದ್ದೀರಿ. ಈಗ ಒಂದು ಕೆಲಸ ಮಾಡೋಣ: ಒಂದು ಕಾಲಿನ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳುತ್ತೇನೆ. ನೀವು ಮತ್ತೊಂದು ಕಾಲಿಗೆ ಚಿಕಿತ್ಸೆ ನಡೆಸಿ - ನೀವು ವಹಿಸಿಕೊಂಡ ಕಾಲಿಗೆ ನಿಮಗೆ ಇಷ್ಟ ಬಂದಂತೆ ಚಿಕಿತ್ಸೆ ನಡೆಸಿ. ನಾನು ವಹಿಸಿಕೊಂಡ ಕಾಲಿಗೆ ಮಾತ್ರ, ನಾನು ಏನೂ ಮಾಡುವುದಿಲ್ಲ. ನಾನು ವಹಿಸಿಕೊಂಡ, ಯಾವ ಚಿಕಿತ್ಸೆಯನ್ನು ಪಡೆಯದ ಕಾಲು ನೀವು ಚಿಕಿತ್ಸೆ ನೀಡುವ ಕಾಲಿಗಿಂತಲೂ ಮುಂಚಿತವಾಗಿಯೇ ಗುಣವಾಗುತ್ತದೆ. ಇದಕ್ಕೆ

ನಿಮ್ಮ ತುಲ್ಯವೇ ಪಣ.'' ಒಪ್ಪಿಕೊಂಡ ಆ ಬಡ ವೈದ್ಯ ಹದಿನೈದು ದಿನಗಳಲ್ಲಿ ಬರಿಗೈಯಲ್ಲಿ ಮನೆಗೆ ಮರಳಬೇಕಾಯಿತು.


ಪಾರ್ಲಿಮೆಂಟ್ ಸದಸ್ಯ

ಸ್ನೇಹಿತರ ಒತ್ತಾಯಕ್ಕೆ ಮಣಿದು, ಎಲ್ವ್ಸ್ ಬರ್ಕ್‌ಷೈರ್ ಕ್ಷೇತ್ರದಿಂದ ಬ್ರಿಟಿಶ್ ಪಾರ್ಲಿಮೆಂಟಿಗೆ ಸ್ಪರ್ಧಿಸಿ, ಆರಿಸಿಬಂದ. ಆತನ ಚುನಾವಣಾ ವೆಚ್ಚವೆಷ್ಟು ಗೊತ್ತೆ? ಕೇವಲ ಹದಿನೆಂಟು ಪೆನ್ನಿಗಳು! ಹನ್ನೆರಡು ವರ್ಷಗಳ ಕಾಲ ಆತ ಪಾರ್ಲಿಮೆಂಟ್ ಸದಸ್ಯನಾಗಿದ್ದ. ಸುದೀರ್ಘ ಅವಧಿಯಲ್ಲಿ ಆತ ಒಮ್ಮೆಯೂ ತನ್ನ ಸೂಟ್ ಅನ್ನು ಬದಲಿಸಲಿಲ್ಲ; ಪಾರ್ಲಿಮೆಂಟ್‌ನಲ್ಲಿ ಒಮ್ಮೆಯೂ ತುಟಿ ಎರಡು ಮಾಡಲಿಲ್ಲ! ಪಾರ್ಲಿಮೆಂಟಿನ ಅನೇಕ ಗಣ್ಯಸದಸ್ಯರು ಇವನಿಂದ ಭಾರಿಮೊತ್ತದ ಹಣವನ್ನು ಸಾಲವಾಗಿ ಪಡೆದುಕೊಂಡು, ಮರುಪಾವತಿ ಮಾಡಲು ಮರೆತೇಬಿಟ್ಟದ್ದರಿಂದ ಎಲ್ವ್ಸ್‌ಗೆ ಪಾರ್ಲಿಮೆಂಟ್ ಸದಸ್ಯತ್ವ ಸಾಕೆನಿಸಿತು!

ಧನಪಿಶಾಚಿ ಹಿಡಿದಿದ್ದ ಎಲ್ವ್ಸ್ ಮೋಸಗಾರರ ಬಲೆಗೆ ಬಿದ್ದು, ಬುಡಭದ್ರವಿಲ್ಲದ ಧನಸಂಚಯ ಯೋಜನೆಗಳಲ್ಲಿ ಅಪಾರ ಹಣ ತೊಡಗಿಸಿ, ಒಂದೂವರೆ ಲಕ್ಷಪೌಂಡ್ ಹಣವನ್ನು ಕಳೆದುಕೊಂಡ! ತಾನೇ ಇಷ್ಟು ಭಾರಿ ಮೊತ್ತದ ನಷ್ಟಕ್ಕೆ ಗುರಿಯಾದರೂ, ಅವನು ಯಾರ ವಿರುದ್ಧವೂ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಿಲ್ಲ. 'ಕೊಟ್ಟವನು ಕೋಡಂಗಿ' ಎನ್ನುವ ಹಾಗೆ ತೆಪ್ಪಗೆ ಕುಳಿತ. ತಾನು ಮಾಡಿದ ಈ ತಪ್ಪಿಗೆ, ಈ ತಪ್ಪಿನಿಂದ ತನಗಾದ ನಷ್ಟಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳೋಸುಗ ಸ್ವಂತದ ಖರ್ಚು-ವೆಚ್ಚಗಳನ್ನು ಮತ್ತಷ್ಟು ತಗ್ಗಿಸಿದ ಎಲ್ವ್ಸ್. ಆತನ ತೋಟ-ಹೊಲಗಳಿಂದ ಬರುತ್ತಿದ್ದ ಭಾರಿ ಮೊತ್ತದ ಆದಾಯಕ್ಕೆ ಹೋಲಿಸಿದರೆ, ಈ ನಷ್ಟವೇನೂ ಅಂಥ ಮಹತ್ತರವಲ್ಲವೆಂದೇ ಹೇಳಬಹುದು.

ಪ್ರತಿವರ್ಷವೂ ತನಗೆ ಬರುತ್ತಿದ್ದ ಲಕ್ಷೋಪಲಕ್ಷ ಪೌಂಡ್‌ಗಳ ಆದಾಯವನ್ನೆಲ್ಲ ಆತ ಕಟ್ಟಡಗಳ ನಿರ್ಮಾಣದಲ್ಲಿ ತೊಡಗಿಸಿದ. ಪೋರ್ಟ್‌ಲ್ಯಾಂಡ್‌ಪ್ಲೇಸ್, ಪೋರ್ಟ್‌ಲ್ಯಾಂಡ್ ಚೌಕ ಮತ್ತು ಲಂಡನ್ ಪಟ್ಟಣದ ಇತರ ಪ್ರಮುಖ ಭಾಗಗಳಲ್ಲಿ ಆತ ಭವ್ಯಸೌಧಗಳನ್ನು ಕಟ್ಟಿಸಿದ. ಮೆರಿಲ್‌ಬೋನ್‌ನ ಬಹುತೇಕ ಕಟ್ಟಡಗಳನ್ನು ಕಟ್ಟಿಸಿದವನು ಅವನೇ. ಈ ಭವ್ಯ ಕಟ್ಟಡಗಳನ್ನೆಲ್ಲ ಆತ ಬಾಡಿಗೆಗೆ ಕೊಟ್ಟಿದ್ದ. ಸಾಲದ್ದಕ್ಕೆ, ಆತ ಹೇ-ಮಾರ್ಕೆಟ್‌ನ ಹೆಚ್ಚು ಭಾಗವನ್ನು ಖರೀದಿಸಿದ.

ಎಲ್ವ್ಸ್ ಎಮ್ಮೆಗಳನ್ನು ಖರೀದಿಸಿಯೂ



ಹಾಲುಕರೆಯುವ ಚೊಂಬನ್ನು ಕೊಳ್ಳಲು ಹಿಂದೇಟು ಹಾಕುವಂಥ ಮನುಷ್ಯ! ಆತ ಇಷ್ಟೊಂದು ಭಾರಿ ಭಾರಿ ಕಟ್ಟಡಗಳನ್ನು ಕಟ್ಟಿಸಿದ್ದರೂ, ಅವುಗಳಿಗೆ ವಿಮೆ ಮಾಡಿಸುತ್ತಿರಲಿಲ್ಲ! ಒಮ್ಮೆ, ಆತನ ಮನೆಯೊಂದು ಬೆಂಕಿಬಿದ್ದು ಭಸ್ಮವಾಗಿ ಹೋಯಿತು. ಎಲ್ವ್ಸ್ ಎದೆಗುಂದಲಿಲ್ಲ. ಬಾಡಿಗೆದಾರ ಬಹಳ ಕಾಲದಿಂದ ಬಾಡಿಗೆಯನ್ನು ಕೊಟ್ಟಿರಲಿಲ್ಲ, ಮನೆಯನ್ನು ಬಿಡಿಸುವ ಸೂಚನೆಯೂ ಇರಲಿಲ್ಲ. ''ಒಳ್ಳೆಯದಾಯಿತು, ಆತನನ್ನು ಇಷ್ಟು ಬೇಗನೆ ಬಿಡಿಸಲು ಮತ್ತಾವ ವಿಧದಿಂದಲೂ ಸಾಧ್ಯವಾಗುತ್ತಿರಲಿಲ್ಲ'' ಎಂದುಬಿಟ್ಟನಂತೆ ಎಲ್ವ್ಸ್!

ಹರಿಕೊಟ್ಟ ಕಾಲಕ್ಕೆ ಉಣಲಿಲ್ಲ

ಹತ್ತು ಸಾವಿರ ಹೊನ್ನು ತಿಪ್ಪೇಲಿ ಹೂಳಿಟ್ಟು ಮತ್ತೆ ಉಪ್ಪಿಲ್ಲದೆ ಉಂಡ, ಮಣ್ಣು ಮುಕ್ಕಿದ ನತದೃಷ್ಟ ನರಪ್ರಾಣಿ ಎಲ್ವ್ಸ್! ಹೊಟ್ಟೆಗಾಗಿ - ಊಟೋಪಚಾರಗಳಿಗಾಗಿ ಆತ ಎಂದೂ ಹೆಚ್ಚು ಹಣವನ್ನು ವೆಚ್ಚ ಮಾಡಿದವನಲ್ಲ. ಆತನ ಭೋಜನ ಒಂದು ಭೋಜನವೇ? ಅವನು ಏನು ಸಿಕ್ಕಿದರ ಅದನ್ನೇ ತಿಂದುಬಿಡುತ್ತಿದ್ದ - ಅದು ಹಳಸಿದ್ದರೂ ಚಿಂತೆಯಿಲ್ಲ, ಕೊಳೆತು ನಾರುತ್ತಿದ್ದರೂ ಪರಿವೆಯಿಲ್ಲ!

ಒಮ್ಮೆ - ಆಗ ಆತನಿಗೆ ಐವತ್ತು ವರ್ಷ - ಆತ ತನ್ನ ಸ್ನೇಹಿತನನ್ನು ಕರೆದುಕೊಂಡು ಹೇ-ಮಾರ್ಕೆಟ್‌ಗೆ ಕುದುರೆಯ ಮೇಲೆ ಸವಾರಿ ಹೊರಟಿದ್ದ. ಒಂಭತ್ತು ಗಂಟೆಗಳ ಕಾಲ ಒಂದೇ ಸಮನೆ ಕುದುರೆ ಸವಾರಿ ಮಾಡಿ ದಣಿದಿದ್ದ ಆತನ ಸ್ನೇಹಿತ, ಹಸಿವನ್ನು ತಡೆಯಲಾರದೆ, ''ಊಟಕ್ಕೆ ಹೋಗೋಣವೇ?'' ಎಂದರೆ, ಎಲ್ವ್ಸ್ ತನ್ನ ಜೇಬಿನಿಂದ ಮುದುರಿದ ದೋಸೆಯೊಂದನ್ನು ತೆಗೆದು ತಿನ್ನತೊಡಗಿದನಂತೆ.

ಮತ್ತೊಮ್ಮೆ - ಆಗ ಎಲ್ವ್ಸ್ ಎಪ್ಪತ್ತು ವರ್ಷ ವಯಸ್ಸಿನ ಮುದುಕ - ಇಲಿಯೊಂದು ನದಿಯಿಂದ ಎಳೆದುಕೊಂಡು ಬಂದಿದ್ದ ನೀರುಗೋಳಿಯ ಅವಶೇಷಗಳೂ, ಬಲೆಯಲ್ಲಿ ಸಿಕ್ಕಿಬಿದ್ದಿದ್ದ ಸೀನೀರಿನ ಮೀನಿನ ಹೊಟ್ಟೆಯಲ್ಲಿ ಜೀರ್ಣವಾಗದೆ ಇದ್ದ ಸಣ್ಣ ಮೀನಿನ ತುಣುಕುಗಳೂ ಆತನ ಪಾಲಿಗೆ ಪರಮ ಭಕ್ಷ್ಯಗಳಾದುವು! 'ಒಂದೇ ಕಲ್ಲಿನಿಂದ ಮೂರನೆಯ ಎರಡು ಭಾಗವನ್ನು ಕೊಂದಂತಾಯಿತು' ಎನ್ನುತ್ತ ಎಲ್ವ್ಸ್ ಆ ಕೊಳೆತ, ಕೊಳಕು ಮಾಂಸವನ್ನೇ ಸ್ವಲ್ಪವೂ ಅಸಹ್ಯ ಪಡದೆ ತಿಂದುಬಿಟ್ಟ!

ಕಟುಕನಿಗೆ ಹಣ ಕೊಡುವುದನ್ನು ತಪ್ಪಿಸುವ ಸಲುವಾಗಿ, ಆತ ಯಾವಾಗಲೂ ತನ್ನ ಸೇವಕನ ಕೈಯಿಂದಲೇ ಕುರಿಯನ್ನು ಕೊಯ್ಯಿಸುತ್ತಿದ್ದ. ಸತ್ತ ಕುರಿಯ ಮಾಂಸವನ್ನು ಅವನು ಒಂದು ವಾರ ಇಟ್ಟುಕೊಂಡು ಸೇವಿಸುತ್ತಿದ್ದ. ಮಾಂಸ ಕೊಳೆತರೂ ಸರಿ, ಅದನ್ನೇ ತಿನ್ನುತ್ತಿಷ್ಟ, ಈ ಬಡಪ್ರಾಣಿ! ನಾಯಿ-ನರಿಗಳು ಕೂಡ ಮುಟ್ಟಲು ಹೇಸಬಹುದಾಗಿದ್ದಂಥ ಗರ್ಹಣೀಯ ಮಾಂಸವನ್ನೇ ತಿನ್ನುತ್ತಿದ್ದರೂ, ಎಲ್ವ್ಸ್‌ನಿಗೆ ಯಾವ ನಂಜೂ ಏರದೆ, ಅವನು 75 ವರ್ಷಗಳ ಕಾಲ ಬದುಕಿದ್ದುದು ಒಂದು ವೈದ್ಯಕೀಯ ಪವಾಡವೇ ಸರಿ! ಎಷ್ಟೇ ಹಳಸಿ, ಎಷ್ಟೇ ಕೊಳೆತು ನಾರುತ್ತಿದ್ದರೂ, ಯಾವ ಖಾದ್ಯವಸ್ತುವನ್ನೂ ಎಲ್ವ್ಸ್ ಎಂದೂ ಹೊರಗೆಸೆದವನಲ್ಲ!

ಅಲ್ಪಬುದ್ಧಿ

ಲಕ್ಷಾಧೀಶ್ವರ ಎಲ್ವ್ಸ್ ತೀರ ಅಲ್ಪಮನುಷ್ಯ. ಒಮ್ಮೆ ಯಾವನೋ ಭಿಕ್ಷುಕ ಚರಂಡಿಯಲ್ಲಿ ಬಿಸಾಡಿ ಹೋಗಿದ್ದ ಹಳೆಯ, ಹರಿದ, ಕೂದಲಿನ ಟೋಪಿ(Wig)ಯನ್ನು ಕೈಯಿಂದ ಎತ್ತಿಕೊಂಡು, ತಾನೇ ಧರಿಸಿ ಮೆರೆದ! ಆತ ತನ್ನ ಪಾದರಕ್ಷೆಗಳಿಗೆ ಎಂದೂ ಪಾಲಿಷ್ ಮಾಡಿಸಿದವನಲ್ಲ. ಬೂಟ್ಸ್‌ಗ

ಬಾಲ್ಯ

ಸ್ವಾರ್ಥದ ಸೋಂಕಿಲ್ಲದೆ
ಪಿಸುಗುಡುವ ಬಾಲ್ಯ
ಜಗದ ತಕ್ಕಡಿಯಲ್ಲಿ
ತೂಗಲೊಲ್ಲದ ಮೌಲ್ಯ

● ಸುಜಾತಾ ಲಕ್ಮನೆ

ಳಿಗೆ ಪಾಲಿಷ್ ಮಾಡಿದರೆ, ಅವು ಬೇಗನೆ ಹರಿದು ಹೋಗುತ್ತವೆಂಬ ಭೀತಿ ಆತನಿಗೆ! ಯಾವಾಗಲಾದರೂ, ಅವನು ಮಳೆಯಲ್ಲಿ ನೆನೆದು ಮನೆಗೆ ಬಂದರೆ, ಒದ್ದೆ ಬಟ್ಟೆಗಳನ್ನೇ ಹಾಕಿಕೊಂಡು, ಕಟಕಟ ಹಲ್ಲು ಕಡಿಯುತ್ತ, ಚಳಿಯಲ್ಲಿ ನಡುಗುತ್ತಿದ್ದನೇ ಹೊರತು, ಬೆಂಕಿ ಹೊತ್ತಿಸಿ, ಚಳಿಕಾಯಿಸಿಕೊಂಡು, ಒದ್ದೆ ಬಟ್ಟೆಗಳನ್ನು ಒಣಗಿಸಿಕೊಳ್ಳುತ್ತಿರಲಿಲ್ಲ. ಒಮ್ಮೆ ಅವನ ಕುದುರೆಲಾಯದ ಸೇವಕ ನೆರೆಯಾತನ ಕುದುರೆಗಾಗಿ ಒಂದಿಷ್ಟು ಮೇವನ್ನು ಕೊಟ್ಟ. ಅದನ್ನು ದೂರದಿಂದಲೇ ಗಮನಿಸಿದ ಎಲ್ವ್ಸ್ ಮೆಲ್ಲಗೆ ನಡೆದು, ಯಾರ ಕಣ್ಣಿಗೂ ಬೀಳದಂತೆ, ನೆರೆಯಾತನ ಕುದುರೆಲಾಯಕ್ಕೆ ನುಗ್ಗಿ ಆ ಮೇವನ್ನು ಮರಳಿತಂದ! ಸುಗ್ಗಿಯ ಕಾಲದಲ್ಲಂತೂ, ಆತ ತನ್ನ ಗೇಣಿದಾರರಿಂದ ಅಧಿಕ ಪ್ರಮಾಣದಲ್ಲಿ ದವಸ-ಧಾನ್ಯಗಳನ್ನು ಮಾತ್ರವಲ್ಲದೆ, ಹುಲ್ಲು, ಕಸ-ಕಡ್ಡಿ, ಹಕ್ಕಿಗೂಡುಗಳನ್ನು ಸಹ ಬಿಡದೆ ಸಂಗ್ರಹಿಸುತ್ತಿದ್ದ - ಉರುವಲು ಕಟ್ಟಿಗೆ ವೆಚ್ಚವನ್ನು ತಪ್ಪಿಸುವ ಸಲುವಾಗಿ!

ಎಲ್ವ್ಸ್ ಮದುವೆಯಾಗದೆಯೇ, ಮದುವೆಗಾಗಿ ಹಣವನ್ನು ವೆಚ್ಚ ಮಾಡದೆಯೇ ಕುಟುಂಬ ಜೀವನವನ್ನು ಸಾಗಿಸಿದ ಭೂಪ! ತನ್ನ ಮನೆಗೆಲಸದಾಕೆ ಮೊರಾನ್‌ಳೊಂದಿಗೆ ಸಂಸಾರ ಹೂಡಿ, ಎರಡು ಮಕ್ಕಳ ತಂದೆಯಾದ.

ಎಲ್ವ್ಸ್ ನಿಧನಾನಂತರ ಆತ ಕೂಡಿಟ್ಟ ಅಪಾರ ಸಂಪತ್ತು, ಆಸ್ತಿ-ಪಾಸ್ತಿಗಳೆಲ್ಲವೂ ಮೊರಾನ್‌ಳಲ್ಲಿ ಹುಟ್ಟಿದ ಆ ಇಬ್ಬರು ಪುತ್ರರಿಗೆ ಸೇರಿದುವು. ●

ಕೈ ಬಿಟ್ಟ ಸಂಗತಿ

ಯೌವನದ ಉಲ್ಲಾಸದಲ್ಲಿ ನಾನೊಮ್ಮೆ ಜೀವನದ ಎಲ್ಲ ಸ್ಪೃಹಣೀಯ ಸಂಗತಿಗಳದೊಂದು ಪಟ್ಟಿಯನ್ನು ಮಾಡಿಟ್ಟೆ - ಸ್ವಾಸ್ಥ್ಯ, ಪ್ರೇಮ, ರೂಪ, ಪ್ರತಿಭೆ, ಐಶ್ವರ್ಯ, ಯಶಸ್ಸು ಮತ್ತು ಜೀವನವನ್ನು ಪರಿಪೂರ್ಣವಾಗಿಸಬಲ್ಲ ಇನ್ನಿತರ ವಸ್ತುಗಳವು.

ಪಟ್ಟಿಯನ್ನು ಮಾಡಿಟ್ಟು ಅದನ್ನು ಆತ್ಮಾಭಿಮಾನದಿಂದ ಹಿರಿಯ ಮಿತ್ರರೊಬ್ಬರಿಗೆ ತೋರಿಸಿದೆ. ಅವರನ್ನು ನಾನು 'ಆದರ್ಶ'ವೆಂದು ನಂಬಿದವ, ಪಥದರ್ಶಕರೆಂದು ಗೌರವಿಸಿದವ. ಅವರಿಗೆ ಈ ಮೂಲಕ ನಾನು ನನ್ನ ವಯಸ್ಸಿಗಿಂತ ಅದೆಷ್ಟು ಹೆಚ್ಚು ಬೌದ್ಧಿಕ ಸಾಮರ್ಥ್ಯ ಪಡೆದಿರುವೆನೆಂಬುದನ್ನೂ, ನನ್ನ ಅಭಿರುಚಿಗಳ ವ್ಯಾಪಕತೆಯನ್ನೂ ಪರಿಚಯಿಸಬಯಸಿದೆ.

ಅವರ ಕಣ್ಣಂಚಿನಲ್ಲಿ ನನಗೆ ನಗೆ ಕಂಡಿತು. ''ವಾಹವ್ವಾ! ಸುವಿಚಾರಿತ - ಸುಲಿಖಿತ ಪಟ್ಟಿಯಿದು. ಆದರೆ ಯಾವೊಂದನ್ನುಳಿದು ಈ ಎಲ್ಲವೂ ಅರ್ಥಹೀನವೆನಿಸುತ್ತವೋ, ಅಸಹನೀಯ ಹೊರೆಯೆನಿಸುತ್ತವೋ ಅಂಥದೊಂದು ಸಂಗತಿಯನ್ನೇ ನೀನು ಕೈಬಿಟ್ಟಿದ್ದಿ,'' ಎಂದರು ಆ ಹಿರಿಯರು.

''ಯಾವುದದು?'' ನಾನು ಗಾಬರಿಯಿಂದ ಕೇಳಿದೆ.

ಆ ಪಟ್ಟಿಯನ್ನು ಸುರುಳಿಸುತ್ತಿ ಎಸೆಯುತ್ತ ಅವರು ಹೇಳಿದರು- ''ಮನಃಶಾಂತಿ.''

● ಜೋಶು ಆ ಲಾಥ್ ಲೀಬ್‌ಮನ್

('ಮನಃಶಾಂತಿ' ಗ್ರಂಥದಲ್ಲಿ)

ಶಿವ ಸಾನ್ನಿಧ್ಯ

ಶಿವನ ಪರಮಭಕ್ತರೆನಿಸಿಕೊಂಡಿದ್ದ ನೃತ್ಯಗುರು ಶಂಕರನ್ ನಂಬೂದಿರಿ ಒಂದು ಮುಂಜಾನೆ ತುಂಬ ಅವಸರದಿಂದ ಉಸ್ತಾದ್ ಅಲ್ಲಾವುದ್ದೀನ್ ಖಾನ್‌ರ ಬಳಿ ಬಂದರು. ಅವರ ಮುಖದಲ್ಲಿ ಅದೆಂಥ ಪ್ರಸನ್ನಭಾವ! ''ರಾತ್ರಿ, ಕನಸಿನಲ್ಲಿ ಸಾಕ್ಷಾತ್ ಶಿವ ಕಾಣಿಸಿಕೊಂಡು ಸಂಗೀತ ಕೇಳಬೇಕೆಂಬ ಇಚ್ಛೆ ವ್ಯಕ್ತಪಡಿಸಿದ. ಆದ್ದರಿಂದ, ಖಾನ್‌ಸಾಹೇಬರೆ, ನಡೆಯಿರಿ ಶಿವಮಂದಿರದಲ್ಲಿ ಸಂಗೀತ ಸೇವೆ ಸಲ್ಲಿಸೋಣ'' ಎಂದು ಹೇಳಿ ನಂಬೂದಿರಿಗಳು ಮುಂದಾಗಿ ಹೊರಟರು. ಅವರ ಮಾತಿನಂತೆ ಖಾನ್ ಸಾಹೇಬರು ಸರೋದ್‌ನೊಂದಿಗೆ ಹೊರಡಲು ಸಜ್ಜಾಗತೊಡಗಿದರು.

ಅವರು ಶಿವನ ಮಂದಿರವನ್ನು (ನಂಬೂದಿರಿಗಳ ಮನೆಯ ಒಂದು ಭಾಗ ಅದು) ತಲಪಿದಾಗ ಅಲ್ಲಿ ಇರುವೆಗೂ ಆಸ್ಪದವಿಲ್ಲದಂಥ ಜನಸಮ್ಮರ್ದ. ಖಾನ್ ಸಾಹೇಬರೇಕೋ ಹಿಂಜರಿದರು. ತಾನು ಮುಸಲ್ಮಾನ, ಹಿಂದೂಗಳ ಆ ಪವಿತ್ರ ತಾಣದಲ್ಲಿ ಕಾಲಿರಿಸಲು ತನ್ನನ್ನು ಬಿಟ್ಟಾರೆಯೆ ಎಂಬ ಅನಿಸಿಕೆಯೇ ಆ ಹಿಂಜರಿಕೆಗೆ ಕಾರಣ. ಆದರೆ ಖಾನ್ ಸಾಹೇಬರ ದಾರಿಯನ್ನೇ ಕಾಯುತ್ತಲಿದ್ದ ನಂಬೂದಿರಿಗಳು ಅವರ ಈ ಹಿಂಜರಿಕೆಯನ್ನು ಗಮನಿಸಿದರು. ಎದ್ದವರೇ ಖಾನ್ ಸಾಹೇಬರ ಬಳಿ ಬಂದು ಅಪ್ಪಿಕೊಂಡು ಶಿವನ ಪ್ರತಿಮೆಯವರೆಗೂ ನಡೆಸಿಕೊಂಡು ಬಂದರು. ಮೂರ್ತಿಯೆದುರು ಅವರನ್ನು ಕುಳ್ಳಿರಿಸಿದರು.

ಉಸ್ತಾದರು ಸರೋದ್ ನುಡಿಸಲಾರಂಭಿಸಿದರು. ಆ ಸುತ್ತಲಿನ ವಾತಾವರಣವೆಲ್ಲ ಸಂಗೀತಮಯವಾಯಿತು. ಹಕ್ಕಿಗಳು ಚಿಲಿಪಿಲಿಬಿಟ್ಟು-ಹಾರಾಡದೇ ಒಂದೆಡೆ ಕುಳಿತಿದ್ದವು. ಮರಗಳು ಸಂಗೀತಕ್ಕೆ ತಲೆಯಾಡಿಸತೊಡಗಿದ್ದವು. ಸೇರಿದ್ದ ಜನಸಮ್ಮರ್ದ ಮೋಡಿಗೊಳಗಾದಂತೆ ಕುಳಿತಿರುವುದನ್ನು ಕಂಡ ಶಂಕರನ್ ನಂಬೂದಿರಿಗಳ ಕಣ್ಣುಗಳಲ್ಲಿ ಆನಂದಬಾಷ್ಪ.

ಖಾನ್‌ಸಾಹೇಬರು ರಾಗವೊಂದನ್ನು ನುಡಿಸಿ ಮುಗಿಸಿದರು. ನಂಬೂದಿರಿಗಳು ಅವರನ್ನು ಆಲಿಂಗಿಸಿಕೊಂಡು, ''ನೀವೆಷ್ಟು ಭಾಗ್ಯಶಾಲಿಗಳು! ನಿಮ್ಮ ಸಂಗೀತ ಸೇವೆಯಿಂದ ಈ ಒಂದು ಗಂಟೆಯ ಅವಧಿಯಲ್ಲಿ ನೀವು ಶಿವಸಾನ್ನಿಧ್ಯದಲ್ಲಿದ್ದುಬಿಟ್ಟಿರಿ! ವರ್ಷಾನುಗಟ್ಟಲೆಯ ಪೂಜೆ-ಪ್ರಾರ್ಥನೆಗಳಿಂದ ಕೂಡ ನನಗೀ ಭಾಗ್ಯ ಪ್ರಾಪ್ತವಾಗಲಿಲ್ಲ'' ಎಂದು ಕೊಂಡಾಡಿದರಂತೆ. ●



ನಿಮ್ಮ ಅಂದಚೆಂದಕ್ಕೊಂದು ಕೈಗನ್ನಡಿ

ಅಂದವಾಗಿರುವುದೆಂದರೆ ಸುಂದರ ದೇಹವನ್ನು ಹೊತ್ತು, ಮೇಕಪ್‌ಗಳನ್ನು ಮೆತ್ತಿಕೊಳ್ಳುವುದಲ್ಲ! ಆಂತರಿಕವಾದ ಸೌಂದರ್ಯವನ್ನು ವೃದ್ಧಿಸಿಕೊಳ್ಳುವುದರಲ್ಲಿ ಸೌಂದರ್ಯದ ಮರ್ಮಡಗಿದೆ.

ತಾನು ಸುಂದರವಾಗಿ ತೋರಬೇಕೆಂಬ ವಾಂಛೆ ಯಾರೊಬ್ಬರ ಅಂತರಂಗದ ಗುಟ್ಟೂ ಅಲ್ಲ. ಪ್ರತಿಯೊಬ್ಬರ ಹೃದಯದ ಮಿದು ಪದರಗಳೊಳಗೆ ಇಂತಹುದೊಂದು ತಹತಹಿಕೆ ತುಯ್ದಾಡುತ್ತಿರುತ್ತದೆ. ಆದಾಗ್ಯೂ ಸೌಂದರ್ಯದ ಪ್ರಶ್ನೆ ಬಂದಾಗಲೆಲ್ಲ ಇದು ಮಹಿಳೆಯರಿಗೇ ಸಂಬಂಧಿಸಿದ ವಿಷಯವೆಂಬಂತೆ ಬಿಂಬಿತವಾಗುವುದು ಸಾಮಾನ್ಯ. ಅಷ್ಟೇಕೆ, ಸುಂದರವಾಗಿ ಕಾಣುವುದು ಮಹಿಳೆಯ ಜನ್ಮಸಿದ್ಧ ಹಕ್ಕೆಂದೇ ವಾದಿಸುವವರಿದ್ದಾರೆ. ಅದೇನೇ ಇರಲಿ, ಸೌಂದರ್ಯ ಪ್ರಜ್ಞೆ ಇತ್ತೀಚೆಗೆ ಜಾಗೃತವಾದ ಸಂಗತಿಯೂ ಅಲ್ಲ, ಇಂಥವರಿಗೇ ಮೀಸಲೆಂಬ ಸ್ವತ್ತಿನ ಪ್ರಶ್ನೆಯೂ ಅಲ್ಲ ಎಂಬುದನ್ನು ಮಾತ್ರ ಒಪ್ಪದಿರಲಾಗದು.

ಹಾಗಾದರೆ ವ್ಯಕ್ತಿಯೊಳಗಿನ ಯಾವುದನ್ನು ಸೌಂದರ್ಯವೆಂದು ಪರಿಗಣಿಸುವುದು? ಅಂದಗಾತಿಯ ಕಾಮನಬಿಲ್ಲಿನಾಕಾರದ ಹುಬ್ಬು, ನಡುವಿನ ಸುತ್ತಳತೆ, ತುಟಿಗಳನ್ನು ತಬ್ಬಿಕೊಂಡ ಕೋಮಲ ವರ್ಣ, ಗಲ್ಲದ ಮೇಲಿನ ಡಿಂಪಲ್, ಉಗುರುಗಳ ನವುರು ಮುಂತಾದ ಹತ್ತಾರು ಚಿತ್ತಾರಗಳಲ್ಲಿ ನಿಜಕ್ಕೂ ವ್ಯಕ್ತಿಯ ಸೌಂದರ್ಯಕ್ಕೆ ಕಾರಣವಾದ ಅಂತ ಯಾವುದು?

ನಿಜ ಹೇಳಬೇಕೆಂದರೆ ಮೇಲಿನ ಬಾಹ್ಯ ಚಹರೆಗಳಾವುವೂ ಸೌಂದರ್ಯದ ಮೂಲ ಸೆಲೆಗಳಲ್ಲ. ಇವೆಲ್ಲವನ್ನೂ ಒಳಗೊಂಡ ಮತ್ತು ಇವುಗಳನ್ನು ಮೀರಿದ ಆಂತರಿಕವಾದ ಜೀವಂತಿಕೆಯೇ ಸೌಂದರ್ಯವೆನ್ನಿಸಿಕೊಳ್ಳುತ್ತದೆ. ಬಾಹ್ಯ ಸೌಂದರ್ಯ ಹೊರನೋಟದ ಆಕರ್ಷಣೆಗೆ ಶೀಘ್ರವಾಗಿ ಫಲಿಸುವುದಾದರೂ ಅದಕ್ಕೆ ಕ್ಷಣಿಕತೆಯ ಶಾಪ ತಗಲಿರುತ್ತದೆ. ಆದರೆ ಆಂತರಿಕ ಸೌಂದರ್ಯ ಹೀಗಲ್ಲ. ಇದು ವ್ಯಕ್ತಿತ್ವಕ್ಕೆ ಶಾಶ್ವತವಾದ ಮೆರಗನ್ನು ಲೇಪಿಸಬಲ್ಲದು.

ಆಂತರಿಕವಾದ ಸೌಂದರ್ಯ ಅಂಕುರಿಸಬೇಕಾದರೆ ಬದುಕಿನ ಸಂತಸವನ್ನು ಯಥೇಚ್ಛ ಸೇವಿಸಬೇಕಾಗುತ್ತದೆ. ಕುತೂಹಲದ ಕಣ್ಣುಗಳನ್ನು ಅರಳಿಸಿ ಪ್ರಪಂಚವನ್ನು ದಿಟ್ಟಿಸುವ ಮಗುವಿಗೆ ಸಾಧ್ಯವಾಗುವಂತಹ ಸಂತಸವದು. ಬದುಕಿನ ಬಗ್ಗೆ, ಬದುಕಿರುವುದರ ಬಗ್ಗೆ ಶ್ರದ್ಧಾವಂತ ಮೋಹ ತಳೆಯಬೇಕು. ಜೀವಂತವಾಗಿ ಬದುಕುತ್ತ, ಪ್ರಪಂಚದೊಳಗೆ ಉತ್ಸಾಹದಿಂದ ಈಜುತ್ತ ರೂಪುಗೊಳ್ಳುವ ಸೌಂದರ್ಯ ನೀವು ಒಬ್ಬ ತಾಯಿಯಾಗಿ, ಮಡದಿಯಾಗಿ ಯಶಸ್ವಿಯಾಗುವಂತೆಯೂ ಪ್ರೇರೇಪಿಸಬಲ್ಲದು.

ಬದಲಾವಣೆ ಬದುಕಿನ ತಿರುಳಾದರೆ ಸ್ಥಗಿತತೆ ಒಂದು ಅರ್ಥದಲ್ಲಿ ಸಾವೇ ಸರಿ. ಸ್ಥಗಿತತೆಯ ಅಂಚಿಗೆ ಸರಿಯುವವರು ಲವಲವಿಕೆ ಉಳಿಸಿಕೊಳ್ಳಲು ಹೇಗೆ ಸಾಧ್ಯ? ಲವಲವಿಕೆಯಿಲ್ಲದೆ ಸೌಂದರ್ಯ ನಳನಳಿಸೀತು ಹೇಗೆ?

● 'ತಿಂಗಳೇಶ'

ಒಂದು ಕಾಲಕ್ಕೆ ನಿಮ್ಮ ನೆಚ್ಚಿನ ಹವ್ಯಾಸವಾಗಿದ್ದ ಚಿತ್ರಕಲೆಯನ್ನು ನೀವು ಬದುಕಿನ ಹಾದಿಯ ಯಾವುದೇ ತಿರುವಿನಲ್ಲಿ ಉದುರಿಸಬಹುದು. ಈಗ ಮತ್ತೆ ಕುಂಚ ಕೈಗೆತ್ತಿಕೊಳ್ಳಲೇನಡ್ಡಿ? ನಿಮಗೆ ಅಂತಹ ಹವ್ಯಾಸವೇ ಇರಲಿಲ್ಲವೆ... ಪರವಾಗಿಲ್ಲ. ನಿಮ್ಮ ಮನೆಯ ಸಮೀಪದಲ್ಲೆಲ್ಲಾದರೂ ಟೆನ್ನಿಸ್ ಕೋರ್ಟ್ ಇದ್ದೇ ಇರುತ್ತದೆ. ಹೇಗಾದರೂ ಮಾಡಿ ಬ್ಯಾಟು ಕೈಗೆತ್ತಿಕೊಳ್ಳಿ. ಒಮ್ಮೆ ಮನಸ್ಸು ತೆರೆದು ಕಣ್ಣು ಅರಳಿಸಿದರೆ ನಿಮ್ಮ ಸುತ್ತಲಿನ ಹಲವಾರು ಆರೋಗ್ಯಕಾರಿ ವಿದ್ಯಮಾನಗಳು ಗೋಚರಿಸಿಯಾವು. ಅವುಗಳೊಳಗಲೆ ಮೂತಿ ತೂರಿಸಲು ಹಿಂಜರಿಯಬೇಕಿಲ್ಲ. ಜಗತ್ತಿನಿಂದ ಸ್ಫೂರ್ತಿ ಗಿಟ್ಟಿಸುವುದಷ್ಟೇ ಅಲ್ಲ, ಅದರೊಳಗೆ ಕ್ರಿಯಾತ್ಮಕವಾಗಿ ಭಾಗವಹಿಸುವುದು ಕೂಡ ಮುಖ್ಯವೆಂಬುದನ್ನು ನೆನಪಿಡಬೇಕು. ಇದರಲ್ಲಿ ನಿಮ್ಮ ಸೌಂದರ್ಯದ ರಹಸ್ಯವೂ ಅಡಗಿದೆ. ಏಕೆಂದರೆ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಅರ್ಥಪೂರ್ಣ ಸಮತೋಲನವೇ ಸೌಂದರ್ಯದ ಗಟ್ಟಿ ತಳಪಾಯ.

ಹೊಟ್ಟೆಕಿಚ್ಚು, ದ್ವೇಷ ಇತ್ಯಾದಿ ಭಾವವಿಕಾರಗಳಿಗೆ ಸೋಲುವುದು ಸುಲಭ. ಆದರೆ ಅವುಗಳನ್ನು ನಿಯಂತ್ರಿಸಿ ಜಯಿಸುವುದು ಜಾಣತನ. ಇಲ್ಲದಿದ್ದರೆ ಇವೆಲ್ಲ ಸೇರಿ ನಿಮ್ಮೊಳಗೆ ಕುರೂಪದ ಭಾವವನ್ನೂ ಬಿತ್ತಬಲ್ಲವು. ಮನದೊಳಗೆ ಸುಳಿದಾಡುವ ಭಾವನೆ ಯಾವುದೇ ಆಗಿರಲಿ - ಆರೋಗ್ಯ ಕೂಡ - ಅದು ಮುಖದಲ್ಲಿ ಅಭಿವ್ಯಕ್ತಿ ಪಡೆಯುತ್ತದೆ. ದೇಹದಲ್ಲಿ ಜೀವರಾಸಾಯನಿಕ ಅಸಮತೋಲನವನ್ನು ಸೃಷ್ಟಿಸುವ

ಭಾವದೀಪ್ತಿ

ಹವಳದ ನಗು ಹೊತ್ತ
ನಿನ್ನ ನಗ್ನ ಚಿತ್ರ
ನನ್ನ ಆತ್ಮದಲಿ ಹೊಳಪಿಸಿದ
ಭಾವದೀಪ್ತಿ

● ಹಡಪದ ಬಸವರಾಜ

ಕೋಪ, ಭಾವೋದ್ರೇಕ, ಖಿನ್ನತೆಗಳು ಯಾರಿಗಾದರೂ ಅಪಾಯಕಾರಿಯೆ.

ಮನಸ್ಸೊಂದಿದ್ದರೆ ಬದುಕಿನ ಅತಿ ಚಿಕ್ಕ ಪುಟ್ಟ ಸಂಗತಿಗಳಿಂದಲೂ ಸಂತಸವನ್ನು ಚಿಮ್ಮಿಸಿಕೊಳ್ಳಲು ಸಾಧ್ಯ. ಈ ವಿಷಯದಲ್ಲಿ ಪ್ರೌಢರೆನಿಸಿಕೊಂಡವರು ಮಕ್ಕಳಿಂದ ಕಲಿಯುವ ಪಾಠವೊಂದಿದೆ: ಸುತ್ತಲೂ ನಡೆಯುವ ಪ್ರತಿಯೊಂದರಿಂದ ಮಗು ತನ್ನ ಹೃದಯವನ್ನು ಅರಳಿಸಿಕೊಳ್ಳಬಲ್ಲದು. ಅದರ ನೇರ ಪರಿಣಾಮವೇ ಮಗುವಿನ ಸ್ನಿಗ್ಧ ನಗು.

ಕೆಲವೊಂದು ಸಂದರ್ಭಗಳು ಬಂದೆರಗುತ್ತವೆ. ಆಗ ಮುಗುಳ್ನಂತಿರಲು ಸಾಧ್ಯವಾಗದು. ನಿಮಗೆ ಆತನ ಮುಖ ಕಂಡರಾಗದ ಸಂಬಂಧಿಯೊಬ್ಬ ವಕ್ಕರಿಸುತ್ತಾನೆಂದಿಟ್ಟುಕೊಳ್ಳಿ. ಮುಖ ಕಿವುಚಿಕೊಂಡು ದೇಹದ ತಾಪ ಹೆಚ್ಚಿಸಿಕೊಂಡರೆ ಪ್ರಯೋಜನವಿಲ್ಲ. ಅದಕ್ಕೆ ಬದಲಾಗಿ ನೀವು ಏಕಾಂತವಾಗಿರಬಹುದಾದ ಕೋಣೆಯೊಂದನ್ನು ಹುಡುಕಿಕೊಳ್ಳಿರಿ. ಅಲ್ಲಿ ಆಳವಾಗಿ ಉಸಿರಾಡುವ ವ್ಯಾಯಾಮದಲ್ಲಿ ತೊಡಗಿಕೊಂಡರೆ 'ತಲೆಬಿಸಿ' ತಂತಾನೇ ತಣ್ಣಗಾಗುತ್ತದೆ. ಆಗ ಅತ್ಯಂತ ಸಮಾಧಾನಚಿತ್ತದಿಂದ ವಸ್ತುನಿಷ್ಠವಾಗಿ ಪ್ರಸಂಗವನ್ನು ಅವಲೋಕಿಸಲು ಸಾಧ್ಯವಾಗಿ ನಿಮ್ಮ ಆರೋಗ್ಯಪೂರ್ಣ ನಿಲುವು ರೂಪುಗೊಳ್ಳುತ್ತದೆ.

ಸಾಮಾನ್ಯವಾಗಿ ನಮಗೆಲ್ಲ ಎದುರಾಗುವ ಸಮಸ್ಯೆಯೆಂದರೆ ಖಿನ್ನತೆ. ನೀವೊಂದು ವೇಳೆ ಖಿನ್ನತೆಯ ಸುಳಿಯಲ್ಲಿ ಸಿಲುಕಿದರೆ ಅಲ್ಲಿಯೇ ನಲುಗುವ ಅಗತ್ಯವಿಲ್ಲ. ಆದಷ್ಟು ಶೀಘ್ರವಾಗಿ ಅದರ ಬಾಹುಗಳಿಂದ ಬಿಡಿಸಿಕೊಳ್ಳುವ ಪ್ರಜ್ಞಾಪೂರ್ವಕ ಪ್ರಯತ್ನ ಮಾಡಿ. ಹಿತಕರವಾದ ಸಂಗೀತದ ಆಲಿಸುವಿಕೆಯಿಂದ, ಹಾಸ್ಯಮಯ ಚಲನಚಿತ್ರ ವೀಕ್ಷಿಸುವುದರಿಂದ ಖಿನ್ನತೆಯನ್ನು ಹೊರದಬ್ಬಬಹುದು. ಅದಕ್ಕೂ ಮೊದಲು ಖಿನ್ನರಾಗಿ ಕುಳಿತುಕೊಳ್ಳುವುದರಿಂದ ಆಗುವ ವೇಳೆಯ ಅಪವ್ಯಯದ ಬಗ್ಗೆ ಅರಿಯುವುದು ಮುಖ್ಯ.

ಕ್ರೀಮ್ ಕೇಕು, ಐಸಕ್ರೀಮು, ತಂಪು ಪಾನೀಯಗಳನ್ನು ವರ್ಜಿಸಿದಷ್ಟು ದೇಹ ಪ್ರಕೃತಿಗೆ ಒಳ್ಳೆಯದು. ಅವೇಳೆಯಲ್ಲಿ ಹಸಿವಾದಾಗ ತಕ್ಷಣ ಕರಿದ ತಿಂಡಿಗೆ ಮೊರೆಹೋಗಬೇಡಿ. ಅದಕ್ಕೆ ಬದಲಾಗಿ ಒಂದು ತಾಜಾ ಸೇಬುಹಣ್ಣನ್ನು ಸೇವಿಸಿದರೆ ನಿಮ್ಮ ಮುಂದಿನ ಊಟದವರೆಗೆ ನಿರಾತಂಕವಾಗಿರಬಹುದು. ಅದು ನಿಮ್ಮ ಪಚನಕ್ರಿಯೆಯ ಮೇಲೇನೂ ದುಷ್ಟ ಪರಿಣಾಮ ಬೀರದು. ಸೇವಿಸುವ ಆಹಾರದ ರುಚಿ, ನೋಟ, ವಾಸನೆಗಳು ಅತಿ ಮುಖ್ಯವೇನೋ ಸರಿ. ಅದರ ಜೊತೆಗೆ ತಿಂದಾದಮೇಲೆ ನಿಮಗೇನನ್ನಿಸುತ್ತದೆ ಎಂಬುದನ್ನು ಕಡೆಗಣಿಸಲಾಗದು. ಊಟವಾದ ಮೇಲೆ ಹೊಟ್ಟೆ ಭಾರವೆನ್ನಿಸದೆ ಮನಸ್ಸು ಉಲ್ಲಾಸಮಯವಾಗಿರುವಂತೆ ನೋಡಿಕೊಳ್ಳಬೇಕು.

ನಿಯಮಿತ ವ್ಯಾಯಾಮ ದೇಹ ಮತ್ತು ಮನಸ್ಸುಗಳೆರಡಕ್ಕೂ ಅತ್ಯವಶ್ಯ. ದೈನಂದಿನ ಬೇಡಿಕೆಗಳನ್ನು ದಿಟ್ಟತನದಿಂದ ಎದುರಿಸಲು ನಿಮ್ಮನ್ನು ಸಿದ್ಧಗೊಳಿಸುವ ವ್ಯಾಯಾಮ ನಿಮ್ಮ ವ್ಯಕ್ತಿತ್ವವನ್ನು ಊರ್ಧ್ವಮುಖವಾಗಿ ಲಂಬಿಸಬಲ್ಲದು.

ಮುಖದ ಮೇಲಿನ ಮಂದಹಾಸಕ್ಕಿಂತ ಮಿಗಿಲಾದ ಸೌಂದರ್ಯವುಂಟೆ? ಮುಖದಲ್ಲಿ ನಗುವನ್ನು ತುಳುಕಿಸಿಕೊಳ್ಳುವುದು

ಅದ್ವಿತೀಯ ಹವ್ಯಾಸ. ಒಂದು ಕ್ಷಣ ನಕ್ಕುಬಿಡಿ. ಅದು ನಿಮ್ಮ ಅಂದಕ್ಕೆ ಸುವರ್ಣಪಟ್ಟಿ ಕಟ್ಟುತ್ತದೆ. ಸಂತೋಷದಿಂದ ನಗುನಗುತ ಇರುವುದು ಆರೋಗ್ಯವಂತಿಕೆಯ ಲಕ್ಷಣ. ಒಂದು ಬಗೆಯ ಯೌವನ ಪ್ರಜ್ಞೆಯನ್ನು ಸೃಜಿಸುವುವ ಇದು ವಯಸ್ಸಿನ ಹೊಡೆತವನ್ನೂ ನಿವಾಳಿಸಿ ಒಗೆಯಲು ಶಕ್ತ. ರೋಗಗಳು ಸಾಂಕ್ರಾಮಿಕವಾಗಿ ಪ್ರಸರಣಗೊಳ್ಳುವಂತೆ ನಗುವೂ ಸುತ್ತಲಿನವರನ್ನು ಆವರಿಸಿಕೊಳ್ಳುತ್ತದೆ. ಇದು ನೀವು ಪ್ರತಿಯೊಬ್ಬರಿಗೂ ಹರಡಬಹುದಾದ ಅತ್ಯುತ್ತಮ ಸಾಂಕ್ರಾಮಿಕ ಆರೋಗ್ಯ!

ಅಂಗಾಂಗಗಳ ಪ್ರಮಾಣಬದ್ಧತೆ, ತ್ವಚೆಯ ಕಾಂತಿ ಇತ್ಯಾದಿಗಳು ವ್ಯಕ್ತಿಯ ಸೌಂದರ್ಯವರ್ಧನೆಗೆ ಸಹಾಯಕವೆನ್ನುವುದು ನಿಜವಾದರೂ ಇವಿಷ್ಟೇ ಸೌಂದರ್ಯವೆನ್ನಿಸಿಕೊಳ್ಳಲಾರವು. ಇವೆಲ್ಲಕ್ಕೆ ಹೊರತಾದ ಕಳೆಯೊಂದಿರುತ್ತದೆ. ಅದನ್ನು ಹೊಮ್ಮಿಸುವ ಆರೋಗ್ಯವಂತ ಮನಸ್ಸನ್ನು ನಿರ್ಮಿಸಿಕೊಳ್ಳುವುದರಲ್ಲೇ ಸೌಂದರ್ಯದ ಮರ್ಮ ಅಡಗಿದೆ ಎಂಬುದರಲ್ಲಿ ಹುರುಳಿದೆ. ಅಬ್ಬರದ ಜಾಹೀರಾತುಗಳಿಗೆ ಮನಸೋತು ಲಿಪ್‌ಸ್ಟಿಕ್, ಐ ಶಾಡೋ, ಸ್ನೋ, ಪೌಡರ್ ಇತ್ಯಾದಿಗಳು ಒದಗಿಸುವ ಕೃತ್ರಿಮ ಸೌಂದರ್ಯವನ್ನು ಮುಖದ ಮೇಲೆ 'ಹೇರಿಕೊಳ್ಳುವ' ಬದಲು ಅಂತರಂಗದಲ್ಲೊಂದು ಸೌಂದರ್ಯದ ಚಿಲುಮೆಯನ್ನು ಚಿಮ್ಮಿಸಿಕೊಳ್ಳುವುದು ಒಳಿತಲ್ಲವೆ? ●

ನೆರಳಿನಲ್ಲಿ

ಸುಮಾರು 18-20 ವರ್ಷಗಳ ಹಿಂದಿನ ಮಾತು. ದ.ಕ.ದಲ್ಲಿ ಎಲ್ಲೆಂದರಲ್ಲಿ, ತೆಂಗು, ಕಂಗು, ಮಾವು, ಹಲಸು - ನದಿ, ಝರಿ, ತೊರೆ, ಕೆರೆ, ಕೊಳಗಳ ಸಮೃದ್ಧ ಜಲರಾಶಿ. ಆಗಿನ್ನೂ 6ನೇ ತರಗತಿಯಲ್ಲಿ ಓದುತ್ತಿದ್ದೆ. 'ಗಿರಿ' ಬಡ ಮನೆತನದ ಚೂಟಿ ಹುಡುಗ. ಲವಲವಿಕೆಯ ಓಡಾಟ. ಸಬಾ ಪಾದರಸದಂತೆ ಕುಣಿದು ಕುಪ್ಪಳಿಸುವ ಗಿರಿ ನಮ್ಮ ಅಚ್ಚುಮೆಚ್ಚಿನ ಸಂಗಾತಿ. ಬಾಲ್ಯದಲ್ಲೇ ತಂದೆ-ತಾಯನ್ನು ಕಳೆದುಕೊಂಡ 'ಗಿರಿ' ಮಾವನ ಮನೆಯಲ್ಲೇ ಬೆಳೆಯುತ್ತಿದ್ದ. ಶ್ರೀಕೃಷ್ಣ-ಕಂಸ ನಾಟಕವನ್ನು ಆಡಿಸುತ್ತಿದ್ದ ನಮ್ಮ ಹೆಡ್‌ಮಾಸ್ಟರ್ ಆ ವರ್ಷ ಗಿರಿಯನ್ನೇ ಶ್ರೀಕೃಷ್ಣನನ್ನಾಗಿ ಆರಿಸಿದ್ದರು. ಇವತ್ತಿಗೂ ಅವನ ವೇಷ-ಭೂಷಣ- ಮಾತು ಅಚ್ಚಳಿಯದೆ ನಿಂತಿದೆ. ಶಾಲೆ ಮುಗಿಸಿ ದಾರಿಯಲ್ಲಿ ಗಿರಿಯನ್ನ ಛೇಡಿಸಿ, ಕಾಡಿಸಿಯೇ ಬೀಳ್ಕೊಡುತ್ತಿದ್ದೆವು. ಬಲಿವಾಡ್ಯದಂದು ರಜೆ ತಾನೆ? ಸರಿಸುಮಾರು 12 ಗಂಟೆಗೆಲ್ಲ ಗಿರಿಯ ಗೆಳೆಯರ ಪಾಳ್ಯವೇ ಈ 'ತೋಡಿ'ನಲ್ಲಿ ಈಜಲು ಸೇರುತ್ತದೆ. ನಾವೆಲ್ಲ ಮೇಲೆ ನಿಂತು ವೀಕ್ಷಿಸಿ ಅವರಲ್ಲೇ ಸ್ಪರ್ಧೆ ಏರ್ಪಡಿಸುತ್ತಿದ್ದೆವು. 'ತೋಡಿ'ನ ಬದಿಯನ್ನು ಕಲ್ಲುಬಂಡೆಗಳಿಂದ ಕಟ್ಟಲಾಗುತ್ತದೆ. ಗಿರಿಯ ತಲೆಗೆ ಹೊಸ ಯೋಚನೆ. ಈ ಕಲ್ಲುಗಳ ಸಂದಿನಲ್ಲಿ ಏಡಿಗಳು ಮನೆ ಮಾಡಿಕೊಂಡಿರುತ್ತವೆ. ಇವನ್ನು ಹಿಡಿಯಲು ಗಿರಿ ಕಲ್ಲಿನ ಸಂದಿಯೊಳಕ್ಕೆ ಕೈಯಿಕ್ಕಿದ. ''ಹೋ! ಸಿಕ್ಕಿತು. ಕೈಗೆ ಪರಚುತ್ತಿದೆ. ಹೆಚ್ಚಿನಂಶ ದೊಡ್ಡದಾದ ಏಡಿ ಇರಬೇಕು.'' ಎಂದು ಮತ್ತೆ ಬಲವಾಗಿ ಕೈಯನ್ನ ಒಳಗೆ ತುರುಕುತ್ತಿದ್ದ. ಎಲ್ಲಾ ಗೆಳೆಯರ ಹಿಂಡು ಅವನನ್ನ ಹುರಿದುಂಬಿಸುತ್ತಿತ್ತು. ಮರುಕ್ಷಣವೇ ಕಟ್ಟನೆ ಕಿರುಚಿಕೊಂಡು ಕೈ ಹೊರಗೆ ತೆಗೆದಾಗ ನಮ್ಮೆಲ್ಲರ ಹೃದಯವೇ ಬಾಯಿಗೆ ಬಂದಂತಿತ್ತು. ಏಡಿಯ ಬದಲು ಮಾರುದ್ದದ ಕರಿನಾಗರ ಗಿರಿಯ ಕೈಯನ್ನು ಬಲವಾಗಿ ಕಚ್ಚಿ ಕೈಯಲ್ಲೇ ನೇತಾಡುತ್ತಿತ್ತು. ನಮ್ಮೆಲ್ಲರ ಗಲಾಟೆಯಿಂದ ಹಿರಿಯರು ದೌಡಾಯಿಸಿ ಈ ಭೀಕರ ದೃಶ್ಯ ಕಂಡು ಸ್ತಂಭಿತರಾಗಿದ್ದರು. ಮೃತ್ಯು ಕ್ಷಣಕ್ಷಣಕ್ಕೂ ಗಿರಿಯನ್ನು ಹಾವಿನ ರೂಪದಲ್ಲಿ ತನ್ನ ತೋಳತೆಕ್ಕೆಗೆ ಎಳೆಯುತ್ತಿತ್ತು. ಧೈರ್ಯಶಾಲಿಯಾದ ನಮ್ಮ ಕೆಲಸದಾಳು ಬಹಳ ಕಷ್ಟದಿಂದ ಹಾವನ್ನ ಬೇರ್ಪಡಿಸಿ ಗಿರಿಯನ್ನು ಹೊತ್ತುಕೊಂಡು ಮನೆಗೆ ಬರುತ್ತಿರುವಾಗಲೇ ಗಿರಿ ನಮ್ಮೆಲ್ಲರಿಗೂ ವಿದಾಯ ಹೇಳಿ ಬಹುದೂರ ಸಾಗಿದ್ದ. ಈಗ ಆ ತುಂಟ ಗಿರಿಯ ಮಾತು-ಓಡಾಟ ಬರೇ ನೆನಪು ಮಾತ್ರ.

ಸಂಧ್ಯಾ ಸತೀಶ

ಶಿರ್ಸಿಯ ಸಮೀಪದ ಅಜ್ಜನ ಮನೆಯಲ್ಲಿ ಕಳೆದ ನಮ್ಮ ಬಾಲ್ಯದ ಹಲವು ದಿನಗಳು ನಮ್ಮ ನೆನಪಿನಲ್ಲಿ ಎಂದೂ ಮರೆಯದ ದಿನಗಳು. ಶಾಲೆಗೆ ರಜೆ ಬಂದ ಕೂಡಲೇ ಅಜ್ಜನ ಮನೆಗೆ ಓಡುತ್ತಿದ್ದ ಕಾಲ. ಒಬ್ಬಳೇ ಮಗಳಾಗಿದ್ದ ನಮ್ಮ ತಾಯಿಯ ನಾವು ನಾಲ್ಕು ಮಕ್ಕಳು ಅಜ್ಜನ ಮನೆಯಲ್ಲಿ ಆಡುತ್ತಿದ್ದ ಆಟಗಳು ಎಷ್ಟು ವೈವಿಧ್ಯಮಯವಾಗಿದ್ದವೆಂದರೆ ನಗರದ ಮಕ್ಕಳು ಕಲ್ಪಿಸಲು ಸಾಧ್ಯವಿಲ್ಲ.

ತೋಟದ ಪಕ್ಕದ ಹೊಳೆಯಲ್ಲಿ ಮೀನು ಹಿಡಿಯುವುದು ನಮಗೆ ಪ್ರಿಯವಾಗಿದ್ದ ಆಟ. ನಾವು ಪೂರ್ಣ ಸಸ್ಯಾಹಾರಿಗಳಾಗಿದ್ದ ಬ್ರಾಹ್ಮಣರು. ಮೀನೇಕೆ ಹಿಡಿಯುತ್ತಿದ್ದಿರಿ? ಎನ್ನುತ್ತೀರಾ? ನಮ್ಮ ಅಜ್ಜ ಮನೆಯಂಗಳದಲ್ಲಿ ಕಟ್ಟಿಸಿದ್ದ ನೀರಿನ ಕೊಳದಲ್ಲಿ ಆ ಮೀನುಗಳನ್ನು ತಂದು ಬಿಡುವುದು ನಮ್ಮ ಉದ್ದೇಶ. ನಮಗಿಂತ ದೊಡ್ಡವರಾದ

ಅಣ್ಣ-ಅಕ್ಕ, ನನಗೆ-ತಮ್ಮನಿಗೆ ಮಾರ್ಗದರ್ಶಿಗಳು. ಅವರಿದ್ದಾಗ ಅಜ್ಜ-ಅಜ್ಜಿ ನಮ್ಮ ಈ ಆಟಕ್ಕೆ ಅಡ್ಡಿ ಬರುತ್ತಿರಲಿಲ್ಲ. ಒಮ್ಮೆ ಹೀಗಾಯಿತು. ನಾನು-ತಮ್ಮ ಮಾತ್ರ ಅಜ್ಜನ ಮನೆಗೆ ಹೋಗಿದ್ದೆವು. ನನಗೆ ಆರು ವರ್ಷ. ತಮ್ಮನಿಗೆ ಮೂರುವರೆ ವರ್ಷ. ನಾವಿಬ್ಬರೂ ತೋಟಕ್ಕೆ ಹೋಗಿ ಮೀನು ಹಿಡಿಯುತ್ತೇವೆ ಎಂದರೆ ಅಜ್ಜಿ ಬಿಡುತ್ತಿರಲಿಲ್ಲ. ಅದಕ್ಕೆಂದು ನಾನು ಅಜ್ಜಿ ಮಧ್ಯಾಹ್ನ ಮಲಗಿದಾಗ ತಮ್ಮನಿಗೆ ಒಂದು ಸಂಕೇತ ಭಾಷೆ ಹೇಳಿಕೊಟ್ಟಿದ್ದೆ - ಅ ಸಾ.ಮೀ.ಹಿ. ಎಂದು. ಅದನ್ನು ಹೇಳಿದೊಡನೆ ತಮ್ಮ ಓಡಿ ಬರಬೇಕು. ಅದು ನಮ್ಮ ಉಪಾಯ.

ಎರಡು-ಮೂರು ದಿನ ನಮ್ಮನ್ನು ಗಮನಿಸಿದ ಅಜ್ಜಿ, ನಾಲ್ಕನೇ ದಿನ ಮುಗ್ಧ ತಮ್ಮನನ್ನು ಮುದ್ದುಮಾಡಿ, ತಿಂಡಿ ಕೊಟ್ಟು ಸಾ.ಮೀ.ಹಿ. ಅಂದರೆ ಏನು ಅಂತ ಕೇಳಿದಾಗ ತಮ್ಮ ''ಸಾಣಿಗೆ ತಗೊಂಡು ಮೀನು ಹಿಡಿಯಲು ಹೋಗೋಣ'' ಎಂದು ಮದ್ದಾಗಿ ಹೇಳಿದಾಗ ನಮ್ಮ ಆಟ ಬಂದ್!(ಸಾಣಿಗೆ ಅಂದರೆ ಅಕ್ಕಿ ಸಾಣಿಸುವ ಬೆತ್ತದ ಜರಡಿ.)

ನಮ್ಮ ಬಾಲ್ಯ ಕಳೆದು ಎಷ್ಟೋ ವರ್ಷಗಳಾಗಿವೆ. ನಾನು ನನ್ನ ಮಕ್ಕಳೊಡನೆ, ತಮ್ಮ ತನ್ನ ಮಕ್ಕಳೊಡನೆ ''ಸಾ.ಮೀ.ಹಿ.'' ಎಂದು ಬಾಲ್ಯದ ಎಲ್ಲಾ ಘಟನೆಗಳನ್ನು ಹೇಳಿಕೊಂಡು ನಗುತ್ತೇವೆ. ನಮ್ಮ ಬಾಲ್ಯ ಕಳೆದು ಹೋಗಿದೆ ಎಂದು ನೋವುಣ್ಣುತ್ತೇವೆ.

ವಿಜಯಾ ಶ್ರೀಧರ್

ಮಿಕ್ಕೆರೆ ಎಂಬುವುದು ಮಂಡ್ಯಜಿಲ್ಲೆಯ ಚಿಕ್ಕ ಹಳ್ಳಿ. ನಾನು ೫ನೇ ತರಗತಿಯಲ್ಲಿ ಓದುತ್ತಿದ್ದೆ. ನಮ್ಮ ಊರಿನ ಪಕ್ಕದಲ್ಲೇ ಹಾದುಹೋಗುವ ವಿದ್ಯುಚ್ಛಕ್ತಿ ಕಂಬಕ್ಕೆ ಗ್ರೌಂಡಿಂಗ್ ತಂತಿಯನ್ನು ಸುತ್ತಿ ನೆಲಕ್ಕೆ ಹೂತಿದ್ದರು. ಆದರಿಂದ ಆಗಾಗ್ಗೆ ''ಗ್ರೌಂಡಿಂಗ್'' ಆಗುತ್ತಿತ್ತು. ಹುಡುಗರೆಲ್ಲಾ ಕಪ್ಪೆ ಇತ್ಯಾದಿ ಚಿಕ್ಕ ಚಿಕ್ಕ ಪ್ರಾಣಿಗಳನ್ನು ಹಿಡಿದು ಒಂದು ಕಡ್ಡಿಗೆ ಕಟ್ಟಿಕೊಂಡು, ಆ ತಂತಿಗೆ ತಗುಲಿಸಿ ಅವು ಮಾಡುವ ಶಬ್ದದಿಂದ ಸಂತೋಷ ಪಡುತ್ತಿದ್ದರು. ನಾನು ಸಾಯಂಕಾಲ ಅದೇ ಮಾರ್ಗದಿಂದ ಬರುತ್ತಿದ್ದಾಗ, ನನ್ನ ಸ್ನೇಹಿತನೊಬ್ಬ ನನ್ನನ್ನು ಆ ಕಡೆ ಕರೆದೊಯ್ದು. ಹಸಿರು ಕಡ್ಡಿಯನ್ನು ಅದಕ್ಕೆ ತಗುಲಿಸಿದಾಗ ಕೈ ಜುಂ ಎನ್ನುತ್ತದೆಂಬುದನ್ನು ಹೇಳುತ್ತಿದ್ದ. ಸ್ವಲ್ಪ ಸಮಯದ ನಂತರ ನಮಗೆ ಯಾವ ಅನುಭವವೂ ಆಗದೆ ವಾಪಸ್ಸು ಮನೆಗೆ ಬಂದೆವು. ನಾನು ಮತ್ತೊಬ್ಬ ಸ್ನೇಹಿತನನ್ನು ಕರೆದುಕೊಂಡು ಅದೇ ಜಾಗಕ್ಕೆ ಹೋಗಿ, ಸಾಹಸ ಮಾಡುವವನಂತೆ ತಂತಿಯನ್ನು ಕೈಯಿಂದ ಮುಟ್ಟಿದ ತಕ್ಷಣವೇ, ಅದು ನನ್ನನ್ನು ಹಿಡಿದುಕೊಂಡಿತು. ಕೈಯನ್ನು ಕಿತ್ತುಕೊಳ್ಳಲೂ ಆಗಲಿಲ್ಲ. ಕೂಗಲು ಬಾಯಿಯೂ ಬರಲಿಲ್ಲ. ಇದನ್ನು ಗಮನಿಸಿದ ನನ್ನ ಸ್ನೇಹಿತ ಜೋರಾಗಿ ಕೂಗಿಕೊಂಡಾಗ ಜನ ಗುಂಪು ಗುಂಪಾಗಿ ಆಗಮಿಸಿದರು. ಎಲ್ಲರೂ ನನ್ನನ್ನು ಮುಟ್ಟಲು ಹೆದರಿ ನಿಂತಿದ್ದಾಗ ಒಬ್ಬ ಓಡಿಬಂದು ತನ್ನ ಚಪ್ಪಲಿಕಾಲುಗಳಿಂದ ನನ್ನ ನಡುವಿಗೆ ಒದ್ದ. ನಾನು ಪಕ್ಕದ ಹಳ್ಳಕ್ಕೆ ಹೋಗಿಬಿದ್ದೆ. ನನ್ನ ಕೈಗಳೆಲ್ಲಾ ತೂತಾಗಿದ್ದವು. ಪೂರ್ಣ ಸುಸ್ತಾಗಿದ್ದ ನಾನು ತಾಯಿಯ ಆರೈಕೆಯಿಂದ ಚೇತರಿಸಿಕೊಂಡೆ. ಇನ್ನು ಎರಡು ನಿಮಿಷ ತಡವಾಗಿದ್ದರೆ ನಾನು ಬದುಕುತ್ತಿರಲಿಲ್ಲವೆಂದು ಡಾಕ್ಟರರು ಹೇಳುತ್ತಿದ್ದರು. ನನಗೆ ಮರು ಜನ್ಮ ಕೊಟ್ಟ ಆ ವ್ಯಕ್ತಿ (ನಮ್ಮ ಊರಿನಲ್ಲೇ ಹೋಟೆಲ್ ಇಟ್ಟುಕೊಂಡಿದ್ದರು) ಮತ್ತು ಆ ಘಟನೆ ಇಂದಿಗೂ ಅಚ್ಚಳಿಯದೇ ನನ್ನ ಮನದಲ್ಲಿದೆ.

ಮಿಕ್ಕೆರೆ ರಮೇಶ್


ಭಾಲಜಿ ಪೆಂಢಾರಕರ್

ದಾದಾಸಾಹೇಬ್ ಫಾಲ್ಕೆ, ವಿ. ಶಾಂತಾರಾಮ, ಮಾಸ್ಟರ್ ವಿನಾಯಕರ ಸಮಕಾಲೀನ ಭಾಲಜಿ ಪೆಂಢಾರಕರ್. ಕಲಿತಿದ್ದು ಕೇವಲ ಪ್ರಾಥಮಿಕ ಶಾಲೆಯಲ್ಲಿ. ದಿನಕ್ಕೆ ಮೂರಾಣೆಯ ಸಂಬಳದೊಂದಿಗೆ ಈ ವೃತ್ತಿಗಿಳಿದ ಅವರು ದುಡಿತವನ್ನೇ ಉಂಡುಟ್ಟವರು. ಸುಸಜ್ಜಿತ ಸ್ಟುಡಿಯೋ ಒಂದರ ಮಾಲಿಕನಾಗುವವರೆಗೂ, ಭಾರತದ ಶ್ರೇಷ್ಠ ನಿರ್ದೇಶಕ-ನಿರ್ಮಾತೃ-ಗೀತಕಾರರಾಗುವಲ್ಲಿಯವರೆಗೂ ಬೆಳೆದು ನಿಂತರೆಂದರೆ ಅವರ ಆಸಕ್ತ ದುಡಿಮೆಯ ಅರಿವಾಗದಿರದು.

1927. 'ವಂದೇಮಾತರಂ ಆಶ್ರಮ'ವೆಂಬ ಮೂಕಚಿತ್ರವೊಂದು ಅಂದಿನ ಬ್ರಿಟಿಷ್ ಸರಕಾರಕ್ಕೆ ತಲೆನೋವೆನಿಸಿತು. ಅದೂ ಬಿಡುಗಡೆಗೆ ಮುನ್ನವೆ. ಚಿತ್ರದ ಹೆಸರು ಆ ಸರಕಾರವನ್ನು ಒಳಗೊಳಗೇ ನಡುಗಿಸಿತು. ಆದರೆ ಅದರ ಬಳಿ ಸೆನ್ಸಾರ್ ಕತ್ತರಿಯಿತ್ತಲ್ಲ. ಒಂದಲ್ಲ-ಎರಡಲ್ಲ, ಏಳು ಸಲ ಚಿತ್ರದ ಮೇಲೆ ಕತ್ತರಿಯಾಡಿತು. ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸುವ ಆ ಕಥೆಯನ್ನು ಎಷ್ಟೆಂದು ಕತ್ತರಿಸಿಯಾರು? ಸ್ವಾತಂತ್ರ್ಯ ಸ್ವಪ್ನವನ್ನು ಉದ್ದೀಪನಗೊಳಿಸುವ ಸೂಕ್ಷ್ಮ ಅಂಶಗಳು ಕತ್ತರಿಯಾಡಿಸುವವರ ಕಣ್ಣಿಗೆ ಗೋಚರಿಸದೇ ಹೋದವು. ಕಥೆಯನ್ನು ನಿಸ್ಸತ್ವಗೊಳಿಸಿಬಿಟ್ಟೆವೆಂದು ಬೀಗಿದರು ಕತ್ತರಿ ಹಿಡಿದವರು. ಆದರೆ ನೋಡುವವರ ಮೇಲೆ ಉದ್ದೇಶಿತ ಪರಿಣಾಮವುಂಟುಮಾಡುವಲ್ಲಿ ಚಿತ್ರ ಯಶಸ್ವಿಯಾಯಿತು.

1932. 'ಶ್ಯಾಮಸುಂದರ'ವೆಂಬ ಚಿತ್ರ ಮಾತಿನೊಂದಿಗೆ ಬಂತು. ಅದೇ ವರ್ಷ ವಿ.ಶಾಂತಾರಾಮರ 'ಅಯೋಧ್ಯೇಚಾ ರಾಜಾ' ಕೂಡ ತೆರೆಕಂಡಿತು. ಹತ್ತೊಂಬತ್ತು ಹಾಡುಗಳೊಂದಿಗಿನ 'ಶ್ಯಾಮಸುಂದರ' ಹಿಂದಿ ಮತ್ತು ಮರಾಠಿಗಳಲ್ಲಿ ಏಕಕಾಲಕ್ಕೆ ತಯಾರಾಯಿತು. ಮುಂಬಯಿಯ ನ್ಯೂ ವೆಸ್ಟೆಂಡ್ ಸಿನೆಮಾ (ಇಂದಿನ ನಾಝ್) ಚಿತ್ರಮಂದಿರದಲ್ಲಿ ಸತತ ಇಪ್ಪತ್ತೇಳು ವಾರ ಜನರನ್ನಾಕರ್ಷಿಸಿತು 'ಶ್ಯಾಮಸುಂದರ.' ಭಾರತದಲ್ಲಿ ಉಭಯಭಾಷೆಗಳಲ್ಲಿ ಒಮ್ಮೆಲೇ ತಯಾರಾದ ಮೊದಲ ಚಿತ್ರವೆಂಬ ಗೌರವ ಒಂದೆಡೆಯಾದರೆ 'ಸಿಲ್ವರ್ ಜ್ಯುಬಿಲಿ' ಕಂಡ ಮೊಟ್ಟಮೊದಲ ಸಿನಿಮಾ ಎಂಬ ಹೆಮ್ಮೆಗೆ ಪಾತ್ರವಾದದ್ದು ಇನ್ನೊಂದೆಡೆ. ಪುಣೆಯಲ್ಲಿ ತಯಾರಾದ ಮೊಟ್ಟಮೊದಲ ಮರಾಠಿ ಸಿನಿಮಾ ಇದು. ತೆರೆಕಂಡ ಕೆಲವು ವಾರಗಳ ನಂತರ ಚಿತ್ರದ ಕೊನೆಯನ್ನು ಬದಲಿಸಿ 'ಕಂಸವಧೆ'ಯ ಸನ್ನಿವೇಶವನ್ನು ಜೋಡಿಸಿ ಪ್ರದರ್ಶಿಸತೊಡಗಿದ ಮೇಲಂತೂ - ಅಬ್ಬಾ! ಏನು ಜನದಟ್ಟಣೆ ಆ ಸಿನಿಮಾಕ್ಕೆ... ಕಂಸವಧೆಯ ಮೂಲಕ ಆಸುರೀ ಆಡಳಿತವನ್ನು ಕೊನೆಗಾಣಿಸಿದ ಆ ನಿರ್ದೇಶಕರ ಜಾಣ್ಮೆಯನ್ನು ದೇಶಕ್ಕೆ ದೇಶವೇ ಕೊಂಡಾಡಿತು.

1948. ಸ್ವಾತಂತ್ರ್ಯ ಸೂರ್ಯನ ಹೊಂಗಿರಣಗಳು ದೇಶದ ನೆಲವನ್ನು ಬಂಗಾರದ ಹೊಳಪಿಗೆ ತಿರುಗಿಸುತ್ತಿದ್ದ ಹೊಸತಿನಲ್ಲೇ ಮಹಾತ್ಮಾಜಿಯ ಹತ್ಯೆ! ದೇಶಾದ್ಯಂತ ದೊಂಬಿ - ಗಲಭೆಗಳು. ಪನ್ಹಾಳಗಡ (ಕೊಲ್ಹಾಪುರದ ಬಳಿ)ದ ಕೋಟೆಯಲ್ಲಿ ಕುಳಿತು ಹೊಸಚಿತ್ರವೊಂದರ ಚಿತ್ರಕಥೆ ಬರೆಯುತ್ತಿದ್ದ ಆ ನಿರ್ದೇಶಕರಿಗೆ ಕೊಲ್ಹಾಪುರದ ತಮ್ಮ 'ಪ್ರಭಾಕರ ಸ್ಟೂಡಿಯೋ' ಅಗ್ನಿಗೆ ಆಹುತಿಯಾದದ್ದು - 'ಮೀಠ್-ಭಾಕರ್' (ಉಪ್ಪು-ರೊಟ್ಟಿ) ಎಂಬ ಪೂರ್ಣಗೊಂಡ ಚಿತ್ರ ನೆಗೆಟಿವ್‌ಗಳು. ಆ ಜ್ವಾಲೆಯಲ್ಲಿ ಕರಗಿಹೋದದ್ದು ಗೊತ್ತಾದಾಗ ಅವರು ಎದೆಗುಂದಲಿಲ್ಲ. ಗಲಭೆಕೋರರು ಪೆಂಢಾರ್‌ಕರರ ಮೇಲೂ ಏರಿಬರಲೆತ್ನಿಸಿದರಂತೆ. ತಮ್ಮ ಸ್ಟುಡಿಯೋ ಸುಟ್ಟುಹೋದದ್ದಕ್ಕಿಂತಲೂ ಅವರಿಗೆ ಹೆಚ್ಚು ದುಃಖವನ್ನುಂಟುಮಾಡಿದ್ದು ಭಾರತ ಭಾಗ್ಯವಿಧಾತನ ಕೊಲೆ. ಕೆಲ ದಿನಗಳ ನಂತರ ಆ ಬಿಸಿಬೂದಿಯ ನಡುವೆಯೆ ನಿಂತು 'ಮೀಠ್-ಭಾಕರ್' ಚಿತ್ರವನ್ನು ಮತ್ತೆ ನಿರ್ಮಿಸಿದರು. ಎರಡನೆ ಬಾರಿಗೆ ಅದೇ ಚಿತ್ರದಲ್ಲಿ ಅಭಿನಯಿಸಲು ನಟ-ನಟಿಯರು ಹಣ ಕೇಳದ ಔದಾರ್ಯ ತೋರುವಷ್ಟು ದೊಡ್ಡ



ವ್ಯಕ್ತಿತ್ವ ಆ ನಿರ್ದೇಶಕರದು.

ಇದು ಭಾರತೀಯ ಚಿತ್ರರಂಗದ ಅತಿ ಹಿರಿಯ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಸಮ್ಮಾನಿತ ಭಾಲಜಿ ಪೆಂಢಾರಕರರ ಯಶೋಗಾಥೆ. ತೊಂಬತ್ತೈದರ ಈ ವಯಸ್ಸಿನಲ್ಲೂ (ಜನನ: ಮೇ 3, 1898 - ಕರವೀರ - ಈಗಿನ ಕೊಲ್ಹಾಪುರದಲ್ಲಿ), ದೃಗ್‌ಶಕ್ತಿ - ಶ್ರವಣಶಕ್ತಿ - ದೈಹಿಕ ಶಕ್ತಿಗಳು ಕೈ ಕೊಟ್ಟರೂ ಅವರ ಇಚ್ಛಾಶಕ್ತಿ - ಕ್ರಿಯಾಶಕ್ತಿಗಳು ಮಾತ್ರ ಅದ್ಭುತವನ್ನು ಸೃಷ್ಟಿಸಲು ಹಾತೊರೆಯುತ್ತವೆ. ನಿರಂತರ ಅರವತ್ತೇಳು ವರ್ಷಗಳ ಕಾಲ ಚಿತ್ರರಂಗಕ್ಕೆ ಸೇವೆ ಸಲ್ಲಿಸಿರುವ ಭಾಲಜಿ ಇಂದಿಗೂ ಕುಳಿತಲ್ಲೇ ಚಿತ್ರಕಥೆಗಳನ್ನು ಹೇಳಿ ಬರೆಯಿಸಿ, ಓದಿಸಿ ತಿದ್ದಿ ಅದು ತೆರೆಗಾಣುವಂತೆ ಶ್ರಮಿಸುವತ್ತ ಸಹಕಾರಿಗಳನ್ನು ಹುರಿದುಂಬಿಸುತ್ತಾರೆಂದರೆ ನಂಬುವುದು ಕಷ್ಟ.

ಭಾಲಚಂದ್ರ ಗೋವಿಂದ ಪೆಂಢಾರಕರ್ ಅವರ ಪೂರ್ಣ ಹೆಸರು. ಸಿನಿಮಾಕ್ಕೆ ತೊಡಗಿದ ಮೇಲೆ 'ಭಾಲ್ ಜಿ. ಪೆಂಢಾರಕರ್' ಎಂದು ಅದನ್ನು ಮೊಟಕುಗೊಳಿಸಿಕೊಂಡರು. ಜನ ಗೌರವದಿಂದ ಅವರನ್ನು ''ಭಾಲಜಿ'' ಎಂದರು. ಛತ್ರಪತಿ ಶಾಹು ಮಹಾರಾಜರ ಸರ್ಜನ್ನರಾಗಿದ್ದರು ತಂದೆ ಗೋವಿಂದ ಪೆಂಢಾರಕರ್. ಮಗನಿಗೋ ರಾಜ-ಮಹಾರಾಜ-ಸಾಮಂತರುಗಳೆಂದರೆ ಅಲರ್ಜಿ. ಬ್ರಿಟಿಶ್ ಸರಕಾರಕ್ಕೆ ಸಿಂಹಸ್ವಪ್ನರಾಗಿದ್ದ 'ಕೇಸರಿ'ಯ ಲೋಕಮಾನ್ಯ ಬಾಲ ಗಂಗಾಧರ ಟಿಳಕರಿಂದ ಪ್ರಭಾವಿತರಾದ ತರುಣ ಭಾಲಜಿ ರಾಷ್ಟ್ರೀಯ ಸೇವೆಗೆ ತಮ್ಮನ್ನು ಅರ್ಪಿಸಿಕೊಳ್ಳಲು ಹಣಗಾಡಿದರು. 'ಕೇಸರಿ' ಪತ್ರಿಕೆಯಲ್ಲಿ ಕೆಲಸವನ್ನಾರಂಭಿಸಿ ಅಲ್ಲಿಂದ ಮರಾಠಿ ನಾಟಕರಂಗದೆಡೆ ಆಕರ್ಷಿತರಾದರು. ನಾಟಕಕಾರರಾಗಿ - ನಿರ್ದೇಶಕರಾಗಿ ಹಲವು ನಾಟಕಗಳನ್ನು ರಂಗಕ್ಕೆ ತಂದರು(ರಾಷ್ಟ್ರಸಂಸಾರ, ಕ್ರಾಂತಿಕಾರಕ, ಕಾಯದೆಭಂಗ, ಅಜಿಂಕ್ಯ

ತಾರಾ, ಭವಿತವ್ಯ ಮುಂತಾದವು. ಈ ನಾಟಕಗಳಲ್ಲೆಲ್ಲ ಭಾಲಜಿ ಪೆಂಢಾರಕರರ ರಾಷ್ಟ್ರೀಯ ಪಕ್ಷ ಮತ್ತು ಕ್ರಾಂತಿಕಾರಕ ವಿಚಾರಗಳು ಢಾಳಾಗಿ ಕಂಡವು. ಕೆಲವು ನಾಟಕಗಳಲ್ಲಿ ಅವರೇ ಒಸ್ನೆಲೆ ಗಾಯಕ ಕೂಡ. ಅದೇ ಹೊತ್ತಿಗೆ ಹೆಸರು ಮಾಡಿದ್ದ ಕೊಲ್ಹಾಪುರದ 'ಮಹಾರಾಷ್ಟ್ರ ಫಿಲ್ಮ್ ಕಂಪನಿ'ಯ ಬಾಬುರಾವ್ ಪೇಂಟರ್‌ರೊಂದಿಗೆ ಕೆಲಸ ಮಾಡತೊಡಗಿದ ಭಾಲಜಿ ಅಲ್ಲಿ ಕೆಲವು ಮೂಕಿ ಸಿನೆಮಾಗಳನ್ನು ತಯಾರಿಸಿದರು. ಬ್ರಿಟಿಶ್ ಸೆನ್ಸಾರಿಗೆ ಏಳು ಬಾರಿ ಒಳಪಟ್ಟ 'ವಂದೇಮಾತರಂ ಆಶ್ರಮ'ಕ್ಕಿಂತ ಮೊದಲು 'ಪೃಥ್ವಿವಲ್ಲಭ'(1924) ಹಾಗೂ 'ಬಾಜೀರಾವ್-ಮಸ್ತಾನಿ' (1925)ಗಳನ್ನು ಚಿತ್ರಕಥೆ ಬರೆದು ನಿರ್ದೇಶಿಸಿದರು ಭಾಲಜಿ. ಪ್ರಭಾತ್ ನಿರ್ಮಿಸಿದ ಬಜ್ ಬಹದ್ದೂರ್, ಜುಲೂನ್, ಸೈರಂಧ್ರಿ (1930-1933)ಗಳ ಚಿತ್ರಕಥೆಯೂ ಅವರದೆ.

ಬ್ರಿಟಿಶ್ ಸೆನ್ಸಾರ್ ನೀತಿಯಿಂದಾಗಿ ನೇರವಾಗಿ ರಾಷ್ಟ್ರಭಕ್ತಿಯುತ ಕಥೆಗಳ ಬದಲು ಪುರಾಣ ಪ್ರಸಂಗಗಳನ್ನು ಸೆಲ್ಯುಲಾಯ್ಡ್ ಮೇಲೆ ತರತೊಡಗಿದ ಭಾಲಜಿ ಅಲ್ಲೆಲ್ಲ ತುಂಬ ಕೌಶಲದಿಂದ ಸ್ವಾತಂತ್ರ್ಯಸಂದೇಶವನ್ನು ಬೀರಿದರು. 'ಆಕಾಶವಾಣಿ'(1933), 'ಪಾರ್ಥಕುಮಾರ'(1934), 'ಕಾಲಿಮರ್ದನ'(1935), 'ಸಾವಿತ್ರಿ'(1936), 'ಕಾನ್ಹೋಪಾತ್ರಾ'(1937), 'ರಾಜಾ ಗೋಪಿಚಂದ್'(1938), 'ನೇತಾಜಿ ಪಾಲ್ಕರ್'(1939), 'ಗೋರಖ್‌ನಾಥ್'(1940), 'ಥೋರತಾಂಚಿ

ಕಮಲಾ', 'ಭಕ್ತ ದಾಮಾಜಿ'(1941), 'ಸೂನ್ ಬಾಯಿ'(1942), 'ಬಹರ್ಜೀ ನಾಯಿಕ್' (1943), 'ಸಾಸುರ್‌ವಾಸ್', 'ಮಹಾರಥಿ ಕರ್ಣ', 'ವಾಲ್ಮೀಕಿ'(1946) ಮುಂತಾದವು ತುಂಬ ಹೆಸರು ಮಾಡಿದವು. ''ಮಹಾನ್ ಕನಸುಗಳ ವ್ಯಾಪಾರಿ'', - ''ಗ್ರೇಟ್ ಶೋಮನ್'' ರಾಜ್‌ಕಪೂರ್‌ನನ್ನು ಚಿತ್ರರಂಗಕ್ಕೆ ಪರಿಚಯಿಸಿದವರೇ ಭಾಲಜಿ, 'ವಾಲ್ಮೀಕಿ' ಚಿತ್ರದಲ್ಲಿ ನಾರದನ ಪಾತ್ರದ ಮೂಲಕ.

ಛತ್ರಪತಿ ಶಿವಾಜಿ ಹಾಗೂ ಆತನ ಸುತ್ತಮುತ್ತಲ ಪ್ರಸಂಗ - ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಒಂದು ಚಿತ್ರಶ್ರೇಣಿಯನ್ನೇ ನಮಗಿತ್ತ ಭಾಲಜಿ ಅವುಗಳ ಮೂಲಕ ಸ್ವರಾಜ್ಯದ ಕಥೆ ಹೇಳಿದರು.

ಸಾಮಾಜಿಕ ಕಳಕಳಿಯ ಅನೇಕ ಉಲ್ಲೇಖಾರ್ಹ ಚಿತ್ರಗಳನ್ನು ಕೊಟ್ಟರು ಪೆಂಢಾರಕರ್. 'ಮೀಠ್-ಭಾಕರ್'(1949), 'ಮೀ ದಾರೂ ಸೋಡ್ಲಿ - (ನಾನು ಕುಡಿಯುವುದನ್ನು ಬಿಟ್ಟೆ' (1950), 'ಮಾಝಿ ಜಮೀನ್ ('ನನ್ನ ಜಮೀನು' - 1953), 'ನಾಯಿಕಿಂಚಾ ಸಜ್ಜಾ'(1957), 'ಸಾಧಿ ಮಾಣಸ' (ಇದೇ ಚಿತ್ರವನ್ನಾಧರಿಸಿದ ಡಾ.ರಾಜ್ ಮತ್ತು ಭಾರತಿ, ಅಭಿನಯದ ಕಮ್ಮಾರ ಕುಟುಂಬದ ಕಥೆ ಕನ್ನಡದಲ್ಲಿ ಬಂತು.) 'ತಾಂಬ್ಡಿ ಮಾಟಿ' ('ಕೆಂಪು ಮಣ್ಣು') ಮುಂತಾದವು ಅವುಗಳಲ್ಲಿ ಮುಖ್ಯ. ಇವೆಲ್ಲಕ್ಕೂ ಅವರು ನಿರ್ದೇಶನದೊಂದಿಗೆ ಚಿತ್ರಕಥೆ, ಗೀತೆ, ಸಂಭಾಷಣೆಗಳನ್ನೂ ಬರೆದರು. ಕೇವಲ ಗೀತಕಾರರಾಗಿ, ಕಥಾಕಾರರಾಗಿ, ಸಂಭಾಷಣಕಾರರಾಗಿ ಅವರು ಕೊಟ್ಟ ಚಿತ್ರಗಳೆಂದರೆ 'ಸ್ವರಾಜ್ಯ ಸೀಮೇವರ್' (ಸ್ವರಾಜ್ಯದ ಸೀಮೆಯ ಮೇಲೆ'-1937) 'ಶಿವರಾಮೋಶಿ'(1951), 'ಮಾಯ್ ಬಹಿಣಿ'(1952), 'ಕಾಂಚನ ಗಂಗಾ'(1954), 'ಗಾಟ್‌ಪಡ್ಲಿ ಠಾಕಾ ಠಾಕಾ'(1956), 'ಘೋರತಾಂಚಿ ಕಮಲಾ'(1963), 'ಘರಾಚಿ ರಾಣಿ'(1968), 'ಸಖ್ಯಾ ಸಜನಾ'(1972), 'ಬಾಲ ಶಿವಾಜಿ' (1981),'ಶಭಾಸ್ ಸೂನಬಾಯಿ' ('ಭಲೆ ಸೊಸೆ' - 1986) ಮೊದಲಾದವು.

ವರ್ಷಕ್ಕೊಂದು ಚಿತ್ರ ನೀಡುತ್ತಲೇ ಬಂದವರು ಪೆಂಢಾರಕರ್. ಆದರೆ ಅವಸರದಲ್ಲಿ ಅವರೆಂದೂ ಅಸಹ್ಯವಾದುದನ್ನು ಅವಾಂತರಭರಿತವಾದುದನ್ನು ಅಪೂರ್ಣವಾದುದನ್ನು ನೀಡಲಿಲ್ಲ. ಅವು ಸಾಮಾಜಿಕ ಅನಿಷ್ಟಗಳನ್ನು ದೂರ ಮಾಡುವಂಥವೇ ಇರಲಿ, ಕೌಟುಂಬಿಕ ಚಿತ್ರಗಳೇ ಆಗಿರಲಿ ಎಲ್ಲದರಲ್ಲೂ ಪರಿಪೂರ್ಣತೆ. ಅವರ 'ಮೀ ದಾರೂ ಸೋಡ್ಲಿ' ನೋಡಿ ಮದ್ಯಪಾನ ಬಿಟ್ಟವರೂ ಉಂಟು. 'ಸಾಸೂರ್‌ವಾಸ್', 'ಶಾಭಾಸ್ ಸೂನ್‌ಬಾಯಿ' ಗಳಂಥವನ್ನು ನೋಡಿ ತಮ್ಮ ನಡುವಳಿಕೆ ತಿದ್ದಿಕೊಂಡ ಅತ್ತೆಯರೂ ಉಂಟು. ಅವರ 'ಸಾಧಿ ಮಾಣಸ' ಭಾರತೀಯ ಚಿತ್ರರಂಗದಲ್ಲಿ ಹಣಿಕೆ ಹಾಕಿದ ನವವಾಸ್ತವವಾದದ ಶ್ರೇಷ್ಠ ಉದಾಹರಣೆ. ಕಥೆ ತುಂಬ ಸರಳವಾದದ್ದು. ಕಮ್ಮಾರ ಕುಟುಂಬದ ಸುಖ-ದುಃಖಗಳನ್ನು ನಿರೂಪಿಸುವಂಥದ್ದು. ಇಲ್ಲಿ ಯಾರಿಗೂ ಮೇಕಪ್ ಹಾಕದೆ ಎಲ್ಲಿಯೂ ಅತಿರೇಕಗಳನ್ನು ತುರುಕದೇ ತುಂಬ ಸಹಜವಾಗಿ ಚಿತ್ರಿಸಿದರು. ಆದರೆ ಎಲ್ಲಿಯೂ 'ಇದು ನವವಾಸ್ತವ ಚಿತ್ರ''ವೆಂದು ಹೇಳಿಕೊಳ್ಳಲಿಲ್ಲ ಅವರು. ಕೇಂದ್ರ ಮತ್ತು ಮಹಾರಾಷ್ಟ್ರ ರಾಜ್ಯ ಸರಕಾರಗಳೆರಡರಿಂದಲೂ ಪ್ರಶಸ್ತಿಗಳ ಸುರಿಮಳೆ ಈ ಚಿತ್ರಕ್ಕೆ. ಅವರ ಇನ್ನೊಂದು ಚಿತ್ರ 'ತಾಂಬ್ಡಿ ಮಾಟಿ' ಕೂಡ ಪ್ರಶಂಸಾಮಾಲೆಗಳನ್ನು ಪಡೆದುಕೊಂಡಿತು. ಇದರಲ್ಲಿ ಚಿಕ್ಕ ಪಾತ್ರದಲ್ಲಿ ಕಾಣಿಸಿಕೊಂಡ ದಾದಾ ಕೊಂಡ್ಕೆ ಇಂದು ಮರಾಠಿ ಚಿತ್ರರಂಗದ ನಿರ್ಮಾಪಕ-ನಟ-ನಿರ್ದೇಶಕನಾಗಿ ಬೆಳೆದಿದ್ದಾನೆ.

ಭಾಲಜಿ ಚಿತ್ರಗೀತೆಗಳನ್ನು ಬರೆದದ್ದು 'ಯೋಗೇಶ್' ಎಂಬ ಕಾವ್ಯನಾಮದಲ್ಲಿ. 'ಶೂರ್ ಆಮ್ಹಿ ಸರದಾರ್, ಆಮ್ಹಾಲಾ ಕಾಯ್ ಕುಣಾಚಿ ಭೀತಿ?' ('ಶೂರರು ನಾವ್ ಸರದಾರರು, ನಮಗೆ ಯಾರ - ಯಾತರ ಭೀತಿ?') ಎಂಬುದು ಅವರ ಅತ್ಯಂತ ಶ್ರೇಷ್ಠ ಗೀತೆಗಳಲ್ಲೊಂದೆನಿಸಿದೆ. ('ಮರಾಠಾ ಟಿಟುಕಾ ಮೇಳ್ವಾವಾ' ಚಿತ್ರದ್ದು).

ಭಾಲಜಿ ಚಿತ್ರರಂಗದಲ್ಲಿ ಬಾಬಾ (ತಂದೆ) ಎಂಬ ಗೌರವಕ್ಕೆ ಪಾತ್ರರಾದವರು. ನೇರ - ನಿಷ್ಠುರ ನಡವಳಿಕೆ. ಎಲ್ಲಿಯೂ ರಾಜಿ ಪ್ರಶ್ನೆ ಆಗದ ಎಂಟೆದೆಯವರು. ಕೆಲವೊಂದು ನಿಯಮಗಳನ್ನು ಹಾಕಿ, ಶಿವಾಜಿಯ ಚಿತ್ರವೊಂದನ್ನು ನಿರ್ಮಿಸಿಕೊಡಬೇಕೆಂಬ ಮಹಾರಾಷ್ಟ್ರ ಸರಕಾರದ ಆಹ್ವಾನವನ್ನವರು "ಇತಿಹಾಸವನ್ನು ತಿರುಚಲು ನನ್ನಿಂದಾಗುವುದಿಲ್ಲ"ವೆಂದು ಹೇಳಿ ನಿರಾಕರಿಸಿದರು. ಅವರ ನಿರ್ಭೀತ ವ್ಯಕ್ತಿತ್ವಕ್ಕೆ ಮಾರು ಹೋದವರೂ ಬಹಳ.

ದಾದಾಸಾಹೇಬ್ ಫಾಲ್ಕೆ, ವಿ.ಶಾಂತಾರಾಮ, ಮಾಸ್ಟರ್ ವಿನಾಯಕರ ಸಮಕಾಲೀನ ಭಾಲ್ಜಿ. ಕಲಿತದ್ದು ಕೇವಲ ಪ್ರಾಥಮಿಕ ಶಾಲೆಯಲ್ಲಿ. ದಿನಕ್ಕೆ ಮೂರಾಣೆಯ ಸಂಬಳದೊಂದಿಗೆ ಈ ವೃತ್ತಿಗಿಳಿದ ದುಡಿತವನ್ನೇ ಉಂಡುಟ್ಟವರು. ಸುಸಜ್ಜಿತ ಸ್ಟುಡಿಯೋ ಒಂದರ ಮಾಲಿಕನಾಗುವಲ್ಲಿಯವರೆಗೆ ಬೆಳೆದು ನಿಂತರೆಂದರೆ ಅವರ ಆಸಕ್ತ ದುಡಿಮೆಯ ಅರಿವಾಗದಿರದು. ತಮ್ಮದೇ ಆದ ಶೈಲಿಯನ್ನವರು ರೂಢಿಸಿಕೊಂಡರು. ರಂಗಭೂಮಿಯಿಂದ ಬಂದವರಾದ್ದರಿಂದ ಪ್ರತಿ ದೃಶ್ಯದ ಚಿತ್ರೀಕರಣಕ್ಕೆ ಮುನ್ನ ಕಲಾವಿದರಿಂದ ತಾಲೀಮು ಮಾಡಿಸುವುದು ಅವರ ರೂಢಿ. ಕೆಲವೊಮ್ಮೆ ತಾವೇ ಅಭಿನಯಿಸಿ ತೋರಿಸುತ್ತಿದ್ದರು. ಈ ಪದ್ಧತಿಯನ್ನು ಅನೇಕ ನಿರ್ದೇಶಕರು ರೂಢಿಸಿಕೊಂಡು ಯಶಸ್ಸಿನ ಮೆಟ್ಟಿಲೇರಿದರು.

ನೈತಿಕ ಮೌಲ್ಯಗಳನ್ನು ಎತ್ತಿಹಿಡಿದು ಸಮಾಜಕ್ಕೆ ತಿಳುವಳಿಕೆ ನೀಡುವ ಉದ್ದೇಶಕ್ಕೆ ಬದ್ಧ ಭಾಲಜಿ. ಅವರೆಂದೂ ಎಲ್ಲೂ ಕೀಳು ಪ್ರಚಾರಕ್ಕೆ, ಅಗ್ಗದ ತಂತ್ರಕ್ಕೆ ತಮ್ಮನ್ನು ಒಗ್ಗಿಸಿಕೊಳ್ಳಲಿಲ್ಲ. ಅನೇಕ ಕಲಾವಿದರನ್ನು ಪರಿಚಯಿಸಿಯೂ ತಾವು ದೀಪದ ಹಿಂದಿನ ನಸುಬೆಳಕಿನಲ್ಲೇ ನಿಂತರು.

ಹೌದು. ಚಲನಚಿತ್ರವೆಂದರೆ ಸದಾ ಬದಲಾಗುತ್ತಿರುವಂಥದು. ಅದು ಸ್ಥಿರಚಿತ್ರವಲ್ಲ. ಆದರೆ ತಯಾರಕನಿಗೆ ಮಾತ್ರ ಸ್ಥಿರಚಿತ್ತವಿರಬೇಕು: ದೇಹ ಹಣ್ಣಾದರೂ, ಕುರುಡುಗಣ್ಣಾದರೂ ಮಿದುಳಿಗೆ ವಿಶ್ರಾಂತಿ ನೀಡದೇ ದುಡಿಯಬೇಕು. ಅಲ್ಲಿ ಸ್ಥಿರವಾಗಿ ಮೂಡಿದ ಚಿತ್ರಗಳು ಮೂಡುವಾಗ ನಂತರ ಸ್ಥಿರವಾಗುವಾಗ, ಅದು ಹಾಳೆ-ಹಾಯಿ, ಕ್ಯಾಮರಾ-ರೀಲುಗಳ ಮೂಲಕ ಚಲನಚಿತ್ರವಾಗಿ ತೆರೆಯ ಮೇಲೆ ಸರಿಯುವಲ್ಲಿಯವರೆಗಿನ ಪ್ರಕ್ರಿಯೆಗಳೆಲ್ಲ ಮುಗಿಯುವರೆಗೂ ದುಡಿಯಬೇಕು...

ಭಾಲಜಿ ಈಗಲೂ ಹಾಗೆ ಮಾಡುತ್ತಿದ್ದಾರೆ. ●

(ವಿವಿಧ ಮೂಲಗಳಿಂದ)

ಇದು ಜಪಾನು!

"ಜಪಾನಿನಲ್ಲಿ ವೃದ್ಧರನ್ನು ಬಹು ಗೌರವದಿಂದ ಕಾಣುತ್ತಾರೆ. ವಿಶೇಷವಾಗಿ ಅವರಿಗೆಂದೇ ನಿರ್ಮಿಸಿದ ರಸ್ತೆ ದಾಟುವ [Foot path] ಗಳಿವೆ. ಟ್ಯಾಕ್ಸಿ ಡ್ರೈವರ್‌ಗಳು ಕೂಡ ರಸ್ತೆಯಲ್ಲಿ ವೃದ್ಧರನ್ನು ಕಂಡರೆ ತಮ್ಮ ವಾಹನ ನಿಲ್ಲಿಸಿ ಅವರಿಗೆ ರಸ್ತೆ ದಾಟಲು ನೆರವು ನೀಡುತ್ತಾರೆ. ಉಪಾಹಾರ ಗೃಹಗಳಲ್ಲಿಯೂ ಅವರಿಗೆ ಬೇರೆಯಾದ ಜಾಗಗಳನ್ನು ಕಾದಿರಿಸಲಾಗುತ್ತದೆ. ಅಲ್ಲಿ ಅವರು ತಮ್ಮ ಉಪಾಹಾರವನ್ನು ನಿಧಾನವಾಗಿ ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ದರಗಳಲ್ಲಿ ರಿಯಾಯತಿಯನ್ನೂ ತೋರಿಸಲಾಗುತ್ತದೆ. ಸರತಿಯ ಸಾಲುಗಳಲ್ಲಿ ಹಾಗೂ ಬಸ್ಸುಗಳಲ್ಲಿ ವೃದ್ಧರನ್ನು ಕಂಡ ಕೂಡಲೇ ಯುವಕರು ತಲೆ ಬಾಗಿ ವಂದಿಸಿ ತಮ್ಮ ಸೀಟು ಬಿಟ್ಟು ಕೊಡುತ್ತಾರೆ. "ಈ ವರೆಗೆ ಅವರು ದೇಶಕ್ಕಾಗಿ ನೀಡಿದ ಸೇವೆಗೆ ನಾವು ಈ ರೀತಿ ಗೌರವ ತೋರಿಸುತ್ತೇವೆ" ಎನ್ನುತ್ತಾರೆ ಅಲ್ಲಿಯ ಯುವ ಜನಾಂಗ.

ಸಂಗ್ರಹ: **ಕೆ.ಎಸ್. ಮೈತ್ರಿ**

ಉರ್ದು: ಖುರಾತುಲೇನ್ ಹೈದರ್

ಕನ್ನಡಕ್ಕೆ: ಬೊಳುವಾರು ಮಹಮ್ಮದ್ ಕುಂಞಿ

ತಪ್ಪೊಪ್ಪಿಗೆ



ತಪ್ಪೊಪ್ಪಿಗೆ

ಇದೊಂದು ನೀಳ್ಗತೆ. ಸಾವಿರಾರು ವರ್ಷಗಳ ಅವಧಿಯ ಚಿತ್ರಣವನ್ನು ನೀಡುತ್ತ, ಬದಲಾದ ಮೌಲ್ಯಗಳು, ಬದುಕಿನ ರೀತಿ-ನೀತಿ-ಸೂಕ್ಷ್ಮಗಳನ್ನೆಲ್ಲ ಸೂಚಿಸುತ್ತ ಸಾಗುವ ಈ ಕಥೆಯ ತಂತ್ರ ಮತ್ತು ವಸ್ತುಗಳು ಅನನ್ಯವಾದವುಗಳು.

ಉರ್ದು ಸಾಹಿತ್ಯದ ಶ್ರೇಷ್ಠ ಕತೆಗಳನ್ನು ಕನ್ನಡಿಗರಿಗೆ ಪರಿಚಯಿಸುವ ದೃಷ್ಟಿಯಿಂದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ 'ಉರ್ದು ಸಾಹಿತ್ಯ' ಎಂಬ ಕೃತಿಯಿಂದ ಪ್ರಸ್ತುತ ನೀಳ್ಗತೆಯನ್ನು ಅನುಮತಿಯೊಂದಿಗೆ ಇಲ್ಲಿ ಮತ್ತೆ ಪ್ರಕಟಿಸುತ್ತಿದ್ದೇವೆ. ಕನ್ನಡದ ತರುಣ ಕತೆಗಾರ ವೈಚಾರಿಕ ಬೊಳುವಾರು ಮಹಮ್ಮದ್ ಕುಂಞಿಯವರ ಅನುವಾದದ ಸೊಗಸು ಮತ್ತು ಜಾಣ್ಮೆ ಇಲ್ಲಿ ಎದ್ದು ಕಾಣುತ್ತದೆ.

ಮೊತ್ತಮೊದಲು ನಿನ್ನನ್ನು ಸ್ತುತಿಸುವೆ. ಓ ಸ್ವಾಮಿಯೇ, ಮತ್ತೂ ಸ್ತುತಿಸುವೆ ನೀನು ಪಡೆದ ಏಕೈಕ ಪುತ್ರನನ್ನು, ನನ್ನನ್ನು ಮರಣದಿಂದ ಎಬ್ಬಿಸಿದವನನ್ನು, ಅಂತಿಮ ತೀರ್ಮಾನದ ದಿನದವರೆಗೆ ನಿದ್ರಿಸಲು ನನ್ನನ್ನು ಮರಳಿ ಕಳುಹಿಸಲಿರುವವನನ್ನು. ನಿನ್ನ ಶಕ್ತಿ ಅಪಾರ, ಓ ದೇವನೇ, ನಿನ್ನ ಜ್ಞಾನ ಅನಂತ. ನಾನು ಮಾಡಿರುವ ಮತ್ತು ಮಾಡದಿರುವ ಪಾಪಗಳಿಗಾಗಿ ನಿನ್ನ ಸಿಂಹಾಸನದೆದುರು ತಪ್ಪೊಪ್ಪುತ್ತಿರುವೆ. ನಿನ್ನ ಕರುಣೆಯಿರಲಿ, ನನ್ನನ್ನು ಕ್ಷಮಿಸು. ಓ ಒಡೆಯನೇ, ನನ್ನ ದೇವನೇ, ನಿನಗೆ ಚೆನ್ನಾಗಿ ಗೊತ್ತು. ನನಗೆ ಗೊತ್ತಾಗದಂತೆಯೇ ನೀನು ನನ್ನನ್ನು ಮತ್ತೆ ಎಬ್ಬಿಸಿರುವೆ. ನನಗೆ ಗೊತ್ತಿಲ್ಲ; ಅದು ಯಾವ ಸಮಯ, ದಿನ, ವಾರ, ತಿಂಗಳು, ವರ್ಷ ಅಥವಾ ಶತಮಾನವೆಂದು. ನಾನು ನನ್ನ ತೆರೆದ ಶವಸಂಪುಟದಲ್ಲಿ ಚಿರನಿದ್ರೆಯಲ್ಲಿದ್ದಾಗ ನಿನ್ನ ದೇವದೂತನೊಬ್ಬನ ಬೆಳ್ಳಿರೆಕ್ಕೆ ನನ್ನ ಧೂಳಾದ ಮೂಳೆಗಳನ್ನು ಸವರಿದ್ದರಿಂದ ನಾನು ಎಚ್ಚೆತ್ತೆ. ನನ್ನ ತಲೆಬುರುಡೆ ಕಾಲ ಬಳಿ ಬಿದ್ದಿತ್ತು. ಅದನ್ನೆತ್ತಿ ಧೂಳು ಕೊಡವಿ ನನ್ನ ಕತ್ತಿಗೆ ಜೋಡಿಸಿದೆ. ಆಗ ಕಗ್ಗತ್ತಲಿತ್ತು. ಆದ್ದರಿಂದ ತಲೆಬುರುಡೆ ಹಿಂದು ಮುಂದಾಗಿ ಅಂಟಿಕೊಂಡಿತು. ಬಹಳ ಪ್ರಯಾಸದಿಂದ ನಾನದರ ಸ್ಥಾನವನ್ನು ಸರಿಪಡಿಸಿದೆ. ಓ ದಯಾಮಯನಾದ ದೇವನೇ, ನಾನು ಒಪ್ಪಿಕೊಳ್ಳುವೆ; ಆ ಕ್ಷಣದ ನನ್ನ ಮೊದಲ ಆಸೆ ಕನ್ನಡಿಯೊಂದನ್ನು ಹುಡುಕಿ ನನ್ನನ್ನು ನೋಡಿಕೊಳ್ಳುವುದಾಗಿತ್ತು ಎಂಬುದನ್ನು. ನಾನು ಸುತ್ತಲೂ ಕಣ್ಣು ಹಾಯಿಸಿದಾಗ ನೆಲಗವಿಯಲ್ಲಿ ಬಹಳಷ್ಟು ಕಲ್ಲಿನ ಶವಸಂಪುಟಗಳು ಕಾಣಿಸಿದವು. ಅವುಗಳ ತುಂಬೆಲ್ಲ ತಲೆಬುರುಡೆ ಮತ್ತು ಮೂಳೆಗಳಿದ್ದವು. ನಾನು ಬೆದರಿದೆ; ನಿನ್ನ ಭಯದಿಂದ ನಡುಗಿದೆ. ಆಗ ನೆಲಗವಿಯ ಕೋಣದೊಳಗಿನಿಂದ ದಿವ್ಯಜ್ಯೋತಿಯೊಂದು ಬೆಳಗಿ ದೇವದೂತನೊಬ್ಬ ಮತ್ತೆ ಪ್ರತ್ಯಕ್ಷನಾದ. ''ನನ್ನ ಜಪಸರವನ್ನು ಇಲ್ಲೆಲ್ಲೋ ಕಳೆದುಬಿಟ್ಟೆ. ಅಂದ ಹಾಗೆ ನೀನಾರು?'' ಎಂದು ಆತುರದಿಂದ ಪ್ರಶ್ನಿಸಿದ.

''ಜಾರ್ಜಿಯಾದ ಸಂತ ಫ್ಲೋರಾ ಸಬೀನಾ'' ನಾನು ಗಂಭೀರವಾಗಿ ಉತ್ತರಿಸಿದೆ.

''ನಿನ್ನನ್ನು ದೇವರು ಆಶೀರ್ವದಿಸಲಿ'' ಎಂದ ಆತ ಜಪಸರವನ್ನು ಹುಡುಕಲಾರಂಭಿಸಿದ.

ಅದೃಷ್ಟವಶಾತ್ ನನ್ನ ದೃಷ್ಟಿ ಕಳೆದುಹೋದ ವಸ್ತುವಿನ ಮೇಲೆ ಬಿತ್ತು. ಪುಟ್ಟ ನಕ್ಷತ್ರಗಳ ಆ ಜಪಸರ ಒದ್ದೆ ನೆಲದ ಮೇಲಿದ್ದ ಮೂಳೆರಾಶಿಯ ಕೆಳಗೆ ಹೊಳೆಯುತ್ತಿತ್ತು. ಸ್ವರ್ಗದ ಅಭ್ಯಾಗತನಿಗೆ ನಾನು ಕೂಡಲೇ ಹೇಳಿದೆ, ''ಕಳೆದು ಹೋದ ಜಪಸರವನ್ನು ನಿನ್ನಂಥ ದೇವತೆಗೆ ಹುಡುಕಿ ಕೊಟ್ಟರೆ ನನಗೇನು ಮರಳಿ ಕೊಡಬಲ್ಲೆ?'' ಆತ ಬಹಳ ಗಲಿಬಿಲಿಗೊಂಡವನಂತೆ ಕಾಣಿಸಿದ. ಆತ ತೀರಾ ಎಳೆಯ ದೇವದೂತ; ಬಹುಮಟ್ಟಿಗೆ ಹಸುಗೂಸು.

''ಸಂತ ಪೀಟರನ ಸನ್ನಿಧಾನದಲ್ಲಿ'' ಅವನು ಉತ್ತರಿಸಿದ. ''ನಾನು ಜಪಸರದ ಪ್ರತಿಯೊಂದು ಮಣಿಗೂ ಲೆಖ್ಖ ಕೊಡಬೇಕಾಗಿದೆ. ನಾನೊಬ್ಬ ಮರೆಗುಳಿ, ಆದ್ದರಿಂದಲೇ, ಕಳೆದ ಎಪ್ಪತ್ತು ಸಹಸ್ರ ವರ್ಷಗಳಿಂದಲೂ ತರಬೇತಿ ಪಡೆಯುವ ದೇವದೂತನಾಗಿಯೇ ನಾನು ಉಳಿಯಬೇಕಾಯಿತು. ಕೊನೆಗೂ ನನಗೆ ಇದೀಗಷ್ಟೇ ಪ್ರಭಾವಳಿ ದೊರೆತಿದೆ.'' ಆತ ಜಂಭದಿಂದ ತನ್ನ ಪ್ರಜ್ವಲವಾದ ಹೊಂಬಣ್ಣದ ಶಿರದತ್ತ ಬೊಟ್ಟು ಮಾಡಿದ, ''ಆದರೆ ಈಗ ನನ್ನ ಅವಸ್ಥೆ ಯಾರಿಗೂ ಬೇಡ. ನನ್ನ ಜಪಸರ ಕಳೆದುಹೋಯಿತು.''

''ನೀನೇನು ಕೊಡಬಲ್ಲೆ?'' ನಾನು ಮತ್ತೊಮ್ಮೆ ಪ್ರಶ್ನಿಸಿದೆ.

''ನಿನಗೇನು ಬೇಕು?''

''ನಾನು ಎಳವೆಯಲ್ಲಿಯೇ ಸತ್ತುಬಿಟ್ಟೆ. ಸಿರಿಯಾ ಮರುಭೂಮಿಯ ಕಾನ್ವೆಂಟಿಗೆ ತಂದೆಯವರು ನನ್ನನ್ನು ದಬ್ಬಿದಾಗ ನನಗೆ ಕೇವಲ ಹತ್ತೊಂಬತ್ತು ವರ್ಷ. ಮುಂದಿನ ಇಪ್ಪತ್ತೈದು ವರ್ಷಗಳನ್ನು ಹಲವಾರು ಸನ್ಯಾಸಿ ಮಠಗಳ ಎತ್ತರದ ಗೋಡೆಗಳ ಒಳಗೆ ಬಂಧಿಯಾಗಿ ಕಳೆದೆ. ನನಗೆ ಒಂದಷ್ಟು ಲೋಕವನ್ನು ನೋಡಬೇಕಾಗಿದೆ. ಸೊಗಸಾದ ಬಟ್ಟೆತೊಡುವ ಬಯಕೆಯಾಗಿದೆ.''

''ನಿನಗೆ ರಕ್ತಮಾಂಸಗಳನ್ನು ತುಂಬುವ ಅಧಿಕಾರ ನನಗಿಲ್ಲ. ಅದು ಅಂತಿಮ ತೀರ್ಮಾನದ ದಿನ ಮಾತ್ರ ಸಾಧ್ಯ. ಆದರೂ ನಿನಗೆ ಒಂದು ವರ್ಷದ ಕಾಲ ಬದುಕಿರಲು ಬಿಡುವಂತೆ ನಾನು ವಿನಂತಿಸಬಲ್ಲೆ.''

''ಪುಟ್ಟ ದೇವದೂತ, ಈ ವಿಶಾಲ ಕ್ರೂರ ಜಗತ್ತಿನಲ್ಲಿ ನನ್ನ ಬಡಕಲು ಎಲುಬುಗೂಡು ಏಕಾಕಿಯಾಗಿ ಅಲೆದಾಡುವುದಾದರೂ ಹೇಗೆ? ನನಗೆ ಸಂಗಾತಿಯಾಗಿರಲು ಯಾವುದಾದರೂ ಸ್ವಾರಸ್ಯಕರ ದೇಹವನ್ನು ಮರುಜೀವಗೊಳಿಸಬಲ್ಲೆಯಾ?''

''ಸ್ವಾರಸ್ಯಕರ ದೇಹವೆಂದರೆ ಏನು?'' ಅವನು ಪ್ರಶ್ನಿಸಿದ.

''ಅಂದರೇ.....''

''ಸರಿಬಿಡು. ಮೊದಲು ನನ್ನ ಜಪಸರ ಕೊಡು.''

''ಇಲ್ಲ, ಮೊದಲು ನನಗೊಬ್ಬ ಸಂಗಾತಿಯನ್ನು ಮರುಜೀವಗೊಳಿಸು. ಹೇಳು, ಏಸುವಿನ ಕೃಪೆಯಿಂದ ಎದ್ದೇಳು.''

''ನೀನೊಬ್ಬ ಸಂತಳು. ನೀನೇ ಯಾಕೆ ಒಂದೆರಡು ಪವಾಡಗಳನ್ನು ಮಾಡಬಾರದು?'' ಆತ ಸಿಡುಕಿದ.

''ಸಾಧ್ಯವಿಲ್ಲ, ಅದಕ್ಕೆ ತಾಂತ್ರಿಕ ಕಾರಣಗಳುಂಟು. ದಯವಿಟ್ಟು ಹೇಳು, ಎದ್ದೇಳು....''

ಅವನು ಮೊಣಕಾಲೂರಿ ಪ್ರಾರ್ಥಿಸಲಾರಂಭಿಸಿದ ಕೂಡಲೇ ನನ್ನ ಪಕ್ಕದ ಶವ ಸಂಪುಟದಲ್ಲಿದ್ದ ಮೂಳೆಗಳು ಪಟಪಟನೆ ಚಲಿಸಲಾರಂಭಿಸಿದವು. ಮತ್ತೊಂದು ಅಸ್ಥಿಪಂಜರ ಎದ್ದು ಕುಳಿತಿತು. ದೇವದೂತ ಹೇಳಿದ, ''ನೆನಪಿರಲಿ, ಕೇವಲ ಹನ್ನೆರಡು ತಿಂಗಳಿಗೆ ಮಾತ್ರ. ಮುಂದಿನ ವರ್ಷದ

ಇದೇ ತಿಂಗಳ, ಇದೇ ದಿನಾಂಕದ, (ಇದೇ) ರಾತ್ರಿ ಹನ್ನೊಂದೂವರೆಗೆ... ನಿಮಗೆ ಒಳ್ಳೆಯದಾಗಲಿ.''

ನೆಲಗಪಿಗೆ ಮತ್ತೆ ಕಪ್ಪು ಕವಿಯಿತು. ಆದರೆ ನಾನೀಗ ಭಯಪಡುತ್ತಿರಲಿಲ್ಲ. ಆ ಅಸ್ಥಿಪಂಜರವು ಶವಸಂಪುಟದ ತಲೆಭಾಗದತ್ತ ತನ್ನ ಪಂಜವನ್ನು ಚಾಚುತ್ತಾ ಏನನ್ನೋ ತಡವಲಾರಂಭಿಸಿತು. ಎಚ್ಚರವಾದ ಕೂಡಲೇ ಓದುವ ಚಟವಿದ್ದು, ತಲೆಯ ಪಕ್ಕದಲ್ಲಿರಿಸಿದ ಮೇಣದ ಬತ್ತಿಯನ್ನು ಹುಡುಕುತ್ತಿದ್ದಿರಬೇಕು.

ನಾನು ಆತನನ್ನು ಸಂಬೋಧಿಸಿ ಎಲ್ಲವನ್ನೂ ಚುಟುಕಾಗಿ ವಿವರಿಸಿದೆ. ಬಳಿಕ ತುಸು ನಾಚಿಕೆಯಿಂದ ಆತನ ಹೆಸರು ಕೇಳಿದೆ.

''ಜಾರ್ಜಿಯಾದ ಫಾದರ್ ಗ್ರೆಗೊರಿ ಒರ್‌ಬೆಲಿಯಾನಿ'' ಉತ್ತರಿಸಿದ. ಆತ ಇನ್ನೂ ತಬ್ಬಿಬ್ಬಾಗಿ ಹಣೆಗಂಟುಗಳನ್ನು ಕೆರೆದುಕೊಂಡ.

''ಫಾದರ್, ನಿಮಗೆ ದೇವರ ಆಶೀರ್ವಾದವಿರಲಿ'' ಎಂದ ಬಳಿಕ ವಿನಯದಿಂದ, ನಾನು ಜಾರ್ಜಿಯಾದ ಸಂತ ಷ್ಟೋರಾ ಆಗಿದ್ದೆ ಎಂಬುದನ್ನು ಸೂಚಿಸಿದೆ.

''ಸಂತನೇ!'' ಗಾಬರಿಯಿಂದ ಉದ್ಗರಿಸಿದ. ಆತ ಸಂಪುಟದಿಂದ ಹೊರಕ್ಕೆ ಜಿಗಿದು ನನ್ನೆದುರು ಮಂಡಿಯೂರಲು ಯತ್ನಿಸಿದ. ಆದರೆ ಆತನ ಮಂಡಿಚಿಪ್ಪುಗಳು ಮಣ್ಣು ಹಿಡಿದು ಕುಂಟಾಗಿರುವುದರಿಂದ ಮುಗ್ಗರಿಸಿ ಬಿದ್ದ. ''ಓ ಕರುಣಾಳು ದೇವನೇ, ಈತನನ್ನು ಗಟ್ಟಿಮುಟ್ಟು ಮಾಡು'' ಎಂದು ಪ್ರಾರ್ಥಿಸಿದೆ.

ಕೊರೆಯುವ ಚಳಿಗಾಳಿ ಕಿಟಕಿಯಿಂದ ನುಗ್ಗಿ ಬಂದು ನಮ್ಮ ಮೂಳೆಗಳನ್ನು ತಿವಿಯುತ್ತಿತ್ತು. ಫಾದರ್ ಗ್ರೆಗೊರಿ ಗೌರವದ ಸ್ವರದಲ್ಲಿ ಹೇಳಿದ, ''ಪವಿತ್ರ ಮಾತೆಯೇ, ಇಲ್ಲಿಂದ ಹೊರಗೆ ಹೋಗಿ ಸ್ವಲ್ಪ ಬೆಚ್ಚಗಿನ ಜಾಗ ಸೇರೋಣ.''

''ನಮಗೆಲ್ಲಿಯಾದರೂ ಒಂದು ಚಕಮಕಿ ಕಲ್ಲು ಸಿಕ್ಕಿದ್ದರೆ.....'' ನಾನು ಹಲ್ಲುಗಳ ಎಡೆಯಿಂದ ಪಟಗುಟ್ಟಿದೆ. ಫಾದರ್ ಕಿಟಕಿಯ ಹೊರಗೆ ನೋಡುತ್ತಿದ್ದ. ಪೈನ್ ಮರಗಳು ಗಾಳಿಗೆ ಓಲಾಡುತ್ತಿದ್ದವು.

''ಫಾದರ್, ಇಲ್ಲಿಗೆ ಬಂದುಬಿಡಿ? ಇಲ್ಲವಾದರೆ ಚಳಿ ಹಿಡಿದು ಸತ್ತುಹೋದೀರಿ.''

ಮರಳಿ ಬಂದ ಆತ ತನ್ನ ಶವಸಂಪುಟದ ಅಂಚಲ್ಲಿ ಕುಳಿತ. ನಾನು ಎದ್ದು ಕಿಟಕಿ ಮುಚ್ಚಲು ಹೊರಕ್ಕೆ ಬಾಗಿದೆ. ಅಲ್ಲೊಂದು ನದಿ ಹರಿಯುತ್ತಿದ್ದುದನ್ನು ಕಂಡೆ. ತಕ್ಷಣ ನನ್ನೊಳಗೆ ನೆನಪುಗಳು ಗರಿಗಟ್ಟಿದವು. ಇದೇ ಬೆಟ್ಟದ ಮೇಲಿದ್ದ ಕಾನ್ವೆಂಟಿನಲ್ಲಿ ನಾನು ವಾಸಿಸುತ್ತಿದ್ದೆ. ಈ ನದಿ ಕಕೇಷಿಯನ್ ಬೆಟ್ಟದಿಂದಿಳಿದು ಕಪ್ಪು ಸಮುದ್ರವನ್ನು ಸೇರುತ್ತದೆ. ಹೀಗೆ ಯೋಚಿಸುತ್ತಾ ನಿಂತಿರುವಾಗ, ನದಿಯ ನೀರಿನ ಮೇಲೆ ಥಳಥಳಿಸುವ ಶ್ವೇತಭವನವೊಂದು ಗೋಚರಿಸಿತು. ಅದೇ ವೇಳೆಗೆ ಅಂತಿಮ ಕಹಳೆಯ ಮೊಳಗಾಟ ಕೇಳಿಸಿತು. ದಿಗಿಲುಗೊಂಡ ನಾನು ಮುಖ ಅಡಿಯಾಗಿ ಬಿದ್ದು ಕಂಪಿಸಲಾರಂಭಿಸಿದ್ದೆ. ಒಂದು ವರ್ಷವಾದರೂ ನಿನ್ನ ಸುಂದರ ಜಗತ್ತಿನಲ್ಲಿ ಬದುಕುವ ಅವಕಾಶ ಸಿಗಲಿಲ್ಲವಲ್ಲಾ ಎಂದು ನನಗೆ ಬಹಳ ದುಃಖವುಂಟಾಗಿತ್ತು.

ಅಂತಿಮ ಕಹಳೆ ಮತ್ತೆ ಕೇಳಿಸಿತು. ಫಾದರ್ ಗ್ರೆಗೊರಿ ಸದ್ದಾಗದಂತೆ ತುದಿಗಾಲಲ್ಲಿ ನಡೆದು ಹೊರಗೆ ಇಣುಕಿದ. ಆ ಬಳಿಕ ನನ್ನತ್ತ ಬಂದು, ''ಪವಿತ್ರಾತ್ಮಳೇ, ಇದು ಉಗಿ ಹಡಗಿನ ಕೂಗು. ದಯವಿಟ್ಟು ಏಳು'' ಎಂದು ಹೇಳಿದ.

ತಣ್ಣಗಿನ ನೆಲದಿಂದ ಎದ್ದ ನಾನು ಕಿಟಕಿ ಬಳಿಯಿದ್ದ ಸನ್ಯಾಸಿಯನ್ನು ಸೇರಿದೆ. ಕೆಳಗೆ ಕಣಿವೆಯಾಳ


ದಿಂದ ಶಿಬಿರವೊಂದರ ಉತ್ಸವಾಗ್ನಿ ಕಾಣಿಸಿತು. ಅಲ್ಲಿಂದ ಬಹಳ ನಗು ಕೇಳಿಬರುತ್ತಿತ್ತು. ತಂತಿವಾದ್ಯದ ಇಂಪು ತೇಲಿಬರುತ್ತಿತ್ತು. ನನ್ನ ಮೂಳೆಗಳಲ್ಲಿ ಒಂದು ಬಗೆಯ ವಿಚಿತ್ರ ಉನ್ಮಾದ. ನಾನು ಆ ಮೋಜುಗಾರರ ಜತೆ ಸೇರಬಯಸಿದ್ದೆ. ಅಷ್ಟರಲ್ಲಿ ಫಾದರ್ ಹೇಳಿದ, ''ಹೊರಗೆಹೋಗಿ ಬೆಂಕಿ ಮಾಡೋಣ.''

ನೆಲಗವಿಯಿಂದ ತಡವರಿಸುತ್ತಾ ಹೊರಗೆ ಹೋದ ನಾವು ಕತ್ತಲ ಸುರಂಗವೊಂದರಲ್ಲಿ ಎಡವಿ ಬಿದ್ದೆವು. ಸುರಂಗದ ಕೊನೆ ಪಾಚಿಗಟ್ಟಿದ ಕಲ್ಲುಗಳಿಂದ ಮತ್ತು ತುರಿಕೆಗಿಡಗಳಿಂದ ಮುಚ್ಚಿತ್ತು. ಅಂತೂ ನಮಗೆ ಮೇಲೇರಿ, ಆಶ್ರಮದ ಉದ್ಯಾನವನ್ನು ಪ್ರವೇಶಿಸಲು ಸಾಧ್ಯವಾಯಿತು, ಎದುರಿಗೆ ರಾಕ್ಷಸಾಕಾರದ ಓಕ್ ಹಾಗೂ ಪೈನ್ ಮರಗಳಿಂದ ಸುತ್ತುವರಿಯಲ್ಪಟ್ಟ ಒಂದು ಭವ್ಯ ದೇಗುಲ ಕಾಣಿಸಿತು. ನಾನು ಒಣಕಡ್ಡಿ ಮತ್ತು ಪೈನ್ ಕೋಲುಗಳನ್ನು ಸಂಗ್ರಹಿಸಲಾರಂಭಿಸಿದೆ. ಒಂದು ಭೂರ್ಜ್ವವೃಕ್ಷದ ಕೆಳಗಿದ್ದ ಕಸದ ರಾಶಿಯಲ್ಲಿ ಕಾಗದ ತಟ್ಟೆ ಹಾಗೂ ಕರವಸ್ತ್ರಗಳು ಗೋಚರಿಸಿದವು. ಸಪೂರ ಕಡ್ಡಿಗಳಿದ್ದ ಕಾಗದ ಪೊಟ್ಟಣವೊಂದನ್ನು ಫಾದರ್ ಹೆಕ್ಕಿಕೊಂಡ. ಇದರ ಹೆಸರು ಬೆಂಕಿಪೊಟ್ಟಣ ಎಂದು ವಿವರಿಸಿದ ಫಾದರ್ 'ದೇವರು ಜೊತೆಗಿದ್ದಾನೆ' ಎಂದೂ ಸೇರಿಸಿದ.

ನಾವು ಅಗ್ಗಿಷ್ಟಿಕೆ ಉರಿಸಿ ಮೈ ಬೆಚ್ಚಗೆ ಮಾಡಿಕೊಳ್ಳತೊಡಗಿದೆವು.

ಓ ಸರ್ವಜ್ಞಾನಿ ದೇವರೇ, ನಾನೇನೂ ಕೊಚ್ಚಿಕೊಳ್ಳುತ್ತಿಲ್ಲ, ಆದರೂ ನಿನಗೆ ಹೇಳಲೇಬೇಕು. ಆ ಕ್ಷಣದಲ್ಲಿ ಜಾರ್ಜಿಯಾದ ಫಾದರ್ ಗ್ರೆಗೊರಿ ಒರ್‌ಬಿಲಿಯಾನಿಯ ಮೂಗಿನ ರಂಧ್ರಗಳಿಂದ ಹೊಗೆ ಹೊರಗೆ ಬರುತ್ತಿರುವುದನ್ನು ಕಂಡೆ. ನಾನು ಬಹಳ ಗೊಂದಲಗೊಂಡಿದ್ದೆ. ಯಾಕೆಂದರೆ, ಭೂತ ಮತ್ತು ಪ್ರೇತ ಸಂತಾನಗಳು ಮಾತ್ರ ಬೆಂಕಿ ಮತ್ತು ಹೊಗೆಯನ್ನು ಉಗುಳುತ್ತವೆ. ನಾನು ನಿನ್ನ ಪವಿತ್ರ ಶಿಲುಬೆಯ ಸಂಜ್ಞೆ ಮಾಡಿದೆ, ಯಾವುದಾದರೂ ಪಾಪಾತ್ಮ ಫಾದರ್ ಗ್ರೆಗೊರಿಯವರನ್ನು ಸೇರಿದೆಯೆ? ಅಥವಾ ನಿನ್ನ ಮರೆಗುಳಿ ದೇವತೆ ತಪ್ಪು ಮಾಡಿರಬಹುದೆ? ಎಂದು ಅಚ್ಚರಿಪಟ್ಟೆ.

ಫಾದರನ ಪ್ರಸನ್ನ ನಗುವಿಗೆ ನಾನು ಗಾಬರಿಯಾಗಿದ್ದೆ. ''ಪವಿತ್ರಾತ್ಮಳೇ'' ಅವನು ಹೇಳುತ್ತಿದ್ದ. ''ಇದನ್ನು, ನಾನು ಸೇದುತ್ತಿರುವುದನ್ನು, ಸಿಗರೇಟು ಎಂದು ಕರೆಯುತ್ತಾರೆ. ಆ ಮೋಜುಗಾರರು ಇಡಿಯ ಒಂದು ಪೊಟ್ಟಣವನ್ನೇ ಮರೆತು ಹೋಗಿದ್ದಾರೆ.''



ಹೊಗೆ ಹೊರಡಿಸಬಹುದೆಂದು ನಿನಗೆ ಹೇಗೆ ಗೊತ್ತು? ಇದು ಖಂಡಿತವಾಗಿ ಆಸುರೀಕೃತ್ಯ. ನೀನಿದನ್ನು
''ಅದು ಹೇಗೆ?'' ನಾನು ಪ್ರಶ್ನಿಸಿದ್ದೆ. ''ಈ ವಸ್ತುವಿಗೆ ಬೆಂಕಿ ಕೊಟ್ಟಾಗ ಒಬ್ಬನ ಮೂಗಿನಿಂದ
ಬಿಟ್ಟು ಪಶ್ಚಾತ್ತಾಪಪಡಬೇಕು.''

ಫಾದರ್ ಒರ್‌ಬಿಲಿಯಾನಿ ನಿಧಾನವಾಗಿ ವಿವರಿಸಿದ, ''ಮಾತೆ ಫ್ಲೋರಾ, ಅಮೇರಿಕದ ವಿಜ್ಞಾನಿಗಳು
ಒಂದು ಉಪಕರಣವನ್ನು ಸಂಶೋಧಿಸಿದ್ದು, ನೀನದನ್ನು ತಲೆಗೆ ಜೋಡಿಸಿಕೊಂಡು ಮಲಗಿದರೆ,
ನಿದ್ರೆಯಲ್ಲಿ ನಿನ್ನ ಮಿದುಳು ಜ್ಞಾನದ ಎಲ್ಲ ಪ್ರಕಾರಗಳನ್ನೂ ಗ್ರಹಿಸುತ್ತದೆ. ನನ್ನ ಹದಿಮೂರು
ನೂರು ವರುಷಗಳ ಸುದೀರ್ಘ ನಿದ್ರೆಯಲ್ಲೂ ಬಹಳಷ್ಟೂ ಅಸಹಜ ಸಂಗತಿಗಳ ಅರಿವು ನೀಡಿದ,
ಭಗವಂತನ ಅನಂತ ಜ್ಞಾನ ಮತ್ತು ಶಕ್ತಿಯ ಬಗ್ಗೆ ಈಗಲೂ ಅನುಮಾನಪಡಬಲ್ಲೆಯಾ? ಕಳೆದ
ಕೆಲವು ಗಂಟೆಗಳಲ್ಲಿ ನಿನಗೂ ಕೆಲವು ಸಂಗತಿಗಳ ಅರಿವುಂಟಾಗಿದೆ. ಕಣಿವೆಯಲ್ಲಿ ನುಡಿಸುತ್ತಿರುವ
ವಾದ್ಯಗಳನ್ನು ಗಮನಪಟ್ಟು ಆಲಿಸಿ ನನಗದರ ಹೆಸರುಗಳನ್ನು ಹೇಳು....''

ನಾನು ಜಾಗ್ರತೆಯಿಂದ ಆಲಿಸಿದೆ. ಮೋಜುಗಾರರು ನುಡಿಸುತ್ತಿದ್ದದ್ದು, ಗಿಟಾರ್, ಬ್ಯಾಲಲೈಕಾ,
ಅಕಾರ್ಡಿಯನ್ ಮತ್ತು ಸ್ಯಾಕ್ಸೋಫೋನು ಹಾಗೂ ಹಾಡುತ್ತಿರುವುದು ಜಾರ್ಜಿಯನ್ ಮತ್ತು ರಷಿಯಾ
ಭಾಷೆಗಳಲ್ಲಿ ಎಂಬುದು ನನಗೆ ಅರ್ಥವಾಗಿತ್ತು.

ನಂತರ , ಅವರ ಮಾತು ಗಾಳಿಯಲ್ಲಿ ತೇಲುತ್ತಾ ಬಂತು. ಒಬ್ಬ ತರುಣ ಗಿಟಾರಿನವನು ತನ್ನ
ಗೆಳತಿಗೆ ಹೇಳುತ್ತಿದ್ದ, ''ನತಾಶಾ, ಬೆಟ್ಟದ ಮೇಲೊಂದು ಉತ್ಖನನವಾಗ್ತಿಯಿದೆ. ನಾವು ಬರುವ ಮೊದಲೇ
ಕೆಲವು ಮಂದಿ ಅಲ್ಲಿ ಶಿಬಿರ ಹೂಡಿದ್ದಾರೆ.'' ಆ ಬಳಿಕ ಗಾಳಿ ತನ್ನ ದಿಕ್ಕನ್ನು ಬದಲಿಸಿದ್ದರಿಂದ
ಸ್ವರ ಕ್ಷೀಣವಾಯಿತು.

''ಪವಿತ್ರಾತ್ಮಳೇ'' ಸನ್ಯಾಸಿ ಭಕ್ತಿಯಿಂದ ಆರಂಭಿಸಿದ್ದ. ''ನನ್ನನ್ನು ಆ ಪಟ್ಟಕ್ಕೆ ಏರಿಸದಿದ್ದರೆ
ಚೆನ್ನಾಗಿರುತ್ತಿತ್ತು.'' ನಾನು ಅವನನ್ನು ತಡೆಯುತ್ತಾ ಹೇಳಿದೆ, ''ಅದಕ್ಕೆ ಕಾರಣ ಮತ್ತೆ ತಿಳಿಸುವೆ.''
ಅವನು ಅಪ್ರತಿಭನಾಗಿಬಿಟ್ಟಿದ್ದ. ಸಾವರಿಸಿಕೊಳ್ಳುತ್ತಾ ಹೇಳಿದ, ''ಒಳ್ಳೆಯದೇ ಆಯಿತು, ನಾವು
ಜತೆಗೂಡಿ ಒಂದು ವರುಷ ಪೂರ್ತಿ ಇರಬೇಕಾಗಿರುವುದರಿಂದಾಗಿ, ನಮ್ಮ ಬಗ್ಗೆ ನಿಜವನ್ನೇ
ಹೇಳಿಕೊಳ್ಳುವುದು ಒಳ್ಳೆಯದು'' ಎಂದ ಅವನು ಮತ್ತಷ್ಟು ಉತ್ಸಾಹದಿಂದ, ''ನಾನು ಕಬ್ಬಿಸ್‌ನ
ಹಿರಿಯ ಡ್ಯೂಕನ ಪುತ್ರ; ನಿಮ್ಮ ಸೇವೆಗೆ ಸಿದ್ಧ, ಮಾತೆಯೇ'' ಎಂದೂ ಸೇರಿಸಿದ.

ಓ ದಯಾಮಯನಾದ ದೇವನೇ, ನಾನು ಒಂದು ಕೈ ಮೇಲೆನ್ನಿಸಿಕೊಳ್ಳಲು ಇಷ್ಟಪಟ್ಟಿರಲಿಲ್ಲ.
ಆದರೆ ಆತನಿಗೆ ನಿಜವನ್ನೇ ಹೇಳಬೇಕಾಗಿತ್ತು. ನಾನು ಸರಳವಾಗಿಯೇ ತಿಳಿಸಿದೆ, ''ನನ್ನ ತಂದೆಯವರು
ಇರಾಣದ ಸಾರ್ವಭೌಮ ಸಸ್ಸಾನಿಯನ್ ರಾಜಸಭೆಗೆ, ಬೈಜಂಟೈನ್‌ನ ರಾಯಭಾರಿ.''

''ಆಗಿದ್ದ....'' ಆತ ತಕ್ಷಣ ತಿದ್ದಿದ. ''ಆದರೆ....ಕಾನ್‌ಸ್ಟಾಂಟಿನೋಪಲ್‌ನಿಂದ ಇಷ್ಟು ದೂರದ
ಜಾರ್ಜಿಯಾ ಬೆಟ್ಟದ ಮೇಲೆ ಅದು ಹೇಗೆ ಅವತರಿಸಿದೆ?''

''ನಾವು ಬಾಸ್ಪರಸ್‌ನಿಂದ ಹಡಗು ಹತ್ತಿದಾಗ....'' ನಾನು ಆರಂಭಿಸಿದೆ, ''ಕಡಲು ಶಾಂತವಾಗಿತ್ತು
ಮತ್ತು ಗಾಳಿ ಸಹಕಾರಿಯಾಗಿತ್ತು.''

ನನ್ನ ಮಾತನ್ನು ಕತ್ತರಿಸಿದ ಗ್ರೆಗೊರಿ ಒರ್‌ಬಿಲಿಯಾನಿ, ಮತ್ತೊಂದು ದಮ್ಮು ಸೇದುತ್ತಾ ಹೇಳಿದ,
''ನಿನ್ನ ತಂದೆ ಇರಾಣಕ್ಕೆ ಹೋಗುವವರಿದ್ದರೆ, ಕಪ್ಪು ಸಮುದ್ರದತ್ತ ಯಾಕೆ ತಿರುಗಿದಿರಿ? ನಿಮ್ಮ
ಹಡಗಿನ ಕಪ್ತಾನನಿಗೆ ತಲೆ ಕೆಟ್ಟಿತ್ತೆ?''

''ಸರಿ'' ನಾನು ಸ್ವಲ್ಪ ಗಲಿಬಿಲಿಗೊಳ್ಳುತ್ತಾ ಹೇಳಿದೆ. ''ಸರಿ ಹಾಗಾದರೆ, ಫಾದರ್, ನಾನು

ಶುರುವಿನಿಂದಲೇ ಹೇಳಲೆ?''

''ಹಾಗೆ ಮಾಡು.''

ಸ್ವಲ್ಪ ಸುಧಾರಿಸಿಕೊಂಡ ನಾನು ಆರಂಭಿಸಿದೆ, ''ಫಾದರ್, ನಿನಗೆ ಚೆನ್ನಾಗಿ ಗೊತ್ತು. ನಾವು ಬೈಜಾಂಟಿಯನ್ನರು ಬಹಳ ಶ್ರೇಷ್ಠರೆಂದು. ಕಾನ್‌ಸ್ಟಾಂಟಿನೋಪಲ್ಲನ್ನು ಎರಡನೆಯ ರೋಮ್ ಎಂದೇ ಅಧಿಕೃತವಾಗಿ ಕರೆಯಲಾಗುತ್ತಿತ್ತು. ಸಂತ ಸೋಫಿಯಾಳ ದೇಗುಲ ನಿರ್ಮಿಸಿದ ಬಳಿಕ ಜಸ್ಟಿನಿಯನ್ ಕೂಡಾ ಉದ್ಧರಿಸಿದ್ದು 'ದೇವನೇ, ನಿನ್ನ ಸೊಲಮನ್ ಮಹಾರಾಜನನ್ನೂ ನಾನು ಮೀರಿಸಿಬಿಟ್ಟೆ,' ಇತ್ಯಾದಿ. ಇನ್ನು.... ಆ ಭವ್ಯ ದಿನಗಳಾಗಿದ್ದ ಥಿಯೋಡೊಸಿಯಸ್ ಮತ್ತು ಅರ್ಕಾಡಿಯಸ್... ನಮ್ಮ ಒಲಿಂಪಿಕ್ ಕ್ರೀಡೆಗಳು, ನಮ್ಮ ಎಣೆಯಿಲ್ಲದ ಕಲೆಗಳು, ಹೀಗೇ....''

''ನೀನು ಚಕ್ರವರ್ತಿನಿ ಥಿಯೋಡೋರಾಳನ್ನು ಜಾಣತನದಿಂದ ಬಿಟ್ಟಿರುವೆ...'' ಫಾದರ್ ಶುಷ್ಕವಾಗಿ ಹೇಳಿದ.

''ಸ್ವಲ್ಪ ಸ್ವತಂತ್ರರಾಗಿರಲು ಬಯಸಿದ್ದ ಕ್ಲಿಯೋಪಾತ್ರ ಮತ್ತು ಥಿಯೋಡೊರಾರನ್ನು ನೀವು ಗಂಡಸರು ಕ್ಷಮಿಸುವದೇ ಇಲ್ಲ. ಆದರೂ, ಸಸ್ಸಾನಿಯನ್ನರು ಬಹಳ ಪ್ರಬಲರಾದಾಗ ಅವರು ನಮ್ಮ ಸಿರಿಯಾ ಪ್ರಾಂತವನ್ನು ಆಕ್ರಮಿಸಿದರು. ಜೆರೊಸಲೇಮನ್ನು ಗೆದ್ದ ಬಳಿಕ ನಿಜಶಿಲುಬೆಯನ್ನು ಟೆಸಿಫೋನ್‌ಗೆ ಒಯ್ದರು... ಆ ಬಳಿಕ ನಮ್ಮ ಚಕ್ರವರ್ತಿ ಹೆರಾಕ್ಲಿಯಸ್ ಅವರ ಜತೆ ಹೋರಾಟ ನಡೆಸಿ ನಿಜಶಿಲುಬೆಯನ್ನು ಪವಿತ್ರ ನಾಡಿಗೆ ತಂದನು. ಅರಬರು ಜೆರೊಸಲೇಮನ್ನು ನಮ್ಮಿಂದ ಕಿತ್ತುಕೊಂಡಾಗ, ನಿಜಶಿಲುಬೆಯನ್ನು ಹೆರಾಕ್ಲಿಯಸ್ ಕಾನ್‌ಸ್ಟಾಂಟಿನೋಪಲ್‌ಗೆ ತಂದನು.''

ಫಾದರ್ ಹೇಳಿದ, ''ತಬ್ಲಿಸ್‌ನಲ್ಲಿ ನಾನು ತಂದೆಯ ಸೇನೆಯ ನಾಯಕತ್ವ ವಹಿಸಿ ಅರಬರ ಜೊತೆ ಧೈರ್ಯದಿಂದ ಹೋರಾಡಿದ್ದೆ. ಆದರೆ, ನಿಮ್ಮ ಬೈಜಾಂಟಿಯನ್ನರಂತೆಯೇ ನಾವು ಮುಸ್ಲಿಮರಿಂದ ಸೋತೆವು. ಅವರು ಹೊಸ ಜಾಗತಿಕ ಶಕ್ತಿಯಾಗಿದ್ದರು; ಕಾಲವೂ ಅವರೊಂದಿಗಿತ್ತು.

''ನಮಗೆ, ಬೈಜಾಂಟಿಯನ್ನರಿಗೆ ಪಿತೂರಿಯೆಂದರೆ ಇಷ್ಟ. ನಮ್ಮ ರಾಜಕೀಯ ಕೊಲೆಗಳು, ಅರಮನೆಯ ಹಗರಣಗಳು ಜಗತ್‌ಪ್ರಸಿದ್ಧ'' ಹೆಮ್ಮೆಯಿಂದಲೇ ನಾನು ಹೇಳಿದೆ, ''ನಮ್ಮ ರಾಜರುಗಳು ಅವರ ರಾಣಿಯರಿಂದ ಅಥವಾ ಸಂತತಿಯಿಂದ ವಿಷವಿಕ್ಕಲ್ಪಟ್ಟರು. ನಮ್ಮ ಚರ್ಚೆ ಬಹಳ ತೀವ್ರತರವಾಗಿದ್ದು, ನಮ್ಮ ಪುರೋಹಿತರಲ್ಲ ಕೂದಲು ಸೀಳುವಂತಹ ವ್ಯರ್ಥ ಧಾರ್ಮಿಕ ಚರ್ಚೆಯಲ್ಲಿಯೇ ತೃಪ್ತಿ ಪಡೆಯುವವರು. ಒಟ್ಟಿನಲ್ಲಿ, ನಾವು ಅಧಃಪತನದತ್ತ ಜಾರುತ್ತಿದ್ದೆವು.

''ನನ್ನ ತಂದೆ ಸ್ಟೀಫನ್ ಹೊಮೊರಿಯಸ್ ರಾಜಸಚಿವನಾಗಿದ್ದರೆ, ನನ್ನ ತಾಯಿ ಲೇಡಿ ಇರಿನಾ ಮರಿಯಾ ಚಕ್ರವರ್ತಿನಿಯ ಸಖಿಯಾಗಿದ್ದಳು. ನನ್ನಣ್ಣ ಅಲೆಗ್ಸಾಂಡರ್ ಸಿಲ್‌ವೇರಿಯಸ್ ಮಹಾರಾಜನ ಅಂಗರಕ್ಷಕರ ನೇತೃತ್ವ ವಹಿಸಿದ್ದ. ನಮ್ಮ ಇಡಿಯ ಕುಟುಂಬವೇ ರಾಜ ಷಡ್ಯಂತ್ರದಲ್ಲಿ ಮುಳುಗಿದ್ದು ಅವು ನಮಗೆಲ್ಲ ಗಮ್ಮತ್ತಿನ ದಿನಗಳಾಗಿದ್ದವು. ಅರಮನೆಯಲ್ಲಿ ನಮ್ಮ ನೆರೆಯಲ್ಲಿ ವಾಸಿಸುತ್ತಿದ್ದ ಸರ್‌ಜಿಯಸ್ ಪಿಲಾಜಿಯಸ್ ಎಂಬಾತ ತಂದೆಯ ಆತ್ಮೀಯ ಗೆಳೆಯನಾಗಿದ್ದ. ಏಳು ಕಡಲುಗಳನ್ನು ದಾಟುತ್ತಿದ್ದ ಹಡಗುಗಳ ಒಡೆಯ, ಆತ ವಿಶಾಲ ದ್ರಾಕ್ಷಿ ತೋಟಗಳನ್ನು ಹೊಂದಿದ್ದ.

''ಸಾರ್ಜಿಯಸ್ ಪಿಲಾಜಿಯಸ್‌ನ ಏಕೈಕ ಪುತ್ರ ಥಿಯೋಡೊರಿಕ್ ಗಲ್ಲಾಸಿಯಸ್‌ನ ಜೊತೆ ನನಗೆ ಮದುವೆಯಾಗುವುದಿತ್ತು. ಅವನು ಸುಂದರನೂ ಅತಿ ಬುದ್ಧಿವಂತನೂ ಆಗಿದ್ದ. ಒಂದು ದಿನ ಇದ್ದಕ್ಕಿದ್ದಂತೆಯೇ ಹೇಳಿದ್ದ, 'ಈ ಭ್ರಷ್ಟ ಬೈಜಾಂಟಿಯನ್ ಸಮಾಜದ ಪಾಲುಗಾರನಾಗಲು ನನಗೆ ಇಷ್ಟವಿಲ್ಲ. ಮದುವೆಯಾದ ಬಳಿಕ ನಿನ್ನನ್ನು ನಮ್ಮ ಸಾಲೊನಿಕಾ ಎಸ್ಟೇಟ್‌ಗೆ ಕರೆದೊಯ್ಯುವೆ, ಅಲ್ಲಿನ

ಊರಮನೆಯಲ್ಲಿ ನಾವು ಶಾಂತವಾಗಿ ಬದುಕೋಣ. ನನಗೆ ಸಾಹಿತ್ಯ ಓದಬೇಕು. ನೀನು ತಂತಿ
ವಾದ್ಯ ನುಡಿಸುತ್ತಾ, ಕಸೂತಿ ಹಾಕುತ್ತಿರು. ನನ್ನ ಕನಸಿನ ಗ್ರಾಮಜೀವನ ಇದು.'

''ಫಾದರ್, ನನಗೆ ಕಾನ್‌ಸ್ಟಾಂಟಿನೋಪಲ್ ಬದುಕು ಇಷ್ಟವಾಗಿತ್ತು. ನೃತ್ಯ ಕೂಟಗಳಲ್ಲಿ
ಭಾಗವಹಿಸುತ್ತಿದ್ದ ನಾನು ಭಾರಿ ಉಡಿಗೆಗಳನ್ನು ಧರಿಸುತ್ತಿದ್ದೆ. ಭರ್ಜಿವೀರರನ್ನು ಆರಾಧಿಸುತ್ತಿದ್ದೆ.
ಥಿಯೋಡೋರಿಕ್ ಕೆಲವೊಮ್ಮೆ ಜಿಗುಪ್ಸೆಯಿಂದ ಹೇಳುತ್ತಿದ್ದ, 'ನಾವು ಕಿರಿಸ್ತಾನರಾಗಿರುವ ಬಳಿಕವೂ
ಮೂಢ ರೋಮನ್ನರ ಬರ್ಬರತೆಯನ್ನು ಬಿಟ್ಟಿಲ್ಲ.' ಭರ್ಜಿವೀರರ ಆರಾಧಕರಲ್ಲಿ ಎರಡು ಬಣ್ಣಗಳಿ
ದ್ದವು. ''ಹಸುರು'' ಮತ್ತು ''ನೀಲಿ.'' ನನ್ನ ಮೂವರು ಅಣ್ಣಂದಿರೂ ಹಸುರು ಬಣ್ಣಕ್ಕೆ ಸೇರಿದವರು.

ಥಿಯೋಡೋರಿಕ್ ಜತೆ ನನ್ನ ಮದುವೆ ಸಂತ ಸೋಫಿಯಾಳ ದೇಗುಲದಲ್ಲಿ ನಡೆಯುವುದಿತ್ತು.
ಮದುವೆಗಿಂತ ಕೆಲವು ದಿನಗಳ ಹಿಂದೊಮ್ಮೆ ಸಂತಸದಿಂದ ಬೀಗುತ್ತಾ ಬಂದ ತಂದೆಯವರು, ನಮ್ಮ
ಮದುವೆಗೆ ಉಡುಗೊರೆಯಾಗಿ ಥಿಯೋಡೋರಿಕ್‌ನನ್ನು ಪ್ರಧಾನ ಎ.ಡಿ.ಸಿ.ಯಾಗಿ ನಿಯಮಿಸಲು
ಚಕ್ರವರ್ತಿ (ಆತ ನನ್ನ ದೇವರಕ್ಷಕನೂ ಹೌದು) ನಿರ್ಧರಿಸಿದ್ದಾನೆಂದು ತಿಳಿಸಿದರು.

''ಎಂದಿನಂತೆ ಆ ಸಂಜೆ ಥಿಯೋಡೋರಿಕ್ ಉದ್ಯಾನವನದ ಗೋಡೆ ಏರಿ ನನ್ನ ಕೋಣೆಗೆ ಬಂದ.
ನಾನು ಮದುವೆ ಬಳುವಳಿಯಾಗಿದ್ದ ಕಸೂತಿ ಹಾಕಿದ ತೆರವಸ್ತ್ರಕ್ಕೆ ಅಂತಿಮ ರೂಪ ನೀಡುತ್ತಿದ್ದೆ.
ಥಿಯೋಡೋರಿಕ್ ಬಹಳ ಉದ್ವೇಗಗೊಂಡಿದ್ದ. 'ನನ್ನನ್ನು ನೀನು ಚಕ್ರವರ್ತಿಯ ಮನೆಯಾಳು ಅಂತ
ತಿಳಿದಿದ್ದೀಯಾ?' ಆವೇಶದಿಂದಲೇ ಹೇಳಿದ, 'ಈಗಿಂದೀಗಲೇ ಗಾವುಲ್‌ಗೆ ನಮ್ಮನ್ನೊಯ್ಯಲು
ನಾವೆಯನ್ನು ಗೊತ್ತು ಮಾಡುವೆ. ಬೈಜಾಂಟಿಯಮ್‌ನಲ್ಲಿ ನಾವು ಒಂದು ಕ್ಷಣವೂ ಬದುಕಬಾರದು.'

''ಫಾದರ್, ನಾನಾಗ ಬಹಳ ಎಳೆಯವಳಾಗಿದ್ದೆ. ಥಿಯೋಡೋರಿಕ್ ನಾಸ್ತಿಕ ಬಂಡಾಯಗಾರರೆಂದು
ಕರೆಯಲ್ಪಡುವವರಲ್ಲಿ ಒಬ್ಬನಾಗಿದ್ದ ಎಂಬುದನ್ನು ತಿಳಿಯದ ದಡ್ಡಿಯಾಗಿದ್ದೆ.

''ನಾನು ನನ್ನದೇ ದಾರಿಯಲ್ಲಿ ನಡೆಯುವ ಹಟಮಾರಿ. ನಾನು ಮಾರ್ನುಡಿದೆ, ''ಬರ್ಬರ
ನಾಡಿಗೆ ಹೋಗುವ ಯೋಚನೆಯನ್ನು ನಾನು ಮಾಡಲಾರೆ. ನಾನು ಇಲ್ಲಿಯೇ ಬದುಕುವವಳು.
ನೀನು ನನ್ನ ಗಂಡನಾಗಿ, ಚಕ್ರವರ್ತಿಯ ಎ.ಡಿ.ಸಿ. ಆಗಿ ಇಲ್ಲೇ ನಿಲ್ಲುತ್ತೀಯಾ?''

''ಅವನು ಏಕಾಏಕಿ ಶಾಂತವಾಗಿ ಬಿಟ್ಟ. ಕೆಲಕ್ಷಣಗಳ ಬಳಿಕ ತಣ್ಣಗಿನ ಧ್ವನಿಯಲ್ಲಿ ಹೇಳಿದ.
''ಕೇಳು ಫ್ಲೋರಾ, ನನಗೆ ಈ ಚಕ್ರವರ್ತಿ, ದೊರೆ, ಬೈಜಾಂಟಿಯನ್ ರಾಣಿಯರು, ಅವರ
ಪುರೋಹಿತರು ಮತ್ತು ವೀರ ಭಟರು ಈ ಎಲ್ಲರ ಬಗ್ಗೆಯೂ ಜಿಗುಪ್ಸೆಯಿದೆ. ರಾಜ ಪರಿವಾರವನ್ನು
ಸೇರುವುದಕ್ಕಿಂತ ನನಗೆ ಸಾವೇ ಮೇಲು.''

ನಮ್ಮ ವಾದ ತಾರಕೇರಿತು. ಕೋಣೆಯಿಂದ ಬಿರುಗಾಳಿಯಂತೆ ಹೊರನಡೆದ ಅವನು ತೋಟದ
ಗೋಡೆ ಹತ್ತಿ ಮಾಯವಾದ.


''ತಂದೆಯೇ, ಆ ಸಮಯದಲ್ಲಿ ನಮ್ಮ ಬಲ್ಗೇರಿಯನ್ ಸೇವಕಿ ಕೋಣೆಯ ಡಮಾಸ್ಕ್ ಪರದೆಗಳ
ಮರೆಯಲ್ಲಿ ಅವಿತು ನಮ್ಮ ಮಾತುಗಳನ್ನು ಕದ್ದಾಲಿಸುತ್ತಿದ್ದಳೆಂದು ನನಗೆ ಗೊತ್ತಿರಲಿಲ್ಲ. ಅಥವಾ
ಆ ಹುಡುಗಿ ನಮ್ಮ ಮನೆವಾರ್ತೆಗಳ ಬೇಹುಗಾರಿಕೆ ನಡೆಸಲು ತಂದೆಯ ವೈರಿಗಳಿಂದ ನಿಯಮಿಸಲ್ಪಟ್ಟ
ವಳೆಂಬುದೂ ನನಗೆ ತಿಳಿದಿರಲಿಲ್ಲ. ಮರುದಿನ ಮಧ್ಯಾಹ್ನವೇ ಥಿಯೋಡೋರಿಕ್ ಗಲ್ಲಾಸಿಸ್‌ನನ್ನು
ರಾತ್ರಿಯೂಟಕ್ಕೆ ಆಹ್ವಾನಿಸಿ ವಿಷವಿಕ್ಕಬೇಕೆಂದು ನನ್ನಣ್ಣ ಸಿಲ್ವೇರಿಯಸ್‌ಗೆ ರಾಜಾಜ್ಞೆಯಾಗಿತ್ತು.
ಅದಲ್ಲದೆ, ಹಾಗೆ ಮಾಡದಿದ್ದರೆ ಅವನನ್ನು ಹಾಗೆಯೇ ಕೊಲ್ಲಲಾಗುತ್ತಿತ್ತು.

ಮುಸ್ಸಂಜೆಯಾಗುತ್ತಿದ್ದಂತೆ ನಾನು ಗುಟ್ಟಾಗಿ ಯೋಜನೆಯೊಂದನ್ನು ಮಾಡಿದೆ. ನನ್ನ ಆಪ್ತ

ಸೇವಕಿಯೊಬ್ಬಳನ್ನು ಥಿಯೋಡೊರಿಕ್‌ನ ಬಳಿ ಕಳುಹಿಸಿ, ನಡುರಾತ್ರಿಯ ಹೊತ್ತು ಕಡಲ ಕಿನಾರೆಯ ನಮ್ಮ ಸಂಕೇತದ ಸ್ಥಳಕ್ಕೆ ಬರುವಂತೆ ಹೇಳಿದೆ. ನಿರ್ಧರಿಸಲಾದ ಸಮಯದಲ್ಲಿ ಮೇಲಂಗಿ ಧರಿಸಿ, ಕಂಕುಳಲ್ಲಿ ಕಠಾರಿಯೊಂದನ್ನು ಬಚ್ಚಿಟ್ಟು, ಚೀಲ ತುಂಬ ಬಂಗಾರದ ನಾಣ್ಯಗಳನ್ನು ಸೊಂಟಪಟ್ಟಿಗೆ ಬಿಗಿದು ಅರಮನೆಯಿಂದ ಜಾರಿದೆ. ಕಟ್ಟೆಯ ಮೇಲೆ ಥಿಯೋಡೊರಿಕ್ ನನ್ನನ್ನು ನಿರೀಕ್ಷಿಸುತ್ತಿದ್ದ. ಹಿಂದಿನ ರಾತ್ರಿ ಏನು ನಡೆಯಿತೆಂಬುದು ಆತನಿಗೆ ಗೊತ್ತಿರಲಿಲ್ಲ. ನಾನು ವಿವರಿಸಿದೆ. ಅವನು ಬಹಳ ವಿಚಲಿತನಾದಂತೇನು ಕಾಣಿಸಲಿಲ್ಲ. ನಾನು ಮೊಣಕಾಲೂರಿ ಆತನ ಕ್ಷಮೆ ಯಾಚಿಸಿದೆ. ನನ್ನ ಬಗ್ಗೆ ನನಗೇ ನಾಚಿಕೆಯಾಗಿದೆಯೆಂದೂ, ಅವನು ಹೇಳಿದಂತೆ ಕೇಳುತ್ತೇನೆಂದೂ, ಹೇಳಿದೆ. ನಾವು ಕೂಡಲೇ ಓಡಿ ಹೋಗೋಣ, ಬಹಳ ತಡವಾಗುವ ಮುನ್ನವೇ ಪಲಾಯನ ಮಾಡೋಣ ಎಂದು ಒತ್ತಾಯಿಸಿದೆ. ಅವನು ಕಟ್ಟೆಯನ್ನು ಹತ್ತಿ ಮರ್ಮೊರಾ ಕಡಲಿನತ್ತ ಮುಖ ಮಾಡಿದ. ಬಳಿಕ ನನ್ನತ್ತ ತಿರುಗಿ ತಣ್ಣಗಿನ ಸ್ವರದಲ್ಲಿ ಶಾಂತವಾಗಿಯೇ ಹೇಳಿದ, ''ಬೈಜಾಂಟಿಯನ್ನಿನ ಲೇಡಿ ಫ್ಲೋರಾ ಸಬಿನಾ, ನನ್ನನ್ನೀಗಲೇ ಬಂಧನಕ್ಕೊಳಪಡಿಸಿ ರಾಜಾಜ್ಞೆ ನೆರವೇರಿಸುವವರಿಗೊಪ್ಪಿಸುವ ತೃಪ್ತಿಯನ್ನು ನಿನಗೆ ನೀಡಲಾರೆ. ಗುಡ್‌ಬೈ'' ಎಂದವನೇ ಮರ್ಮೊರಾ ಕಡಲಿಗೆ ಧುಮುಕಿ ರಭಸದಿಂದ ಈಜಿ ಹೋದ.

ಸ್ತಂಭೀಭೂತಳಾಗಿ ನಾನು ನಿಂತಿರುವಂತೆ ಬಲವಾದ ಗಾಳಿಬೀಸಿತು. ನಾನಾಗ ಬರಿಯ ಹದಿನೇಳರ ಅಮಾಯಕಳು. ಆದರೆ ನಾನು ಇದ್ದಕ್ಕಿದ್ದಂತೆ ಬೆಳೆದುಬಿಟ್ಟಿದ್ದೆ. ಕೊಳೆತುಹೋಗುತ್ತಿರುವ ಒಂದು ಭ್ರಷ್ಟ ಸಮಾಜದಲ್ಲಿ ಮನುಷ್ಯರು ಪರಸ್ಪರ ನಂಬದಿರುವ ದಿನಗಳೂ ಬರುತ್ತವೆ ಎಂಬುದು ನನಗೆ ಮನವರಿಕೆಯಾಗಿತ್ತು. ನನ್ನನ್ನು ಅವಮಾನಿಸಿದ ಥಿಯೋಡೊರಿಕ್‌ನನ್ನು ಬೈಯ್ಯುವ ಕಾರಣವಿರಲಿಲ್ಲ. ನಾನು ಆ ರಾತ್ರಿ ಆತನ ಜತೆ ಓಡಿಹೋಗಲು ಬಂದಿದ್ದೆ. ನಾವು ಬಚ್ಚೀರಿಯದಿಂದ ತಪ್ಪಿಸಿಕೊಳ್ಳಬಹುದಿತ್ತು. ನಾವು ಕಾಲ್‌ಪಥಿಯನ್ಸ್‌ನಲ್ಲಿ ಅಡಗಿಕೊಳ್ಳಬಹುದಿತ್ತು. ನಾವು ಅನಾಗರಿಕ ಜರ್ಮನ್ ಕುಲದ ನಾಡಿಗೆ ಓಡಿಹೋಗಬಹುದಿತ್ತು. ನಾವು ಎಲ್ಲಿಗಾದರೂ ಹೋಗಬಹುದಿತ್ತು. ಆದರೆ ಅವನು ನನ್ನನ್ನು ನಂಬಲಿಲ್ಲ. ನನ್ನನ್ನು ಇಲ್ಲಿಯೇ ಬಿಟ್ಟು ಒಬ್ಬನೇ ಓಡಿದ.

ಅವನು ಗಾಲನ್ನು ಸೇರಿ, ಅಲ್ಲಿಂದ ಬ್ರಿಟನ್ನಿಗೆ ಹೋದ ಎಂಬುದು ನನಗೆ ಆ ಬಳಿಕ ತಿಳಿದು ಬಂತು. ಅವನನ್ನು ಬ್ರಿಟನ್ನರು ತಿಂದುಬಿಟ್ಟರು. ನಾನು ಕಣ್ಣೊರೆಸಿದೆ.



ನಸುನಕ್ಕ ಫಾದರ್ ಗ್ರೆಗೊರಿ ಮೃದುವಾಗಿ ಹೇಳಿದ, ''ಮಾತೆ ಫ್ಲೋರಾ, ಬ್ರಿಟಿಷರು ಅರೆ ನಾಗರಿಕರೇನೋ ಹೌದು. ಆದರೆ ನರಭಕ್ಷಕರಂತೂ ಅಲ್ಲ..... ಆಮೇಲೆ ಏನಾಯ್ತು?''

''ಥಿಯೋಡೊರಿಕ್‌ನನ್ನು ತಪ್ಪಿಸಿಕೊಳ್ಳಲು ಬಿಟ್ಟಿದ್ದಕ್ಕೆ ಶಿಕ್ಷೆಯ ರೂಪದಲ್ಲಿ ತಂದೆಯವರನ್ನು ಟೆಸಿಫೋನಿಗೆ ರಾಯಭಾರಿಯೆಂದು ಹೆಚ್ಚು ಕಮ್ಮಿ ತೊಲಗಿಸಲಾಯಿತು. ಸಸ್ಸಾನಿಯನ್ನರು ಸದ್ಯದಲ್ಲೇ ಅರಬರ ವಿರುದ್ಧ ಯುದ್ಧ ಸಾರಲಿದ್ದು, ಮುಂದಿನ ಕ್ಷೋಭೆಯಲ್ಲಿ ಟೆಸಿಫೋನ್‌ನಲ್ಲಿರುವ ನಮ್ಮ ಕುಟುಂಬ ನಾಶವಾಗದೆ ಬೇರೆ ದಾರಿಯಿಲ್ಲ ಎಂಬುದು ಚಕ್ರವರ್ತಿಗೆ ಗೊತ್ತಿತ್ತು. ಅಂತೆಯೇ ಕೆಲವು ದಿನಗಳ ಬಳಿಕ ಹಡಗು ಏರಿ ಮೆಡಿಟರೇನಿಯನ್ ದಿಕ್ಕಿಗೆ ಹೊರಟೆವು. ನಾವು ಬಾಸ್ಪರಸ್‌ನಿಂದ ಹಡಗು ಹತ್ತಿದಾಗ, ಕಡಲು ಶಾಂತವಾಗಿತ್ತು. ಗಾಳಿ ಸಹಕಾರಿಯಾಗಿತ್ತು.

''ಅಂಟಿಯಾಕ್‌ನಲ್ಲಿ ಲಂಗರು ಹಾಕಿತು. ಬಂದರಿನ ಅಮೃತ ಶಿಲೆಯ ಪಾವಟಿಗೆಗಳನ್ನೇರಿ ನಾವು ಊರೊಳಕ್ಕೆ ಹೋದೆವು. ಊರಿನ ವಸ್ತುಸಂಗ್ರಹಾಲಯದಲ್ಲಿ ಯಾವನೋ ರೋಮಿನ ಶಿಲ್ಪಿ ಅಮೃತಶಿಲೆಯಲ್ಲಿ ಕೆತ್ತಿದ್ದ ಕ್ಲಿಯೋಪಾತ್ರಳ ಪ್ರತಿಮೆಯನ್ನು ಕಂಡೆವು. ಹೊಟ್ಟೆಯುರಿಯಿಂದೇನೂ ಹೇಳುತ್ತಿಲ್ಲ, ಫಾದರ್, ಕ್ಲಿಯೋಪಾತ್ರ ಖಂಡಿತವಾಗಿಯೂ ಮುದ್ದಾಗಿರಲಿಲ್ಲ. ಅವಳ ದಪ್ಪ ಮೇಲ್ತುಟಿಯ ಗಡಸು ಮುಖದಲ್ಲಿ ಕಠಿಣ ಸಿಡುಕು ತೋರುತ್ತಿತ್ತು. ಅಂಟಿಯಾಕ್‌ನಿಂದ ನಾವು ಸೈರಸ್, ಆ ಬಳಿಕ ಅಲ್ಲಿಂದ ಎಡೆಸ್ಸಾ ಮೂಲಕ ಸಿಸಿಬಸ್, ಕೊನೆಗೆ ನಾವು ಟೆಸಿಫೋನಿನ ಅದ್ಭುತ ಅವಳಿ ನಗರವನ್ನು ತಲುಪಿದೆವು. ಟೈಗ್ರಿಸ್ ನದಿ ಬಳಿಯಿದ್ದ ರಾಜಮಹಲಿನಲ್ಲಿ ರಾಜರ ರಾಜ ಇರಾಣದ ಶಹಾ ಮಹಾರಾಜನಿಗೆ ತಂದೆಯವರು ತನ್ನ ಪರಿಚಯ ಪತ್ರ ನೀಡಿದರು. ಸೈರಸ್ ಹಾಗೂ ದೇರಿಯಸ್‌ನ ವಾರೀಸುದಾರ ಪೆದ್ದನ ಹಾಗೆ ಕಂಡ. ತೆಳುಪರದೆಯ ಹಿಂದಿದ್ದ ರತ್ನಖಚಿತ ಸಿಂಹಾಸನದಲ್ಲಿ ಮುದುಡಿದ್ದ ಸಣಕಲು ಮನುಷ್ಯ ಗಾಬರಿಯಿಂದ ಬಿಳುಚಿಕೊಂಡಂತೆ ಕಾಣಿಸುತ್ತಿದ್ದ. ಭೂಮಿಯ ಮೇಲೆ ದೇವರ ನೆರಳೆನಿಸಿರುವ ಅವನನ್ನು ಹುಲುಮಾನವರು ಮುಖಾಮುಖಿಯಾಗಿ ನೋಡಬಾರದ್ದಾಗಿದ್ದುದರಿಂದ, ಸಾಮಾನ್ಯವಾಗಿ ಪಾರದರ್ಶಕ ರೇಷ್ಮೆ ಪರದೆಯ ಮರೆಯಲ್ಲೇ ಇರುತ್ತಿದ್ದ.

''ಸಸ್ಸಾನಿಯರೂ ಬೈಜಾಂಟಿಯನ್ನರ ಹಾಗೆ ಅಧಃಪತನದತ್ತ ಹೊರಟಿದ್ದರೆಂಬುದನ್ನು ಗಮನಿಸಿದಾಗ ಸಂತಸವಾಗಿತ್ತು. ಕಾನ್‌ಸ್ಟಾಂಟಿನೋಪಲ್‌ನಂತೆಯೇ ಟೆಸಿಫೋನ್ ಕೂಡಾ ಬೇಹುಗಾರರಿಂದ, ರಾಜ ಪಿತೂರಿಗಳಿಂದ, ರಾಜ ಕುಟುಂಬದೊಳಗಿನ ರಾಜಕೀಯ ಕೊಲೆಗಳಿಂದ ತೆವಳುತ್ತಿತ್ತು. ಅದೂ ಎಂತಹ ವೈರತ್ವ! ಪರ್ಷಿಯನ್ನರ ಅಹಂಕಾರ ಮತ್ತು ವೈಭವಗಳು ಖಂಡಿತವಾಗಿ ನಂಬಿಕೆಗೆ ಮೀರಿದ್ದು. ಅವರು ತಮ್ಮನ್ನು ಅತಿಶ್ರೇಷ್ಠರೆಂದೇ ತಿಳಿದುಕೊಂಡಿದ್ದರು. ಬಲು ಬೇಗ ಥಿಯೋಡೊರಿಕ್‌ನನ್ನು ಮರೆತ ನಾನು, ಸಸ್ಸಾನಿಯನ್ ರಾಜಧಾನಿಯ ಮೋಜುಪ್ರಿಯ ಮೇಲುವರ್ಗದವರ ಜತೆ ಸಂಭ್ರಮಿಸಿದೆ. ರಾಜತಾಂತ್ರಿಕ ಔತಣಕೂಟವೊಂದರಲ್ಲಿ ನಾನೊಬ್ಬ ತರುಣ ರೋಮನ್ ಜನರಲ್ಲನನ್ನು ಭೇಟಿಯಾದೆ. ನಾವು ಪರಸ್ಪರ ಪ್ರೇಮಿಸಿದೆವು. ಆತ ಮದುವೆಯಾಗೋಣ ಎಂದ. ನಾನು ಹೂಂ ಎಂದೆ. ನನ್ನ ಹತ್ತಿರದವರು ಕೆಂಡವಾದರು. ಅವನೊಬ್ಬ ರೋಮನ್ ಕೆಥೋಲಿಕ್, ನಾವೋ ಗ್ರೀಕ್ ಸಂಪ್ರದಾಯದವರು. ಮನೆಯಲ್ಲಿ ತಂದೆಯವರು ಅಬ್ಬರಿಸಿದರು, ''ನಾವೇನೂ ನಿನ್ನನ್ನು ಪೋಪನಿಗೊಪ್ಪಿಸಲು ರೋಮಿನಿಂದ ದೂರವಾದದ್ದಲ್ಲ....'' ಇತ್ಯಾದಿ.

''ಆ ನಂತರ ಮತ್ತೊಬ್ಬ ಪರ್ಷಿಯನ್ನನ ಹಿಂದೆ ಬಿದ್ದೆ. ಫಾದರ್, ಪರ್ಷಿಯನ್ನರೆಂದರೆ ಉದ್ದವಾದ ಗುಂಗುರು ಗಡ್ಡವುಳ್ಳ, ಅಷ್ಟೊಂದು ಅಥವಾ ನಮ್ಮ ಯೂರೋಪಿಯನ್ನರಷ್ಟು ನಾಗರಿಕರಲ್ಲದ,

ಹೆಂಗಸರನ್ನು ಅಂತಃಪುರದ ಪರದೆಯೊಳಗೇ ಉಳಿಸುವ ಕಟುಕರೆಂದೇ ನಾವು ಕೇಳಿದ್ದೆವು. ಆದರೆ, ಇಲ್ಲಿ ನೋಡಿದರೆ ಅವರೆಷ್ಟು ಸಭ್ಯ ನಾಗರಿಕರಾಗಿದ್ದರೆಂದರೆ, ಕೆಲವೊಮ್ಮೆ ನಮ್ಮ ನಡತೆಗಳೇ ಅವರಿಗೆ ಒರಟಾಗಿ ಕಾಣಿಸುತ್ತಿದ್ದವು. ನಿಜವಾಗಿ ಹೇಳುವುದಾದರೆ, ಅವರು ನಾಗರಿಕತೆಯ ತುತ್ತತುದಿಗೇರಿದ್ದರು. ಇರಲಿ, ಹೀಗೆ ನಾನು ಇರಾಣದ ಹಿರಿಯ ಪುರೋಹಿತನ ಸುಂದರ ಪುತ್ರ ದಾರ್‌ತೂಜಾವೇ ಮಿನೋಟೆರ್ ಫಾರಿದೂನ್‌ನನ್ನು ಭೇಟಿಯಾದೆ.

ಮಿನೋಟೆರ್‌ನ ನೆನಪಾಗುತ್ತಲೇ ದುಃಖ ಒತ್ತರಿಸಿ ಬಂದು ಮೌನ ಧರಿಸಿದೆ. ಪೈನ್ ಮರಗಳ ಎಡೆಯಲ್ಲಿ ಗಾಳಿ ಹಾಡುತ್ತಲೇ ಇತ್ತು. ಕೆಲವು ನಿಮಿಷಗಳ ನಂತರ ಫಾದರ್ ಗ್ರೆಗೊರಿ ತಪ್ಪೊಪ್ಪಿಗೆಯ ಭಾರವಾದ ಧ್ವನಿಯಲ್ಲಿ ಹೇಳಿದ, ''ಮಾತೆ ಫ್ಲೋರಾ, ದಯವಿಟ್ಟು ಮುಂದುವರಿಸು, ನಾನು ಕೇಳುತ್ತಿರುವೆ.

''ಫಾದರ್, ಪರ್ಷಿಯನ್ ಭಾಷೆಯಲ್ಲಿ ಮಿನೋಟೆರ್ ಎಂದರೆ ಮುದ್ದು ಮುಖ ಎಂದು ಅರ್ಥ. ಅವನನ್ನು ನೋಡುವುದೇ ಕಣ್ಣಿಗೊಂದು ಹಬ್ಬ; ಅಷ್ಟೊಂದು ಹಿತ. ಅವನು ನನ್ನನ್ನು 'ಗುಲ್‌ಟಾನು' ಎಂದು ಕರೆಯುತ್ತಿದ್ದ. ಪರ್ಷಿಯನ್ ಭಾಷೆಯಲ್ಲಿ ಹಾಗೆಂದರೆ ಫ್ಲೋರಾ ಅಥವಾ ಹೆಣ್ಣು ಗುಲಾಬಿ. ಸುಂದರ ಸಂಜೆಯೊಂದರಲ್ಲಿ ನನಗವನು ಹೇಳಿದ, ''ಗುಲ್‌ಟಾನು-ಗುಲ್‌ಟೇರ್-ಗೋಂಜೆ, ನೀನು ನನ್ನನ್ನು ಮದುವೆಯಾಗದಿದ್ದರೆ ಟೈಗ್ರಿಸ್ ನದಿಯಲ್ಲಿ ಮುಳುಗಿ ಸತ್ತುಹೋಗುವೆ. ನಾವು ರೇ ಎಂಬ ಊರಿಗೆ ಓಡಿಹೋಗಿ ಪವಿತ್ರಾಗ್ನಿಯ ಸಾಕ್ಷಿಯಲ್ಲಿ ಮದುವೆಯಾಗೋಣ.''

''ಆ ಸಂಜೆಗೆ ಗುಲಾಬಿಯ ರಂಗಿತ್ತು. ಗುಲಾಬಿಯ ತೋಟವೊಂದರಲ್ಲಿ ಕುಳಿತು ನಮ್ಮ ಪಲಾಯನದ ಯೋಜನೆ ಸಿದ್ಧಪಡಿಸುತ್ತಿರುವಾಗ ಕೋಗಿಲೆ ಹಾಡುತ್ತಿತ್ತು. ಬಹುಶಃ ಸೈಪ್ರಸ್ ಮರದ ಮರೆಯಲ್ಲಡಗಿದ್ದ ಸಸ್ಸಾನಿಯನ್ ಬೇಹುಗಾರ ನಮ್ಮತ್ತ ಕಣ್ಣಿಟ್ಟಿದ್ದಿರಬೇಕು. ಮನೆಗೆ ಮರಳಿದಾಗ ಮುಖಮಂಟಪದಲ್ಲೇ ನನ್ನನ್ನು ಎದುರುಗೊಂಡ ತಾಯಿ, ಶಾಂತವಾಗಿಯೇ ಮಲಗುವ ಕೋಣೆಗೆ ಕರೆದುಕೊಂಡು ಹೋಗಿ ಅಲ್ಲಿ ನನ್ನನ್ನು ಬಿಟ್ಟು, ಹೊರಗಿನಿಂದ ಬೀಗ ಜಡಿದಳು.

''ಎರಡು ಹಗಲು, ಎರಡು ರಾತ್ರಿ ನಾನು ಬಂಧನದಲ್ಲಿದ್ದೆ. ಒಂದೇ ಸಮನೆ ಅಳುತ್ತಾ ಥಿಯೋಡೊರಿಕ್, ರೋಮನ್ ಜನರಲ್, ಲುಸಿಲಿಟಸ್ ಇಗ್ನೇಷಿಯಸ್, ಸಸ್ಸಾನಿಯನ್ನರು, ದಾರ್‌ತೂಜಾವೇ ಮಿನೋಟೆರ್ ಫಾರಿದೂನ್‌ರನ್ನು ನೆನಪಿಸಿಕೊಳ್ಳುತ್ತಿದ್ದೆ. ಮೂರನೆಯ ಮುಂಜಾನೆ ಬಾಗಿಲು ತೆರೆದ ತಾಯಿ ಒಳಗೆ ಬಂದಳು. ಅವಳೂ ಅಳುತ್ತಿದ್ದಿರಬೇಕು; ಅವಳ ಕಣ್ಣುಗಳು ಕೆಂಪಾಗಿ ಬಾತುಕೊಂಡಿದ್ದವು. ''ಬಟ್ಟೆ ಬದಲಿಸಿ ಪ್ರಯಾಣಕ್ಕೆ ಸಿದ್ಧಳಾಗು'' ಎಂದು ಚುಟುಕಾಗಿ ಹೇಳಿದ ತಾಯಿ ಹೊರ ನಡೆದಳು. ಅವರು ಬಹುಶಃ ನನ್ನನ್ನು ಮತ್ತೆ ಬೈಜಾಂಟಿಯನ್ನಿಗೆ ಕರೆದೊಯ್ಯುತ್ತಾರೆಂದು ಭಾವಿಸಿದೆ. ''ಎದ್ದು ಪನ್ನೀರಲ್ಲಿ ಮುಖ ತೊಳೆದು, ಪರ್ಷಿಯನ್ ಶೈಲಿಯ ಹಮಾಮ್‌ನಲ್ಲಿ ಸ್ನಾನ ಮಾಡಿ, ಬಟ್ಟೆ ಧರಿಸಿ ಕೆಳಗಡೆ ಹೋದೆ. ಯಾರೂ ನನ್ನ ಜೊತೆ ಮಾತನಾಡಲಿಲ್ಲ. ನನ್ನ ತಂದೆ ತಾಯಿಗಳು, ಅಣ್ಣಂದಿರು, ಕೆಲಸದಾಳುಗಳು ಎಲ್ಲರೂ ತುಟಿ ಹೊಲಿದುಕೊಂಡು ನಿರ್ಭಾವ ನೋಟ ಬೀರುತ್ತಿದ್ದರು. ಸ್ವಲ್ಪ ಹೊತ್ತಿನ ಬಳಿಕ ತಂದೆ ಮತ್ತು ಅಣ್ಣಂದಿರು ಪಡಸಾಲೆಯಿಂದ ಹೊರಬಂದರು. ನನ್ನನ್ನು ಅಪ್ಪಿಕೊಂಡ ಅಮ್ಮನ ಕಣ್ಣೀರ ಕಟ್ಟೆ ಒಡೆದು ಹೋಯಿತು. ಆದರೂ ಒಂದು ಮಾತಿಲ್ಲ. ನನ್ನನ್ನು ತಂದೆ ಕಲ್ಲಿಗೆ ಕಟ್ಟಿ ಟೈಗ್ರಿಸ್ ನದಿಯಲ್ಲಿ ಮುಳುಗಿಸುತ್ತಾನೆಂದು ಖಚಿತವಾಗಿತ್ತು. ಅವನ ಕ್ರೂರ ನಡತೆ ಪ್ರಸಿದ್ಧವಾದದ್ದೇ. ನಾನು ನಡುಗುತ್ತಿದ್ದೆ. ನನ್ನನ್ನು ಮುತ್ತಿಟ್ಟ ತಾಯಿ ಹೇಳಿದಳು, ''ದೇವರು ನಿನ್ನ ಜತೆಗಿರಲಿ ಮಗುವೆ.''

ಮೆಟ್ಟಿಲಿಳಿದು ಹೋದ ನನಗೆ, ಹೆಣ್ಣು ಒಂಟೆಯ ಡುಬ್ಬಕ್ಕೆ ಬಿಗಿದಿದ್ದ ಜೀನು(ಕಜಾನೆ) ಏರಲು ಪರ್ಷಿಯಾದ ಗುಲಾಮರು ನೆರವಾದರು. ತಂದೆ ಹಾಗೂ ಅಣ್ಣಂದಿರು ತಮ್ಮ ಗಂಡು ಕುದುರೆಗಳನ್ನೇರಿದಳು. ತಾಯಿ ಕಾನ್‌ಸ್ಟಾಂಟಿನೋಪಲ್‌ನಿಂದ ತಂದಿದ್ದ, ನನ್ನ ಮದುವೆ ಬಳುವಳಿಯಾದ ಬಂಗಾರದ ಆಭರಣಗಳನ್ನು ತುಂಬಿದ್ದ ಭಾರವಾದ ಪೆಟಾರಿಗಳನ್ನು ಹೊತ್ತು ತಂದ ಗುಲಾಮರು ಜೋಲು ಒಂಟೆಗಳಿಗೆ ಹೇರಿದರು. ನಾನೊಂದು ಕ್ಷಣ ತಿರುಗಿ ನೋಡಿದಾಗ ತಾಯಿ ಅಂಗಳದಲ್ಲಿ ನಿಂತು ಅಳುವುದು ಕಾಣಿಸಿತು.

"ಪಟ್ಟಣದ ಬಾಗಿಲು ದಾಟಿದ ನಮ್ಮ ಕಾರವಾನ್ ಸಿರಿಯಾದ ರಸ್ತೆಯತ್ತ ಮುಂದುವರಿಯಿತು. ಕೆಲವು ದಿನಗಳ ಬಳಿಕ ನಾವು ಡಮಾಸ್ಕಸ್ ತಲುಪಿದೆವು. ಪ್ರಯಾಣದ ನಡುವೆ ತಂದೆ ಮತ್ತು ಅಣ್ಣಂದಿರು ನನ್ನ ಜತೆ ಒಂದು ಮಾತೂ ಆಡಲಿಲ್ಲ. ಅವಿಶ್ವಾಸಿ ಅಗ್ನಿ ಆರಾಧಕನೊಬ್ಬನ ಜತೆ ಪಲಾಯನ ಮಾಡಲು ಪ್ರಯತ್ನಿಸಿದ್ದ ನನ್ನನ್ನು, ಅವರು ಯಾವುದಾದರೂ ನಿರ್ಜನ ಮರುಭೂಮಿಯಲ್ಲಿ ಕೊಂದೆಸೆದು ಮನೆಗೆ ಮರಳುತ್ತಾರೆ ಎಂಬುದು ನನಗೆ ಖಂಡಿತವಾಗಿತ್ತು.

"ಡಮಾಸ್ಕಸನ್ನು ಹಿಂದಿಕ್ಕಿದ ನಾವು ಒಂದು ತಗ್ಗಿನ ಕಲ್ಲುಗುಡ್ಡ ಸಿಗುವ ತನಕ ಪ್ರಯಾಣ ಮುಂದುವರಿಸಿದೆವು. ಪಕ್ಕದ ಶಿಖರದ ತುತ್ತ ತುದಿಯಲ್ಲಿ (ಪಕ್ಕದ ಚಿಕ್ಕ ಗುಡ್ಡದ ತುತ್ತ ತುದಿಯಲ್ಲಿ) ಒಂದು ಸಾಂಪ್ರದಾಯಿಕ ಗ್ರೀಕ್ ಕಾನ್ವೆಂಟ್ ಎದ್ದು ನಿಂತಿತ್ತು. ಕುದುರೆಯಿಂದಿಳಿದು ಮೆಟ್ಟಲುಗಳನ್ನೇರಿದ ತಂದೆ, ಕರೆಗಂಟೆಯ ಹಗ್ಗವನ್ನು ಮೂರು ಬಾರಿ ಜಗ್ಗಿದ. ಕೆಲವು ನಿಮಿಷಗಳ ಬಳಿಕ, ಹೆಬ್ಬಾಗಿಲು ಕಿರುಗುಟ್ಟುತ್ತಾ ತೆರೆದುಕೊಂಡಿತು. ಬಹಳ ಮುದಿಯಾಗಿದ್ದ ಗ್ರೀಕ್ ಸನ್ಯಾಸಿನಿಯೊಬ್ಬಳು ಹೊರಗೆ ಇಣುಕಿದಳು. ಅವಳ ಜತೆ ಏನನ್ನೋ ಮಾತನಾಡಿದ ತಂದೆ ನಮ್ಮನ್ನು ಮೇಲಕ್ಕೆ ಕರೆದನು. ನಾವು ಪ್ರವೇಶಿಸಿದ ಸಣ್ಣ ಕಿಂಡಿಯ ತಣ್ಣಗಿನ ಖಾಲಿ ಕೊಠಡಿಯಲ್ಲಿ ಕೆಲವು ಮರದ ಬೆಂಚುಗಳೂ ದೊಡ್ಡದಾದೊಂದು ಬೈಜಾಂಟಿಯನ್ ಮೂರ್ತಿಯೂ ಇತ್ತು. ಮಠದ ಮೇಲುಸ್ತುವಾರಿಣಿ ಬರುವವರೆಗೆ ತಂದೆ ಉಗ್ರಮೌನ ತಾಳಿದ್ದನು. ಆಕೆಯೂ ಬಹಳ ಮುದುಕಿಯಾಗಿದ್ದು, ಸನ್ಯಾಸಿನಿಯಾಗುವುದಕ್ಕಿಂತ ಹಿಂದೆ ಬೈಜಾಂಟಿಯನ್ ರಾಜಕುಮಾರಿಯಾಗಿದ್ದವಳು. ಹಿಂದೆ ಕಾನ್‌ಸ್ಟಾಂಟಿನೋಪಲ್‌ನಲ್ಲಿದ್ದಾಗ ತಂದೆಗೆ ಅವಳ ಪರಿಚಯವಿದ್ದಂತಿತ್ತು. ತಂದೆಯನ್ನು ಅವಳು ಮತ್ತೊಂದು ಕೊಠಡಿಗೆ ಕರೆದುಕೊಂಡು ಹೋದಳು. ಅಲ್ಲಿ ಅವರು ಸ್ವಲ್ಪ ಹೊತ್ತು ಮಾತನಾಡಿದ. ಬಳಿಕ ಮರಳಿದರು. ಆ ಎಲ್ಲ ದಿನಗಳಲ್ಲಿ ಮೊತ್ತ ಮೊದಲ ಬಾರಿಗೆ ತಂದೆ ನನ್ನಲ್ಲಿ ಮಾತನಾಡಿದ. ಅವನು ನಯವಾಗಿಯೇ ಹೇಳಿದ. "ಇನ್ನು ನೀನು ಯೇಸುಕ್ರಿಸ್ತನಿಗೂ ಅವನ ಕನ್ಯೆಮಾತೆಗೂ ನಿನ್ನನ್ನು ಅರ್ಪಿಸಿಕೊಳ್ಳುವುದು ಉತ್ತಮ."

"ಸರಿ ತಂದೆ" ನಾನು ತಲೆ ಬಾಗಿ ಉತ್ತರಿಸಿದೆ. ಬೇರೇನು ನಾನು ಹೇಳಬಹುದಿತ್ತು? ಸೇವಕರು ಹೊತ್ತು ತಂದ ಪೆಟಾರಿಗಳನ್ನು ಮಠದ ಮೇಲುಸ್ತುವಾರಿಣಿಗೆ ತಂದೆ ಬಳುವಳಿ ನೀಡಿದ. ಕಣ್ಣೀರನ್ನು ತಡೆದುಕೊಳ್ಳುತ್ತಾ ಅವನು ಎದ್ದು ನಿಂತ. ಕಣ್ಣೊರೆಸುತ್ತಿದ್ದ ಅಣ್ಣಂದಿರು ಬೇರೆಲ್ಲೋ ನೋಡುತ್ತಿದ್ದರು. ನಾನು ಕ್ರಿಸ್ತನಿಗೆ ವಧುವಾಗಲಿದ್ದೆ. ನನ್ನೆದುರು ಮೊಣಕಾಲೂರಿದ ತಂದೆ ಮತ್ತು ಮೂವರು ಅಣ್ಣಂದಿರೂ ಹೇಳಿದರು, "ನಮಗಾಗಿ ಪ್ರಾರ್ಥಿಸು." ಇದ್ದಕ್ಕಿದ್ದಂತೆ ಎದ್ದು ಸನ್ಯಾಸಿನಿಯರಿಗೆ ವಿದಾಯ ಕೋರಿ ಹೊರಟೇಹೋದರು. ಕುಸಿದು ಬೀಳದಂತಿರಲು ನಾನು ಶತಪ್ರಯತ್ನ ಮಾಡಿದ್ದೆ. ಕಿಟಕಿಯಿಂದ ಹೊರಗೆ ನೋಡಿದಾಗ ಬಾಗಿದ ತಲೆಗಳೊಂದಿಗೆ ತಂದೆ ಮತ್ತು ಅಣ್ಣಂದಿರು ಬೆಟ್ಟ ಇಳಿಯುತ್ತಿದ್ದರು. ಒಂಟೆಗಳು ಹಿಂಬಾಲಿಸುತ್ತಿದ್ದವು. ಹೆಬ್ಬಾಗಿಲು ಮುಚ್ಚಿದ ಗ್ರೀಕ್ ಸನ್ಯಾಸಿನಿ "ನನ್ನ


ಹಿಂದೆ ಬಾ'' ಎಂದಳು.

''ಕತ್ತಲು ಕವಿದಿದ್ದ ತಣ್ಣಗಿನ ಪಡಸಾಲೆಯ ಮೂಲೆಯಲ್ಲಿ ಒಂದು ಖಾಲಿ ಕೊಠಡಿಯಿತ್ತು. ಅದಕ್ಕೆ ಕಬ್ಬಿಣದ ದಪ್ಪಗಿನ ಸರಳುಗಳ ಕಿರಿದಾದ ಕಂಡಿಯಿತ್ತು. ಮರದ ಹಲಗೆಯೊಂದನ್ನು ಒರಗು ಉಣ್ಣೆಯ ಬಟ್ಟೆಯಿಂದ ಮುಚ್ಚಿದ್ದರು. ಅದರ ಮೇಲೆ ಕಪ್ಪು ಗವುಸೊಂದನ್ನು ಒಪ್ಪವಾಗಿ ಮಡಿಚಿ ಇಡಲಾಗಿತ್ತು. ಸ್ಟೂಲಿನ ಮೇಲೆ ಮೇಣದ ಬತ್ತಿ, ಜಪಸರ, ಮರದ ತಟ್ಟೆ ಮತ್ತು ಚಮಚಗಳಿದ್ದವು. ಗೋಡೆಯಲ್ಲೊಂದು ಮೂರ್ತಿಯಿತ್ತು. ಸದ್ದಿಲ್ಲದೆ ಹೊರಗೆ ನಡೆದ ಸನ್ಯಾಸಿನಿ ಪಡಸಾಲೆಯಲ್ಲಿ ನಿಂತು ಕಾಯತೊಡಗಿದಳು. ಮುತ್ತುಗಳನ್ನು ಕೋದು ಕಸೂತಿ ಹಾಕಿದ್ದ ನನ್ನ ಕೇಸರಿ ವರ್ಣದ ಬಟ್ಟೆಗಳನ್ನು ಕಳಚಿ ಸನ್ಯಾಸಿನಿಯರ ಗವಸುಗಳನ್ನು ತೊಟ್ಟುಕೊಂಡೆ. ಬಾಗಿಲ ಬಳಿಗೆ ಸರಿದು ನನ್ನ ಹಳೆಯ ದಿರಿಸುಗಳನ್ನು ಸನ್ಯಾಸಿನಿಗೆ ನೀಡಿದೆ. ಅವಳು ಕತ್ತಲಲ್ಲಿ ಕರಗಿ ಹೋದಳು. ಬಾಗಿಲು ಮುಚ್ಚಿದ ನಾನು ಮೂರ್ತಿಯ ಎದುರು ಮಂಡಿಯೂರಿದೆ.

ಇಷ್ಟಾಗುವಷ್ಟರಲ್ಲಿ ಫಾದರ್ ಗ್ರೆಗೊರಿ ಅರ್ಧ ಪ್ಯಾಕೇಟ್ ಸಿಗರೇಟು ಬೂದಿ ಮಾಡಿದ್ದ.

''ಮುಂದೇನಾಯಿತು...?'' ಆತ ಉದಾಸೀನದಿಂದಲೇ ಪ್ರಶ್ನಿಸಿದ.

''ಅವು ಕಷ್ಟದದಿನಗಳಾಗಿದ್ದವು; ಫಾದರ್, ಅರಬರು ಪ್ರಬಲ ಶಕ್ತಿಯಾಗಿದ್ದರು. ನಮ್ಮ ಚಕ್ರವರ್ತಿ ಹಿರಾಕ್ಲಿಯಸ್ ಅವರ ಜತೆ ಯುದ್ಧಕ್ಕೆ ತೊಡಗಿ ಮತ್ತೆ ಮತ್ತೆ ಸೋಲುತ್ತಿದ್ದ ಕೆಲವು ಧರ್ಮಬೀರು ಹಿರಿಯ ಸನ್ಯಾಸಿಗಳು, ದೇವನು ನಮ್ಮ ವಿರುದ್ಧ ಕೋಪಗೊಂಡಿದ್ದು ಶಿಕ್ಷೆಯ ರೂಪದಲ್ಲಿ ಅರಬರನ್ನು ಕಳುಹಿಸಿದ್ದಾನೆ ಎಂದು ಹೇಳತೊಡಗಿದ್ದರು. ಆದಾಗ್ಯೂ ನಾನು ಕಾನ್ವೆಂಟಿನಲ್ಲಿ ಬಹಳ ದಿನ ಉಳಿಯಲಿಲ್ಲ. ಕಾನ್ವೆಂಟಿಗೆ ಸೇರಿದ ಹೊಸದರಲ್ಲಿಯೇ ಅಲೆಮಾರಿ ಸನ್ಯಾಸಿಯೊಬ್ಬ ತಂದ ಸುದ್ದಿಯಂತೆ, ಅರಬರ ವಿರುದ್ಧ ಸಸ್ಸಾನಿಯನ್ ಚಕ್ರವರ್ತಿ ಸೈನ್ಯ ಕಳುಹಿಸಿದ್ದರಿಂದ, ಪರ್ಷಿಯನ್ ಸಾಮ್ರಾಜ್ಯವನ್ನೇ ಕೊನೆಗಾಣಿಸಿ ಅರಬರು ಸೇಡು ತೀರಿಸಿಕೊಂಡಿದ್ದರು. ಇರಾಣವು ಈಗ ಮುಸ್ಲಿಂ



ಸಂಸ್ಥಾನದ ಭಾಗವಾಗಿತ್ತು. ಅದೃಷ್ಟವಶಾತ್ ಟೆಸಿಫೋನ್ ಪತನಕ್ಕಿಂತ ಕೆಲವು ದಿನಗಳ ಮೊದಲು, ಬೈಜಾಂಟಿಯನ್ ರಾಜಧಾನಿಯನ್ನು ಕಾನ್‌ಸ್ಟಾಂಟಿನೋಪಲ್‌ಗೆ ಮರಳಿ ಕರೆಸಿಕೊಳ್ಳಲಾಗಿತ್ತು. ಇದೇ ಸಮಯದಲ್ಲಿ ಬೈಜಾಂಟಿಯನ್‌ರೂ ಈಜಿಪ್ಟ್ ಮತ್ತು ಸಿರಿಯಾವನ್ನು ಅರಬರಿಗೆ ಸೋತುಬಿಟ್ಟಿದ್ದರು. ನಾನು ಅಣ್ಣಂದಿರ ಬಗ್ಗೆ ಬಹಳ ವ್ಯಾಕುಲಳಾಗಿದ್ದೆ. ಖಲೀಫರ ವಿರುದ್ಧ ನಾವು ಹೋರಾಡುತ್ತಿದ್ದ ಯಾವುದೇ ಯುದ್ಧ ಭೂಮಿಗೂ ಅವರನ್ನು ಕಳುಹಿಸಬಹುದಿತ್ತು. ನಾನು ಸದಾಕಾಲ ಪ್ರಾರ್ಥಿಸುತ್ತಿದ್ದೆ. ಪ್ರಾರ್ಥನೆಯನ್ನು ಬಿಟ್ಟರೆ ಬೇರೇನೂ ಮಾಡುವುದಿರಲಿಲ್ಲ.

''ಅಚ್ಚರಿಯೆನಿಸುವಂತೆ ಸಿರಿಯಾದ ಹೊಸ ಸರಕಾರವು ನಮ್ಮನ್ನು ಬಹಳ ಕರುಣೆಯಿಂದಲೇ ನೋಡಿಕೊಂಡಿತು. ಸಂತ ಕ್ಯಾಥರೀನಾ ಮಠದ ಸನ್ಯಾಸಿಗಳಿಗೆ ಪ್ರವಾದಿಯು ನೀಡಿದ್ದ ರಕ್ಷಣಾಭರವಸೆಯ ವಚನವನ್ನು ನಾವು ಪಾಲಿಸುತ್ತಿದ್ದೇವೆ ಎಂದು ಅರಬರು ಮಾತನಾಡಿಕೊಳ್ಳುತ್ತಿರುವುದು ನಮ್ಮ ಕಿವಿಗೆ ಬಿದ್ದಿತ್ತು.

''ಮುಸ್ಸಂಜೆಯ ಹೊತ್ತು ದೀಪ ಉರಿಸಲೆಂದು ಸನ್ಯಾಸಿನಿಯೊಬ್ಬಳು ಗೋಪುರವೇರಿದಳು. ಲೆಬನಾನ್, ಪ್ಯಾಲೆಸ್ತೀನ್ ಅಥವಾ ಈಜಿಪ್ಟ್ ಕಡೆ ಹೋಗುತ್ತಿರುವ ಅರಬರ ಕಾರವಾನ್‌ಗಳನ್ನು ನಾವು ಆಗಾಗ್ಗೆ ಕಾಣುತ್ತಿದ್ದೆವು. ಒಂಟೆಗಳ ಗೆಜ್ಜೆಗಳು ಕಿಣಿಕಿಣಿಸುತ್ತಿರುವಾಗ ಕಾರವಾನಿನ ನಾಯಕರು ಕಂಚಿನ ಕಂಠದಿಂದ ಹಾಡುತ್ತಿದ್ದರು. ಸೂರ್ಯಾಸ್ತ ಸಮಯದಲ್ಲಿ ಪ್ರಯಾಣ ನಿಲ್ಲಿಸಿ ಮೆಕ್ಕಾದ ದಿಕ್ಕಿಗೆ ಮುಖ ಮಾಡಿ ಸಂಜೆಯ ಪ್ರಾರ್ಥನೆಯನ್ನು ಮಾಡುತ್ತಿದ್ದರು. ಕಾನ್ವೆಂಟಿನ ಮುಂದೆ ಸಾಗುತ್ತಿರುವಾಗ ನಮ್ಮೊಳ್ಳೊಬ್ಬರು ಗೋಪುರ ಹತ್ತಿ ಅವರ ದಾರಿಯನ್ನು ಬೆಳಗಲು ಕಂದೀಲು ತೋರಿಸುತ್ತಿದ್ದರು. ''ಅಲ್ಲಾಹುವಿನ ಅಂಶವಾದ ಪ್ರವಾದಿ ಈಸಾನ ಹಿಂಬಾಲಕರೇ, ದೇವರು ನಿಮ್ಮನ್ನು ಆಶೀರ್ವದಿಸಲಿ'' ಎಂದು ಅವರು ಗಟ್ಟಿಯಾಗಿ ಹೇಳುತ್ತಿದ್ದರು. ಅವರ ಕಾರವಾನ್ ಮಂಜಿನಲ್ಲಿ ಕರಗಿ ಹೋಗುವವರೆಗೂ ನಾವು ಕಂದೀಲನ್ನು ಎತ್ತಿ ಹಿಡಿಯುತ್ತಿದ್ದೆವು.

''ಜೆರುಸಲೇಮ್ ಮತ್ತು ಡಮಾಸ್ಕಸ್‌ನ ಸಿರಿವಂತ ಕಿರಿಸ್ತಾನ ಮಹಿಳೆಯರು ಕಾನ್ವೆಂಟಿಗೆ ಬರುತ್ತಿದ್ದು, ನಮ್ಮ ಚರ್ಚಿನ ಹಿಂಭಾಗದಲ್ಲಿ ದಫನ ಮಾಡಿರುವ ಸಂತ ಸೈಮನ್ನನ ಗೋರಿಯ ಮೇಲೆ ಬೆಲೆಯುಳ್ಳ ಕಸೂತಿ ವಸ್ತ್ರಗಳನ್ನು ಹಾಸುತ್ತಿದ್ದರು. ಅವರ ಚಂದ ಚಂದದ ಉಡುಪುಗಳನ್ನು ಕಂಡಾಗಲೆಲ್ಲ ನನಗೆ ಹೊಟ್ಟೆಯುರಿಯುತ್ತಿತ್ತು.

''ಒಂದು ಮುಂಜಾನೆಯ ಎಳೆ ಬಿಸಿಲಿಗೆ, ಪಾರಿವಾಳಗಳಿಗೆ ಕಾಳು ಹಾಕಲೆಂದು ನಾನು ಮೇಲ್ಚಾವಣಿಯೇರಿದ್ದೆ. ಬೆಟ್ಟದ ಮೇಲಕ್ಕೆ ಕಾರವಾನವೊಂದು ಬರುತ್ತಲಿತ್ತು. ಬಿಳಿಯ ಕುದುರೆಯೇರಿದ್ದ ಸುಂದರ ತರುಣಿಯೊಬ್ಬಳು ಕಾರವಾನನ್ನು ಮುನ್ನಡೆಸುತ್ತಿದ್ದು ಎಡಗೈಯಲ್ಲಿ ಸಂತ ಜಾರ್ಜ್‌ನ ಧ್ವಜ ಹಿಡಿದಿದ್ದಳು. ಡಮಾಸ್ಕಸ್ ಸರಕಾರದ ಇಬ್ಬರು ತರುಣ ಅಧಿಕಾರಿಗಳು ಅವಳ ಜತೆಗಿದ್ದರು. ದೊಡ್ಡ ಪರಿವಾರವೊಂದು ಕುದುರೆ ಹಾಗೂ ಒಂಟೆಗಳ ಮೇಲೆ ಹಿಂಬಾಲಿಸುತ್ತಿತ್ತು. ಆಕೆಯೇ ಜಾರ್ಜಿಯಾದ ರಾಜಕುವರಿ ಕಾತಿಂಕ ತಿನಾತಿನ್.

''ನಾನು ಅವಳ ಹೆಸರೆತ್ತಿದ ಕೂಡಲೇ, ಗಾಬರಿಗೊಂಡವನಂತೆ ಫಾದರ್ ಗ್ರೆಗೊರಿ ಬೇಗ ಬೇಗ ಬಾಗಿಲು ಹಾಕಿದ. ನಾನು ಮುಂದುವರಿಸಿದೆ, ''ಸಂತ ಸೈಮನ್ನನ ಸಮಾಧಿ ಪ್ರಾರ್ಥನೆಗೆಂದು ಅವಳು ಅಷ್ಟು ದೂರದ ಜಾರ್ಜಿಯಾದಿಂದ ಬಂದಿದ್ದಳು. ಆಕೆಯ ಬೆಂಗಾವಲಿಗೆ ಡಮಾಸ್ಕಸ್‌ನಿಂದ ಖಲೀಫರ ಅಧಿಕಾರಿಗಳು ಬಂದಿದ್ದರು. ಎತ್ತರದ ನಿಲುವಿನ ಈ ಸುಂದರ ಸ್ತ್ರೀಗೆ ಗಂಡಸರ ಸಂಗ ಹೆಚ್ಚು ಪ್ರಿಯವಾಗುತ್ತಿದ್ದಿರಬೇಕು; ಗೇಟಿನ ಒಳಗೆ ಕಾಯುತ್ತಿದ್ದ ನಾವು ಸುಸ್ತಾಗುವಷ್ಟು ಹೊತ್ತು ಅವಳ

ಅರಬ ಅಧಿಕಾರಿಗಳ ಜತೆ ಲಲ್ಲೆ ಹೊಡೆಯುತ್ತಿದ್ದಳು.

''ಆ ರಾಜಕುಮಾರಿ ಒಂದೆರಡು ತಿಂಗಳು ನಮ್ಮ ಜತೆಗಿದ್ದಳು. ಒಂದು ಪೆಟಾರಿ ತುಂಬ ಬಂಗಾರದ ನಾಣ್ಯಗಳನ್ನು ಕಾನ್ವೆಂಟಿಗೆ ಉಡುಗೊರೆ ನೀಡಿದ ಅವಳು, ರತ್ನಖಚಿತ ಮಕಮಲ್ಲಿನ ವಸ್ತ್ರವನ್ನು ಸಂತನ ಗೋರಿಗೆ ಹಾಸಿದಳು. ತನ್ನ ರಾಜ್ಯಕ್ಕೆ ಮರಳುವ ಮೊದಲು, ತನ್ನ ಕಾಕಾಸಸ್ ಎಸ್ಟೇಟಿನಲ್ಲಿ ನಿರ್ಮಿಸಲಾದ ಕಾನ್ವೆಂಟಿನ ಉಸ್ತುವಾರಿ ನಡೆಸಲು ಮೂವರು ಅನುಭವಸ್ಥ ಸನ್ಯಾಸಿಯರನ್ನು ಕಳುಹಿಸಿಕೊಡುವಂತೆ ಮೇಲುಸ್ತುವಾರಿಣಿಯನ್ನು ವಿನಂತಿಸಿದಳು. ಜಾರ್ಜಿಯಾದ ರಾಜಕುಮಾರಿಯ ಜತೆ ಹೊರಡಲು ನನಗೆ ಹಾಗೂ ಮತ್ತಿಬ್ಬರು ಹುಡುಗಿಯರಿಗೆ ಮೇಲುಸ್ತುವಾರಿಣಿ ಆದೇಶ ನೀಡಿದಳು. ಕಾಪ್ಟಿಕ್‌ನ ಒಬ್ಬಾಕೆಗೆ ಶೀತಹವೆಯ ಅಭ್ಯಾಸವಿದ್ದಿರಲಿಲ್ಲ. ಅನಾತೋಲಿಯಾದ ಮಂಜು ಮುಸುಕಿದ ಬೆಟ್ಟಗಳನ್ನು ದಾಟುವಾಗ ಅವಳು ನ್ಯುಮೋನಿಯಾದಿಂದ ಸತ್ತಳು. ಮೂರನೆಯ ಗ್ರೀಕ್ ಹುಡುಗಿ ಒತ್ತಾಯಕ್ಕೆ ಸನ್ಯಾಸಿನಿಯಾದವಳು. ನಾವು ಟ್ರಾಬಿಜಾನ್ ತಲುಪಿದಾಗ ಕಾರ್‌ವಾನ್ ಬಿಟ್ಟು ಗ್ರೀಕ್ ವ್ಯಾಪಾರಿಯೊಬ್ಬನ ಜತೆಗೆ ಓಡಿಬಿಟ್ಟಳು. ನಮಗೆ ಗೊತ್ತಾದದ್ದು ಅಷ್ಟು, ದೇವರಿಗೇ ಚೆನ್ನಾಗಿ ಗೊತ್ತು. ನಾವಿಲ್ಲಿಗೆ ತಲುಪಿದಾಗ ಕಾನ್ವೆಂಟ್ ನಿರ್ಮಾಣದ ಹಂತದಲ್ಲಿತ್ತು. ನಮ್ಮನ್ನು ಇಲ್ಲಿಗೆ ತಂದು ಬಿಟ್ಟ ರಾಜಕುಮಾರಿ ತನ್ನ ಮಾಮೂಲು ವಾಸಸ್ಥಾನವಾಗಿದ್ದ ತಬ್ಲಿಸ್‌ಗೆ ಹೋದಳು. ಧಾರ್ಮಿಕ ಕೂಟಗಳನ್ನು ನೆರವೇರಿಸುತ್ತಾ ಮಠದ ಉದ್ಯಾನವನ ಹಾಗೂ ದ್ರಾಕ್ಷಿ ತೋಟಗಳ ಉಸ್ತುವಾರಿ ವಹಿಸಿದೆ. ಇದು ಅದೇ ಜಾಗ. ನನಗೆ ಮನೆಯ ನೆನಪಾಗುತ್ತಿದ್ದ ಸದಾಕಾಲ ಅವರಿಗಾಗಿ ಪ್ರಾರ್ಥಿಸುತ್ತಿದ್ದೆ.

''ಒಂದು ದಿನ ಈ ಕರಾವಳಿಯ ಹಳ್ಳಿಗೆ ಭೇಟಿಯಿತ್ತ ಕೆಲವು ಗ್ರೀಕ್ ವರ್ತಕರು ನಮ್ಮ ಕಾನ್ವೆಂಟಿಗೆ ಬಂದರು. ನಾನು ಯಾರೆಂದು ಅವರಿಗೆ ಗೊತ್ತಿರಲು ಸಾಧ್ಯವಿಲ್ಲ. ಎರಡನೆಯ ಕಾನ್‌ಸ್ಟಾಂಟಿನ್ ತನ್ನ ಪುತ್ರ ಥಿಯೋಡೊರಿಕ್‌ನಿಂದ ಕೊಲೆಯಾದ ಎಂದವರು ತಿಳಿಸಿದರು. ಆತನ ಮಗ ಕಾನ್‌ಸ್ಟಾಂಟಿನ್ ಇಗ್ನೇಷಿಯಸ್ ತನ್ನ ಸಹೋದರರಾದ ಹಿರಾಕ್ಲಿಯಸ್ ಮತ್ತು ಲೆಬರಿಯಸ್‌ರ ಮೂಗುಗಳನ್ನು ಕತ್ತರಿಸಿದ್ದ. ನೂರಾರು ಪುರೋಹಿತರು ಶಿಲುಬೆಗೇರಿಸಲ್ಪಟ್ಟಿದ್ದರು. ನನ್ನ ತಂದೆಯಾದ ಲಾರ್ಡ್ ಸ್ಟೀಫನ್ ಹೊಮೊರಿಯಸ್ ಮತ್ತು ಅಣ್ಣಂದಿರು ಆ ಬಳಿಕ ನಡೆದ ಸಾಮೂಹಿಕ ಕಗ್ಗೊಲೆಯಲ್ಲಿ ತೀರಿಕೊಂಡಿದ್ದರು.

''ಆ ರಾತ್ರಿ ನನ್ನ ಕೊಠಡಿಯಲ್ಲಿ ನಾನು ಕಣ್ಣು ಕರಗುವಷ್ಟು ಅತ್ತೆ. ಸೂರ್ಯ ಹುಟ್ಟುವ ಮುನ್ನವೇ ಮುಖವನ್ನು ಬರ್ಫದ ನೀರಿನಲ್ಲಿ ತೊಳೆದುಕೊಂಡು ಪ್ರಾರ್ಥನಾ ಮಂದಿರಕ್ಕೆ ಹೋದೆ. ಕಾನ್ವೆಂಟಿನ ಉದ್ಯಾನವನದ ಉಸ್ತುವಾರಿ ನಡೆಸುತ್ತಿದ್ದವಳು ನಾನು. ಆದರೆ ಆ ದಿನದಿಂದ ಹೂ ಮರ-ಬಳ್ಳಿ, ಹಕ್ಕಿ, ಚಿಟ್ಟೆ ಹೀಗೆ ಪ್ರಕೃತಿಯ ಎಲ್ಲ ಸುಂದರ ಸಂಗತಿಗಳ ಬಗ್ಗೆಯೂ ಅನಾಸಕ್ತ. ಯಾಕೆಂದರೆ, ಅವು ಕಣ್ಣಿಗೆ ಹಿತವನ್ನೂ ಮನಸ್ಸಿಗೆ ಮುದವನ್ನೂ ಉಂಟುಮಾಡುತ್ತಿದ್ದವು. ದುಃಖಿಸುವುದಷ್ಟೇ ನನ್ನ ಹಣೆಬರಹವಾಗಿತ್ತು. ಗಂಟೆಗಟ್ಟಲೆ ನೆಲದ ಮೇಲೆ ಸಾಷ್ಟಾಂಗ ಬಿದ್ದುಕೊಳ್ಳುತ್ತಿದ್ದೆ. ನಿರಂತರ ಉಪವಾಸ ಮಾಡುತ್ತಲಿದ್ದೆ. ದೊರಗು ಬಟ್ಟೆ ಧರಿಸುತ್ತಿದ್ದೆ. ನನ್ನನ್ನೇ ಹಿಂಸಿಸುತ್ತಿದ್ದೆ. ತಂದೆಯೇ, ನಾವು ಗ್ರೀಕರು ಹುಟ್ಟುಹಾಕಿದ್ದ ವಿರೇಚನ ಸಿದ್ಧಾಂತ ಬರಿಯ ಲೊಳಲೊಟ್ಟೆಯಾಗಿತ್ತು. ನನ್ನ ಒರಟು ಭಾಷೆಗೆ ಕ್ಷಮೆಯಿರಲಿ. ಯಾತನೆ ಸತತ ಮತ್ತು ಅನಂತ.

ನನ್ನ ದೈವಭಕ್ತಿ, ದೈನ್ಯ ಮತ್ತು ಒಳ್ಳೆಯತನಗಳು ಕಾಕಸಿಯದ ತುಂಬೆಲ್ಲ ದಂತಕತೆಗಳಾಗಿಬಿಟ್ಟವು. ಕೆಲವು ರೋಗಿಗಳಿಗೆ ನನ್ನ ಆಶೀರ್ವಾದ ಪಡೆಯಲು ಜನರು ಕಾನ್ವೆಂಟಿಗೆ ಮುಗಿಬೀಳಲಾರಂಭಿಸಿದ್ದರು. ಕೆಲವು ರೋಗಿಗಳಿಗೆ ಅದು ಹೇಗೋ ಗುಣವಾಗಿಬಿಟ್ಟಿತ್ತು. ನನಗೇ ದಿಗ್ಭ್ರಮೆಯಾಗಿತ್ತು. ಆ ಬಳಿಕ ದಿನವೆಲ್ಲ ದುಃಖಿಗಳು,

ರೋಗಿಗಳು, ಹಲವರು ಎಲ್ಲರೂ ಬೆಟ್ಟವೇರಿ ಬಂದು ತಮ್ಮ ಪರವಾಗಿ ಪ್ರಾರ್ಥಿಸಲು ಮೊರೆಯಿಡುತ್ತಿದ್ದರು. ಒಂದು ದಿನ ತೀವ್ರವಾದ ಅಂಟುರೋಗದಿಂದ ನರಳುತ್ತಿದ್ದ ಭಿಕ್ಷುಕನೊಬ್ಬ ಮಠಕ್ಕೆ ಬಂದ. ನಾನು ಕರ್ತವ್ಯನಿಷ್ಠೆಯಿಂದ ಆತನ ಆರೈಕೆ ಮಾಡಿದೆ. ಅವನು ಗುಣವಾದ. ಅವನ ರೋಗ ತಗುಲಿಸಿಕೊಂಡ ನಾನು ಸತ್ತುಹೋದೆ. ನನಗೆ ಸಾಯುವಾಗ ನಲವತ್ತೈದು ಸಮೀಪಿಸುತ್ತಿತ್ತು. ನನ್ನ ಶವಸಂಪುಟವನ್ನು ಕಾನ್ವೆಂಟಿನ ನೆಲಗವಿಯಲ್ಲಿರಿಸಿದ್ದರು''.

''ನೀನಾಗ ಚಂದ ಇದ್ದೆಯೋ?'' ಫಾದರ್ ಪ್ರಶ್ನಿಸಿದ್ದ.

''ತುಂಬ.''

''ನಾನೂ ಕೂಡಾ'' ಅವನು ಹೇಳಿದ.

ಓ ಕರುಣಾಳು ದೇವನೇ. ಕ್ಷಮಿಸು. ಆ ಕ್ಷಣದಲ್ಲಿ ನಾನು ಬಯಸಿದ್ದೂ...., ಆತ ತಬ್ಲಿಸ್‌ನ ಡ್ಯೂಕನ ಚಿರುಯವ್ವನದ ಸುಪುತ್ರನಾಗಿ ಬದುಕುತ್ತಿದ್ದಾಗ, ನಾನು ಇರಾಣದ ಬೈಜಾಂಟಿಯನ್ ರಾಯಭಾರಿಯ ಮೋಜುಪ್ರಿಯ ಸುಪುತ್ರಿಯಾಗಿದ್ದರೆ...., ಆತನನ್ನು ಭೇಟಿಯಾಗಿದ್ದರೆ...., ಆದರೆ ದೇವನೇ...., ನಿನಗೆ ಗೊತ್ತು ನಿನ್ನ ಸೃಷ್ಟಿಗೆ ಯಾವುದು ಉತ್ತಮವೆಂದು.

ನಾನು ಮತ್ತೆ ವಿವರಿಸಲಾರಂಭಿಸಿದೆ.

''ನನ್ನ ಮರಣದ ಬಳಿಕ ಬೆಟ್ಟ ಯಾತ್ರಾಸ್ಥಳವಾಯಿತು. ಕೆಲವು ಪವಾಡಗಳೂ ಸುದ್ದಿ ಮಾಡಿದವು. ಶತಮಾನಗಳೇ ಕಳೆದುಹೋದವು. ಕೊನೆಗೆ 1873ರಲ್ಲಿ ಸಂತ ಪಟ್ಟಕ್ಕೆ, ಅಗತ್ಯದ ಶೋಧನೆಗಳ ನಂತರ ನನ್ನ ಹೆಸರನ್ನು ರಷ್ಯದ ಧಾರ್ಮಿಕ ಕ್ಯಾಲೆಂಡರಿನಲ್ಲಿ ಸೇರ್ಪಡೆಗೊಳಿಸಬಹುದೆಂದು ನಿರ್ಧರಿಸಲಾಯಿತು. ಪ್ರಕರಣವನ್ನು ಮಾಸ್ಕೋದ ಕುಲಪತಿಗೆ ರವಾನಿಸಿದ ಬಳಿಕ ವಿಚಾರಣೆ ಆರಂಭವಾಯಿತು. 1921ರ ನವಂಬರ 25ರಂದು ನನ್ನನ್ನು ಜಾರ್ಜಿಯಾದ ಸಂತ ಸಬೀನಾ ಎಂದು ಘೋಷಿಸುವರಿದ್ದರು, ಆದರೆ ಅದಕ್ಕಿಂತ ಒಂದು ವಾರದ ಹಿಂದೆ ಕೆಂಪು ಸೇನೆ ಕಾನ್ವೆಂಟನ್ನು ಮುಚ್ಚಿಬಿಟ್ಟಿತು.

''ಆದ್ದರಿಂದ ಅಧಿಕೃತವಾಗಿ ನಾನು ಸಂತ ಫ್ಲೋರಾ ಅಲ್ಲ. ಅದನ್ನು ಬಿಟ್ಟರೆ ಬಹುಶಃ ನಾನು ಹೌದು. ದೇವರಿಗೆ ಚೆನ್ನಾಗಿ ಗೊತ್ತು. ಈಗ ಹೇಳು ಫಾದರ್, ನೀನೇಕೆ ಸನ್ಯಾಸಿಯಾದೆ? ಈ ಜಗತ್ತು ಗಂಡಸರಿಗಾಗಿ ಮಾಡಿದ್ದು. ಅವರೇಕೆ ಅದನ್ನು ತೊರೆಯಬೇಕು? ಮತ್ತೆ ಅದೇ ಹಳೆಯ ಕತೆ - ವಿಫಲ ಪ್ರೇಮವೋ?''

ಫಾದರ್ ಗ್ರೆಗೊರಿ ಮೌನವಾಗಿಯೇ ಇದ್ದ. ಓ ಕರುಣಾಳು ದೇವನೇ ಹೆಂಗಸರು ಪ್ರೇಮದ ಬಗ್ಗೆ ನಡೆಸುವ ಕಾಡುಹರಟೆಯು ಶತಮಾನಗಳಷ್ಟು ದೀರ್ಘವಾದ ಸಾವಿನ ನಿದ್ರೆಯ ಬಳಿಕವೂ ಏನೇನೂ ಬದಲಾಗದೆ ಉಳಿಯಬಲ್ಲದು ಎಂಬುದನ್ನು ನಾನು ಒಪ್ಪುವೆ. ಭಯಂಕರ ಕುತೂಹಲದಿಂದ ನಾನು ಪ್ರಶ್ನಿಸಿದ್ದೆ, ''ರಾಜಕುಮಾರಿ ಕಾತಿಂಕ ತಿನಾತಿನ್ ತಾನ ನಿನ್ನ ಮನ ಕಲಕಿದವಳು? ಅವಳೊಬ್ಬ ಸುಪ್ರಸಿದ್ಧ ಚೆಲ್ವು ಹುಡುಗಿ. ಬಡಪಾಯಿ.''

''ಮಾತೆ ಫ್ಲೋರಾ ಸಬೀನಾ, ನೀನೇಕೆ ಹಳೆಯ ಗೋರಿಯನ್ನು ಮತ್ತೆ ಕೆದಕುತ್ತೀಯಾ?'' ಆತ ಹರಿತವಾಗಿಯೇ ಪ್ರಶ್ನಿಸಿದ್ದ.

ಹ ಹ್ಹ ಹ್ಹಾ.... ನಾನು ಆತನ ಹಾಸ್ಯಪ್ರಜ್ಞೆಯನ್ನು ಮೆಚ್ಚಿದೆ. ನಿಜವಾಗಿ ಅದು ವಿಕೃತ ಹಾಸ್ಯ. ನಸುನಗುತ್ತಾ ಕಂಪಿಸುತ್ತಾ ಆತ ಮತ್ತೊಂದು ಸಿಗರೇಟು ಹಚ್ಚಿದ. ನಾನು ಹೇಳಿದೆ, ''ಫಾದರ್, ಅತಿಯಾಗಿ ಸಿಗರೇಟು ಸೇದುವುದು ಆರೋಗ್ಯಕ್ಕೆ ಹಾನಿಕರ.'' ಇದು ಕೂಡಾ ವಿಕೃತ ಹಾಸ್ಯವೆಂದು ನನಗೆ ಹೊಳೆದಿತ್ತು.

''ಇರಲಿ ಬಿಡು.'' ಫಾದರ್ ಶುಷ್ಕವಾಗಿ ಹೇಳಿದ, ''ಜಾರ್ಜಿಯಾವನ್ನು ಮುಸ್ಲಿಮರು ಗೆದ್ದ
ಕೂಡಲೇ, ನಿನ್ನ ಧರ್ಮಭೀರು, ದೇವಭೀರು ಹೆದರುವ ರಾಜಕುಮಾರಿ ಕಾತಿಂಕ ತಿನಾತಿನಳು ತಬ್ಲಿಸ್
ಕೋಟೆಯ ಜನರಲ್ಲನನ್ನು ಮದುವೆಯಾಗಿಬಿಟ್ಟಳು.''

''ಅಯ್ಯೋ ದೇವರೆ'' ನಾನು ಭಯದಿಂದ ಉದ್ಗರಿಸಿದೆ.

''ಇದೆಲ್ಲ ನಿನ್ನ ಪವಿತ್ರ ಮರಣದ ಬಳಿಕ ನಡೆದುದೆಂಬುದು ಸ್ಪಷ್ಟ'' ಎಂದ ಫಾದರ್
ವ್ಯಂಗ್ಯವಾಗಿಯೇ ಮುಂದುವರಿಸಿದ, ''ನಾನು ಹಿರಿಯ ಡ್ಯೂಕನೊಬ್ಬನ ಪುತ್ರ ನಿಜ, ಆದರೆ ಅರಬ್ಬರ
ಪ್ರಭುತ್ವದ ಬಳಿಕ ನಾನು ಅನಾಮಿಕ. ಅದಕ್ಕಿಂತ ಹಿಂದೆಯೂ ನಾನು ಡ್ಯೂಕತನದ ವಹಿವಾಟುಗಳನ್ನು
ಗಣ್ಯ ಮಾಡಿರಲಿಲ್ಲ. ನಾನಂದು, ಇಂದು ಯಾರನ್ನು ಬುದ್ಧಿಜೀವಿಯೆಂದು ಕರೆಯುತ್ತಾರೋ ಅಂತಹ
ವ್ಯಕ್ತಿಯಾಗಿದ್ದೆ. ತಬ್ಲಿಸ್‌ನ ಸನ್ಯಾಸಿ ಮಠದ 'ಬರವಣಿಗೆ ಕೋಣೆ'ಯಲ್ಲಿ ಸಮಯ ಕಳೆಯುತ್ತಲಿದ್ದ
ನನಗೆ, ರಾಜ್ಯದ ವ್ಯವಹಾರಗಳಲ್ಲಾಗಲೀ ಯುದ್ಧಗಳಲ್ಲಾಗಲೀ ಆಸಕ್ತಿಯಿದ್ದಿರಲಿಲ್ಲ. ಗಾಳಿ ಎತ್ತಕಡೆಗಿ
ತ್ತೆಂದು ರಾಜಕುಮಾರಿಗೆ ಗೊತ್ತಿತ್ತು. ಕಾಲವು ಅರಬರೊಂದಿಗೆ ಸಹಕರಿಸುತ್ತಿತ್ತು. ಕಾತಿಂಕಳಂತೂ
ಜಾಣ ರಾಜಕಾರಿಣಿ. ಆಕೆ ಅವಿಶ್ವಾಸಿಯೊಬ್ಬನನ್ನು ಮದುವೆಯಾದ ಸುದ್ದಿ ಕೇಳಿ ನನಗೆ ತೀವ್ರ
ಆಘಾತವಾಯಿತು. ನಾನು ನನಗೇ ಸಮಾಧಾನಪಡಿಸಿಕೊಂಡೆ; ಗ್ರೆಗೊರಿ ಒರ್‌ಬಿಲಿಯಾನಿ, ಹೆಂಗಸರ
ಬಗ್ಗೆ ತಲೆಕೆಡಿಸಿಕೊಳ್ಳುವುದು ವ್ಯರ್ಥ. ಹುಡುಗಿಯರಿಗೇನೂ ಬರವಿಲ್ಲ. ಅವರಲ್ಲಿ ಹಲವರು
ಮುದ್ದಾಗಿ ಒಪ್ಪುವಂತಿದ್ದಾರೆ. ಹಾಗೆ, ನಾನು ಓದಿನಲ್ಲೇ ಮುಳುಗಿದೆ. ಮಠದ ಓದುವ ಕೋಣೆಯಲ್ಲಿ
ಪೂರ್ಣಾವಧಿ ಸಂಶೋಧನಾ ವಿದ್ಯಾರ್ಥಿಯಾಗಬೇಕಿದ್ದರೆ ಒಬ್ಬಾತ ನಿಯಮಕ್ಕೆ ಬದ್ಧನಾಗಲೇಬೇಕಿತ್ತು.
ಹಾಗೆ ನಾನು ಸನ್ಯಾಸಿಯಾದೆ; ಅಷ್ಟೆ. ಕೆಲವು ತಿಂಗಳ ಬಳಿಕ ಕಾರ್ತಾಜೆಗೆ ಹೋದ ನಾನು, ಸಂತ
ಅಗಸ್ಟಿನ್ ಕಲಿತಿದ್ದ ಶಾಲೆಯನ್ನು ಸಂದರ್ಶಿಸಿದೆ. ಅಲ್ಲಿಂದ ಮುಂದೆ ರೋಮ್, ಅಥೆನ್ಸ್,
ಕಾನ್‌ಸ್ಟಾಂಟಿನೋಪಲ್‌ಗೆ..... ಇಲ್ಲ, ನನ್ನ ಪ್ರಯಾಣದ ನಡುವೆ ನಾನೆಂದೂ ನಿನ್ನ ಥಿಯೋಡೋರಿಕ್
ನನ್ನು ಭೇಟಿಯಾಗಲಿಲ್ಲ. ಅವನೆಲ್ಲೋ ಬ್ರಿಟನ್ನಿನ ಬೆಂಗಾಡಿನಲ್ಲಿ ನಾಶವಾಗಿದ್ದಿರಬೇಕು.''

''ದೇವರು ಕ್ಷಮಿಸಲಿ!'' ನಾನು ಹೇಳಿದ್ದೆ. ಫಾದರ್ ಗ್ರೆಗೊರಿ ನಗಲು ಪ್ರಾರಂಭಿಸಿದ್ದ. ಬಳಿಕ
ಆತ ಹೇಳತೊಡಗಿದ, ''ಟ್ರಾಬಿಜಾನ್‌ನಿಂದ ಕಡಲುದಾರಿಯಾಗಿ ಜಾರ್ಜಿಯಾಕ್ಕೆ ಮರಳಿದೆ. ಇಲ್ಲ,
ನಾನೆಂದೂ ರಾಜಕುವರಿ ಕಾತಿಂಕಳ ಕಾನ್ವೆಂಟಿಗೆ ಭೇಟಿ ನೀಡಲಿಲ್ಲ. ನಿನಗೆ ನದಿಯಾಚೆಯ ನೀಲಬೆಟ್ಟ
ಕಾಣಿಸುತ್ತಿದೆ ತಾನೆ? ಅದರ ಇಳಿಜಾರಲ್ಲೊಂದು ಸನ್ಯಾಸಿಮಠ ಇತ್ತು. ಕೆಲವು ತರುಣ ಸನ್ಯಾಸಿಗಳು
ಗವಿಗಳಲ್ಲೂ ವಾಸಿಸುತ್ತಿದ್ದರು. ಅಲ್ಲಿಗೆ ಹೋದೆ. ನಾನು ಗವಿಯೊಂದನ್ನು ಹುಡುಕಿ ಸೋದರ
ವರ್ಗವನ್ನು ಸೇರಿಕೊಂಡೆ. ನಮ್ಮಲ್ಲಿ ಬಹಳಷ್ಟು ಮಂದಿ ವಿದ್ವಾಂಸರಿದ್ದರು. ರಾತ್ರಿಯ ಹೊತ್ತು
ಹಜಾರದಲ್ಲಿ ಸೇರುತ್ತಿದ್ದ ನಾವು ಶೈಕ್ಷಣಿಕ ಸಂಗತಿಗಳ ಬಗ್ಗೆ, ಸಿದ್ಧಾಂತಗಳ ಬಗ್ಗೆ ಪ್ರಶ್ನಿಸುತ್ತಾ
ಚರ್ಚಿಸುತ್ತಿದ್ದೆವು. ಕೆಲವೊಮ್ಮೆ ಟ್ರಾನ್ಸ್ ಆಕ್ಸಿಯಾನಾ ಕಡೆಯಿಂದ ಅಲೆಮಾರಿ ನೆಸ್ಟೋರಿಯನ್
ಪಂಗಡದ ಸನ್ಯಾಸಿ ಬಂದನೆಂದರೆ, ನಾವು ಆತನನ್ನು ಕ್ರಿಸ್ತನ ಸ್ವರೂಪದ ಬಗ್ಗೆ ಪ್ರಶ್ನಿಸಿ ಕೆಣಕುತ್ತಿದ್ದೆವು.
ಆತ ಉತ್ತರಿಸುತ್ತಿದ್ದ. 'ಕನ್ಯೆಮೇರಿ ದೇವರ ತಾಯಿಯಲ್ಲ, ಕ್ರಿಸ್ತನ ತಾಯಿ.' ನಾವು ಮರು ಪ್ರಶ್ನೆ
ಎಸೆಯುತ್ತಿದ್ದೆವು. 'ಅದನ್ನು ಹೇಗೆ ತಾನೆ ಸಮರ್ಥಿಸುತ್ತೀಯೋ?' ಅವನು ಹೇಳುತ್ತಿದ್ದ. 'ನಿಮ್ಮ
ದೃಷ್ಟಿಕೋನವನ್ನು ಹೇಗೆ ಸಾಧಿಸುತ್ತೀರಿ?' ಒಂದು ವೇಳೆ ಡಮಾಸ್ಕಸ್‌ನಿಂದ ಸಿರಿಯನ್ ಪುರೋಹಿತ
ಬಂದನೆಂದರೆ, ಆತ ನಮ್ಮನ್ನು ಪ್ರಕೃತಿವಾದೀ ಸಿದ್ಧಾಂತಕ್ಕೆ ಒಲಿಯುವಂತೆ ಪ್ರಯತ್ನಪಡುತ್ತಿದ್ದ.
ನಾವು ಪ್ರತಿಭಟಿಸುತ್ತಿದ್ದೆವು. ಈ ಕಚ್ಚಾಟಗಳಿಂದಾಗಿ ಕೆಲವು ಸೋದರರು ಅದೆಷ್ಟು ರೋಸಿಹೋಗುತ್ತಿ

ದ್ದರೆಂದರೆ, ಅವರು ತಬ್ಲಿಸ್‌ಗೆ ಇಳಿದು ಹೋಗಿ ಇಸ್ಲಾಂಗೆ ಮತಾಂತರವಾಗುತ್ತಿದ್ದರು.''

''ಅದೇನಿದ್ದರೂ ಆ ಮಠದಲ್ಲಿ ಪುಸ್ತಕ ಹಾಗೂ ನನ್ನ ಬುದ್ಧಿಜೀವಿ ಹವ್ಯಾಸಗಳೊಂದಿಗೆ ಸುಖವಾಗಿಯೇ ಇದ್ದೆ. ಕ್ರಿಸ್‌ಮಸ್‌ನ ಮುನ್ನಾದಿನ ಎಂದಿನಂದೆ ಕಟ್ಟಿಗೆ ತರಲು ಕಾಡಿಗೆ ಹೋದೆ. ಮಂಜು ಕವಿದ ಬೆಟ್ಟ ಮರಗಳು ಬೆಳ್ಳಗೆ ಕಾಣಿಸುತ್ತಿದ್ದವು. ನಾನು ಜಾರ್ಜಿಯಾದ ಕೊಂಟಾಕಿಯಾ ಹಾಡನ್ನು ಗುಣುಗುಣಿಸುತ್ತಿದ್ದೆ. ಇಗರ್ಜಿಯ ಗಂಟೆ ಕೇಳಿಸುತ್ತಿತ್ತು. ಇಲಿ ಮತ್ತು ಅಳಿಲುಗಳು ನನ್ನ ಸುತ್ತ ಸುಳಿದಾಡುತ್ತಿದ್ದವು. ಕೊಡಲಿ ನನ್ನ ಬಲಗಾಲ ಮೇಲೆ ಜಾರಿಬಿದ್ದು ಆಳವಾದ ಗಾಯವಾಯಿತು. ಮಂಜಿನಿಂದ ತೊಳೆದು, ಕೆಲವು ಹಸಿರೆಲೆಗಳಿಂದ ಗಾಯವನ್ನು ಬಿಗಿದು ಕಟ್ಟಿಗೆ ಹೊರೆಯೊಂದಿಗೆ ಮಠಕ್ಕೆ ಮರಳಿದೆ. ಆ ಬಳಿಕ ನಾನು ಕ್ರಿಸ್‌ಮಸ್ ತಯಾರಿಯಲ್ಲಿ ಮುಳುಗಿಬಿಟ್ಟೆ. ರಾತ್ರಿ ಗವಿಯಲ್ಲಿ ನಿದ್ರಿಸುವ ಮುನ್ನ ಮೇಣದ ಬತ್ತಿ ಉರಿಸಿ ಪುಸ್ತಕವೊಂದನ್ನು ಎತ್ತಿಕೊಂಡೆ. ಎಂದಿನಂತೆ ಒಂದಿಷ್ಟು ಕಣ್ಣಾಡಿಸಿ ನಿದ್ರಿಸಿದೆ. ಬೆಳಗಾಗುವಷ್ಟರಲ್ಲಿ, ಈಗೆಲ್ಲ ಧನುರ್ವಾತ ಎಂದು ಕರೆಯಲಾಗುವ ರೋಗ ತಗುಲಿ ನಾನು ಸತ್ತುಹೋಗಿದ್ದೆ. ನನಗಾಗ ಐವತ್ತನಾಲ್ಕು. ನನ್ನ ಶವಸಂಪುಟವನ್ನು ಈ ನೆಲಗವಿಗೆ ಯಾವಾಗ ಮತ್ತು ಯಾಕೆ ವರ್ಗಾಯಿಸಿದರೆಂದೇ ಹೊಳೆಯುತ್ತಿಲ್ಲ.''

ಪಶ್ಚಾತ್ತಾಪಗೊಂಡ ರಾಜಕುಮಾರಿ ಕಾತಿಂಕಳ ಕೆಲಸವಿರಬಹುದೆಂದು ನಾನು ಊಹಿಸಿದೆ; ಆದರೆ ಹೇಳಲಿಲ್ಲ.

ಅಗ್ಗಿಷ್ಟಿಕೆ ಆರಿಹೋಗಿತ್ತು. ಶೀತಗಾಳಿಗೆ ಮೂಳೆಗಳು ಪಟಪಟನೆ ತತ್ತರಿಸಲಾರಂಭಿಸಿದ್ದವು. ಫಾದರ್ ಗ್ರೆಗೊರಿ ಹೇಳಿದ. ''ನಡಿ, ಎಲ್ಲಾದರೂ ಸ್ವಲ್ಪ ಬೆಚ್ಚಗಿನ ಬಟ್ಟೆಗಳನ್ನು ಹುಡುಕೋಣ.''

ಪೈನ್ ತೋಪನ್ನು ದಾಟಿದ ನಾವು ಹನ್ನೊಂದನೆಯ ಶತಮಾನದಲ್ಲಿ ಜಾರ್ಜಿಯಾದ ಮಹಾರಾಣಿ ಗೋರಾನ್ ದರ್ಪ್ ನಿರ್ಮಿಸಿದ್ದ - ಸುಮಾರಾಗಿ ಆಧುನಿಕವಾಗಿಯೇ ಕಾಣಿಸುತ್ತಿದ್ದ - ಇಗರ್ಜಿಯನ್ನು ತಲುಪಿದೆವು. ಖಂಡಿತವಾಗಿ ಅದು ಕಾರ್ಯನಿರತ ದೇಗುಲವಾಗಿತ್ತು. ಯಾಕೆಂದರೆ, ನಿನ್ನ ಪ್ರತಿಮೆಯ ಎದುರು ಉದ್ದವಾದ ಮೇಣದ ಬತ್ತಿಗಳು ಉರಿಯುತ್ತಿದ್ದು ಕೊಳಕು ಬಟ್ಟೆ ಧರಿಸಿದ - ಗಂಟೆ ಹೊಡೆಯುವ ಗಡ್ಡದವನು ಲೇಡಿ ಟಾವೆಲ್ (ಮಾತೆಯ!) ಪ್ರತಿಮೆಯೆದುರು ಬೆಂಚಿನ ಮೇಲೆ ಗೊರಕೆ ಹೊಡೆಯುತ್ತಿದ್ದ. ನಾವು ಸದ್ದಾಗದಂತೆ ಇಗರ್ಜಿಯ ಒಳಕೋಣೆಗೆ ಹೋದೆವು. ಅಲ್ಲಿಯ ಕವಾಟೊಂದರಲ್ಲಿ ಸನ್ಯಾಸಿಗಳು ತೊಡುವ ನಿಲುವಂಗಿ, ತಲೆಯುಡಿಗೆ, ಗವುಸುಗಳಿದ್ದವು. ಎರಡು ಜತೆ ಬಟ್ಟೆಗಳನ್ನು ಕದ್ದ ಫಾದರ್, ಒಂದನ್ನು ತಕ್ಷಣವೇ ತೊಟ್ಟುಕೊಂಡ.

ಅಷ್ಟರಲ್ಲಿ, ಕವಾಟಿನ ಹಿಂದೆ ಯಾರೋ ಚಲಿಸುತ್ತಿರುವುದನ್ನು ಕಂಡೆವು. ನರೆತ ಪೊದರಾದ ಕೂದಲು, ಪೊದರು ಹುಬ್ಬಿನ ನಡುವಯಸ್ಸಿನ ವ್ಯಕ್ತಿ ದಪ್ಪ ಕನ್ನಡಕ ಹಾಕಿಕೊಂಡಿದ್ದ. ಅವನು ಕೂಡಾ ಸನ್ಯಾಸಿಗಳ ಉಡುಪನ್ನು ಕದಿಯುವುದರಲ್ಲಿ ಮಗ್ನನಾಗಿದ್ದ. ನಮ್ಮನ್ನು ಗಮನಿಸಿದವನೇ ಬಾಗಿಲ ಮರೆಯಲ್ಲಿ ಅವಿತುಕೊಂಡ. ಅಷ್ಟೇ ವೇಗವಾಗಿ ಇಗರ್ಜಿಯಿಂದ ಹೊರಬಿದ್ದ ನಾವು ಬೆಟ್ಟದ ತಪ್ಪಲಿನತ್ತ ಓಡಲಾರಂಭಿಸಿದೆವು. ನಮ್ಮ ಮೂಳೆಗಳು ಥರಗುಡುತ್ತಿದ್ದವು. ಸನ್ಯಾಸಿಯ ಉಡುಪು ತೊಟ್ಟುಕೊಂಡುಬಿಟ್ಟಿದ್ದ ಆತ ಬೀಸುಗಾಲು ಹಾಕುತ್ತಾ ನಮ್ಮ ಬೆನ್ನು ಹಿಡಿದಿದ್ದ. ಯುವ ಶಿಬಿರವನ್ನು ತಲುಪಿದ ನಾವು ಬೆಂಕಿ ಪೊದರುಗಳ ಹಿಂದೆ ಬಚ್ಚಿಟ್ಟುಕೊಂಡೆವು. ನಮ್ಮ ಸಾಮಾನು ಸರಂಜಾಮುಗಳನ್ನು ಕಟ್ಟಿಕೊಳ್ಳುತ್ತಾ ನದಿದಂಡೆಗೆ ಹೊರಡಲು ವಿದ್ಯಾರ್ಥಿಗಳು ಸಿದ್ಧರಾಗುತ್ತಿದ್ದರು. ನೆಲಗವಿಯ ಕಿಟಕಿಯಿಂದ ನಾನು ನೋಡಿದ್ದ ಉಗಿ ಹಡಗು ಮರದ ಜೆಟ್ಟಿಯ ಬಳಿ ಹೊಳೆದು ಕಾಣುತ್ತಿತ್ತು.

ಕೆಲವು ನಿಮಿಷಗಳ ಕಾಲ ಅದೃಶ್ಯನಾಗಿದ್ದ ಫಾದರ್, ಒಂದು ಬಟ್ಟೆಗಂಟನೊಂದಿಗೆ ಮರಳಿದ.

ಗಂಟುಬಿಚ್ಚುತ್ತಾ ಹೇಳಿದ, ''ನಾನು ಜನರಿರದಿದ್ದ ಡೇರೆಯಿಂದ ಇದನ್ನೆಲ್ಲ ತಂದುಬಿಟ್ಟೆ. ದೇವರು ಜತೆಗಿದ್ದಾನೆ.'' ಗಂಟಿನಲ್ಲಿದ್ದ ವಸ್ತುಗಳನ್ನು ಹುಲ್ಲುನೆಲದ ಮೇಲೆ ಸುರಿದ. ನಾವು ಒಂದೊಂದು ಜತೆ ಉದ್ದ ಬೂಟು, ಗ್ಲಾವುಸ್, ಕನ್ನಡಕ ಹಾಗೂ ಮಫ್ಲರ್‌ಗಳನ್ನು ಎತ್ತಿಕೊಂಡೆವು. ಚಿಲ್ಲರೆ ಕಳ್ಳತನದ ಬಗ್ಗೆ ಆತನಿಗಿದ್ದ ಚಾತುರ್ಯ (ಅದು ಅದ್ಭುತವಾದದ್ದು) ನಾನು ಮೂಕವಿಸ್ಮಿತಳಾದೆ. ಮಫ್ಲರ್, ಗ್ಲಾವುಸ್, ಕನ್ನಡಕ ಹಾಗೂ ಉದ್ದಬೂಟುಗಳನ್ನು ತೊಟ್ಟುಕೊಂಡು ದೇವನ 1973ನೆಯ ವರ್ಷವನ್ನು ಎದುರಿಸಲು ನಾವು ಸಿದ್ಧರಾದೆವು. ನಮ್ಮ ಸದ್ಯದ ವೇಷದಲ್ಲಿ ನಾವು ಜೀವಂತ ಸನ್ಯಾಸಿ - ಸನ್ಯಾಸಿನಿಯರ ಜೋಡಿಯಂತೆ ಕಾಣಿಸುತ್ತಿದ್ದೆವು. ನಮ್ಮನ್ನಾರೂ ಮೂಳೆಗಳೆಂದು ಊಹಿಸುವುದೂ ಸಾಧ್ಯವಿರಲಿಲ್ಲ.

ಬಾನು ತಿಳಿಯಾಗುತ್ತಿತ್ತು. ಅದೊಂದು ಮಂಜು ಕೊರೆಯುವ ಮುಂಜಾವು. ಜೆಟ್ಟಿಯಲ್ಲಿರುವ ಗಂಡು ಹೆಣ್ಣುಗಳ ದೊಡ್ಡ ಸಂದಣಿಯಲ್ಲಿ ಯಾರಿಗೂ ಗೊತ್ತಾಗದಂತೆ ಹಿಂಬಾಲಿಸಿದೆವು. ನದಿಯ ಮೇಲೆ ಮಂಜು ಕವಿದಿತ್ತು. ಹಡಗಿನ ಸೈರನ್ ಕೇಳಿಸಿದಾಗ ನನ್ನೊಳಗೇ ನಕ್ಕೆ. ಕಳೆದ ರಾತ್ರಿಯಷ್ಟೇ ನಾನದನ್ನು ಅಂತಿಮ ಕಹಳೆಯ ಸ್ವರವೆಂದು ಭ್ರಮಿಸಿದ್ದೆ. ಯುವಜನರು ಸಮುದಾಯ ಗೀತೆ ಹಾಡುತ್ತಾ ಹಲವು ದಾರಿಯಲ್ಲಿ ಮುಂದುವರಿದರು. ಜನಜಂಗುಳಿಯಲ್ಲಿ ಬೆರೆತ ನಾವು ಹಡಗು ಏರಿ, ಮೇಲಂತಸ್ತಿನಲ್ಲಿದ್ದ ದೋಣಿಯೊಂದರ ಹಿಂದೆ ಕುಳಿತೆವು.

ಸನ್ಯಾಸಿಯ ವೇಷದಲ್ಲಿ ನಮ್ಮನ್ನು ಹಿಂಬಾಲಿಸುತ್ತಿದ್ದ ಆ ನೆರೆತ ಪೊದರು ಕೂದಲ ವ್ಯಕ್ತಿ, ನಮ್ಮ ಹಿಂಭಾಗದ ಮೂಲೆಯಲ್ಲಿ ಮುದುಡಿ ಕುಳಿತಿರುವುದನ್ನು ಗಮನಿಸಿದ ನಾವು, ತುಟಿ ಬಿಗಿದು ಕೂತೆವು. ಅವನೂ ತುಟಿ ಹೊಲಿದುಕೊಂಡಿದ್ದ. ಕಿನಾರೆಯಿಂದ ತೇಲಲು ಆರಂಭಿಸಿದ ಹಡಗು ವಿಶಾಲ ಸಾಗರವನ್ನು ಪ್ರವೇಶಿಸಿತು.

ನಾವು ದಕ್ಷಿಣದತ್ತ ಪ್ರಯಾಣಿಸುತ್ತಿದ್ದೆವು. ಫಾದರ್ ಗ್ರೆಗೊರಿ ಒರ್‌ಬಿಲಿಯಾನಿ ಮತ್ತು ನಾನು ನಿದ್ರೆ, ಹಸಿವು ಮತ್ತು ಶೌಚಗಳಿಂದ ಮುಕ್ತರಾದವರು. ಆದರೆ ನಮ್ಮ ನಿಗೂಢ ಸಂಗಾತಿ ಅನ್ನಾಹಾರಗಳಿಲ್ಲದೆಯೆ ನಲವತ್ತೆಂಟು ತಾಸುಗಳನ್ನು ಕಳೆಯಬೇಕಾಗಿತ್ತು. ಒಂದು ಸಂಜೆಯ ಹೊತ್ತು ಬಟುಮಿಯ ಬಂದರಿನಲ್ಲಿ ಹಡಗು ಲಂಗರು ಬಿಟ್ಟಿತು. ಕಪ್ಪು ಸಮುದ್ರದ ದಂಡೆಯ ಮೇಲಿದ್ದ ಬಟುಮಿ ಪ್ರಖ್ಯಾತ ಆರೋಗ್ಯಧಾಮವಾಗಿದ್ದಿರಬೇಕು. ಫಾದರ್ ಗ್ರೆಗೊರಿಗೆ ಇದೆಲ್ಲ ಗೊತ್ತೇ ಇತ್ತು. ಗುಂಪಿನ ನಡುವೆ ಸೇರಿಕೊಂಡು ದಡಕ್ಕೆ ಕಾಲಿಟ್ಟಾಗ, ಪೊಲೀಸನೊಬ್ಬ ನಮ್ಮತ್ತ ಅನುಮಾನದ ನೋಟ ಬೀರುತ್ತಿರುವುದನ್ನು ಗಮನಿಸಿದೆವು. ನಾವು ಕೂಡಲೇ ಕಡಲ ಕಿನಾರೆಯಲ್ಲಿ ಓಡಲಾರಂಭಿಸಿದೆವು. ನಮ್ಮ ಅಪರಿಚಿತ ಸಂಗಾತಿ ಏದುಸಿರುಬಿಡುತ್ತಾ ಹಿಂಬಾಲಿಸಿದ.

ಕಡೆಗೂ, ದೂರದಲ್ಲಿ ಹಲವಾರು ಯಾಂತ್ರಿಕ ದೋಣಿಗಳು ನಿಂತಿರುವುದನ್ನು ಕಂಡೆವು. ಇನ್ನೂ ಕತ್ತಲಿದ್ದುದರಿಂದ ದಡದಲ್ಲಿ ಯಾವುದೇ ನರಹುಳು ಇರಲಿಲ್ಲ. ನಾವು ಅಲ್ಲಿಗೆ ಹೋದೆವು. ಏನ್ನ ನಾಮಸ್ಮರಣೆ ಮಾಡಿದ ಫಾದರ್ ಗ್ರೆಗೊರಿ ಯಾಂತ್ರಿಕ ದೋಣಿಯೊಂದನ್ನು ಗೂಟದಿಂದ ಬಿಚ್ಚಿದ ಬಳಿಕ, ಆತನ ಪಕ್ಕದಲ್ಲಿ ಕುಳಿತುಕೊಳ್ಳಲು ನನಗೆ ಸಹಾಯ ಮಾಡಿದ. ಆ ಮೂರನೇ ವ್ಯಕ್ತಿ ದಡದಲ್ಲಿ ಚಡಪಡಿಸುತ್ತಾ ಇರುವುದನ್ನು ನಾನು ಗಮನಿಸಿದೆ. ದೇವನೇ, ಮೃತ್ಯು ಜೀವನವನ್ನು ಬೆನ್ನಟ್ಟುವ ಮಾತನ್ನು ನಾನು ಕೇಳಿದ್ದೆ. ಇಲ್ಲಿ ಅದು ತಿರುವು ಮುರುವಾಗಿತ್ತು! ಅವನು ಬೊಬ್ಬಿಡುತ್ತಿದ್ದ, ''ದಯವಿಟ್ಟು, ದಯವಿಟ್ಟು ನನ್ನನ್ನು ಕರೆದುಕೊಳ್ಳಿರಿ, ನನ್ನನ್ನೂ ಜತೆಗೊಯ್ಯಿರಿ.'' ಇದು ನಮ್ಮ ಜತೆಗೆ, ಆತನ ಮೊದಲ ಮಾತೂ ಆಗಿತ್ತು. ಫಾದರ್ ಅವನಿಗೆ ದೋಣಿಗೆ ಹಾರುವಂತೆ ಸೂಚಿಸಿದ. ಅವನು ಮಿಂಚಿನ ವೇಗದಲ್ಲಿ ಹಾಗೇ ಮಾಡಿದ; ಅಷ್ಟೆ. ಫಾದರ್ ದೋಣಿಯ ಯಂತ್ರವನ್ನು ಆದೇಷ್ಟು

ಸಲೀಸಾಗಿ ಆರಂಭಿಸಿದನೆಂದರೆ, ಏಳನೆಯ ಶತಮಾನದಲ್ಲಿ ತಬ್ಲಿಸ್‌ಗೆ ಹೋಗುವಾಗ ಕುರಾ ನದಿಯಲ್ಲಿ ಯಾಂತ್ರಿಕ ದೋಣಿ ನಡೆಸಿ ಅನುಭವವಿದ್ದವನಂತೆ ಕಾಣಿಸುತ್ತಿದ್ದ.

ಅಪರಿಚಿತ ಮನುಷ್ಯ ನಮ್ಮ ಬಳಿ ಕುಳಿತ. ಫಾದರ್ ಗ್ರೆಗೊರಿ ತನ್ನ ವೃತ್ತಿಪರ ದನಿಯಲ್ಲಿ ಪ್ರಶ್ನಿಸಿದ, ''ಪ್ರಿಯ ಪುತ್ರ, ನಿನಗೇನು ತೊಂದರೆಯಾಗಿದೆ? ನೀನೇಕೆ ನಮ್ಮನ್ನು ರಾಣಿ ಗೊರಾನ್ ಡರ್ಸ್ ದೇಗುಲದಿಂದ ಬಟುಮಿಯ ಬಂದರಿನವರೆಗೆ ಹಿಂಬಾಲಿಸುತ್ತಿದ್ದೀಯಾ?'' ನಡುವೆ ನನ್ನತ್ತ ತಿರುಗಿ ''ಇದು ಅತ್ಯಾಧುನಿಕ ಮಾದರಿಯ ಜೆಟ್ ದೋಣಿ'' ಎಂದವನು, ಮತ್ತೆ ತನ್ನ ವೃತ್ತಿಪರಭಾವದಲ್ಲಿ ಮುಂದುವರಿಸಿದ, ''ಪ್ರಿಯಪುತ್ರಾ, ನಿನಗೆ ಏನಾಗಿದೆ? ನನಗೆ ಹೇಳುವಂಥವನಾಗು.''

ಅವನು ಗಂಟಲೊಳಗಿಂದಲೇ ಪಿಸುಗುಟ್ಟಿದ, ''ನಾನೊಬ್ಬ ಭಿನ್ನಮತೀಯ ಬುದ್ಧಿಜೀವಿ. ನಾನು ಪಶ್ಚಿಮಕ್ಕೆ ದೇಶಾಂತರ ಮಾಡುತ್ತಿದ್ದೇನೆ. ದಯವಿಟ್ಟು ಸಹಾಯ ಮಾಡಬೇಕು.''

''ಪಶ್ಚಿಮ?'' ಮರುನುಡಿದ ಫಾದರ್ ದೋಣಿಯನ್ನು ಪಶ್ಚಿಮ ದಿಕ್ಕಿಗೆ ತಿರುಗಿಸಿದ. ಆ ಬಳಿಕ ಕರುಣೆಯ ಸ್ವರದಲ್ಲಿ ಪ್ರಶ್ನಿಸಿದ, ''ಪುತ್ರಾ, ಬಲ್ಗೇರಿಯಕ್ಕೋ ಅಥವಾ ರುಮೇನಿಯಾದ ಕಡೆಗೋ?'' ಬಹುಶಃ ಆ ಕ್ಷಣಗಳಲ್ಲಿ ಆತನ ತಲೆಬುರುಡೆಯೊಳಗಿನಿಂದ ಸಮಕಾಲೀನ ಪ್ರಪಂಚದ ಎಲ್ಲ ಜ್ಞಾನಗಳೂ ಮಾಯವಾಗಿದ್ದಿರಬೇಕು. ಇರಲಿ, ಅಪರಿಚಿತ ಮನುಷ್ಯ ತಬ್ಬಿಬ್ಬಾದವನಂತೆ ಉತ್ತರಿಸಿದ, ''ಫಾದರ್ ನಲವತ್ತೈದನೆಯ ಇಸವಿಯ ಬಳಿಕ ಮೊದಲ ಬಾರಿ ಆಶ್ರಮದ ಹೊರಗೆ ಕಾಲಿಟ್ಟಿರುವಂತಿದೆ.''

''ನಮ್ಮ ದೇವನ ಆರುನೂರ ನಲವತ್ತೈದನೇ ವರ್ಷದಲ್ಲಿ, ತಬ್ಲಿಸ್‌ನಲ್ಲಿ ನಮ್ಮ ವಂಶದ ಅರಮನೆಯಲ್ಲಿ ವಾಸಿಸುತ್ತಿದ್ದೆ.'' ಫಾದರ್ ಗಾಂಭೀರ್ಯದಿಂದಲೇ ಹೇಳಿದ್ದ. ಅದೃಷ್ಟವಶಾತ್ ಇಂಜಿನ್‌ನ ಸದ್ದು ಆತನ ಮಾತುಗಳನ್ನು ನುಂಗಿಹಾಕಿದ್ದರಿಂದ, ಅಪರಿಚಿತ ವ್ಯಕ್ತಿ ಮುಂದುವರಿಸಿದ್ದ, ''ಫಾದರ್, ಈಗ ಪಶ್ಚಿಮವು ಬರ್ಲಿನ್ ಗೋಡೆಯ ಆ ಬದಿಯಿಂದಲೇ ಆರಂಭವಾಗುತ್ತದೆ.'' ದೇವನೇ, ನಾನೇನೂ ಜಾಣೆಯೆಂದು ಹೆಸರು ಮಾಡಿದವಳಲ್ಲ. ಆದ್ದರಿಂದಲೇ ಉದ್ಗರಿಸಿದ್ದೆ, ''ನಾನೇನೋ ಚೀನಾದ ಮಹಾಗೋಡೆ ಮತ್ತು ಅಲೆಗ್ಸಾಂಡರನ ಹೆಬ್ಬಾಗಿಲು ನಮ್ಮ ಕಾಕಸಿಯಾದಲ್ಲೇ ಇದೆಯೆಂದು ಕೇಳಿದ್ದೆ. ಆದರೆ ಈ ಬರ್ಲಿನ್ ಮಹಾಗೋಡೆ ಯಾವ ಲೋಕದಲ್ಲಿದೆಯಪ್ಪಾ?''

ಮೊಣಕೈಯಿಂದ ಮೆತ್ತಗೆ ತಿವಿದ ಫಾದರ್ ನನ್ನನ್ನು ಸುಮ್ಮನಿರುವಂತೆ ಸೂಚಿಸಿದ. ಸಮಕಾಲೀನ ಪ್ರಾಪಂಚಿಕ ಜ್ಞಾನ ಆತನ ಬುರುಡೆಯೊಳಗೆ ಮತ್ತೆ ಮರಳಿತ್ತು. ಅವನು ದೋಣಿಯನ್ನು ಟರ್ಕಿಯ (ಹಿಂದೆ ಬೈಜಾಂಟಿಯಂ ಎನಿಸಿದ್ದ) ಕಿನಾರೆಯತ್ತ ತಿರುಗಿಸಿದ. ನಾವು ಬಲು ವೇಗದಿಂದ ಸಾಗುತ್ತಿದ್ದೆವು. ಭಿನ್ನಮತೀಯ ಬುದ್ಧಿಜೀವಿಯತ್ತ ಫಾದರ್ ಬೊಬ್ಬಿರಿದ; ''ಪ್ರಿಯ ಪುತ್ರ, ಜೊನಾ ಮತ್ತು ಮೀನಿನ ಘಟನೆಯನ್ನು ಸ್ಮರಿಸು. ಸ್ಟೆಲ್ಲಾ ಮೇರಿಸಳನ್ನು ಪ್ರಾರ್ಥಿಸು, ಅವರೇ ಈ ಭೀಕರ ಸಾಗರದಲ್ಲಿ ನಮ್ಮ ಮಾರ್ಗದರ್ಶಿಗಳು.''

''ಆಮೆನ್'' ಎಂದ ನಾನು ಹುಚ್ಚುಚ್ಚಾಗಿ ಸೇರಿಸಿದೆ, ''ಪ್ರೀತಿಯ ಮಗು, ಉಕ್ಕುವ ಕಡಲಲ್ಲಿ ಹಡಗಿಗೆ ಮಾರ್ಗದರ್ಶನ ನೀಡುವ, ಜಾರುವ ದಾರಿಗಳಲ್ಲಿ ಕಾರವಾನಗಳನ್ನು ಮುನ್ನಡೆಸುವ ಒಂಟೆಯನ್ನು ಸ್ಮರಿಸು. ನೀನು ಪ್ರತಿದಿನವೂ ನಿನ್ನ ಸಂತರ ಜೀವನವನ್ನು ಓದುತ್ತಿದ್ದೀ ತಾನೆ?''

''ನಾನು ಮಲಾರ್ಮೆ, ಕಾಫ್ಕಾ ಮತ್ತು ಬೋದಲೇರ್‌ರನ್ನು ಮಾತ್ರ ಓದುತ್ತಿರುವೆ ತಾಯಿ.''

ಪ್ರಿಯನಾದ ದೇವನೇ, ಈ ಬಗೆಯ ಸಂತರ ಹೆಸರುಗಳನ್ನು ಕೇಳಿದ್ದಿರಲಿಲ್ಲ ಎಂಬುದನ್ನು ನಾನು ವಿನಯದಿಂದ ಒಪ್ಪಿಕೊಳ್ಳುವೆ. ನಾನು ಸುಮ್ಮನಾಗಿದ್ದೆ.

ಓ ಜಗತ್ತಿನ ಒಡೆಯನೇ; ಆ ಬಳಿಕ ಏನು ನಡೆಯಿತು ಎಂಬುದು ನಿನಗೆ ಚೆನ್ನಾಗಿ ಗೊತ್ತು; ವಿಯೆನ್ನಾದ ದಾರಿಯಲ್ಲಿ ನಾವು ಏನೆಲ್ಲ ಸಾಹಸಮಾಡಬೇಕಾಯಿತು. ನಿನಗೆ ಗೊತ್ತು, ನಮಗೆ ಸ್ವಾಗತ ದೊರೆತ ಬಗೆ ಮತ್ತು ಔತಣ ನೀಡಿದ ರೀತಿ. ಈ ಭಿನ್ನಮತೀಯ ಬುದ್ಧಿಜೀವಿ ಪತ್ರಿಕಾ ಗೋಷ್ಠಿಗಳನ್ನುದ್ದೇಶಿಸಿ ಭಾಷಣ ಕುಟ್ಟಿದ ಕ್ರಮ, ದೂರದರ್ಶನ ಸಂದರ್ಶನ ಹಾಗೂ ಪುಸ್ತಕ ಧಾರಾವಾಹಿ ಪ್ರಕಟಣೆಗಾಗಿ ಪ್ರಕಾಶಕರ ಜತೆ ಮಾಡಿಕೊಂಡ ಒಪ್ಪಂದಗಳು, ರಾತ್ರಿಯೂಟಗಳು, ಅವನ ಗೌರವಕ್ಕಾಗಿ ನೀಡಲಾದ ಪಾನಕೂಟಗಳು-ಎಲ್ಲವೂ ನಿನಗೆ ಗೊತ್ತು.

ವಿಯೆನ್ನಾ ತಲುಪಿದ ಕೂಡಲೇ ಫಾದರ್ ಗ್ರೆಗೊರಿ, ಭಿನ್ನಮತೀಯ ಬುದ್ಧಿಜೀವಿಗೆ ಹೇಳಿದ, ''ದಯವಿಟ್ಟು ಬಂದು ಪತ್ರಿಕಾ ಹೇಳಿಕೆ ನೀಡು; ಫಾದರ್ ಗ್ರೆಗೊರಿ ಒರ್‌ಬಿಲಿಯಾನಿ ಹಾಗೂ ಮಾತೆ ಫ್ಲೋರಾ ಸಬೀನಾರವರು, ಜೀವನವಿಡಿ ಮೌನವಾಗಿರುವ ಪ್ರತಿಜ್ಞೆ ತೊಟ್ಟ ಪುರಾತನ ಜಾರ್ಜಿಯನ್ ಸಂಪ್ರದಾಯದ ಸದಸ್ಯರು ಎಂಬುದಾಗಿ. ನಮ್ಮ ದಿನನಿತ್ಯದ ಬೇಕುಬೇಡಗಳನ್ನು ನಾವು ಬರೆದು ತಿಳಿಸುವೆವು. ಅದೂ ಅಲ್ಲದೆ, ನಾವು ಫೋಟೋಗಳನ್ನು ಹೊಡೆಸಿಕೊಳ್ಳುವುದಿಲ್ಲ; ಯಾಕೆಂದರೆ ಅಂತಹ ಜಂಬವನ್ನು ನಾವು ಇಷ್ಟಪಡುವುದಿಲ್ಲ.''

ಮರುದಿನ ಜಾಗತಿಕ ಪತ್ರಿಕೆಗಳು ಹೀಗೆ ಪ್ರಕಟಿಸಿದವು: ''ಸೋವಿಯತ್ ಜಾರ್ಜಿಯಾದಿಂದ ತಪ್ಪಿಸಿಕೊಂಡಿರುವ ಫಾದರ್‌ಗ್ರೆಗೊರಿ ಮತ್ತು ಮಾತೆ ಫ್ಲೋರಾ ಮೌನವಾಗಿರುವ ಪ್ರತಿಜ್ಞೆ ತೊಟ್ಟಿದ್ದಾರೆ.''

ವಿಯೆನ್ನಾದಿಂದ ನಮ್ಮನ್ನು ಪ್ಯಾರಿಸ್ ಮತ್ತು ಲಂಡನ್‌ಗಳಿಗೆ ಒಯ್ಯಲಾಯಿತು. ನಮ್ಮ ಬುದ್ಧಿಜೀವಿ ಸುಖದಿಂದ ದಿನ ಕಳೆಯುತ್ತಿದ್ದ. ಫಾದರ್, ಗ್ರಂಥಾಲಯಗಳಲ್ಲಿ ಪುಸ್ತಕಗಳ ಪುಟ ತಿರುವಿ ಹಾಕುತ್ತಿದ್ದರೆ, ನಾನು ಪೇಟೆ ಸುತ್ತುತ್ತಿದ್ದೆ. ನಮ್ಮ ಇಚ್ಛೆಯನ್ನು ಗೌರವಿಸಿದ ಸಮೂಹ ಮಾಧ್ಯಮಗಳು ನಮ್ಮ ಗೋಜಿಗೇ ಬರಲಿಲ್ಲ.

ಓ ದಯಾಮಯನಾದ ದೇವನೇ, ನಿನಗೆ ಚೆನ್ನಾಗಿ ಗೊತ್ತು; ಒಂದು ತಿಂಗಳ ಬಳಿಕ ಅಮೇರಿಕಾ ಸಂಯುಕ್ತ ಸಂಸ್ಥಾನವು ನಮಗೆ ಆಮಂತ್ರಣ ನೀಡಿತು. ನಾವು ಅಲ್ಲಿಯೇ ನೆಲೆಸುವವರಿದ್ದೆವು. ನಮ್ಮನ್ನು ಈ ಭೇಟಿಗೆ ಪ್ರವರ್ತಗೊಳಿಸಿದ ಸಮಿತಿಯು ನ್ಯೂಯಾರ್ಕ್ ಹಿಲ್ಟನ್‌ನಲ್ಲಿ ತಂಗಿತ್ತು. ಪಶ್ಚಿಮದ ಯೂರೋಪ್ ಮತ್ತು ಇಂಗ್ಲೆಂಡಿನ ಹೊಟೇಲುಗಳಲ್ಲಿ ನಾನು ಎದುರಿಸಿದ ಅದೇ ಸಮಸ್ಯೆ ಇಲ್ಲಿಯೂ ಎದುರಾಯಿತು. ದೇವನೇ, ನಿನಗೆ ತಿಳಿದಿದೆ, ನಾನು ಮತ್ತು ಫಾದರ್ ತಿನ್ನುತ್ತಿರಲಿಲ್ಲ, ನಿದ್ರಿಸುತ್ತಿರಲಿಲ್ಲ ಮತ್ತು ಕಕ್ಕಸಿಗೆ ಹೋಗುತ್ತಿರಲಿಲ್ಲ ಎಂದು. ನಾವು ಕೋಣೆಗೆ ತಿಂಡಿಯನ್ನು ತರಿಸುತ್ತ ಇರಲಿಲ್ಲ, ಮಧ್ಯಾಹ್ನ ಹಾಗೂ ರಾತ್ರಿಯೂಟಗಳಿಗಾಗಿ ಕೆಳಗೆ ಇಳಿದುಹೋಗುತ್ತಲೂ ಇರಲಿಲ್ಲ. ರೂಮ್ ಮಾಣಿಗಾಗಿ ಕರೆ ಗುಂಡಿ ಒತ್ತುತ್ತಲೂ ಇರಲಿಲ್ಲ. ಸ್ನಾನದ ಕೊಠಡಿಯಂತೂ ನನಗೆ ಬಹು ದೊಡ್ಡ ಸಮಸ್ಯೆಯಾಗಿಬಿಟ್ಟಿತ್ತು. ಅಲ್ಲಿದ್ದ ಕಾಗದ ಸುರಳಿಗಳು ಮತ್ತು ಕಕ್ಕಸಿನ ಪಾತ್ರೆಗಳು ಹಾಗೆಯೇ ಇರುತ್ತಿದ್ದವು. ಬ್ರೈರಾಸು, ಸಾಬೂನು, ಪಾತ್ರೆಗಳು, ಸ್ನಾನದ ತೊಟ್ಟಿ ಯಾವುದೂ ಬಳಕೆಯಾಗದೆ ಉಳಿದಿರುತ್ತಿದ್ದವು. ಮುಂಜಾನೆ ಬಂದ ಆಯಾ ಅದನ್ನು ನೋಡಿ ಅಚ್ಚರಿಗೊಂಡಿದ್ದಳು.

ಈ ವಿಷಯದ ಕುರಿತು ಫಾದರ್ ಗ್ರೆಗೊರಿ ಜತೆ ಮಾತನಾಡಲು ಅಸಹ್ಯವೆನ್ನಿಸಿತ್ತು. ಆದರೂ ಒಂದು ದಿನ ನಾನು ಹೇಳಲೇಬೇಕಾಯಿತು. ಆತ ಅಲಕ್ಷ್ಯದಿಂದಲೇ ಹೇಳಿದ್ದ, ''ಹೆಂಗಸರ ಬುದ್ಧಿ ಮೊಣಕಾಲ ಕೆಳಗೆ ಅಂತ ನನಗೀಗ ಖಂಡಿತವಾಯಿತು. ನೋಡಮ್ಮಾ..., ಅದು ತೀರಾ ಸರಳ. ನಾನದನ್ನೇ ಯಾವಾಗಲೂ ಮಾಡುತ್ತಿರುವುದು. ಕಾಗದದ ಸುರಳಿಯಿಂದ ಸ್ವಲ್ಪ ಸ್ವಲ್ಪ ಕಿತ್ತು ಬಿಡು.

ಕಕ್ಕಸಿಗೆ ಸ್ವಲ್ಪ ನೀರು ಹಾಕು. ಸಾಬೂನು ಮತ್ತು ಬೈರಾಸುಗಳನ್ನು ಒದ್ದೆ ಮಾಡಿಬಿಡು.''

ನಾವು ಬಹಳ ದಿನಗಳವರೆಗೆ ಉಪವಾಸ ವ್ರತ ಹಿಡಿಯುವ ಅಭ್ಯಾಸದವರೆಂದೂ, ಒಣ ರೊಟ್ಟಿ, ಗಿಣ್ಣು, ಒಂದೆರಡು ನೀರುಳ್ಳಿ ಮತ್ತು ಒಂದಷ್ಟು ತಿಳಿನೀರನ್ನು ತೆಗೆದುಕೊಳ್ಳುತ್ತೇವೆಂದೂ ನಮ್ಮ ಛಿನ್ನಮತೀಯ ಬುದ್ಧಿಜೀವಿಗೂ, ಎಪ್ಲಿಡೆಯ ನಮ್ಮ ಆತಿಥೇಯರಿಗೂ ಹೇಳಿಬಿಟ್ಟಿದ್ದೆವು. ಇವಿಷ್ಟೂ ವಸ್ತುಗಳನ್ನು ನಮ್ಮ ಕೊಠಡಿಗೆ ಕಳುಹಿಸಲಾಗುತ್ತಿತ್ತು. ಪ್ರತಿ ಸಂಜೆಯೂ ಅವನ್ನೆಲ್ಲ ಕಾಗದದ ಚೀಲಗಳಲ್ಲಿ ತುಂಬಿಸಿ, ಮರುದಿನ ಮುಂಜಾನೆ ರಸ್ತೆಯ ಬದಿಯ ಕಸದ ತೊಟ್ಟಿಗೆ ಎಸೆದು ಬಿಡುತ್ತಿದ್ದೆವು.

ಆದರೆ, ನಿಜವಾದ ಜಿಕ್ಕಟ್ಟು ಆರಂಭವಾದದ್ದು ಒಂದು ಮಧ್ಯಾಹ್ನದ ಹೊತ್ತು ಫಾದರ್ ನನ್ನ ಕೋಣೆಗೆ ಫೋನ್ ಮಾಡಿದಾಗ: ''ಆತಿಥೇಯರು ಅಲಾಸ್ಕಾದಲ್ಲಿರುವ ಗ್ರೀಕ್ ಸಂಪ್ರದಾಯಸ್ಥರ ಮನೆಯೊಂದರಲ್ಲಿ ನಮ್ಮ ಮಿಕ್ಕುಳಿದ ಬದುಕನ್ನು ಕಳೆಯುವ ಏರ್ಪಾಡು ಮಾಡಿಬಿಟ್ಟಿದ್ದಾರೆ. ಈ ವಿಷಯದ ಕುರಿತು ನಿನ್ನೊಡನೆ ಈಗಲೇ ಮಾತನಾಡಬೇಕಾಗಿದೆ.''

ನಾನು ಕೆಳಗಿಳಿದು ಆತನಿದ್ದ ಅಂತಸ್ತಿಗೆ ಹೋದೆ. ಆತ ನಿರ್ಜನ ಮೊಗಸಾಲೆಯಲ್ಲಿ ನನಗಾಗಿ ಕಾಯುತ್ತಿದ್ದ. ಆತ ಹೇಳಿದ, ''ವಲಸೆ ಬಂದು ನ್ಯೂಯಾರ್ಕ್‌ನಲ್ಲಿ ನೆಲೆಸಿರುವ ನಮ್ಮ ಜಾರ್ಜಿಯನ್ ಬಂಧುಗಳ ಜತೆ ನಾವಿರಲು ಬಯಸಿದ್ದೇವೆ ಎಂಬುದಾಗಿ ನಮ್ಮ ಅತಿಥೇಯರಿಗೆ ಹೇಳಿದ್ದೇನೆ. ಆ ಬಳಿಕ ಸ್ವಲ್ಪ ಕಾಲ ಸ್ವತಂತ್ರವಾಗಿದ್ದುಕೊಂಡು ಗ್ರಂಥಾಲಯಗಳಲ್ಲಿ ಸಂಶೋಧನ ನಡೆಸುವವರಿದ್ದೇವೆ. ನಮ್ಮ ಕೆಲಸ ಮುಗಿದ ಕೂಡಲೇ 15ನೆಯ ಪೂರ್ವ 97ನೆಯ ರಸ್ತೆಯಲ್ಲಿರುವ ಪ್ರಧಾನ ಮಠವನ್ನು ಸಂಪರ್ಕಿಸುವೆ ಎಂದೆ. ಅವರು ಸಂತೋಷದಿಂದಲೇ ಸಮ್ಮತಿಸಿದ್ದಾರೆ. ಸದ್ಯದ ಖರ್ಚಿಗೆಂದು ಸಾಕಷ್ಟು ಹಣ ಕೊಟ್ಟಿದ್ದಾರೆ. ನಾವು ಈ ನರಕದಿಂದ ತಪ್ಪಿಸಿಕೊಳ್ಳಬೇಕು, ಎಷ್ಟು ಬೇಗ ಸಾಧ್ಯವೋ...ಅಷ್ಟು ಬೇಗ...'' ಫಾದರ್ ಅದಾಗಲೇ ಅಮೇರಿಕನ್ ಇಂಗ್ಲಿಷ್‌ನಲ್ಲಿ ಮಾತನಾಡಲಾರಂಭಿಸಿದ್ದ.

ಮರುದಿನ ನಮ್ಮ ಗೆಳೆಯರಿಗೆ ವಿದಾಯ ಹೇಳಿ ಹಿಲ್ಟನ್ ಹೋಟೇಲನ್ನು ತೊರೆದು ಹೊರಟೆವು.

ಊರ ಹೊರಗಿನ ಒಂದು ಅಗ್ಗದ ವಸತಿಗೃಹದಲ್ಲಿ ಫಾದರ್ ಅಕ್ಕಪಕ್ಕದ ಎರಡು ಕೋಣೆಗಳನ್ನು ಬಾಡಿಗೆಗೆ ಹಿಡಿದ. ಆತಿಥೇಯರು ನಮಗೆ ನೀಡಿದ್ದ ಹಣದ ಬಹುಭಾಗವನ್ನು ಆತ ಬಾಹ್ಯಾಕಾಶ ಯುದ್ಧಗಳು, ಗಣಕಯಂತ್ರ, ತಂತ್ರ, ಅಂತಾರಾಷ್ಟ್ರೀಯ ರಾಜಕೀಯ ಮೊದಲಾದ ಪುಸ್ತಕಗಳಿಗಾಗಿ ಖರ್ಚು ಮಾಡಿದ. ನಾನು ಮಹಿಳಾ ಮಾಸಿಕಗಳನ್ನು ಖರೀದಿಸಿದೆ. ಒಂದು ದಿನ ಫಾದರ್ 'ಪ್ಲೇ ಬಾಯ್' ಮಾಸಿಕದಲ್ಲಿ ತಲ್ಲೀನನಾಗಿದ್ದ. ನನ್ನನ್ನು ಕಂಡಾಗ ಮುಖ ಕೆಂಪು ಮಾಡಿಕೊಂಡು ಹೇಳಿದ. 'ಸಾಲ್‌ಬೆಲೋ'ನ ಸಂದರ್ಶನವೊಂದನ್ನು ಓದುತ್ತಿದ್ದೇನೆ, ಈ ಪತ್ರಿಕೆ ಶ್ರೇಷ್ಠ ಲೇಖನಗಳನ್ನು ಪ್ರಕಟಿಸುತ್ತಿರುತ್ತದೆ ಗೊತ್ತಾ?''

ಆತ ಗ್ರಂಥಾಲಯಗಳಿಂದ ಕೆಲವು ಪುಸ್ತಕಗಳನ್ನು ಕದ್ದೂ ತಂದಿದ್ದ. ಕೊಠಡಿಯಲ್ಲಿ ಎಡೆಬಿಡದೆ ಸಿಗರೇಟು ಸೇದುತ್ತಿದ್ದ. ಸಾರ್ವಜನಿಕವಾಗಿ ಆತ ಸಿಗರೇಟು ಸೇದುವಂತಿರಲಿಲ್ಲ ಎಂಬುದಂತೂ ಸ್ಪಷ್ಟ.

ನಮ್ಮ ಹನ್ನೆರಡು ತಿಂಗಳ 'ವಾಗ್ದಾನ ಬಿಡುಗಡೆ'ಯ ಅವಧಿ ಮುಗಿಯುವುದರಲ್ಲಿತ್ತು. ಮಾಗಿಯ ಕಾಲ. ಒಂದು ರೇಷ್ಮೆಯ ಉಡುಪನ್ನು ನನಗಿನ್ನೂ ಧರಿಸಲಾಗಲಿಲ್ಲವಲ್ಲಾ ಎಂದು ನೆನಪಾದಾಗಲೆಲ್ಲ ನನ್ನ ಮೂಳೆಗಳು ಒಂದು ಬಗೆಯ ನೋವನ್ನು ಅನುಭವಿಸುತ್ತಿದ್ದವು. ಫಾದರ್ ಒಬ್ಬ ಮೇಲ್‌ಚಾವ ನಿಸ್ಟ್..., ನಿನಗೆ ಗೊತ್ತು ಅದೇನೆಂದು. ಉಡುಪನ್ನು ಖರೀದಿಸಬೇಕೆಂಬ ನನ್ನ ಆಸೆಯನ್ನು ಆತ ಗಣನೆಗೆ ತೆಗೆದುಕೊಳ್ಳಲಿಲ್ಲ. ನನ್ನ ಪಾಲಿನ ಡಾಲರುಗಳನ್ನೂ ಆತ ಪುಸ್ತಕ ಖರೀದಿಸಲು ವೆಚ್ಚ

ಮಾಡುತ್ತಿದ್ದ. ನನ್ನೊಬ್ಬಳನ್ನೇ ಕೋಣೆಯಲ್ಲಿ ಬಿಟ್ಟು, ಆಗಾಗ್ಗೆ ಸಿನೆಮಾ, ನಾಟಕಗಳಿಗೆ ಹೋಗುತ್ತಿದ್ದ, ನಾನು ಟಿ.ವಿ. ನೋಡಿಕೊಂಡು ನನ್ನ ಪ್ರಾರ್ಥನೆ ಸಲ್ಲಿಸುತ್ತಿರಲು ಸೂಚಿಸುತ್ತಿದ್ದ.

ಓ ದೇವನೇ, ನಾನು ನಿನಗೆ ಹೇಳಲು ಮರೆತೇಬಿಟ್ಟಿದ್ದೆ. ನಿನ್ನ ಮರೆಗುಳಿ 'ದೇವದೂತ'ನೊಡನೆ ನಾನಂದೇ ವಿಚಾರಿಸಿಕೊಂಡಿದ್ದೆ, ಒಂದು ವೇಳೆ ಸಮಯಕ್ಕೆ ಸರಿಯಾಗಿ ಇದೇ ಜಾರ್ಜಿಯಾದ ನೆಲಗವಿಗೆ ಮರಳಲು ಸಾಧ್ಯವಾಗದಿದ್ದರೆ ಏನು ಮಾಡಬೇಕೆಂದು. ಅವನು ಹೇಳಿದ್ದ, ''ನೀವು ಎಲ್ಲಿರುತ್ತೀರೋ, ಅಲ್ಲಿ, ನಿಮಗೆ ಹತ್ತಿರವಿರುವ ಸ್ಮಶಾನಕ್ಕೆ ಹೋಗಿ, ಖಾಲಿಯಾಗಿರುವ ಎರಡು ಗೋರಿಗಳನ್ನು ಹುಡುಕಿ ಅದರೊಳಗೆ ಮಲಗಿಬಿಡಿ'' ಎಂದು.

ಸಮಯ ಬಲುವೇಗದಿಂದ ಸರಿಯುತ್ತಿತ್ತು. ಇಡಿಯ ವರುಷವೊಂದು ಕ್ಷಣದಂತೆ ಕಳೆದು ಹೋಗಿತ್ತು. ಒಡೆಯನೇ, ನಿನ್ನ ಸುಂದರ, ರೋಚಕ ಆಧುನಿಕ ಜಗತ್ತನ್ನು ನೋಡಲು ಹನ್ನೆರಡು ತಿಂಗಳ ಅವಧಿ ಏನೇನೂ ಸಾಲದು! ಸಮರ್ಪಕವಾದ ಒಂದ ಸ್ಮಶಾನವನ್ನು ಹುಡುಕುವ ಕೆಲಸವನ್ನು ಫಾದರ್ ನನಗೊಪ್ಪಿಸಿದ್ದ. ಫಾದರ್ ತನ್ನ ಪಾಡಿಗೆ ಖುಷಿಪಡುತ್ತಿರುವಾಗ ನಾನು ಖಾಲಿಯಿರುವ ಗೋರಿಗಳನ್ನು ಹುಡುಕುತ್ತಾ ಸ್ಮಶಾನಗಳಲ್ಲಿ ಅಲೆಯುತ್ತಿದ್ದೆ.

ನಾವು ಮರಳಲು ಕೆಲವು ದಿನಗಳಷ್ಟೇ ಉಳಿದಿದ್ದವು. ಹಣವೆಲ್ಲ ಮುಗಿಯುತ್ತಾ ಬರುತ್ತಿದ್ದು, ನಮ್ಮ ಅತಿಥೇಯರಿಗೆ ಫೋನ್ ಮಾಡಿ ಹಣ ಬೇಡಲು ಫಾದರ್ ಬಯಸಲಿಲ್ಲ.

ಅವರು ಖಂಡಿತವಾಗಿ ಪ್ರಶ್ನೆಗಳನ್ನು ಕೇಳುತ್ತಿದ್ದರು: 'ನೀವು ಇನ್ನು ಕೂಡಾ ಬಿಳಿಯ ರಷ್ಯನ್ ಬಂಧುಗಳ ಜತೆಗಿದ್ದೀರಾ? ಅಲಾಸ್ಕಾದ ಸನ್ಯಾಸಿ ಮಠವನ್ನು ಯಾವಾಗ ಸೇರಬಯಸುತ್ತೀರಿ?' ಇತ್ಯಾದಿ, ಕೊನೆಗೆ ಕೆಲವೇ ಡಾಲರುಗಳು (ನಿಜವಾಗಿ ಅದು ನನಗೆ ಸೇರಿದ್ದು) ಉಳಿದಾಗ ನನ್ನ ಕೊನೆಯ ಬಯಕೆಯನ್ನು ಫಾದರ್‌ಗೆ ಹೇಳಿದೆ. ನಾನು ಸೊಗಸಾದ ಉಡುಪು ಕೊಳ್ಳಬಯಸಿದ್ದೆ. ಆದರೂ ಫಾದರ್ ಆ ಹಣದಿಂದ ಅರಬ್ ತೈಲದ ಬಗ್ಗೆ ಹಾಗೂ ಯುರೋಪಿನ ಸಾಮಾನ್ಯ ಮಾರುಕಟ್ಟೆಯ ಬಗೆಗಿನ ಕೆಲವು ಗ್ರಂಥಗಳನ್ನು ಖರೀದಿಸಿಬಿಟ್ಟ. ನನ್ನ ದುಃಖದ ಕಟ್ಟೆ ಒಡೆದು ಹೋಗಿತ್ತು.

ನನ್ನನ್ನು ಸಮಾಧಾನ ಪಡಿಸಲು ಯತ್ನಿಸುತ್ತಾ ಹೇಳಿದ, ''ಮಾತೆ ಫ್ಲೋರಾ, ನಾವು ಭೂಗತರಾಗಿ ಬಿಟ್ಟ ಸುದ್ದಿ ಉಂಟುಮಾಡಬಹುದಾದ ರೋಮಾಂಚನವನ್ನು ಊಹಿಸು.''

ಆತನ ಮಾತಿನ ಶ್ಲೇಷೆಯನ್ನು ನಾನು ಮೆಚ್ಚಲಿಲ್ಲ. ಆತ ಅಲಕ್ಷ್ಯದಿಂದಲೇ ಮುಂದುವರಿಸಿದ, ''ಜಾಗತಿಕ ಸುದ್ದಿ ಮಾಧ್ಯಮಗಳು ಮಾಡಬಹುದಾದ ಊಹಾಪೋಹಗಳನ್ನು ಯೋಚಿಸು. ಇತ್ತ ಅಮೇರಿಕಾದವರೂ ಅತ್ತ ರಷ್ಯದವರೂ ನಮ್ಮಿಬ್ಬರನ್ನು 'ಡಬ್ಬಲ್ ಏಜೆಂಟ್' ಎಂದುಕೊಂಡಾರು.'' ಅವನು ಗಹಗಹಿಸಿ ನಕ್ಕ. ನನಗೆ ನಗು ಬರಲಿಲ್ಲ, ಆತ ಮುಂದುವರಿಸಿದ, ''ಮತ್ತು ನಮ್ಮ ಭಿನ್ನಮತೀಯ ಬುದ್ಧಿಜೀವಿಯನ್ನೂ ಅನುಮಾನಿಸಿಯಾರು, ಬಡಪಾಯಿ, ಆದರ ಪರಿಸ್ಥಿತಿ ಹೇಗಿದೆ ಯೆಂದರೆ ನಾವೇನೂ ಮಾಡುವ ಹಾಗಿಲ್ಲ. ನಡಿ, ಸ್ವಲ್ಪ ಹೊತ್ತು ಹೊರಗೆ ಹೋಗಿ ಬರೋಣ.''

ಹೊರಗೆ ಬಂದು ಟ್ಯಾಕ್ಸಿ ಹತ್ತಿ ಊರೊಳಗೆ ಹೋದೆವು. ಕೇವಲ ಸಿರಿವಂತರು ಮಾತ್ರ ಕಾಲಿಕ್ಕಬಹುದಾದ ಅಂಗಡಿಯೊಂದರಲ್ಲಿ ಫ್ಯಾಷನ್ ಷೋ ನಡೆಯುತ್ತಿತ್ತು. ನಮ್ಮ ಉಡುಪುಗಳ ಕಾರಣದಿಂದಾಗಿ ನಮ್ಮನ್ನಾರೂ ತಡೆಯಲಿಲ್ಲ. ಒಳಹೋದ ನಾವು ಹಿಂದಿನ ಸಾಲಲ್ಲಿ ಕುಳಿತೆವು. ರೂಪದರ್ಶಿಗಳು ಅತ್ಯಾಧುನಿಕ 'ಡಿಯೋರ್' ಸೃಷ್ಟಿಗಳನ್ನು ಪ್ರದರ್ಶಿಸುತ್ತಿದ್ದರು.

ಹೊಂಬಣ್ಣದ ಸಂಜೆಗವಸು ತೊಟ್ಟು, ಮುತ್ತುಗಳನ್ನು ಕೋದ ಸೊಂಟಪಟ್ಟಿಯನ್ನು ಧರಿಸಿದ

ಎತ್ತರದ, ತೆಳ್ಳಗಿನ ರೂಪದರ್ಶಿಯೊಬ್ಬಳು ಕಾಣಿಸಿಕೊಂಡಾಗ ನಾನು ಒಮ್ಮೆಲೆ ಬೆಚ್ಚಿಬಿದ್ದೆ. ಹದಿನಾಲ್ಕುನೂರು ವರ್ಷಗಳ ಹಿಂದೆ, ತಣ್ಣಗಿನ ಮಂಜು ಕವಿದ ಸಂಜೆಯ ಹೊತ್ತು, ಸಿರಿಯಾದ ಕಾನ್ವೆಂಟಿನ ಕೊಠಡಿಯೊಂದರಲ್ಲಿ ಸನ್ಯಾಸಿನಿಯ ಉಡುಪುಗಳಿಗೆ ಪ್ರತಿಯಾಗಿ, ಕಟ್ಟಕಡೆಯ ಬಾರಿಗೆ ನಾನು ಕಳಚಿದ್ದ ಬೈಜಾಂಟಿಯನ್ ಉಡುಪಿನಂತೆಯೇ ಅದು ಕಾಣಿಸಿತ್ತು. ''ಹೆಂಗಸರ ಫ್ಯಾಷನ್‌ನಲ್ಲಿ ಹೆಚ್ಚಿನ ಬದಲಾವಣೆಯೇನೂ ಆದಂತಿಲ್ಲ. ಅಲ್ವಾ?'' ಎಂದು ಶುಷ್ಕವಾಗಿ ಪ್ರತಿಕ್ರಿಯೆ ನೀಡಿದ ಫಾದರ್ ''ಕಾತಿಂಕ್ ಕೂಡಾ ಅಂತಹ ಗವಸುಗಳನ್ನು ತೊಡುತ್ತಿದ್ದಳು'' ಎಂದ.

ನಾನೇನೂ ಹೇಳದೆ, ತೇಲುತ್ತಾ ಸರಿಯುತ್ತಿರುವ ರೂಪದರ್ಶಿಯನ್ನು ದಿಟ್ಟಿಸುವುದನ್ನೇ ಮುಂದುವರಿಸಿದೆ. ಅದು ಖಂಡಿತವಾಗಿ ಅತಿ ದುಬಾರಿ ಉಡುಪು. ನಾನು ನಿಟ್ಟುಸಿರು ಬಿಟ್ಟೆ. ಫಾದರ್ ಪಿಸುಗುಟ್ಟಿದ, ''ಮಾತೆ ಫ್ಲೋರಾ ಸಬೀನಾ, ನಾನು ಯೋಚಿಸುತ್ತಿರುವುದನ್ನೇ ನೀನೂ ಯೋಚಿಸುತ್ತಿದ್ದೀಯಾ?''

''ಹೌದು ಫಾದರ್.''

''ಸರಿ ಹಾಗಾದರೆ, ನೀನು ಹೋಟೇಲಿಗೆ ಹೋಗು. ನಾನು ಆ ನಂತರ ಬರುವೆ.''

ಗ್ರೆಗೊರಿ ಓರ್‌ಬಿಲಿಯಾನಿ ಕದ ತಟ್ಟಿದಾಗ ಮಧ್ಯರಾತ್ರಿ ದಾಟಿತ್ತು. ನಾನು ಹೊರಗೆ ಇಣುಕಿದೆ. ತನ್ನ ಮೇಲಂಗಿಯೊಳಗಿನಿಂದ ಪೊಟ್ಟಣವೊಂದನ್ನು ಹೊರತೆಗೆದ ಆತ ಪಿಸುಗುಟ್ಟಿದ, ''ಷೋ ಮುಗಿದ ಬಳಿಕ ಒಳಗಿನ ಕೋಣೆಗೆ ಹೋದೆ. ಇದನ್ನು ಅಲ್ಲಿ ಹ್ಯಾಂಗರ್‌ನಲ್ಲಿ ತೂಗಿಸಿಟ್ಟಿದ್ದರು. ದೇವರು ನಮ್ಮ ಜತೆ ಇದ್ದಾನೆ.''

ಆತ ತನ್ನ ಕೋಣೆಗೆ ತೆರಳಿ ಪಾಲೆಸ್ತೀನ್ ಸಮಸ್ಯೆಗಳ ಬಗೆಗಿನ ಪುಸ್ತಕವೊಂದನ್ನು ಓದಲಾರಂಭಿಸಿದ. ಕನ್ನಡಿಯ ಬಳಿಗೆ ಧಾವಿಸಿದ ನಾನು, ಸನ್ಯಾಸಿನಿಯ ದಿರಿಸುಗಳನ್ನು ಕಿತ್ತೆಸೆದು ಗವಸು ತೊಟ್ಟುಕೊಂಡೆ. ಅದು ಬಹಳ ಸಡಿಲವಾಗಿತ್ತು. ಮರುದಿನ ಬೇಗ್ಗೆ ಹಲವು ಸುರಳಿ ಹತ್ತಿ, ಒಂದು ಜತೆ ಕತ್ತರಿ ಮತ್ತು ಸೂಜಿದಾರವನ್ನು ತಂದು 'ಡಿಯೋರ್' ಗೌನಿಗೆ ಪ್ಯಾಡ್ ಇಟ್ಟು ಶ್ರದ್ಧೆಯಿಂದ ಹೊಲಿಗೆ ಹಾಕಿದೆ. ಅಗತ್ಯದ ಬದಲಾವಣೆಗಳನ್ನು ಮಾಡಿ ಗವಸು ಧರಿಸಿದಾಗ, ಅದನ್ನೊಂದು ಅಸ್ಥಿಪಂಜರ ಧರಿಸಿದೆಯೆಂದು ಯಾರಿಗೂ ಗೊತ್ತಾಗುವಂತಿರಲಿಲ್ಲ.

ಅದು ಭೂಮಿಯ ಮೇಲಿನ ನಮ್ಮ ಕಡೆಯ ದಿನವಾಗಿತ್ತು. ಮಧ್ಯಾಹ್ನ ಫಾದರ್ ವಸತಿಗೃಹಕ್ಕೆ ಬಂದ. ಹತ್ತಿರದ ಉದ್ಯಾನವನಕ್ಕೆ ಹೋದ ನಾವು ಬೆಂಚೊಂದರ ಮೇಲೆ ಕುಳಿತೆವು. ಫಾದರ್ ನನ್ನತ್ತ ಬಹಳ ದುಃಖದಿಂದಲೇ ದಿಟ್ಟಿಸುತ್ತಿದ್ದ. ಬಳಿಕ ಜೇಬಿನಿಂದ ಒಂದು ಪುಸ್ತಕ ತೆಗೆದು ಹೇಳಿದ, ''ಮಾತೆ ಫ್ಲೋರಾ, ಇದನ್ನು ನಾನಿಂದು ಒಂದು ಗ್ರಂಥಾಲಯದಿಂದ ಕದ್ದೆ. ಇದು ಐರಿಷ್ ಕವಿ ಡಬ್ಲ್ಯೂ. ಬಿ.ಯೇಟ್ಸ್ ಬರೆದದ್ದು'' ಕತ್ತಲಾಗುತ್ತಲಿತ್ತು. ಸೂರ್ಯ ಮಾಪ್ಲಾ ಮರಗಳ ಹಿಂದೆ ಇದ್ದ. ಪುಸ್ತಕ ತೆರೆದ ಫಾದರ್ ಹೇಳಿದ, ''ಕೇಳು, ಇದನ್ನು.''

ಆತ ಕವಿತೆ ಓದಿದಾಗ, ನನಗೆ ಬೈಜಾಂಟಿಯಂ ನೆನಪಾಗಿ ಕಣ್ಣೀರ ಕೋಡಿ ಹರಿಯಿತು. ನಾನು ಬಹಳ ಅಳತೊಡಗಿದೆ. ಪುಸ್ತಕ ಮುಚ್ಚಿದ ಫಾದರ್ ನಿಟ್ಟುಸಿರು ಬಿಟ್ಟ. ಬಳಿಕ ಹೇಳಿದ, ''ಪಟ್ಟಣದಲ್ಲಿ ಕೊನೆಯ ಬಾರಿ....!''

ಪಟ್ಟಣದ ದಾರಿಯಲ್ಲಿ ನಾವು, ಇಸ್ರಾಯಿಲ್‌ನ ಸಹಾಯಾರ್ಥ ಏರ್ಪಡಿಸಲಾಗಿದ್ದ ಒಂದು 'ಮುಖವಾಡ ನೃತ್ಯಕೂಟ'ದ ಫಲಕ ನೋಡಿದೆವು. ಹತ್ತಿರದ ಹೊಟೇಲೊಂದರಲ್ಲಿ ಅದು ಅಂದು ಸಾಯಂಕಾಲ ನಡೆಯುವುದಿತ್ತು. ''ನಾವು ಸ್ವಲ್ಪ ಮೋಜು ಮಾಡೋಣ'' ಫಾದರ್ ಹೇಳಿದ.

ಉದ್ಯಾನವನದಿಂದ ಹೊರಡುವ ಮುನ್ನ ನನ್ನ ರೇಶ್ಮೆ ಗವನು ಕಾಣಿಸದಂತೆ ಕರಿಯ ಮೇಲಂಗಿ ಹಾಕಿಕೊಂಡಿದ್ದೆ. ಅಂಗಡಿಯೊಂದಕ್ಕೆ ಹೋದ ನಾವು ಒಂದು ಜೊತೆ ಮುಖವಾಡ ಮತ್ತು ಟೋಪಿಗಳನ್ನು ಕೊಂಡೆವು. ಅಂಗಡಿಯ ಉಡುಗೆ ಕೊಠಡಿಗೆ ಹೋಗಿ ನೃತ್ಯಕೂಟಕ್ಕೆ ಸಿದ್ಧರಾದೆವು. ಅಂಗಡಿಯಿಂದ ಹೊರಬರುವ ಮುನ್ನ ಫಾದರ್ ಒಂದು ಪ್ಯಾಕೆಟ್ ದುಬಾರಿ ಸಿಗರೇಟು ಖರೀದಿಸಿದ. ''ಸ್ಮಶಾನದ ತನಕ ಹೋಗಲು ಕಾರು ಬಾಡಿಗೆಗಾದರೂ ಸ್ವಲ್ಪ ದುಡ್ಡು ಉಳಿಸು'' ನಾನು ನೆನಪಿಸಿದೆ. ಅದು ಭೂಮಿಯ ಮೇಲಿನ ನಮ್ಮ ಕೊನೆಯ ಸಾಯಂಕಾಲ. ಹೊಟೇಲಿನವರೆಗೆ ಹೆಜ್ಜೆಹಾಕಿದ ನಾವು ನೃತ್ಯಕೂಟದ ಟಿಕೆಟ್‌ಗಳನ್ನು ಖರೀದಿಸಿದೆವು. ಬಾಗಿಲ ಬಳಿ ಫಾದರ್ ಗಂಭೀರವಾಗಿ, ''ಜಾರ್ಜಿಯಾದ ರಾಜಕುಮಾರಿ ಕಾತಿಂಕ್ ತಿನಾತಿನ್ ಹಾಗೂ ಹಿರಿಯ ಡ್ಯೂಕನಾದ....'' ಎಂದ.

ನಮ್ಮನ್ನು ಬಿಳಿಯ ರಷ್ಯನ್ನರೆಂದು ಭಾವಿಸಿದ ದ್ವಾರಪಾಲಕ, ನಮ್ಮ ಹೆಸರನ್ನು ಘೋಷಿಸುವಾಗ ಬಹಳ ಪ್ರಭಾವಿತನಾದವನಂತೆ ಕಂಡ.

ಸಭಾಂಗಣವನ್ನು ಹೊಕ್ಕ ನಾವು ಸೋಫಾದಮೇಲೆ ಕುಳಿತೆವು. ಕೆಲವು ನಿಮಿಷಗಳ ಬಳಿಕ ಅನುಮತಿ ಕೋರಿ, ಫಾದರ್ ಸಿಗರೇಟು ಸೇದಲೆಂದು ಪುರುಷರ ವಿಶ್ರಾಂತಿ ಕೊಠಡಿಗೆ ಹೋದ. ನಾನು ಕುಳಿತು ಯೋಚಿಸಿದೆ: ಇನ್ನು ಬರೇ ಮೂರು ತಾಸು ಕಳೆದರೆ ಮತ್ತೆ ಸ್ಮಶಾನದ ಕತ್ತಲು; ಒಂಟಿತನ, ಸಾವಿನ ದೀರ್ಘ ನಿದ್ರೆ, ಮರಳಿ ಪುನರುತ್ಥಾನದ ತನಕ....

ಅಷ್ಟರಲ್ಲಿ ನನ್ನ ದೃಷ್ಟಿ ಅವನ ಮೇಲೆ ಬಿತ್ತು. ಕಾನ್‌ಸ್ಟಾಂಟಿನೋಪಲ್‌ನ ಥಿಯೋಡೊರಿಕ್ ಗಲ್ಲಾಸಿಸ್, ನನ್ನ ನಿಶ್ಚಿತಾರ್ಥ ವರ. ಅನುಮಾನವೇ ಇಲ್ಲ. ಅದು ಅವನಲ್ಲದೆ ಬೇರಾರೂ ಅಲ್ಲ. ಅದೇ ಬಂಗಾರಬಣ್ಣದ ಗುಂಗುರು ಕೂದಲು, ಅದೇ ಭವ್ಯ ಗ್ರೀಕ್ ಮೂಗು. ರೋಮನ್ ಮಾಂಡಲಿಕನಂತೆ ವೇಷ ಬದಲಿಸಿ 'ಸ್ಪೇನಿನ ಜಿಪ್ಸಿ'ಯೊಬ್ಬಳ ಜತೆ ನರ್ತಿಸಿದ್ದ. ನನಗೆ ನನ್ನ ಕಣ್ಣುಗಳನ್ನು ನಂಬಲಾಗಲಿಲ್ಲ. ಅದು ಹೇಗೆ ಸಾಧ್ಯ? ಮತ್ತೊಂದು ಪವಾಡ! ನನ್ನ ಪಕ್ಕದಲ್ಲಿ ಅವನು ನರ್ತಿಸುತ್ತಾ ಸರಿದಂತೆ ದಿಗ್ಭ್ರಾಂತಳಾಗಿ ಅವನತ್ತಲೇ ಕಣ್ಣು ನೆಟ್ಟೆ. ಅವನು ನರ್ತಿಸುತ್ತಾ ಹೋದತ್ತಲೆಲ್ಲ ನಾನು ಕಣ್ಣು ಹಾಯಿಸುತ್ತಿದ್ದೆ. ನಾನು ತನ್ನಲ್ಲಿ ಆಕರ್ಷಿತಳಾಗಿರುವುದನ್ನು ಅವನೂ ಗಮನಿಸಿರಬೇಕು. ವಾಲೆಟ್ ನೃತ್ಯ ಮುಗಿದ ಬಳಿಕ ನನ್ನ ಬಳಿಗೆ ಬಂದು ಮುಂದಿನ ನೃತ್ಯದಲ್ಲಿ ಜೊತೆನೀಡಬೇಕೆಂದು ಕೇಳಿದ. ''ಕ್ಷಮಿಸಿ, ಥಿಯೋ.... ನಾನು... ನನ್ನ ಕಾಲ್ಬೆರಳು ಮುರಿದಿದೆ.... ನರ್ತನ ಮಾಡಲಾರೆ. ಒಂದು ಕ್ಷಣ ಕುಳಿತುಕೊಳ್ಳು... ಥಿಯೋ....'' ಎಂದು ಅತ್ಯಾಶ್ಚರ್ಯಗೊಂಡು ತೊದಲಿದೆ. ಅವನು ಕುಳಿತ. ನಾನು ಕೀರಲು ಸ್ವರದಲ್ಲಿ ''ನೀನು....ನೀನು....ನೀನೇನಾದರೂ ಕಾನ್‌ಸ್ಟಾಂಟಿನೋಪಲ್‌ನ ಥಿಯೋಡೊರಿಕ್ ಗಲ್ಲಾಸಿಸ್....?'' ಎಂದೆ.

''ಅಲ್ಲ ಮೇಡಮ್'' ಅವನು ವಿನಮ್ರವಾಗಿ ಉತ್ತರಿಸಿದ, ''ನಾನು ಬ್ರೂಕ್ಲಿನ್‌ನ ರಿಚರ್ಡ್ ಕೊಹೇನ್.''

ಅಷ್ಟರಲ್ಲಿ ಅವನ ಸ್ಪೇನಿನ ಗೆಳತಿ ಜೊತೆಯಾದಳು. ನನ್ನ ಜತೆ ಇಬ್ಬರೂ ಸ್ವಲ್ಪ ಹೊತ್ತು ಮಾತನಾಡಿ ಮುಂದಿನ ನೃತ್ಯಕ್ಕೆ ಹೊರಟು ಹೋದರು. ಕಟುವಾದ ತಂಬಾಕು ವಾಸನೆ ಬೀರುತ್ತಾ ಫಾದರ್ ಗ್ರೆಗೊರಿ ಮರಳಿ ಬಂದ. ನನ್ನ ಪಕ್ಕದಲ್ಲಿ ಕುಳಿತು, ಗಡಿಯಾರ ನೋಡುತ್ತಾ, ''ಮಾತೆ ಫ್ಲೋರಾ ಸಬೀನಾ, ಒಂಭತ್ತೂಮುಕ್ಕಾಲಾಯಿತು, ಹೊರಡೋಣ'' ಎಂದು ತಣ್ಣಗೆ ಹೇಳಿದ.

ಆಗ ನನ್ನ ತಲೆಬುರುಡೆಗೆ ಒಂದು ಭಯಂಕರವಾದ ವಿಚಾರ ಬಂತು; ನಾನು ಇಂಗ್ಲೀಷ್‌ನಲ್ಲಿ ಉದ್ಗರಿಸಿದ್ದೆ - 'ದೇವರೇ ನಮ್ಮ ಕಥೆ ಮುಗಿಯಿತು', ಅಮೇರಿಕಾ ಸಂಯುಕ್ತ ಸಂಸ್ಥಾನಗಳಿಗೆ

ಬಂದಾಗಿನಿಂದ ನಾವು ಯಾವಾಗಲೂ ಪರಸ್ಪರ ಇಂಗ್ಲೀಷ್‌ನಲ್ಲಿಯೇ ಮಾತನಾಡಬೇಕೆಂದು ಫಾದರ್ ಒತ್ತಾಯಿಸಿದ್ದ. ಹೀಗೆ ಮಾಡುವುದರಿಂದ ಇಂಗ್ಲಿಷ್ ಅಭ್ಯಾಸ ಉಳಿಯುತ್ತದೆಂದೂ ಹೇಳುತ್ತಿದ್ದ.

''ನಾವಿಲ್ಲಿರುವದು ಕೆಲವು ತಿಂಗಳು ಮಾತ್ರ. ನಾವೇಕೆ ಹೊಸಭಾಷೆಯೊಂದನ್ನು ಕಲಿಯಬೇಕು?'' ನಾನು ಗೊಣಗಿದ್ದೆ. ಆತ ಶಾಂತವಾಗಿ ಹೇಳಿದ್ದ: ''ಮಾತೆ ಫ್ಲೋರಾ, ಒಬ್ಬ ಮನುಷ್ಯ ಈ ಭೂಮಿಯ ಮೇಲೆ ಸುಮಾರು ಅರವತ್ತೆಪ್ಪತ್ತು ವರ್ಷ ಬದುಕುತ್ತಾನೆ. ಕೆಲವು ಬಾರಿ ಹೆಚ್ಚು ಕಮ್ಮಿಯೂ ಆಗಬಹುದು. ಜೀವನದ ಈ ಸೀಮಿತ ಅವಧಿಯ ಅರ್ಧದಷ್ಟನ್ನು ಕಠಿಣ ಅಭ್ಯಾಸದಲ್ಲಿ ಕಳೆದು, ಅತಿಕ್ಲಿಷ್ಟ ವಿಷಯಗಳ ಜ್ಞಾನಾರ್ಜನೆ ಮಾಡುತ್ತಾನೆ, ಒಪ್ಪಾಡುತ್ತಾನೆ. ಎಲ್ಲ ಬಗೆಯ ಅನುಭವಗಳನ್ನೂ ಪಡೆಯುತ್ತಾನೆ, ಪರಿತಪಿಸುತ್ತಾನೆ. ಇಷ್ಟೆಲ್ಲ ಜ್ಞಾನ, ಕಲಿಕೆ, ಆತ್ಮಜ್ಞಾನ ಅನುಭವಗಳಿದ್ದರೂ ಒಂದು ದಿನ ಸತ್ತುಹೋಗುತ್ತಾನೆ. ಈಗೊಬ್ಬ ಕೆಲವು ತಿಂಗಳೋ, ವರ್ಷಗಳೋ ಹೆಚ್ಚು ಬದುಕಬಹುದಾದರೂ ಕೊನೆಗೆಲ್ಲ ಒಂದೇ....''

ದೇವರೆ! ಫಾದರ್ ಗ್ರೆಗೊರಿ ಓರ್‌ಬಿಲಿಯಾನಿಯ ಜತೆ ವಾದ ಮಾಡುವುದು ಸಾಧ್ಯವಿಲ್ಲ. ನಾಲ್ಕು ಜನರ ಎದುರಲ್ಲಿ ನಾವು ಮೆಲುದನಿಯಲ್ಲಿ ಮಾತನಾಡಿಕೊಳ್ಳುತ್ತಿದ್ದೆವಾದರೂ, ಆ ಕ್ಷಣದಲ್ಲಿ ಭಯಪಟ್ಟು ಜೋರಾಗಿ ಕಿರುಚಿದ್ದೆ! ನಮಗಿತ್ತ ಸಮಯ ಗ್ರೀನ್‌ವಿಚ್‌ನದ್ದೋ? ರಷಿಯಾದ್ದೋ? ಸೋವಿಯತ್ ರಷ್ಯಾ ಮತ್ತು ಅಮೇರಿಕಗಳ ನಡುವೆ ಕಡಿಮೆಯೆಂದರೂ ಹದಿನೆಂಟು ತಾಸುಗಳ ವ್ಯತ್ಯಾಸವಿರಬಹುದು. ಅದಲ್ಲದೆ ನಮಗಾತ ದಿನಾಂಕವನ್ನು ಹೇಳಿದ್ದು ಹಳೆಯ ರಷ್ಯನ್ ಕ್ಯಾಲೆಂಡರಿಗೆ ಅನುಗುಣವಾಗಿಯೋ.... ಅಥವಾ....? ಇದ್ದಕ್ಕಿದ್ದಂತೆ ನರ್ತಕರ ಗುಂಪಿನಿಂದ ಗುಜು ಗುಜು ಸದ್ದು ಕೇಳಿಸಿತು. ಯಾರೋ ಉದ್ವಿಗ್ನರಾಗಿ ಕಿರುಚಿದ್ದರು. ''ಹೋ! ಸೋವಿಯತ್ ಗುಪ್ತಚಾರರ ಧಾಂದಲೆ.''

''ಅರಬ್ ಭಯೋತ್ಪಾದಕರು....'' ಹೆಂಗಸೊಬ್ಬಳು ಕಿರುಚಿದಳು.

''ಅಯ್ಯೋ ದೇವರೇ, ಮುಂದೇನಪ್ಪಾ'' ಫಾದರ್ ಗ್ರೆಗೊರಿ ನೋವಿನಿಂದ ಹೇಳಿದರು.

ಪೊಲೀಸನೊಬ್ಬ ಮುಂದೆ ಬರುತ್ತಾ, ನಾಟಕೀಯವಾಗಿ, ''ಈ ನನ್ನ ಸ್ನೇಹಿತ....'' ಎನ್ನಲಾರಂಭಿಸಿದ.

ನಾವು ಎದ್ದುನಿಂತೆವು. ನಮ್ಮನ್ನು ಮುಖವಾಡದವರು ಸುತ್ತುವರಿದಿದ್ದರು.

ಅಧಿಕಾರಿಯ ಜತೆಯಲ್ಲಿ ಇನ್ನಿಬ್ಬರು ಪೊಲೀಸರಿದ್ದರು ''ನಿನ್ನ ಗೆಳತಿತೊಟ್ಟಿರುವ ಈ ಗವನು, ಅದನ್ನು ಡಿಯೋರ್ ಸಂಗ್ರಹಾಲಯದಿಂದ ಹಾರಿಸಿದ್ದಿ. ಆ ರಾತ್ರಿಯಿಂದಲೇ ನಾವಿದನ್ನು ಹುಡುಕುತ್ತಿದ್ದೇವೆ. ಇದನ್ನು 'ಶ್ರೀಮತಿ ಜಾಕೆಲಿನ್ ಒನಾಸಿಸ್'ಳಿಗಾಗಿ ವಿಶೇಷವಾಗಿ ತಯಾರಿಸಲಾಗಿತ್ತು'' ಎಂದ ಅಧಿಕಾರಿ. ನನ್ನ ಹೊಳೆಯುವ ಉಡುಪನ್ನು ನೋಡಲು ಸಭಾಂಗಣದಲ್ಲಿದ್ದವರೆಲ್ಲ ಕತ್ತು ಚಾಚುತ್ತಿರುವಂತೆ ಗುಜು ಗುಜು ಹೆಚ್ಚಾಯಿತು. ಅಧಿಕಾರಿ ಹೇಳುತ್ತಿದ್ದ, ''ರಷ್ಯನ್ ಸನ್ಯಾಸಿಯಂತೆ ವೇಷ ಮರೆಸಿಕೊಂಡಿರುವ ಕಳ್ಳನೊಬ್ಬ ಅಪರೂಪದ ಪುಸ್ತಕಗಳನ್ನು ಕದಿಯುತ್ತಿರುವ ಸುದ್ದಿ ನಮಗೆ ಹಲವು ಸಾರ್ವಜನಿಕ ಗ್ರಂಥಾಲಯಗಳಿಂದ ಬಂದಿದೆ...., ನೀವಿಬ್ಬರೂ ದಯವಿಟ್ಟು ನಮ್ಮೊಡನೆ ಪೋಲಿಸ್ ಸ್ಟೇಷನ್‌ಗೆ ಬನ್ನಿ....''


ಆ ಕ್ಷಣದಲ್ಲಿ ಫಾದರ್ ಗ್ರೆಗೊರಿ ಓರ್‌ಬಿಲಿಯಾನಿ ನನ್ನತ್ತ ನೋಡಿದ; ನಾನು ಆತನತ್ತ ನೋಡಿದೆ. ಆ ಬಳಿಕ ನಿಧಾನವಾಗಿ ನಾವು ನಮ್ಮ ಕೈಗವಸುಗಳನ್ನು, ಕನ್ನಡಕಗಳನ್ನು ಕೊನೆಗೆ ನಮ್ಮ ಮುಖವಾಡಗಳನ್ನು ಕಳಚಿದೆವು.....

●

ಆರೋಗ್ಯದಂಗಳ

ನಿಮ್ಮ ಆರೋಗ್ಯಕ್ಕಾಗಿ
'ಕಸ್ತೂರಿ'ಯ ಕಾಣಿಕೆ

ಆರ್ಥ್ರೈಟಿಸ್? ಆತಂಕ ಬೇಡ...



ಡಾ. ವಿನೋದ್ ಎಂ. ಕಲ್ಯಾಣಪುರಕರ,
ಎಲುಬು-ಕೀಲುಗಳ ತಜ್ಞರು,
ಕೊಪ್ಪಿಕರ ರಸ್ತೆ, ಹುಬ್ಬಳ್ಳಿ-20

ಆರ್ಥರೈಟಿಸ್? ಆತಂಕ ಬೇಡ...

ನಿರೂಪಣೆ: ಆದಿತ್ಯ

ಸಂಧಿವಾತ, ಕೀಲು ನೋವು-ಬಾವು, ಉರಿ... ಬಹುತೇಕರನ್ನು ಬವಣೆಪಡಿಸುವ ವ್ಯಾಧಿ. ಈ ವ್ಯಾಧಿಗೆ ಅಂಗಭೇದ-ಲಿಂಗಭೇದವೇ ಇಲ್ಲ. ವಯೋಮಾನದ ವಿವೇಚನೆಯೂ ಇಲ್ಲ. ದೇಹದೇಗುಲದ ಸ್ತಂಭಸಮಾನವಾದ ಮೂಳೆಗಳ ಕೂಡು ಸ್ಥಾನಗಳಲ್ಲಿ ಕೆಲವರಿಗೆ ಕಾಯಮ್ಮಾಗಿ ಕೂತರೆ ಇನ್ನು ಕೆಲವರಿಗೆ ಇಂದು ಇಲ್ಲಿ-ನಾಳೆ ಅಲ್ಲಿ ಎಂದು ಕಾಲ್ಬೆರಳಿನಿಂದ ತಲೆಗೂದಲಿನವರೆಗೂ ಸಂಚರಿಸುತ್ತಿರುತ್ತದೆ.

ಹೊರನೋಟಕ್ಕೆ ಕಾಣಿಸಿಕೊಳ್ಳದೆ ಒಳಗೊಳಗೇ ತನ್ನ ಆತಿಥೇಯನನ್ನು ಹಣ್ಣುಮಾಡಿ, ಕೆಲವೊಮ್ಮೆ ಹುಣ್ಣು ಮಾಡಿ ಹಣಿಯುವ ಈ ಜಾಡ್ಯದ ಕುರಿತಾಗಿ 'ದಂತಕಥೆ'ಗಳೂ ಅನೇಕ. ಸ್ವತಃ ವೈದ್ಯಶಾಸ್ತ್ರವೇ ಇನ್ನೂ ಈ ಕುರಿತು ಅತ್ಯಂತಿಕ ನಿರ್ಧಾರಕ್ಕೆ, ನಿದಾನ ಮಾರ್ಗಕ್ಕೆ ಬರುವ ದಿಸೆಯ ಪ್ರಯೋಗಗಳಲ್ಲಿ ನಿರತವಾಗಿದೆ.

ಆದರೆ ಆರ್ಥರೈಟಿಸ್ ಎಂಬ ಕುರಿತು ಆತಂಕ ಬೇಡ. ಮೊದಲು ಆರ್ಥರೈಟಿಸ್ ಏನೆಂಬುದನ್ನು ಅರಿತುಕೊಳ್ಳೋಣ. ಅದನ್ನು ತಿಳಿಸಿಕೊಡುತ್ತ ಆರೈಕೆಯ ಬಗೆಗೂ ವಿವರಿಸಿದ್ದಾರೆ ಹುಬ್ಬಳ್ಳಿಯ ಖ್ಯಾತ ಎಲುವು-ಕೀಲುಗಳ ತಜ್ಞ ಡಾ. ವಿನೋದ ಎಂ. ಕಲ್ಯಾಣಪುರಕರ.

● ಸಂಪಾದಕ

ಗ್ರೀಕ್ ಪದ Arthron ಎಂದರೆ ಕೀಲು - ಮತ್ತೊಂದು ಗ್ರೀಕ್ ಪದ itis ಎಂದರೆ ಉರಿ! ಕೀಲುಗಳ ಉರಿಯನ್ನೇ ವೈದ್ಯಕೀಯ ಭಾಷೆಯಲ್ಲಿ ಆರ್ಥರೈಟಿಸ್ ಅನ್ನುತ್ತಾರೆ. ಕೀಲೊಂದರ ಸುತ್ತಲಿನ ಪೊರೆ (ಇದನ್ನು Synovium ಅನ್ನುತ್ತಾರೆ) ಇಂತಹ ಉರಿತಕ್ಕೆ ಒಳಗಾಗುವುದರಿಂದ ಈ ಕಾಯಿಲೆಯನ್ನು Synovitis ಎಂದೂ ಕರೆಯುತ್ತಾರೆ. ರುಮಾಟಿಸಂ ಎಂಬ ಶಬ್ದವನ್ನು ನಾವು ಅನೇಕಸಲ ಕೇಳಿರುತ್ತೇವೆ. ಇದರ ಸಾಮಾನ್ಯ ಅರ್ಥ: ಕೀಲು ಹಾಗೂ ಮಾಂಸಖಂಡಗಳಲ್ಲಿ ಕಂಡು ಬರುವಂಥಾದ ವಿವಿಧ ತರಹದ ನೋವು. ಇಂತಹ ನೋವುಗಳನ್ನು ಕೆಲವರು ಆರ್ಥರೈಟಿಸ್‌ನ ಒಂದು ವಿಧವಾಗಿರಬಹುದೆಂದು ಊಹಿಸುತ್ತಾರೆ. ಮತ್ತೆ ಕೆಲವರಲ್ಲಿ ಇಂಥ ನೋವಿಗೆ ನಿರ್ದಿಷ್ಟ ಕಾರಣವೂ ಇರುವುದಿಲ್ಲ. ಸರಳ ಕನ್ನಡದಲ್ಲಿ 'ಕೀಲುನೋವು' ಅನ್ನುತ್ತಾರೆ. Soft tissue Rheumatism ಎಂಬ ಪದ ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಭಾಷೆಯಲ್ಲಿ ಹೆಚ್ಚು ಪ್ರಚಲಿತವಾಗಿದೆ. ಇದರರ್ಥ ಮಾಂಸ, ಮೂಳೆಯ ಹುರಿ

ಮುಂತಾದ ಮೃದುಭಾಗಗಳಲ್ಲಿ ನೋವು ಮತ್ತು ಸೆಟೆದುಕೊಳ್ಳುವಿಕೆ.

ಕೀಲುಗಳ ಸ್ವರೂಪ ಅರ್ಥಮಾಡಿಕೊಳ್ಳಿ: ಆರ್ಥ್ರೈಟಿಸ್ ಏನೆಂಬುದು ಸ್ಪಷ್ಟವಾಗುತ್ತದೆ. ಕೀಲು - ಅಂದರೆ ಎರಡು ಮೂಳೆಗಳು ಸೇರುವ ಜಾಗ. ಕೀಲುಗಳಲ್ಲಿ ಅನೇಕ ವಿಧದ ಕೀಲುಗಳಿವೆಯಾದರೂ ಅವುಗಳಲ್ಲಿ ಎರಡು ಮುಖ್ಯವಾದ ಗುಂಪುಗಳಿವೆ. ಮೊದಲನೆಯ ಗುಂಪಿನ ಕೀಲುಗಳು ಹೆಚ್ಚು ಸರಿದಾಡದ ಮತ್ತು ಪೊಳ್ಳು ಭಾಗವಿಲ್ಲದಂಥವು. ಎರಡನೆಯ ಗುಂಪಿನ ಕೀಲುಗಳು ತುಂಬ ಸಲ ಅಲಗುವಂಥವು ಹಾಗೂ ಪೊಳ್ಳು ಭಾಗ ಹೊಂದಿರುವಂತಹವು.

ಮೊದಲ ಗುಂಪಿನ ಕೀಲುಗಳನ್ನು synarthrosis ಎನ್ನುತ್ತಾರೆ. ಇವು ನಾರುಕೋಶ (fibrous) ಗಳನ್ನು ಹಾಗೂ cartilage ಎಂಬ ಮೆಲ್ಲೆಲುಬನ್ನು ಹೊಂದಿರುತ್ತವೆ. ಇಂಥ ಕೀಲುಗಳು ನಮ್ಮ ಮಿದುಳು ಹಾಗೂ ಬೆನ್ನಲ್ಲಿರುತ್ತವೆ. ಆದರೆ ಈ ತರಹದ ಕೀಲುಗಳಿಗಿಂತ ಎರಡನೆ ಗುಂಪಿನ ಕೀಲುಗಳು ಹೆಚ್ಚಾಗಿ ಆರ್ಥ್ರೈಟಿಸ್‌ಗೆ ತುತ್ತಾಗುವುದರಿಂದ, ಅವುಗಳನ್ನು ಹೆಚ್ಚು ವಿಶದವಾಗಿ ತಿಳಿದುಕೊಳ್ಳುವುದು ಅನಿವಾರ್ಯ. Synovial joint ಅಥವಾ Diarthrosis ಎಂದು ಕರೆಯಲ್ಪಡುವ ಈ ತರಹದ ಕೀಲುಗಳು ಅತ್ಯಂತ ಸಾಮಾನ್ಯವಾಗಿದ್ದು ಭುಜ, ಮೊಳಕೈ, ಮುಂಗೈ, ಬೆರಳು, ಪಿರ್ರೆ, ಮೊಳಕಾಲು, ಪಾದ ಮತ್ತು ಕಾಲುಗಳನ್ನು ಜೋಡಿಸುವ ಕೀಲು ಮತ್ತು ಮುಂಗಾಲುಗಳಲ್ಲಿರುತ್ತವೆ. ಇವುಗಳಲ್ಲಿ ಕೆಲವು ಕೀಲುಗಳು ಎರಡಕ್ಕಿಂತ ಹೆಚ್ಚು ಮೂಳೆಗಳಿಂದ ರಚಿತವಾಗಿರುತ್ತವಾದರೂ ಅವುಗಳ ಸ್ವರೂಪ ಉಳಿದ ಕೀಲುಗಳಂತೆಯೇ ಇರುತ್ತದೆ. ಎರಡರಲ್ಲೂ ಮೂಳೆಯ ಮೊನೆಯನ್ನು ಒಂದು ಮೆಲ್ಲೆಲುಬು (Cartilage) ಮುಚ್ಚಿರುತ್ತದೆ. ಇಂತಹ ಮೆಲ್ಲೆಲುಬು (Articular Cartilage) ಅತ್ಯಂತ ಮೃದುವಾದ ಹಾಗೂ ನುಣ್ಣನೆಯದಾಗಿದ್ದು ಎಲುಬುಗಳ ಘರ್ಷಣೆಯನ್ನು ತಪ್ಪಿಸುತ್ತದೆ. ಇದರಲ್ಲಿ ಯಾವುದೇ ತರಹದ ನರಗಳಿರುವುದಿಲ್ಲವಾದ್ದರಿಂದ ಮೂಳೆಗಳ ಘರ್ಷಣೆಯಿಂದಾಗಿ ಉಂಟಾಗಬಹುದಾದ ನೋವನ್ನು ಇದು ತಪ್ಪಿಸುತ್ತದೆ. ಎರಡೂ ಮೂಳೆಗಳು ಸಂಧಿಗೊಳ್ಳುವ ಸ್ಥಾನದಲ್ಲಿ, ಎರಡೂ ಮೂಳೆಗಳ ಮೆಲ್ಲೆಲುಬುಗಳು ಒಂದಕ್ಕೊಂದು ತಾಕಿಕೊಂಡಿರುತ್ತವೆ. ಒಂದು ಪೀನದ (Convex) ಆಕಾರದಲ್ಲೂ, ಮತ್ತೊಂದು ನಿಮ್ನ (Concave) ಆಕಾರದಲ್ಲೂ ಇರುತ್ತವಾದ್ದರಿಂದ ಮೂಳೆಗಳು ಯಾವುದೇ ಘರ್ಷಣೆಯ ನೋವನ್ನು ಅನುಭವಿಸದೆ ಸರಾಗವಾಗಿ ಸರಿದಾಡುತ್ತವೆ. ಈ ಪ್ರಕ್ರಿಯೆಯಲ್ಲಿ ಅತ್ಯಂತ ಮುಖ್ಯವಾದ ಅಂಶವೆಂದರೆ ಈ ಮೂಳೆಗಳ ತುದಿಯಲ್ಲಿರುವ ಮೃದುವಾದ ಮೆಲ್ಲೆಲುಬಿನ ಪರಸ್ಪರ ತಾಕುವಿಕೆ! ಈ ತಾಕುವಿಕೆ ಸರಿಯಾಗಿ ಆಗದಿದ್ದ ಪಕ್ಷದಲ್ಲಿ ಮೆಲ್ಲೆಲುಬು ನಾಶವಾಗಲಾರಂಭಿಸುತ್ತದೆ. ಅದನ್ನು ಸಂರಕ್ಷಿಸುವ ದೇಹದ ಎಲ್ಲ ಪ್ರಯತ್ನಗಳೂ ಕಾಲಾಂತರದಲ್ಲಿ ವಿಫಲವಾಗುತ್ತವೆ.

ನಮ್ಮ ದೇಹದ ಕೀಲುಗಳ ಸಮರ್ಪಕ ಕಾರ್ಯನಿರ್ವಹಣೆಗಾಗಿ ಪ್ರತಿ

ಯೊಂದು ಕೀಲಿನ ಸುತ್ತಲೂ ಒಂದು ಶಕ್ತವಾದ ಮತ್ತು ಬಿರುಸಾದ ನಾರು ಕವಚವಿರುತ್ತದೆ. ಇದಲ್ಲದೆ ಕೀಲುಗಳಿಗೆ ಮಾಂಸಖಂಡ, ಮಾಂಸದ ಕೊನೆಯ ಭಾಗಗಳು (Tendons) ಮತ್ತು ಮೂಳೆಯ ಹುರಿಗಳು ಹೆಚ್ಚಿನ ತಾಕತ್ತು ಒದಗಿಸುತ್ತವೆ. ಇವುಗಳೇ ಕೀಲುಗಳ ಕದಲುವಿಕೆಯನ್ನು ನಿಯಂತ್ರಿಸುತ್ತವೆ. ಕೀಲಿನ ಸುತ್ತಲಿನ ಕವಚವು ಅತ್ಯಂತ ಹೆಚ್ಚಿನ ರೋಗನಿರೋಧಕ ಶಕ್ತಿಯನ್ನು ಹೊಂದಿರುತ್ತದಾದರೂ, ಅಕಸ್ಮಾತ್ ಗಾಯಗೊಂಡಲ್ಲಿ ಇದು ಗುಣವಾಗಲು ತುಂಬ ಸಮಯ ಹಿಡಿಯುತ್ತದೆ. ಈ ಕವಚದ ಒಳಮೈ ಒಂದು ತೆಳುವಾದ ಹೊಳಪುಳ್ಳ ಪದರಾಗಿದ್ದು ಅದು ಮೆಲ್ಲೆಲುಬಿನ ಹೊರತಾಗಿ ಇಡೀ ಕೀಲನ್ನು ತನ್ನಲ್ಲಿ ಸುತ್ತಿಕೊಂಡಿರುತ್ತದೆ. Synovial Membrane ಎಂದು ಕರೆಯಲ್ಪಡುವ ಈ ಪದರವು ತಿಳಿಹಳದಿ ಬಣ್ಣದ, ಜಿಗುಟಾದ ದ್ರವವೊಂದನ್ನು ಉತ್ಪತ್ತಿ ಮಾಡುತ್ತದೆ. ಇದನ್ನು Synovial fluid ಎನ್ನುತ್ತಾರೆ. ಕೀಲುಗಳು ಸರಿದಾಡುವಾಗ ಅದಕ್ಕೆ 'ಎಣ್ಣೆ' ಒದಗಿಸುವುದು ಮತ್ತು ಕೀಲುಗಳೊಳಗಿನ ಜೀವಕೋಶಗಳಿಗೆ - ಅದರಲ್ಲೂ ಮೆಲ್ಲೆಲುಬಿಗೆ ಆಹಾರವೊದಗಿಸುವುದು ಈ ದ್ರವದ ಮುಖ್ಯ ಕೆಲಸಗಳು. ಕೀಲಿನ ಹೊರಕವಚಕ್ಕಿಂತ ವಿಭಿನ್ನವಾಗಿರುವ ಈ Synovial membrane ನಲ್ಲಿ ಸಾಕಷ್ಟು ಪ್ರಮಾಣದ ರಕ್ತ ಸಂಚಾರವಿದ್ದು, ಗಾಯಗೊಂಡಾಗ ತೀವ್ರಗತಿಯಲ್ಲಿ ಗುಣಹೊಂದುವ ಶಕ್ತಿ ಇದಕ್ಕಿರುತ್ತದೆ. ಆದರೆ ಮೆಲ್ಲೆಲುಬಿಗೆ ರಕ್ತ ಸರಬರಾಜಾಗಲೀ, ನರಗಳಾಗಲೀ ಇರುವುದಿಲ್ಲ. ಕೀಲುಗಳ ಚಲನೆ ಮತ್ತು ಅವುಗಳಿಗಾಗುವ ನೋವನ್ನು ಮಿದುಳಿಗೆ ತಿಳಿಸುವ ಕೆಲಸ Synovial Membrane ಮತ್ತು ಹೊರಕವಚಗಳದ್ದಾಗಿರುತ್ತದೆ.

ಕೀಲುಗಳ ಉರಿ ಮತ್ತು ಆರ್ಥರೈಟಿಸ್ :

ಆರ್ಥರೈಟಿಸ್‌ನ ಮುಖ್ಯ ಲಕ್ಷಣವೆಂದರೆ ಉರಿ. ಕೀಲಿನ ಅಂಗಾಂಶ (Tissues) ಗಳು ತಮಗಾಗುವ ನೋವು ಅಥವಾ ಗಾಯವನ್ನು ವ್ಯಕ್ತಪಡಿಸುವಿಕೆಯೇ ಈ ಉರಿ. ಇಂತಹ ರೋಗವನ್ನು ಮನುಕುಲ ಶತಶತಮಾನಗಳ ಹಿಂದೆಯೇ ಗುರುತಿಸಿತ್ತು. ಸೆಲ್ಸಸ್ ಎಂಬ ರೋಮನ್ ವೈದ್ಯನೊಬ್ಬಾತ "ಕೀಲುರಿಯ ಪರಿಣಾಮಗಳೆಂದರೆ ಬಿಸಿ (ಉಷ್ಣ), ನೋವು, ಕೀಲುಗಳ ಸುತ್ತ ಚರ್ಮ ಕೆಂಪಾಗುವಿಕೆ ಮತ್ತು ಊತ" - ಎಂಬುದಾಗಿ ಬರೆದಿಟ್ಟಿದ್ದಾನೆ. ಕಾಲಾಂತರದಲ್ಲಿ ಈ ನಾಲ್ಕರ ಪಟ್ಟಿಗೆ ಕೀಲುಗಳ ಜಡತ್ವ ಅಥವಾ ನಿಷ್ಕ್ರಿಯತೆ ಎಂಬ ಅಂಶವನ್ನೂ ಸೇರಿಸಲಾಯಿತು. ರೋಮನ್ ವೈದ್ಯ ಸೆಲ್ಸಸ್‌ನ ಈ ವಿವರಣೆ ಯಾವುದೇ ವಿಧದ ಉರಿಯ ವಿವರಣೆಯಂತೆ ಕಂಡರೂ, ಪ್ರಮುಖವಾಗಿ ಇದು ಆರ್ಥರೈಟಿಸ್‌ನ ಗುಣಲಕ್ಷಣಗಳನ್ನು ಹೋಲುತ್ತದೆಂಬುದು ನಿರ್ವಿವಾದ. ಇವೆಲ್ಲವುಗಳ ಜೊತೆಗೆ ಸಣ್ಣ ಜ್ವರ, ತಲೆನೋವು, ಹಸಿವಿಲ್ಲದಿರುವಿಕೆ ಮತ್ತು ಅನಾರೋಗ್ಯದ ಕಿರಿಕಿರಿಯೂ ಸೇರಿಕೊಂಡು ಆರ್ಥರೈಟಿಸ್ ರೋಗಿಯನ್ನು ಎಷ್ಟು ಬೇಕೋ ಅಷ್ಟು ಕಾಡಿಬಿಡುತ್ತದೆ.

ಈ ಎಲ್ಲ ಗುಣಲಕ್ಷಣಗಳು ಯಾಕಾಗಿ ರೋಗಿಯಲ್ಲಿ ಕಾಣಿಸಿಕೊಳ್ಳುತ್ತವೆ?

ದೇಹದಲ್ಲಾಗುವ ಬದಲಾವಣೆಗಳೇ ಇದಕ್ಕೆ ಉತ್ತರ ನೀಡಬೇಕು. ಆದರೆ ಈ ಬದಲಾವಣೆಗಳನ್ನು ಅರಿತುಕೊಳ್ಳುವುದು ಸಾಕಷ್ಟು ಸಂಕೀರ್ಣವಾದದ್ದಾಗಿದೆ. ಆದರೂ ಸರಳವಾಗಿ ಹೇಳಬೇಕೆಂದರೆ, ಕೀಲಿನಲ್ಲಿನ Synovial membrane ನಲ್ಲಿರುವ ರಕ್ತನಾಳಗಳು ಅಗಲವಾಗಿಬಿಡುತ್ತವೆ. ರೋಗಗ್ರಸ್ತ ಕೀಲಿಗೆ ಹೆಚ್ಚಿನ ರಕ್ತ ಸರಬರಾಜು ಮಾಡುವುದಕ್ಕಾಗಿ ದೇಹವು ಪ್ರಯತ್ನಿಸುವುದರಿಂದಲೇ ಈ ರಕ್ತನಾಳಗಳು ಹಿಗ್ಗುತ್ತವೆ. ಈ ರಕ್ತನಾಳಗಳ ಗೋಡೆಗಳು ತಮ್ಮ ಸುತ್ತಲಿನ ಅಂಗಾಂಶ (Tissue) ಗಳೊಳಕ್ಕೆ ಪ್ರೊಟೀನ್‌ಗಳನ್ನೂ, ಇತರ ದ್ರವಗಳನ್ನೂ ತುಂಬಿಬಿಡುತ್ತವೆ. ಹೆಚ್ಚಿನ ಪ್ರಮಾಣದಲ್ಲಿ ಈ ರಕ್ತನಾಳದಲ್ಲಿ ಬಿಳಿರಕ್ತ ಕಣಗಳು ನುಗ್ಗಿಬರುತ್ತವೆ. ಇಷ್ಟು ಅರ್ಥವಾದ ನಂತರ, ನಮಗೆ ಆರ್ಥರೈಟಿಸ್ ರೋಗಿ ಕೀಲುಗಳ ಊತ, ಅವು ಬಿಸಿಯಾಗುವಿಕೆ, ಅದರ ಸುತ್ತಲ ಚರ್ಮ ಕೆಂಪಾಗುವಿಕೆ ಮತ್ತು ನೋವನ್ನೇಕೆ ಅನುಭವಿಸುತ್ತಾನೆಂಬುದು ಸ್ಪಷ್ಟವಾಗಿರಬೇಕಲ್ಲ? ಕೀಲುಗಳಿಗೆ ಬಂದು ಕೊನೆಗೊಳ್ಳುವ ನರಗಳ ಮೊನೆಗಳು ಪದೇಪದೇ irritate ಆಗುವುದರಿಂದಾಗಿ ನೋವು ಕಂಡುಬರುತ್ತದೆ. ಇಷ್ಟಕ್ಕೂ ಕೀಲುಗಳ ಉರಿ ಯಾವ ಕಾರಣಕ್ಕಾಗಿ ಉಂಟಾಗುತ್ತದೆಂಬುದನ್ನು ಅರಿತುಕೊಳ್ಳಲು ಸಾಕಷ್ಟು ಪ್ರಯತ್ನಗಳು ನಡೆದಿವೆ. ದೇಹದಲ್ಲಿರುವ ಹಲವಾರು ರಾಸಾಯನಿಕ ವಸ್ತುಗಳು ಈ ತೆರನಾದ irritation ಗೆ ಕಾರಣವಾಗಬಹುದೆಂಬುದು ಸಧ್ಯಕ್ಕೆ ದೃಢಪಟ್ಟಿರುವ ಅಂಶವಾಗಿದೆ.

ಕೀಲಿಗಾಗುವ ಗಾಯ ಅಥವಾ ಪೆಟ್ಟು ಅಷ್ಟೊಂದು ತೀವ್ರತರದ್ದಾಗಿರದಿದ್ದಲ್ಲಿ ಕೀಲುರಿತ ತಾನಾಗೇ ಕಡಿಮೆಯಾಗಿ, ದೇಹವು ಗಾಯವಾಸಿ ಮಾಡುವ



ರುಮಾಟಾಯಿಡ್ ಆರ್ಥ್ರೈಟಿಸ್‌ನಿಂದಾಗಿ
ಬಿಲ್ಲಿನಂತೆ ಬಾಗಿಕೊಂಡಿರುವ ಬಲಮೊಳಕಾಲು

ತನ್ನ ಸಹಜ ಪ್ರಕ್ರಿಯೆ ಪ್ರಾರಂಭಿಸುತ್ತದೆ. ಒಗ್ಗಿದ ರಕ್ತನಾಳಗಳು ತಮ್ಮ ಮೊದಲಿನ ಗಾತ್ರಕ್ಕೆ ಮರಳುತ್ತವೆ. ರಕ್ತ ಸರಬರಾಜು ಯಥಾಸ್ಥಿತಿಗೆ ಬರುತ್ತದೆ. ಹೆಚ್ಚಾದ ಸಂಖ್ಯೆಯಲ್ಲಿ ನುಗ್ಗಿದ ಬಿಳಿಯ ರಕ್ತಕಣಗಳು ಕೆಲವೊಮ್ಮೆ ಸಾಯುತ್ತವೆ. ಮತ್ತೆ ಕೆಲವು ರಕ್ತದೊಳಕ್ಕೆ ಬೆರತು ಕೀಲಿನಿಂದ ಹೊರಹೋಗುತ್ತವೆ. ಅಂಗಾಂಶ ದ್ರವವು ರಕ್ತ ಪ್ರಸರಣದೊಳಕ್ಕೆ ಸೇರಿಕೊಂಡು ಬಿಡುತ್ತದಲ್ಲದೆ ಗಾಯಗೊಂಡ ಜೀವಕಣಗಳ ಬದಲಾಗಿ ಹೊಸ ಜೀವಕಣಗಳ ಉತ್ಪತ್ತಿಯಾಗುತ್ತದೆ. ಇದೆಲ್ಲ ಸಹಜವಾಗಿ ಆಗಬೇಕಾದ ಕ್ರಿಯೆ. ಅಕಸ್ಮಾತ್ ಹೀಗಾಗದಿದ್ದಲ್ಲಿ, ಕೀಲಿನ ನೋವು ನಿರಂತರವಾಗಿದ್ದಲ್ಲಿ ''ಆರ್ಥರೈಟಿಸ್'' ಆ ಕೀಲಿನ ಪಾಲಿಗೆ ಅತಿಥಿಯಾಗಿ ಉಳಿದುಕೊಂಡುಬಿಡುತ್ತದೆ.

ಬಾಯಿಲೆಯ ಗುಣಲಕ್ಷಣಗಳು ಮೇಲ್ನೋಟಕ್ಕೆ ಸರಳವಾಗಿ ಕಂಡರೂ, ಅವು ವಾಸಿಯಾಗುವುದು ತುಂಬ ನಿಧಾನ. ವಾಸಿಯಾದರೂ ಸಂಪೂರ್ಣವಾಗಿ ಅಲ್ಲ. ಒಂದೆಡೆ ವಾಸಿಯಾದಂತಿಲ್ಲ ಮತ್ತೊಂದೆಡೆ ಕೀಲು ಉರಿ ಮುಂದುವರೆಯುತ್ತಲೇ ಇರುತ್ತದೆ. ಆರ್ಥರೈಟಿಸ್‌ನ ಪ್ರಮುಖ ಕಾರುಭಾರವೆಂದರೆ; ಅದು ಕೀಲಿನ ಸುತ್ತಲಿರುವ ರಕ್ಷಾಕವಚದೊಳಕ್ಕೆ, ನಮ್ಮ ದೇಹದಲ್ಲಿರುವ ಹಿರಿ-ಕಿರಿಯ ನಾನಾ ನಮೂನೆಯ ಜೀವಕಣಗಳನ್ನು ನುಗ್ಗಿಸುವುದು. ಈ ಜೀವಕಣಗಳ ಪೈಕಿ ಕೆಲವು ಕೀಲು ಉರಿಯನ್ನು ಹೆಚ್ಚಿಸುವುದರಿಂದ ತನ್ನದೇ ಆದ ಜೀವಕಣಗಳನ್ನೇನು ಮಾಡಬೇಕೋ ತೋಚದೆ ದೇಹವು ತಬ್ಬಿಬ್ಬಾಗುತ್ತದೆ. ದೇಹದಿಂದ ಪರಕೀಯ ಕಣಗಳನ್ನು ಸಹಜವಾಗೇ ಹೊರಹಾಕುವ ನಿಸರ್ಗ ನಿಯಮ ದಾರಿ ತಪ್ಪುತ್ತದೆ. ಜೀವಕಣಗಳೇ ಪ್ರತಿಜೀವಕಣಗಳನ್ನು ಸೃಷ್ಟಿಸಿದಾಗ ಅವು ಸಹಜವಾಗಿಯೇ ಅಂಗಾಂಶಗಳನ್ನು ತೊಂದರೆಗೀಡು ಮಾಡುತ್ತವೆ. ನೋವು ತಪ್ಪಿದ್ದಲ್ಲ.

ರುಮಟಾಯಿಡ್ ಆರ್ಥರೈಟಿಸ್ :

ಇದೊಂದು ಬಹುಕಾಲ ಕಾಡುವ ಜಾಡ್ಯ. ಸಾಮಾನ್ಯವಾಗಿ ಕೈಕಾಲುಗಳೆರಡರ ಕೀಲುಗಳನ್ನೂ ಬಾಧಿಸುವ ಈ ಜಾಡ್ಯ ಬಂದು ಬಂದು ಮರೆಯಾಗುತ್ತದೆ. ಮರೆಯಾಗಿ ಹೋಗಿ ಮತ್ತೆ ಬರುತ್ತದೆ. ಜಗತ್ತಿನಾದ್ಯಂತ ಜನಸಂಖ್ಯೆಯ ಶೇಕಡಾ 2ರಿಂದ 3ರಷ್ಟು ಜನರಲ್ಲಿ ಕಾಣಿಸಿಕೊಳ್ಳುವ ಈ ಜಾಡ್ಯ ಎಲ್ಲೆಡೆಗೂ ಒಂದೇ ತೆರನಾಗಿದೆ. ವಿಚಿತ್ರವೆಂದರೆ ಗಂಡಸರಿಗಿಂತ ಹೆಣ್ಣುಮಕ್ಕಳಲ್ಲಿ ಈ ಜಾಡ್ಯ ಗೋಚರಿಸುವ ವೇಗ ಮೂರುಪಟ್ಟು ಹೆಚ್ಚಿನದಾಗಿದೆ. ಇದಕ್ಕೆ ಕಾರಣಗಳು ಗೊತ್ತಿಲ್ಲ. ಚಿಕ್ಕಮಕ್ಕಳಿಂದ ಹಿಡಿದು ಮುದುಕರ ತನಕ ಯಾರಿಗೆ ಬೇಕಾದರೂ ಧಾರಾಳವಾಗಿ ಬಂದೊದಗುವ ಈ ಜಾಡ್ಯ ಹೆಚ್ಚಿನ ಸಲ 25ರಿಂದ 55 ವಯೋಮಾನದ ಮಧ್ಯೆ ಪ್ರತ್ಯಕ್ಷವಾಗುತ್ತದೆ.

ಕೀಲುಗಳಲ್ಲಿ ಬದಲಾವಣೆಗಳು :

ಕೀಲುರಿಗೆ ಒಳಗಾದ ಕೀಲಿನ ಹೊರಕವಚ (Synovial Membrane)

ವಿಪರೀತ ದಪ್ಪವಾಗಿ ಬಿಡುತ್ತದೆ. ಅವಶ್ಯಕತೆಗಿಂತ ಹೆಚ್ಚು ರಕ್ತಶೇಖರಣೆ, ಕವಚದೊಳಗಿನ ಜೀವಕಣಗಳು ಹೆಚ್ಚಾಗುವಿಕೆ ಮತ್ತು ನಾನಾ ತರಹದ ಬಿಳಿಯ ರಕ್ತಕಣಗಳು ಬಂದು ನೆರೆಯುವುದರಿಂದ ಹೀಗೆ ಕವಚವು ದಪ್ಪವಾಗುತ್ತದೆ. ಹೀಗೆ ವ್ಯಗ್ರಗೊಂಡ ಅಂಗಾಂಶ ಇಡೀ ಮೆಲ್ಲೆಲುಬಿನ ಮೇಲೆ ಪಸರಿಸುತ್ತದಲ್ಲದೇ, ಕೀಲಿನಲ್ಲಿನ ಜಿಗುಟಾದ ದ್ರವದೊಂದಿಗೆ ಬೆರೆತು ಮೂಳೆಯ ಕೆಳಗಿನ ಭಾಗದಲ್ಲಿ ಶೇಖರಗೊಂಡುಬಿಡುತ್ತದೆ. ಇಂತಹ ಬದಲಾವಣೆಗಳು ಕೀಲನ್ನು ಘಾಸಿಗೊಳಿಸಿ ಕಾಲಾಂತರದಲ್ಲಿ ಅದನ್ನು ನಿರುಪಯುಕ್ತವೂ ಬಲಹೀನವೂ ಮಾಡಿ ಹಾಕುತ್ತವೆ. ಕೀಲಿನೊಳಗಡೆ ಅಗಾಧವಾದ ದ್ರವ, ಬಿಳಿಯ ರಕ್ತಕಣಗಳು ಹಾಗೂ ಪ್ರೊಟೀನ್‌ಗಳು ಸೇರಿಕೊಂಡು ಬಿಡುತ್ತವೆ. ಕೆಲವು ತೀವ್ರತರದ ರೋಗಿಗಳಲ್ಲಿ ಇಡೀ ಮೆಲ್ಲೆಲುಬು ನಾಶವಾಗಿ ಎರಡೂ ಮೂಳೆಗಳು Scar tissue ನ ಬೆಳವಣಿಗೆಯಿಂದಾಗಿ ಒಂದಕ್ಕೊಂದು ಕಚ್ಚಿಕೊಂಡು ಬಿಡುತ್ತವೆ.

ಕಾರಣ :

ಇವತ್ತಿಗೂ ಇದು ವೈದ್ಯಕೀಯಶಾಸ್ತ್ರದ ಅಚ್ಚರಿಗಳಲ್ಲೊಂದಾಗಿಯೇ ಉಳಿದುಕೊಂಡಿದೆ. ಆರ್ಥರೈಟಿಸ್ ಒಂದು ತೆರನಾದ ವೈರಸ್ ಕ್ರಿಮಿಗಳಿಂದ ಉಂಟಾಗಬಹುದೆಂಬ ವಾದವೊಂದಿದೆ. ಅದ್ಹೇಗೋ ಕೀಲುಗಳಲ್ಲಿ ಸೇರಿಕೊಳ್ಳುವ ವೈರಸ್ ಕ್ರಿಮಿಗಳು ಆರ್ಥರೈಟಿಸ್ ಉಂಟು ಮಾಡಬಹುದು. ಸಾಮಾನ್ಯವಾಗಿ ಕೆಮ್ಮು, ನೆಗಡಿ ಉಂಟುಮಾಡುವ ವೈರಸ್‌ಗಿಂತ ವಿಭಿನ್ನವಾಗಿರುವ ವೈರಸ್ ಕ್ರಿಮಿಗಳು ಯಾವಾಗಲೋ ದೇಹ ಹೊಕ್ಕು ಕುಳಿತು, ಮತ್ತಿನ್ಯಾವಾಗಲೋ ಕೀಲುನೋವು ನೀಡತೊಡಗುತ್ತಿರಬಹುದಾದ್ದರಿಂದ ಅವುಗಳನ್ನು ಪತ್ತೆ ಹಚ್ಚುವುದೂ ಕಷ್ಟವೇ.

ದೇಹಕ್ಕಿರುವ ಪ್ರತಿರೋಧಕ ಶಕ್ತಿಯಲ್ಲೇ ಏರುಪೇರು ಉಂಟಾಗಿ ಅದು ವೈರಸ್ ವಿರುದ್ಧ ಸೃಜಿಸುವ ಪ್ರತಿಜೀವಕಣಗಳು ವೈರಸ್ ಅನ್ನು ಮರೆತು ದೇಹವನ್ನೇ ಘಾಸಿಗೊಳಿಸುವುದರಿಂದಲೂ ಆರ್ಥರೈಟಿಸ್ ಉಂಟಾಗಬಹುದೆಂಬುದು ಮತ್ತೊಂದು ವಾದವಾಗಿದೆ.

ಕಡೆಯಲ್ಲಿ, ಅನುವಂಶಿಕವಾಗಿಯೂ ಇದನ್ನು ಪಡೆದುಕೊಂಡಿರಬಹುದೆಂದು ಇತ್ತೀಚಿನ ಸಂಶೋಧನೆಗಳು ಭಾವಿಸುತ್ತವೆ.

ಗುಣಲಕ್ಷಣಗಳು :

ಹೆಚ್ಚಿನ ಸಲ, ರುಮಾಟಾಯಿಡ್ ಆರ್ಥರೈಟಿಸ್ ಜಾಡ್ಯವುಂಟಾದಾಗ ವಾರಗಟ್ಟಲೆ ಕೀಲುಗಳ ನೋವು ಮತ್ತು ಬಿಗಿತವು ಕಾಣಿಸಿಕೊಳ್ಳುತ್ತದೆ. ಇದು ಒಂದೇ ಕೀಲಿನಲ್ಲಿ ಕಾಣಿಸಿಕೊಳ್ಳಬೇಕೆಂಬ ನಿಯಮವೇನಿಲ್ಲ. ಒಂದೇ ಸಲಕ್ಕೆ ಎರಡು ಮೂರು ಕೀಲುಗಳಲ್ಲೂ ಕಾಣಿಸಿಕೊಳ್ಳಬಹುದು. ಸಾಮಾನ್ಯವಾಗಿ ಕೈ ಮತ್ತು ಕಾಲುಗಳು ಜಾಡ್ಯಕ್ಕೊಳಗಾಗುತ್ತವೆ. ಕೆಲವೊಮ್ಮೆ ಕೇವಲ ಮೊಳಕಾಲು ಕೀಲು ನೋವಿಗೆ ತುತ್ತಾಗಬಹುದು. ಮುಂಜಾವಿನ ಮೊದಲ

ಹೊತ್ತಿನಲ್ಲಿ ವಿಪರೀತವಾಗಿರುವ ಕೀಲು ಬಿಗಿತ ಹೊತ್ತೇರಿದಂತೆಲ್ಲ ಕಡಿಮೆಯಾಗುತ್ತದೆ. ಕೆಲವೇ ದಿನಗಳಲ್ಲಿ ಉಳಿದೆಲ್ಲ ಲಕ್ಷಣಗಳಾದ ನೋವು, ಊತ, ಅಲುಗಿಸಿದರೆ ಉಂಟಾಗುವ ನೋವು, ಬಿಸಿ ಮತ್ತು ಕೆಂಪೇರುವಿಕೆಗಳು ಕಾಣಿಸಿಕೊಳ್ಳತೊಡಗುತ್ತವೆ.

ಕೆಲವು ಸಲ ರೋಗ ಚಿಹ್ನೆಗಳು ತುಂಬ ವೇಗವಾಗಿ ಕಾಣಿಸಿಕೊಂಡು ಕೆಲವೇ ದಿನಗಳಲ್ಲಿ ರೋಗಿಯನ್ನು ಕದಲಲಾಗದ ಸ್ಥಿತಿಗೆ (ಅದರಲ್ಲೂ ಮುಂಜಾವುಗಳಲ್ಲಿ) ತಂದು ಬಿಡಬಹುದು. ಯಾವುದೇ ಕೀಲಿನಲ್ಲಿ ಕಾಣಿಸಿಕೊಂಡ ಆರ್ಥ್ರೈಟಿಸ್ ನಿಧಾನವಾಗಿ ಉಳಿದೆಲ್ಲ ಕೀಲುಗಳಿಗೂ ಪಸರಿಸಬಹುದು. ದವಡೆ, ಬೆನ್ನೆಲುಬು, ಕತ್ತಿನ ಕೀಲುಗಳೂ ಆರ್ಥ್ರೈಟಿಸ್‌ಗೆ ತುತ್ತಾಗಿ ಬಾಯಿ ತೆಗೆಯುವ-ಮುಚ್ಚುವ ಅಥವಾ ಕತ್ತು ಅಲ್ಲಾಡಿಸುವ ಕೆಲಸವೂ ತ್ರಾಸದಾಯಕವಾಗಬಹುದು. ಧ್ವನಿಪೆಟ್ಟಿಗೆಯ ಕೀಲುಗಳಲ್ಲಾಗುವ ಆರ್ಥ್ರೈಟಿಸ್‌ನ ಪರಿಣಾಮವಾಗಿ ಧ್ವನಿ ಗೊಗ್ಗರಾಗಲೂ ಬಹುದು!

Tendon (ಮಾಂಸದ ಕೊನೆಯ ಭಾಗ) ಕವಚಗಳು ಉರಿತಕ್ಕೊಳಗಾಗುವುದರಿಂದ ನೋವು ಹಾಗೂ ಊತ ವಿಪರೀತವಾಗಿರುತ್ತದೆ. ವಿಶೇಷವಾಗಿ ಕೈಕಾಲುಗಳ ಕೀಲುಗಳಲ್ಲಿ ಈ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ಕೈ ಬೆರಳುಗಳಿಗೆ ಬರುವ ಆರ್ಥ್ರೈಟಿಸ್‌ನಿಂದಾಗಿ ಅವು ಚಾಚಿದಾಗ - ಮಡಚಿದಾಗ ವಿಚಿತ್ರವಾದ ಸದ್ದು ಮಾಡುತ್ತವೆ. ಮೊಣಕಾಲು ಗಂಟುಗಳಲ್ಲಿ ಸಣ್ಣನೆಯ ಊತ ಕಾಣಿಸಿಕೊಳ್ಳುವುದು ಅತಿ ಸಾಮಾನ್ಯ ಲಕ್ಷಣ.

ದೇಹದಲ್ಲಾಗುವ ಬದಲಾವಣೆಗಳು :

ಕೀಲುಗಳಲ್ಲಿನ ಮಾಂಸದ ಕೊನೆಯ ಭಾಗ (Tendons)ಗಳು ಕಾಲಾಂತರದಲ್ಲಿ ಗಾಯಗೊಂಡ ಕೀಲುಗಳನ್ನು ಉಜ್ಜಿ ಕಡೆಗೆ ಹರಿದೇ ಹೋಗಿಬಿಡಬಹುದು. ಇಂತಹ ಸ್ಥಿತಿಯಲ್ಲಿ ಆರ್ಥ್ರೈಟಿಸ್ ರೋಗಿ ಆ ಭಾಗದ ಕೀಲನ್ನು ಕದಲಿಸಲಾರ. ಉದಾಹರಣೆಗೆ ಕೈ ಬೆರಳುಗಳಲ್ಲಿ ಈ ರೋಗ ಕಾಣಿಸಿಕೊಂಡಲ್ಲಿ, ಬೆರಳುಗಳು ಚಾಚಲಾಗದೆ ಮಡತೆ ಬಿದ್ದಂತೆ ಉಳಿದುಕೊಂಡು ಬಿಡುತ್ತವೆ.

ಇದಲ್ಲದೆ ಉಳಿದ ಆತಂಕಕಾರಿ ಬದಲಾವಣೆಗಳೂ ಗೋಚರಿಸುತ್ತವೆ. ಕೈ ಬೆರಳುಗಳು ವಿಕಾರವಾಗಿ ತಿರುಗುತ್ತವೆ. ಅವು 'S' ಆಕಾರಕ್ಕೆ ಬಂದು ಹಂಸ ಪಕ್ಷಿಯ ಕತ್ತಿನಂತಾಗುತ್ತವೆ. ಕೆಲವೊಮ್ಮೆ ಅಸಹ್ಯಕರವಾಗಿ ಊದಿಕೊಂಡು ಬಿಡುತ್ತವೆ. ಇಷ್ಟಾದರೂ ರೋಗಿ ಆ ಆಕಾರಗೆಟ್ಟ ಕೈಗಳನ್ನು ಯಥಾರೀತಿಯಲ್ಲಿ ಬಳಸುತ್ತಿರಬಹುದೆಂಬುದು ಆಶ್ಚರ್ಯಕರ ವಿಷಯವಾಗಿದೆ. ಇಂಥವೇ ಬದಲಾವಣೆಗಳು ಕಾಲು(ಪಾದ)ಗಳಲ್ಲೂ ಆಗಬಹುದು. ರೋಗಿಯ ಕಾಲುಗಳು ಬಿಲ್ಲಿನಂತೆ ಬಾಗಬಹುದು. ಅಥವಾ ಒಳಕ್ಕೆ ತೂಸೆ ಬಿದ್ದಂತಾಗಿ, ಆತ ನಡೆದರೆ ವಿಕಾರವಾಗಿ ಕಾಣಿಸತೊಡಗುತ್ತಾನೆ. ತೀವ್ರತರದ ಆರ್ಥ್ರೈಟಿಸ್‌ನ ರೋಗಿಗಳಲ್ಲಿ ಕೀಲುಗಳು ವಿಪರೀತ ಸೂಕ್ಷ್ಮವಾಗಿ ಕೆಲಸ ಮಾಡಲು ಸಾಧ್ಯವೇ

ಇಲ್ಲದಂತಾಗಿಬಿಡುತ್ತದೆ. ರುಮಾಟಾಯಿಡ್ ಆರ್ಥರೈಟಿಸ್ ಕೇವಲ ಕೀಲುಗಳ ರೋಗವೆಂದು ಸರಿಸಿಹಾಕಬೇಡಿ. ಅದು ಇಡೀ ದೇಹವನ್ನು ಕಾಡುತ್ತದೆ. ಆರ್ಥರೈಟಿಸ್ ಆದ ರೋಗಿ ಬೇಗ ದಣಿಯುತ್ತಾನೆ. ಬಲಹೀನನಾಗುತ್ತಾನೆ. ಜ್ವರಪೀಡಿತನಾಗುತ್ತಾನೆ. ಹಸಿವು ಸತ್ತುಹೋಗಿ ತೂಕ ಕಳೆದುಕೊಳ್ಳುತ್ತಾನೆ. ರೋಗಪೀಡಿತ ಕೀಲುಗಳ ಸುತ್ತಲಿನ ಮಾಂಸಖಂಡಗಳು ಕಿರಿದಾಗತೊಡಗಿ ಬಲಹೀನತೆ ಇನ್ನಷ್ಟು ತೀವ್ರವಾಗುತ್ತದೆ. ಕೀಲುಗಳ ಆಸುಪಾಸಿನಲ್ಲಿ ಗಂಟುಗಳೂ, ಊತದ ಗಡ್ಡೆಗಳೂ ಪ್ರತ್ಯಕ್ಷವಾಗುತ್ತದೆ. ಇಂಥ ಗಡ್ಡೆಗಳು ಅಪರೂಪಕ್ಕೊಮ್ಮೆ ಹೃದಯ ಅಥವಾ ಶ್ವಾಸಕೋಶಗಳಲ್ಲೂ ಆಗಬಹುದು.

ಕೀಲುಗಳಿಗೆ ಸಂಬಂಧವಿಲ್ಲದ ಎಷ್ಟೋ ಗುಣಲಕ್ಷಣಗಳು ಆರ್ಥರೈಟಿಸ್‌ನಲ್ಲಿ ಕಂಡುಬರಬಹುದು. ನರಗಳ ಮೇಲಿನ ಒತ್ತಡದಿಂದಾಗಿ ರೋಗಿ ಎಷ್ಟೋ ಸಲ ಬೆರಳು, ಪಾದಗಳಲ್ಲಿ ಸೂಜಿ ಚುಚ್ಚಿದಂತಹ ನೋವಾಗುತ್ತದೆನ್ನುತ್ತಾನೆ. ಕೆಲವೊಮ್ಮೆ ಪಾದಗಳಲ್ಲಿ ಹುಣ್ಣುಗಳಾಗಬಹುದು. ಅಪರೂಪಕ್ಕೆ ಬೆರಳುಗಳ ಗ್ಯಾಂಗ್ರೀನ್ ಮತ್ತು ಹೃದಯಾಘಾತಗಳೂ ಆದ ನಿದರ್ಶನಗಳಿವೆ. ಶ್ವಾಸಕೋಶಗಳ ಕವಚಗಳಿಗಾಗುವ ಸೋಂಕಿನಿಂದಾಗಿ ಪ್ಲೂರಸಿ ಆಗಬಹುದು. ಶ್ವಾಸಕೋಶಗಳೇ ಸೋಂಕಿಗೆ ತುತ್ತಾಗಿ ಉಸಿರಾಟದ ತೊಂದರೆಯೂ ಗೋಚರಿಸಬಹುದು. ಎದೆ ನೋವು ಕಾಣಿಸಿಕೊಂಡರೂ ಅಚ್ಚರಿಯಿಲ್ಲ.

ಕಣ್ಣುಗಳೂ ಆರ್ಥರೈಟಿಸ್ ಕಿರಿಕಿರಿಯಿಂದ ಹೊರತಲ್ಲ. ಬಾಯಿ ಒಣಗುವಿಕೆ ಹಾಗೂ ಕಣ್ಣುಗಳಲ್ಲಿ ತೇವದ ಕೊರತೆಯಿಂದಾಗಿ ಕಣ್ಣಗೊಂಬೆಗಳು ತೊಂದರೆಗೀಡಾಗಬಹುದು. ಕತ್ತು, ಕಂಕಳು ಮತ್ತು ತೊಡೆಸಂದಿಗಳಲ್ಲಿ



ಹಂಸಪಕ್ಷಿಯ ಕತ್ತಿನಂತಾಗಿರುವ ಕೈಬೆರಳುಗಳು

ಉಂಟಾಗುವ ಗಡ್ಡೆಗಳು ಗಾತ್ರದಲ್ಲಿ ಹಿರಿದಾಗಿ ಕಿರಿಕಿರಿಯಾಗಲೂಬಹುದು, ಅಂತೆಯೇ ಯಕೃತ್ತು (Liver) ಮತ್ತು ಗುಲ್ಮ (Spleen) ಗಳು ಉಬ್ಬಿಕೊಂಡು ರಕ್ತಸಂಬಂಧಿ ಖಾಯಿಲೆಗಳನ್ನುಂಟು ಮಾಡಬಹುದು.

ಆದರೆ ಅದೃಷ್ಟವಶಾತ್ ರುಮಾಟಾಯ್ಡ್ ಆರ್ಥರೈಟಿಸ್ ರೋಗಿಗಳಲ್ಲಿ ಈ ಎಲ್ಲ ಗುಣಲಕ್ಷಣಗಳು ಕಂಡುಬರುವುದು ತೀರ ಅಪರೂಪ. ಈ ವಿಪರೀತ ರೀತಿಯ ಚಿಹ್ನೆಗಳು ಕಾಣಿಸಿಕೊಳ್ಳದೆಯೇ ಆರ್ಥರೈಟಿಸ್‌ನೊಂದಿಗೆ ಕಾಲಕಳೆಯುವ ರೋಗಿಗಳ ಸಂಖ್ಯೆಯೇ ಹೆಚ್ಚು. ಕೇವಲ ಒಂದೆರಡು ಕೀಲುಗಳಲ್ಲಿ ಮಾತ್ರ ಆರ್ಥರೈಟಿಸ್ ಕಾಣಿಸಿಕೊಂಡು ಅದರ ಉಪಟಳ ಅಲ್ಲಿಗೇ ನಿಲ್ಲುವುದೂ ಉಂಟು. ಮತ್ತೆ ಕೆಲ ದುರ್ದೈವಿಗಳನ್ನು ಇದು ನಿಷ್ಕ್ರಿಯರನ್ನಾಗಿ ಮಾಡಿಹಾಕಬಹುದು. ಆರ್ಥರೈಟಿಸ್ ಉಲ್ಬಣವಾದಂತೆಯೇ, ತಂತಾನೇ ಕಡಿಮೆಯೂ ಆಗಬಹುದು. ಹೀಗೆ ಕಡಿಮೆಯಾದದ್ದು ಕೆಲವೊಮ್ಮೆ ಶಾಶ್ವತವಾಗಿ ಮರೆಯಾಗಲೂಬಹುದು. ತೀರ ರೋಗಿಯನ್ನು ಗಾಲಿಯ ಕುರ್ಚಿಗೆ ಕಟ್ಟಿ ಹಾಕುವುದೇನಿದ್ದರೂ ಶೇಕಡಾ 10 ರೋಗಿಗಳಲ್ಲಿ ಮಾತ್ರ. ಅನೇಕರು ಆರ್ಥರೈಟಿಸ್ ಬಂದನಂತರವೂ ತಮ್ಮ ದೈನಂದಿನ ಕೆಲಸಕಾರ್ಯ ಮಾಡಿಕೊಂಡಿರುತ್ತಾರೆಂಬುದು ನೆಮ್ಮದಿಯ ವಿಷಯ.

ಕೀಲುಗಳಲ್ಲಿ ತೊಂದರೆ ಕಾಣಿಸಿಕೊಂಡ ತಕ್ಷಣ ವೈದ್ಯರಲ್ಲಿಗೆ ಹೋಗುವುದು ಜಾಣರ ಕೆಲಸ. ವೈದ್ಯರು ಕೇವಲ ಕೀಲುಗಳನ್ನೇ ಅಲ್ಲದೆ ಹೃದಯ, ಶ್ವಾಸಕೋಶ ಮುಂತಾಗಿ ದೇಹದ ಇತರ ಭಾಗಗಳನ್ನೂ ಪರೀಕ್ಷಿಸಿ ರೋಗಿಗೆ ಆಗಿರುವುದು ಆರ್ಥರೈಟಿಸ್ ಹೌದೇ ಅಲ್ಲವೇ ಎಂಬುದನ್ನು ನಿರ್ಧರಿಸುತ್ತಾರೆ. ಇದಕ್ಕೆ ರಕ್ತ ಪರೀಕ್ಷೆ ಮತ್ತು ಎಕ್ಸ್-ರೇಗಳು ಅವಶ್ಯಕವಾದಾವು. ವಿಶೇಷ ಸಂದರ್ಭಗಳಲ್ಲಿ ವಿಶೇಷ ಪರೀಕ್ಷೆಗಳು ಅನಿವಾರ್ಯ. ಹೆಚ್ಚಿನ ಸಲ ರೋಗಿ ರಕ್ತಹೀನತೆಯಿಂದ ನರಳುತ್ತಿದ್ದು, ಆತನ ರಕ್ತದಲ್ಲಿ ರುಮಾಟಾಯ್ಡ್ ಫ್ಯಾಕ್ಟರ್ ಕಂಡುಬರುತ್ತದೆ. ಇದು ರೋಗ ಲಕ್ಷಣಗಳಲ್ಲಿ ಮೊದಲನೆಯದು.

ಒಸ್ಟಿಯೋ ಆರ್ಥರೈಟಿಸ್ :

ಇದು ಆರ್ಥರೈಟಿಸ್ ಗುಂಪಿನಲ್ಲಿ ಅತ್ಯಂತ ಸಾಮಾನ್ಯವಾಗಿ ಕಾಣಿಸಿಕೊಳ್ಳುವಂತಹುದು. ಇದರಿಂದ ದೇಹದ ಒಂದು ಅಥವಾ ಹೆಚ್ಚಿನ ಕೀಲುಗಳು ತೊಂದರೆಗೀಡಾಗಬಹುದು. ಮನುಷ್ಯನಿಗಷ್ಟೇ ಅಲ್ಲ, ಪ್ರಾಣಿಗಳಿಗೂ ಇದು ವಕ್ಕರಿಸುತ್ತದೆ. ಸಾಮಾನ್ಯವಾಗಿ ವೃದ್ಧರಲ್ಲಿ ಕಾಣಿಸಿಕೊಳ್ಳಬಹುದಾದ ಈ ಗುಂಪಿನ ಖಾಯಿಲೆ ಹೆಚ್ಚಿನ ರೋಗಿಗಳಲ್ಲಿ ಸುಪ್ತವಾಗಿ ಅಡಗಿದ್ದು ಚಿಹ್ನೆಗಳನ್ನು ಹೊರಹಾಕದೆಯೂ ಇರುತ್ತದೆಂಬುದು ಸಂತೋಷದ ಸಂಗತಿ. ವಿಪರೀತ ಸ್ಥೂಲಕಾಯದವರಲ್ಲಿ ಅವರ ಮೊಳಕಾಲುಗಳ ಮೇಲೆ ತುಂಬಭಾರ ಬೀಳುವುದರಿಂದ ಈ ಖಾಯಿಲೆ ಉಂಟಾಗುವುದು ಸಾಮಾನ್ಯ. ಕೀಲುಗಳಲ್ಲಿ ನಿರಂತರ ನೋವು ಅನುಭವಿಸುವ ರೋಗಿ (ಅದರಲ್ಲೂ ಮಧ್ಯವಯಸ್ಕರು ಮತ್ತು ಮುದುಕರು) ಚಳಿಗಾಲ ಮತ್ತು ಮಳೆಗಾಲಗಳಲ್ಲಿ ಹೆಚ್ಚಿನ ಕಿರಿಕಿರಿಗೊಳಗಾಗು

ತ್ತಾನೆ. ರಾತ್ರಿಗಳಲ್ಲಿ ಈ ನೋವು ಇನ್ನಷ್ಟು ತೀವ್ರ. ಹೆಬ್ಬೆರಳಂತೂ ಕೀಲು ಅಗಾಧವಾಗಿ ಊದಿಕೊಳ್ಳುತ್ತದೆ.

ಇದಲ್ಲದೆ ಆರ್ಥರೈಟಿಸ್‌ನಲ್ಲಿ ಗೌಟ್ (Gout) ಆ್ಯಂಕಿಲೋಸಿಂಗ್ ಸ್ಪಾಂಡಿಲೈಟಿಸ್ ಮುಂತಾದ ವಿಧಗಳೂ ವೈದ್ಯಕೀಯಲೋಕಕ್ಕೆ ಪರಿಚಿತವಾಗಿವೆ.

ಮಕ್ಕಳಲ್ಲಿ :

ಓಸ್ಟಿಯೋ ಆರ್ಥರೈಟಿಸ್‌ನ ಹೊರತಾಗಿ ಹಿರಿಯರಿಗೆ ಬರುವ ಉಳಿದೆಲ್ಲ ತರಹದ ಆರ್ಥರೈಟಿಸ್‌ಗಳು ಮಕ್ಕಳಿಗೂ ಬರಬಹುದು. ವಿಶೇಷವಾಗಿ ಕೆಲ ದುರ್ದೈವಿ ಮಕ್ಕಳು ಜುವೆನೈಲ್ ಕ್ರಾನಿಕ್ ಆರ್ಥರೈಟಿಸ್‌ಗೆ ತುತ್ತಾಗುತ್ತಾರೆ. ಹದಿನಾರು ವರ್ಷಗಳಿಗೆ ಮುಂಚೆಯೇ ಮಗುವನ್ನು ಬಾಧಿಸತೊಡಗುವ ಈ ಖಾಯಿಲೆ ತನ್ನ ಹೆಸರಿಗೆ ತಕ್ಕಂತೆ, ನಿರಂತರವಾಗಿ - ಬಹುಕಾಲ ಅದರೊಂದಿಗಿರುತ್ತದೆ.

ಸ್ಟಿಲ್ಸ್ ಡಿಸೀಸ್ ಎಂಬುದು ಮತ್ತೊಂದು ಜಾತಿಯದು. ಸಾಮಾನ್ಯವಾಗಿ ಐದು ವರ್ಷದೊಳಗಿನ ಹೆಣ್ಣು ಮಗುವಿಗೆ ಈ ರೋಗ ಅಂಟಿಕೊಳ್ಳುತ್ತದೆ. ಯಥಾ ಪ್ರಕಾರ ಮಗು ಕೀಲು ನೋವಿನಿಂದಾಗಿ ಕುಂಟತೊಡಗುತ್ತದೆ ಅಥವಾ ಯಾವುದಾದರೊಂದು ಅಂಗವನ್ನು ಬಳಸಲು ನಿರಾಕರಿಸುತ್ತದೆ. ನೋವು ವಿಪರೀತವಾಗಿ ಕೀಲುಗಳು ಬಾತುಕೊಂಡು, ಬಿಸಿಯೇರಿ, ಬಿಗುವಾಗಿ ಬಿಡುತ್ತವೆ. ಮಗು ಆಟದಂಗಳಕ್ಕೆ ಹೋಗುವುದೇ ಇಲ್ಲ. ಕೆಲಬಾರಿ ವಿಪರೀತ ಜ್ವರ, ಚರ್ಮದ ಮೇಲೆ ಗುಳ್ಳೆಗಳು, ಉಬ್ಬಿದ ಹದಗಡಲೆಗಳು, ಯಕೃತ್ತು ಉಬ್ಬುವಿಕೆ ಮತ್ತು ಕೊಂಚಮಾತ್ರದ ಕೀಲುನೋವು ಕಾಣಿಸಿಕೊಳ್ಳಬಹುದು. ಕುರುಡುತನದ ತನಕ ಒಯ್ಯಬಲ್ಲ ತೊಂದರೆ ಕಣ್ಣುಗಳಿಗಾಗಬಹುದು. ಮಕ್ಕಳು ಈ ಸಮಸ್ಯೆ ಹೇಳಿಕೊಳ್ಳಲು ಸಾಮಾನ್ಯವಾಗಿ ಅಸಮರ್ಥರಿರುತ್ತಾರೆ. ಇಷ್ಟಾದರೂ ಕೆಲಮಕ್ಕಳು ಚೇತರಿಸಿಕೊಂಡು ಮಾಮೂಲಾಗಿ ಬೆಳೆಯುತ್ತಾರೆ. ಒಂದೆರಡು ಕೀಲುಗಳ ನಿಷ್ಕ್ರಿಯತೆ ಉಂಟಾದರೂ, ತೀವ್ರ ನರಳಿಕೆಗೆ ತುತ್ತಾದ ಮಗು ಅಷ್ಟೇ ವೇಗವಾಗಿ ಚೇತರಿಸಿಕೊಳ್ಳುತ್ತದೆಂಬುದು ಆಶ್ಚರ್ಯಕರ ಅಂಶ.

ಜುವೆನೈಲ್ ರುಮಾಟಾಯಿಡ್ ಆರ್ಥರೈಟಿಸ್ :

ಸಾಮಾನ್ಯವಾಗಿ 12ರಿಂದ 15 ವರ್ಷಗಳ ನಡುವೆ ಕಾಣಿಸಿಕೊಳ್ಳುತ್ತದೆ. ಇದು ಕೂಡ ಹೆಣ್ಣುಮಕ್ಕಳನ್ನೇ ಹೆಚ್ಚಾಗಿ ಕಾಡುತ್ತದೆ. ಹಿರಿಯರಿಗೆ ಬರುವ ರುಮಾಟಾಯ್ಡ್ ಆರ್ಥರೈಟಿಸ್‌ನ ಚಿಹ್ನೆಗಳೇ ಇದಕ್ಕೂ ಇರುತ್ತವೆ.

ಜುವೆನೈಲ್ ಕ್ರಾನಿಕ್ ಆರ್ಥರೈಟಿಸ್ ಆದ ಮಕ್ಕಳಿಗೆ ಔಷಧಿಯ ಮೂಲಕ ಚಿಕಿತ್ಸೆ ನೀಡಬಹುದು. ಕೆಲವರಲ್ಲಿ ಮಾತ್ರ ಆಪರೇಶನ್‌ನ ಅವಶ್ಯಕತೆಯಿರುತ್ತದೆ. ಮಗು ತೀವ್ರವಾಗಿ ನರಳುವಾಗ ಸಂಪೂರ್ಣ ವಿಶ್ರಾಂತಿ ಬೇಕಾದೀತು. ಕೆಲವೊಮ್ಮೆ ಕೀಲುಗಳಿಗೆ ಪಟ್ಟಿ (Splints) ಹಾಕುವುದೂ ಅನಿವಾರ್ಯ.



ಕೆಲವು ವ್ಯಾಯಾಮಗಳೂ, ಬಿಸಿನೀರ ಸ್ನಾನಗಳೂ ಮಗುವಿಗೆ ಆರಾಮ ನೀಡಬಹುದು. ಮಗುವಿನ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಚಿಕಿತ್ಸಾ ವಿಧಾನಗಳನ್ನು ಜಾಣ ವೈದ್ಯರು ಅಳವಡಿಸಿಕೊಳ್ಳುತ್ತಾರೆ.

ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ:

ಆರ್ಥ್ರೈಟಿಸ್ ಮತ್ತು ರುಮಾಟಿಸಂನಿಂದ ನರಳುವ ರೋಗಿ ವೈದ್ಯರ ಗಮನದಲ್ಲಿರುವುದು ಅತ್ಯವಶ್ಯಕ. ಅದರಲ್ಲೂ ಔಷಧಿ ತೆಗೆದುಕೊಳ್ಳುವ ಕಾಲದಲ್ಲಿ ವೈದ್ಯರು ಸಾಕಷ್ಟು ಕಾಳಜಿವಹಿಸುತ್ತಾರೆ. ಆರ್ಥ್ರೈಟಿಸ್‌ನ ಎಲ್ಲ ವಿಧಗಳೂ ದೀರ್ಘಕಾಲದ ಚಿಕಿತ್ಸೆಯನ್ನು ಬೇಡುತ್ತವಾದ್ದರಿಂದ ವೈದ್ಯರು ಒಂದು ಕ್ರಮಬದ್ಧ ಚಿಕಿತ್ಸಾವಿಧಾನವನ್ನೇ ಅನುಸರಿಸುತ್ತಾರೆ. ಈ ಚಿಕಿತ್ಸೆಯಲ್ಲಿ ರಾತ್ರೋರಾತ್ರಿ ರೋಗ ನಿವಾರಣೆ ಮಾಡುವುದು ಅಸಾಧ್ಯವಾದ್ದರಿಂದ ರೋಗಿ ತುಂಬ ತಾಳ್ಮೆವಹಿಸಬೇಕು. ಯಾವುದೇ ಚಿಕಿತ್ಸೆಯಾದರೂ ರೋಗವನ್ನು ಹಿಡಿತದಲ್ಲಿರಿಸಬಲ್ಲುದೇ ಹೊರತು ಸಂಪೂರ್ಣ ಗುಣಹೊಂದುವಿಕೆ ಅಪರೂಪ.

ಔಷಧಿ, ಶಸ್ತ್ರಚಿಕಿತ್ಸೆ, ವಿಶ್ರಾಂತಿ, ವ್ಯಾಯಾಮ, ವೃತ್ತಿ ತರಬೇತಿ ಚಿಕಿತ್ಸೆ ಮುಂತಾದ ಹಲವಾರು ವಿಧಾನಗಳಿವೆ. ಇವುಗಳಲ್ಲಿ ಅವಶ್ಯವಾದವುಗಳನ್ನು ವೈದ್ಯರು ನಿರ್ಧರಿಸುತ್ತಾರೆ. ಯಾವುದೇ ಕಾರಣಕ್ಕೂ ರೋಗಿ ತಂತಾನೇ ಚಿಕಿತ್ಸೆ ಮಾಡಿಕೊಳ್ಳತಕ್ಕದ್ದಲ್ಲ. ಮೇಲೆ ವಿವರಿಸಿದ ಒಂದೆರಡು ಗುಣಲಕ್ಷಣಗಳು

ಆರ್ಥ್ರೈಟಿಸ್‌ನಲ್ಲಿ ಎಷ್ಟು ವಿಧ?


ಆರ್ಥ್ರೈಟಿಸ್‌ನಲ್ಲಿ ಮುಖ್ಯವಾಗಿ ಒಂಬತ್ತು ಬಗೆಗಳನ್ನು ಗುರುತಿಸಲಾಗಿದೆ ಅವೆಂದರೆ:

ಡಿಜನರೇಟಿವ್ ಆರ್ಥ್ರೈಟಿಸ್, ಕ್ಷಯ ಸಂಬಂಧಿ ಆರ್ಥ್ರೈಟಿಸ್, ರುಮಾಟಾಯ್ಡ್ ಆರ್ಥ್ರೈಟಿಸ್, ರುಮಾಟಿಕ್ ಆರ್ಥ್ರೈಟಿಸ್, ಗೌಟ್; ಗೋನೋಕಾಕಲ್ ಮತ್ತು ಸಿಫಿಲಿಟಿಕ್ ಆರ್ಥ್ರೈಟಿಸ್ (ಇವೆರಡು ಲೈಂಗಿಕ ವ್ಯಾಧಿ ಸಂಬಂಧಿ ಆರ್ಥ್ರೈಟಿಸ್‌ಗಳು) ಚರ್ಮಸಂಬಂಧಿ ಜಾಡ್ಯವಾದ ಸೋರಿಯಾಟಿಕ್ ಆರ್ಥ್ರೈಟಿಸ್, ಪಯೋಜನಿಕ್ ಆರ್ಥ್ರೈಟಿಸ್ ಮತ್ತು ಅಪಘಾತದ ನಂತರ ಕೀಲುಗಳಲ್ಲಿ ಕಾಣಿಸಿಕೊಳ್ಳುವ ಪೋಸ್ಟ್ ಟ್ರಮ್ಯಾಟಿಕ್ ಆರ್ಥ್ರೈಟಿಸ್.


ಈ ಪೈಕಿ ರುಮಾಟಾಯ್ಡ್ ಆರ್ಥ್ರೈಟಿಸ್ ತಾನು ಆವರಿಸಿಕೊಂಡಿರುವ ರೋಗಿಯನ್ನೆಂದಿಗೂ ಕೊಲ್ಲುವುದಿಲ್ಲ, ಆದರೆ ಅಂಗವಿಕಲನನ್ನಾಗಿ ಮಾಡುತ್ತದೆ ರುಮಾಟಿಕ್ ಆರ್ಥ್ರೈಟಿಸ್ ಮಾತ್ರ, ಮೂಳೆಗಳನ್ನು ನೆಕ್ಕಿ ಸುಮ್ಮನಾಗುವುದಿಲ್ಲ. ಅದಕ್ಕೆ ಹೃದಯವನ್ನು ತಿಂದು ಮುಗಿಸಿದರೇನೇ ತೃಪ್ತಿ. ನಿರಂತರವಾದ ಗಂಟಲು ಕೆರೆತ, ಹುಣ್ಣು ಇರುವವರು ಕೂಡ ಆರ್ಥ್ರೈಟಿಸ್‌ನ ಆತಿಥ್ಯಕ್ಕೆ ಸಿದ್ಧರಾಗುತ್ತಿರುಹುದು. ಎಚ್ಚರಿಕೆ ಅಗತ್ಯ.

ಕಂಡಕೂಡಲೇ 'ನಾನು ಆರ್ಥ್ರೈಟಿಸ್ ರೋಗಿ' ಎಂದು ತೀರ್ಮಾನಿಸತಕ್ಕದ್ದಲ್ಲ. ವೈದ್ಯರು ಮಾತ್ರ ನಿರ್ಧಾರ ಕೈಗೊಳ್ಳಬಲ್ಲರು.

ನೋವು ನಿವಾರಣೆ ಚಿಕಿತ್ಸೆಯ ಪ್ರಧಾನ ಅಂಶವಾಗಿರುತ್ತದೆ. ಕೆಲವು ಔಷಧಿಗಳು ರೋಗ ವಾಸಿ ಮಾಡದಿದ್ದರೂ ನೋವು ಮತ್ತು ಊತ ಕಡಿಮೆ ಮಾಡುವುದರಲ್ಲಿ ಯಶಸ್ವಿಯಾಗುತ್ತವೆ. ಆಸ್ಪಿರಿನ್, ಇಂಡೋಮೆಥ್ಯಾಸಿನ್, ನ್ಯಾಪ್ರೊಕ್ಸೆನ್ ಮತ್ತು ಫೆನೊಪ್ರೊಫೆನ್ ಮುಂತಾದ ಔಷಧಿಗಳನ್ನು ಇದಕ್ಕೆ



ಬಳಸುತ್ತಾರೆ. ಕಾರ್ಟಿಸೋನ್‌ನಂತಹ ಸ್ಟೆರಾಯಿಡ್‌ಗಳ ನೆರವೂ ಅಪಾರವಾದುದು. ಪ್ರೆಡ್ನಿಸೋನ್ ಮತ್ತು ಪ್ರೆಡ್ನಿಸೋಲೋನ್‌ಗಳನ್ನು ಬಳಸುವುದರಿಂದ ಅನೇಕ ದುಷ್ಪರಿಣಾಮಗಳು ಕಂಡು ಬಂದದ್ದರಿಂದ ಈಗೀಗ ಇವುಗಳ ಬಳಕೆ ಕಡಿಮೆಯಾಗಿದೆ. ನೇರವಾಗಿ ರೋಗಗ್ರಸ್ತ ಕೀಲಿನೊಳಕ್ಕೆ ಚುಚ್ಚುಮದ್ದು ಕೊಡುವುದೂ ಇದೆ. ಸ್ಟೆರಾಯಿಡ್ ಸೇವಿಸುವ ರೋಗಿ ಯಾವ ಕಾರಣಕ್ಕೂ





ಮಾತ್ರೆಗಳನ್ನು ಇದ್ದಕ್ಕಿದ್ದಂತೆ ನಿಲ್ಲಿಸಕೂಡದು. ಇದರಿಂದ ಖಾಯಿಲೆ ಉಲ್ಬಣವಾಗಿಬಿಡಬಹುದು. ಮಾತ್ರೆಗಳ ಸಂಖ್ಯೆ ನಿರ್ಧರಿಸುವುದೇನಿದ್ದರೂ ವೈದ್ಯರ ಕೆಲಸ.

ದೀರ್ಘಕಾಲದ ಚಿಕಿತ್ಸಾವಿಧಾನಗಳಲ್ಲಿ ಬಂಗಾರವನ್ನು ರೋಗಿಯ ದೇಹದೊಳಕ್ಕೆ ಚುಚ್ಚುವುದೂ ಒಂದು ವಿಧಾನ. ಇದು ಕೂಡಲೆ ಫಲ ನೀಡದಿದ್ದರೂ 8-10 ವಾರಗಳ ನಂತರ ರೋಗವನ್ನು ಶಮನಗೊಳಿಸುತ್ತದೆ. ಸುಮಾರು 30 ವಾರಗಳ ಕಾಲ ಮುಂದುವರೆಯುವ ಈ ಚಿಕಿತ್ಸೆ ತುಂಬ ಫಲಕಾರಿಯಾಗಿದೆ. ಮಯೊಕ್ರೈಸಿನ್ ಎಂಬ ಬಂಗಾರದ ಅಂಶವುಳ್ಳ ಔಷಧಿಯನ್ನು 50ವರ್ಷಗಳಿಂದ ಆರ್ಥರೈಟಿಸ್ ಚಿಕಿತ್ಸೆಗಾಗಿ ವೈದ್ಯರು ಬಳಸುತ್ತಿದ್ದಾರೆ. ಈ ಚಿಕಿತ್ಸೆಯಿಂದಾಗಿ ರೋಗದ ಬೆಳವಣಿಗೆ ತಡೆಯಬಹುದೇ ಹೊರತು ಆಗಿರುವ ನಷ್ಟವನ್ನು ತುಂಬಿಕೊಡುವುದು ಅಸಾಧ್ಯ. ಇಷ್ಟಕ್ಕೂ ಬಂಗಾರದಿಂದ ಕೀಲುಗಳ ತೊಂದರೆ ಹೇಗೆ ನಿವಾರಣೆಯಾಗುತ್ತದೆಂಬ ಅಂಶವಿನ್ನೂ ಸ್ಪಷ್ಟವಾಗಬೇಕಿದೆ.

ಇದಲ್ಲದೆ ಪೆನಿಸಿಲಮೀನ್ ಮತ್ತು ಅಜಾಥಿಯೋಪ್ರೈನ್‌ನಂತಹ ದೀರ್ಘಾವಧಿ ಔಷಧಿಗಳೂ ಇತ್ತೀಚೆಗೆ ಬಳಕೆಗೆ ಬಂದಿವೆ. ಇವುಗಳನ್ನು ಚುಚ್ಚುಮದ್ದೇ ಅಲ್ಲದೆ ಮಾತ್ರೆಗಳ ರೂಪದಲ್ಲಿ ತೆಗೆದುಕೊಳ್ಳಬಹುದಾಗಿದೆ. ಈ ಎಲ್ಲ ಚಿಕಿತ್ಸೆಗಳಿಗೂ ಅಡ್ಡ ಪರಿಣಾಮಗಳಿಂದ ಮುಕ್ತಿಯಿಲ್ಲ. ಗರ್ಭಿಣಿಯರಿಗೆ ಇವನ್ನು ಕೊಡಲಾಗುವುದಿಲ್ಲ. ಮತ್ತು ವೈದ್ಯರ ಮೇಲುಸ್ತುವಾರಿ ಅತ್ಯವಶ್ಯಕ.

ಶಸ್ತ್ರ ಚಿಕಿತ್ಸೆ :

ಆರ್ಥರೈಟಿಸ್ ರೋಗಿಗಳ ಪಾಲಿಗೆ ಕೃತಕ ಕೀಲುಜೋಡಣೆಯ ಸಂಶೋಧನೆಯೊಂದು ವರವಾಗಿ ಪರಿಣಮಿಸಿದೆ. ಶಸ್ತ್ರ ಚಿಕಿತ್ಸೆಯಲ್ಲೂ ಹಲವಾರು ವಿಧಾನಗಳಿವೆ. ಮೂಳೆಗಳ ಆಕಾರವನ್ನೇ ಬದಲಿಸುವ ಮಾದರಿಗಳಿವೆ. ಲೋಹದ ಕೀಲುಗಳನ್ನು ಜೋಡಿಸಿ ವೈದ್ಯಲೋಕ ವಿಜಯ ಸಾಧಿಸಿದೆ. ವಿಶೇಷ ಚಾತುರ್ಯವುಳ್ಳ ವೈದ್ಯರು ಮಾತ್ರ ಇಂಥ ಶಸ್ತ್ರ ಚಿಕಿತ್ಸೆಗಳನ್ನು ಮಾಡಬಲ್ಲರು. ಇಂದಿಗೂ ಈ ಬಗ್ಗೆ ಸಂಶೋಧನೆಗಳು ನಡೆದಿವೆ.

Printed and Published by N.H. WADAVI on behalf of Loka Shikshana Trust at 'Samyukta Karnataka Press', Koppikar Road, Hubli - 580020. (Phone: 64303): No. 2, Residency Road, Bangalore - 560025 (Phone: 213265)

Managing Editor: K. SHAMARAO

Registered with the Registrar of Newspapers for India under No.3633/57

KASTURI. Kannada Digest Reg No KRNG-43. Licence No L 2120/WPP No 33 Price: Rs. 5.00

ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆಯ ಪ್ರಕಟಣೆಗಳು
ಹುಬ್ಬಳ್ಳಿ-ಬೆಂಗಳೂರು

		ಬೆಲೆ
1. ಶ್ರೀ ರಾಮದಾಸರು ಹೇಳಿದ ಕಥೆಗಳು	ಶ್ರೀ ಬಸಪ್ಪ ದಾನಪ್ಪ ಜತ್ತಿ	ರೂ. 12-00
2. ಅಂತರಾತ್ಮನಿಗೆ	ಶ್ರೀ ರಂಗನಾಥ ದಿವಾಕರ	ರೂ. 5-00
3. ಗೀತೆಯ ಗುಟ್ಟು	ಶ್ರೀ ರಂಗನಾಥ ದಿವಾಕರ	ರೂ. 15-00
4. ಪುಟಾಣಿಗೆ ಶರಣರ ಕಥೆಗಳು	ಶ್ರೀಮತಿ ಜೆ.ವಿ.ಜಯಾ ರಾಜಶೇಖರ	ರೂ. 3-50
5. ಮರಳಿ ಬಂದ ಮಧುರ ಮಾಸ	ಶ್ರೀಮತಿ ಜೆ.ವಿ.ಜಯಾ ರಾಜಶೇಖರ	ರೂ. 12-00
6. ವಿಚಾರ ಜ್ಯೋತಿ	ಶ್ರೀ ಕೆ.ಟಿ.ಪಾಂಡುರಂಗಿ	ರೂ. 10-00
7. ವಚನಗಳಲ್ಲಿ ಪ್ರತಿಮೆಗಳು	ಶ್ರೀಮತಿ ಉಷಾಕಿರಣ್	ರೂ. 25-00
8. ಶಿಶುನಾಳ ಶರೀಫ ಸಾಹೇಬರು	ಶ್ರೀ ಶಿವಾನಂದ ಗುಬ್ಬಣ್ಣವರ	ರೂ. 15-00
9. ನನಗೆ ನಾನೇ ಮಾದರಿ (ಆತ್ಮಕಥನ)	ಶ್ರೀ ಬಿ.ಡಿ.ಜತ್ತಿ	ರೂ. 40-00
10. ಕೋಟ್ಯಧೀಶ್ವರರ ಪ್ರಪಂಚದಲ್ಲಿ 60 ದಿನ	ಶ್ರೀ ಎಸ್.ಪಿ.ಭಟ್ಟ	ರೂ. 20-00

ಪುಸ್ತಕ ದೊರೆಯುವ ಸ್ಥಳ:

ಸಂಯುಕ್ತ ಕರ್ನಾಟಕ ಪ್ರೆಸ್,
ಕೊಪ್ಪಿಕರ ರೋಡ್, ಹುಬ್ಬಳ್ಳಿ

ವಿ.ಸೂ:- ಒಂದೊಂದು ಪುಸ್ತಕದ ಕನಿಷ್ಟ 10 ಪ್ರತಿ, ಅದಕ್ಕಿಂತಲೂ ಹೆಚ್ಚು ಖರೀದಿಸಿದಲ್ಲಿ ಶೇ. 15ರಂತೆ ಕಮೀಶನ್ ಕೊಡಲಾಗುವುದು.

